ಭಾನುವಾರ, ಜೂನ್ 7, 2026 ₹ 7.00
www.prajavani.net
prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಮೊಗ್ಗಿನಮೇಲೊಂದು...

ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ನಂದೂರ್ ಪಕ್ಷಿಧಾಮದಲ್ಲಿ ಕಮಲದ ಮೊಗ್ಗಿನ ಮೇಲೆ ಏರೋಪ್ಲೇನ್ ಚಿಟ್ಟೆಯೊಂದು ಕುಳಿತ ನೋಟ



ಬಿಸಿಲ ಝಳ...

ಜಮ್ಮುವಿನಲ್ಲಿ ಬಿಸಿಲ ಝಳದಿಂದ ಬಸವಳಿದಿದ್ದ ಮಗುವಿಗೆ ಕಾರ್ಮಿಕ ಮಹಿಳೆಯೊಬ್ಬರು ನೀರು ಕುಡಿಸಿದರು



ಪ್ರಧಾನ್ ರಾಜೀನಾಮೆಗಾಗಿ 'ಜಿರಳೆ' ಹೋರಾಟ

ಅಮೆರಿಕದಿಂದ ಬಂದಿಳಿದ ದೀಪ್ಕೆ: ಜಂತರ್ ಮಂತರ್‌ನಲ್ಲಿ ನಡೆದ ಸಿಜೆಪಿ ಪ್ರತಿಭಟನೆ

ನವದೆಹಲಿ (ಪಿಟಿಐ): 'ಸಾಮಾಜಿಕ ಮಾಧ್ಯಮಗಳಲ್ಲಿ ನಾವು ಮಾಡಿರುವ ಪೋಸ್ಟ್‌ಗಳನ್ನು ನೀವು ತೆಗೆದುಹಾಕಬಹುದು. ಆದರೆ ನಮ್ಮ ಹೋರಾಟವನ್ನು ಹತ್ತಿಕ್ಕಲು ಸಾಧ್ಯವಿಲ್ಲ' ಎಂದು ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಸಂಸ್ಥಾಪಕ ಅಭಿಜೀತ್ ದೀಪ್ಕೆ ಕೇಂದ್ರ ಸರ್ಕಾರಕ್ಕೆ ಶನಿವಾರ ಎಚ್ಚರಿಕೆ ನೀಡಿದರು.

ಸಾಮಾಜಿಕ ಮಾಧ್ಯಮದಲ್ಲಿ ಸಂಚಲನ ಸೃಷ್ಟಿಸಿರುವ ಸಿಜೆಪಿ, ಶಿಕ್ಷಣ ಕ್ಷೇತ್ರದಲ್ಲಿನ ಕೇಂದ್ರ ಸರ್ಕಾರದ ವೈಫಲ್ಯಗಳನ್ನು ಖಂಡಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ಹಮ್ಮಿಕೊಂಡ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ದೀಪ್ಕೆ ನೇತೃತ್ವದಲ್ಲಿ ನಡೆದ ಸಿಜೆಪಿಯ ಚೊಚ್ಚಲ ಪ್ರತಿಭಟನಾ ಸಭೆಗೆ ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳು, ಸ್ಪರ್ಧಾತ್ಮಕ ಪರೀಕ್ಷೆಗಳ ಆಕಾಂಕ್ಷಿಗಳು, ಯುವಜನರು ಸೇರಿ ನೂರಾರು ಮಂದಿ ಭಾಗವಹಿಸಿದರು. ಬಹುತೇಕ ಮಂದಿ ಜಿರಳೆಯ ಮುಖವಾಡ ಧರಿಸಿದ್ದರು.

ನೀಟ್–ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ಸಿಬಿಎಸ್‌ಇ ಪರೀಕ್ಷಾ ವ್ಯವಸ್ಥೆಯಲ್ಲಿನ ಲೋಪಗಳನ್ನು ಖಂಡಿಸಿದ ಪ್ರತಿಭಟನಾಕಾರರು, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಒತ್ತಾಯಿಸಿದರು. ಸಿಜೆಪಿಗೆ ಬೆಂಬಲ ಸೂಚಿಸಿ ಪರಿಸರ ಹೋರಾಟಗಾರ ಸೋನಂ ವಾಂಗ್ಚುಕ್ ಅವರೂ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ಅಮೆರಿಕದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ದೀಪ್ಕೆ ಅವರು ಶನಿವಾರ ಬೆಳಿಗ್ಗೆ ನವದೆಹಲಿಗೆ ಬಂದಿಳಿದರು. ಆ ಬಳಿಕ ದೆಹಲಿ ಪೊಲೀಸರ ಅನುಮತಿ ಪಡೆದು ಅಲ್ಲಿಂದ ನೇರವಾಗಿ ಪ್ರತಿಭಟನಾ ಸ್ಥಳಕ್ಕೆ ಬಂದರು. 'ಶಿಸ್ತು ಕಾಯ್ದುಕೊಳ್ಳಬೇಕು ಮತ್ತು ಪ್ರತಿಭಟನೆ ಶಾಂತಿಯುತವಾಗಿ ನಡೆಯುವುದನ್ನು ಖಚಿತಪಡಿಸಬೇಕು' ಎಂದು ದೀಪ್ಕೆ ಅವರು ಬೆಂಬಲಿಗರಿಗೆ ಮನವಿ ಮಾಡಿದ್ದರು.

'ಸ್ನೇಹಿತರೇ, ಇದೊಂದು ದೀರ್ಘ ಹೋರಾಟ. ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಒತ್ತಾಯಿಸಿ ನಾವು ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಯಾನ ಆರಂಭಿಸಿ ಒಂದು ತಿಂಗಳು ಕಳೆದಿದೆ. ಆದರೆ ಈ ವ್ಯಕ್ತಿಗಳು ಎಷ್ಟೊಂದು ಲಜ್ಜೆಗೆಟ್ಟವರು ಎಂದರೆ, ಸಚಿವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಬದಲು, ನಮ್ಮ ಸಾಮಾಜಿಕ ಮಾಧ್ಯಮ ಖಾತೆಗಳನ್ನು ಹ್ಯಾಕ್ ಮಾಡುವುದು ಮತ್ತು ಪೋಸ್ಟ್‌ಗಳನ್ನು ಅಳಿಸುವಂತಹ ಕೆಲಸದತ್ತ ಗಮನ ಹರಿಸಿದ್ದಾರೆ. ನಮ್ಮ ಪೋಸ್ಟ್‌ಗಳನ್ನು ಅಳಿಸಿದರೂ, ನಿಮಗೆ ನಮ್ಮ ಹೋರಾಟವನ್ನು ಹತ್ತಿಕ್ಕಲು ಸಾಧ್ಯವಿಲ್ಲ' ಎಂದು ದೀಪ್ಕೆ ಅವರು ಹರ್ಷೋದ್ಗಾರದ ನಡುವೆ ಹೇಳಿದರು.

ಬಿಜೆಪಿಯು 'ಹಿಂದೂ-ಮುಸ್ಲಿಂ' ರಾಜಕೀಯದಲ್ಲಿ ತೊಡಗಿಕೊಳ್ಳುವುದನ್ನು ನಿಲ್ಲಿಸಬೇಕೆಂದು ಆಗ್ರಹಿಸಿ ಪ್ರತಿಭಟನಾಕಾರರು ಘೋಷಣೆಗಳನ್ನು ಕೂಗಿದರು. 'ಭಾರತ್ ಮಾತಾ ಕೀ ಜೈ' ಘೋಷಣೆಯೂ ಮೊಳಗಿತು.

ಎಡಪಕ್ಷಗಳೂ ಭಾಗಿ

ಸಿಪಿಎಂಎಲ್ ಲಿಬರೇಷನ್ ಪಕ್ಷದ ಪ್ರಧಾನ ಕಾರ್ಯದರ್ಶಿ ದೀಪಾಂಕರ್ ಭಟ್ಟಾಚಾರ್ಯ, ಸಿಪಿಐನ ಆನಿ ರಾಜಾ ಮತ್ತು ಎಡಪಕ್ಷಗಳ ವಿದ್ಯಾರ್ಥಿ ಸಂಘಟನೆ ಮತ್ತು ಯುವ ಸಂಘಟನೆಗಳ ಕಾರ್ಯಕರ್ತರೂ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ಆರು ಮಂದಿ ವಶಕ್ಕೆ

ಪ್ರತಿಭಟನೆ ಸಂದರ್ಭದಲ್ಲಿ ಎರಡು ಗುಂಪುಗಳ ನಡುವಿನ ಸಂಭವನೀಯ ಘರ್ಷಣೆ ತಡೆಗಟ್ಟಲು ಪೊಲೀಸರು ಆರು ಮಂದಿಯನ್ನು ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಸಿಜೆಪಿ ಬೆಂಬಲಿಗರು ಮತ್ತು ವಿರೋಧಿಗಳ ನಡುವೆ ಘರ್ಷಣೆಯ ಸಾಧ್ಯತೆ ಬಗ್ಗೆ ಪೊಲೀಸರಿಗೆ ಮಾಹಿತಿ ಬಂದಿತ್ತು. ಪ್ರತಿಭಟನಾ ಸ್ಥಳದಲ್ಲಿ ಗಲಾಟೆ ಸೃಷ್ಟಿಸಲು ಕೆಲವರು ಯೋಜನೆ ಹಾಕಿಕೊಂಡಿದ್ದರು. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಉದ್ದೇಶದಿಂದ ಆರು ಮಂದಿಯನ್ನು ವಶಕ್ಕೆ ತೆಗೆದುಕೊಂಡಿದ್ದೇವೆ' ಎಂದಿದ್ದಾರೆ.



ಅಭಿಜೀತ್ ದೀಪ್ಕೆ ಅವರು ಜಂತರ್ ಮಂತರ್‌ನಲ್ಲಿ ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದರು — ಪಿಟಿಐ ಚಿತ್ರಗಳು

ಸರ್ಕಾರವು ಯುವಜನರ ಧ್ವನಿಯನ್ನು ಆಲಿಸಬೇಕು ಮತ್ತು ಅವರನ್ನು ಕಡೆಗಣಿಸಬಾರದು ಎಂಬ ಸಂದೇಶವನ್ನು ಜಂತರ್ ಮಂತರ್‌ನಲ್ಲಿ ಸೇರಿದ ಪ್ರತಿಭಟನಕಾರರು ನೀಡಿದ್ದಾರೆ
ಉದ್ಧವ್ ಠಾಕ್ರೆ, ಶಿವಸೇನಾ (ಯುಬಿಟಿ) ಮುಖ್ಯಸ್ಥ

'ನಕಾರಾತ್ಮಕ ರಾಜಕೀಯ'ದತ್ತ ತಳ್ಳಲು ಯತ್ನ: ನಿತಿನ್ ನವೀನ್



ರಾಂಚಿ: ದೇಶದ ಯುವಜನರನ್ನು 'ನಕಾರಾತ್ಮಕ ರಾಜಕೀಯ'ದತ್ತ ತಳ್ಳಲು ಕೆಲವು ಶಕ್ತಿಗಳು ಪ್ರಯತ್ನಿಸುತ್ತಿವೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಶನಿವಾರ ಆರೋಪಿಸಿದರು.

ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ಅವರನ್ನು ಪರೋಕ್ಷವಾಗಿ ಉಲ್ಲೇಖಿಸಿ, 'ವಿದೇಶದಲ್ಲಿ ಕುಳಿತಿರುವ ಕೆಲವರು ಭಾರತದ ಯುವಜನರಿಗೆ ನಿರ್ದೇಶನಗಳನ್ನು ನೀಡಬಹುದು ಎಂದು ಭಾವಿಸುತ್ತಾರೆ' ಎಂದು ಹೇಳಿದರು.

'ಈ ದೇಶದ ಯುವಕರು ಸಕಾರಾತ್ಮಕ ರಾಜಕೀಯವನ್ನು ಆಯ್ಕೆ ಮಾಡುತ್ತಾರೆ ಎಂಬುದಾಗಿ ಅಂತಹ ಮಂದಿಗೆ ಎಚ್ಚರಿಸಲು ಬಯಸುತ್ತೇನೆ' ಎಂದರು.

ದೀಪ್ಕೆ ಮನೆಗೆ ಭದ್ರತೆ

ಛತ್ರಪತಿ ಸಂಭಾಜಿನಗರ: ಮಹಾರಾಷ್ಟ್ರದ ಛತ್ರಪತಿ ಸಂಭಾಜಿನಗರದಲ್ಲಿನ ದೀಪ್ಕೆ ಅವರ ನಿವಾಸಕ್ಕೆ ಪೊಲೀಸ್ ಭದ್ರತೆ ಒದಗಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಛತ್ರಪತಿ ಸಂಭಾಜಿನಗರದ ವಲೂಜ್ ಎಂಐಡಿಸಿ ಪ್ರದೇಶದಲ್ಲಿ ದೀಪ್ಕೆ ಅವರ ಮನೆ ಇದೆ. ಪ್ರಸ್ತುತ ಅವರ ಪೋಷಕರು ಆ ಮನೆಯಲ್ಲಿ ವಾಸಿಸುತ್ತಿಲ್ಲ. ಅವರು ನನ್ನ ಸಂಪರ್ಕದಲ್ಲಿ ಇಲ್ಲ' ಎಂದಿದ್ದಾರೆ.

'ಸ್ವಾತಂತ್ರ್ಯ ತ್ಯಾಗ ಮಾಡಲು ಸಿದ್ಧನಿದ್ದೆ'

ನವದೆಹಲಿಗೆ ಬಂದಿಳಿದ ಕ್ಷಣವನ್ನು ನೆನಪಿಸಿಕೊಂಡ ದೀಪ್ಕೆ, 'ವಿಮಾನ ಇಳಿಯುವ ಸ್ವಲ್ಪ ಮೊದಲು, ನನ್ನ ಸ್ವಾತಂತ್ರ್ಯದ ಕೊನೆಯ ಕ್ಷಣಗಳನ್ನು ಅನುಭವಿಸುತ್ತಿರುವಂತೆ ಭಾಸವಾಯಿತು' ಎಂದರು. 'ನನ್ನ ಸ್ವಾತಂತ್ರ್ಯವನ್ನು ತ್ಯಾಗ ಮಾಡಲು ಸಂಪೂರ್ಣವಾಗಿ ಸಿದ್ಧನಾಗಿದ್ದುಕೊಂಡೇ ಭಾರತಕ್ಕೆ ಮರಳಿದ್ದೇನೆ' ಎಂದರು.

'ಜೈಲು ಶಿಕ್ಷೆಯ ಭಯದಿಂದಾಗಿ ಇಂದು ಅನೇಕ ಮಂದಿ ರಾಜಿ ಮಾಡಿಕೊಂಡಿದ್ದಾರೆ ಹಾಗೂ 'ಮಾರಾಟ'ವಾಗಿದ್ದಾರೆ' ಎಂದು ಆರೋಪಿಸಿದರು. 'ಭಾರತಕ್ಕೆ ಮರಳಿದಾಗ ನನ್ನನ್ನು ಬಂಧಿಸಬಹುದು ಎಂಬ ಭಯದಿಂದ ನನ್ನ ತಾಯಿ ತುಂಬಾ ಅತ್ತಿದ್ದಾರೆ. ಇದು ನನ್ನ ತಾಯಿಯ ಭಯ ಮಾತ್ರವಲ್ಲ. ರಾಜಕೀಯದ ಬಗ್ಗೆ ಧೈರ್ಯದಿಂದ ಮಾತನಾಡುವ ಪ್ರತಿಯೊಬ್ಬ ಯುವಕನ ಪೋಷಕರ ಭಯ ಇದು. ನಾವು ಎಷ್ಟು ದಿನ ಭಯದಲ್ಲಿ ಬದುಕಬೇಕು? ನಾವು ಯಾವುದಕ್ಕೂ ಹೆದರುವುದಿಲ್ಲ ಎಂದು ಅವರಿಗೆ (ಸರ್ಕಾರಕ್ಕೆ) ಹೇಳಿ' ಎಂದರು.

ಪ್ರಮುಖ ಅಂಶಗಳು

- ಮುನ್ನೆಚ್ಚರಿಕೆ ಕ್ರಮವಾಗಿ ದೆಹಲಿಯ ವಿವಿಧೆಡೆ ಸಾವಿರಕ್ಕೂ ಅಧಿಕ ಪೊಲೀಸರನ್ನು ಹಾಗೂ ಅರೆ ಸೇನಾಪಡೆಯ 40 ತುಕಡಿಗಳನ್ನು ನಿಯೋಜಿಸಲಾಗಿತ್ತು
- ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ನಿವಾಸದ ಬಳಿ ಭದ್ರತೆ ಹೆಚ್ಚಿಸಲಾಗಿತ್ತು
- ಸುದೀರ್ಘ ಪ್ರಯಾಣದಿಂದ ಬಳಲಿದ್ದ ದೀಪ್ಕೆ ಅವರ ಆರೋಗ್ಯದಲ್ಲಿ ಏರುಪೇರು ಉಂಟಾದ ಕಾರಣ ಮಧ್ಯಾಹ್ನ 3.30ರ ಸುಮಾರಿಗೆ ಪ್ರತಿಭಟನೆಯನ್ನು ಕೊನೆಗೊಳಿಸಲಾಯಿತು
- ಸಿಜೆಪಿ ಪ್ರತಿಭಟನೆಯಲ್ಲಿ ಪಾಲ್ಗೊಂಡ ಸಿಪಿಐ ರಾಷ್ಟ್ರೀಯ ಕಾರ್ಯದರ್ಶಿ ಆನಿ ರಾಜಾ ಅವರ ಮೇಲೆ ಆರ್‌ಎಸ್‌ಎಸ್‌ನವರು ಹಲ್ಲೆ ನಡೆಸಿದ್ದಾರೆ ಎಂದು ಸಿಪಿಐ ಕೇರಳ ಘಟಕ ಆರೋಪಿಸಿದೆ



ಅಭಿಜೀತ್ ದೀಪ್ಕೆ ಅವರನ್ನು ಎತ್ತಿಕೊಂಡ ಬೆಂಬಲಿಗರು

'ಏಳು ದಿನ ಗಡುವು'

ಕೇಂದ್ರ ಶಿಕ್ಷಣ ಸಚಿವರು ಏಳು ದಿನಗಳ ಒಳಗಾಗಿ ರಾಜೀನಾಮೆ ನೀಡದಿದ್ದರೆ ಅಥವಾ ಸಂಪುಟದಿಂದ ಅವರನ್ನು ವಜಾಗೊಳಿಸದಿದ್ದರೆ ರಾಷ್ಟ್ರ ವ್ಯಾಪಿ ಹೋರಾಟ ನಡೆಸುವುದಾಗಿ ಸಿಜೆಪಿ ಎಚ್ಚರಿಸಿದೆ.

'ನಾವು ಸರ್ಕಾರಕ್ಕೆ ಏಳು ದಿನಗಳ ಗಡುವು ನೀಡುತ್ತಿದ್ದೇವೆ. ಧರ್ಮೇಂದ್ರ ಪ್ರಧಾನ್ ಗೌರವಯುತವಾಗಿ ರಾಜೀನಾಮೆ ನೀಡಬೇಕು ಅಥವಾ ಅವರನ್ನು ಪ್ರಧಾನಿ ನರೇಂದ್ರ ಮೋದಿ ವಜಾಗೊಳಿಸಬೇಕು. ಇಲ್ಲದಿದ್ದರೆ, ಈ ಚಳವಳಿ ದೇಶದಾದ್ಯಂತ ಹರಡಲಿದೆ' ಎಂದು ಸಿಜೆಪಿ ವಕ್ತಾರರಾದ ಆಶುತೋಷ್ ರಂಕಾ ಮತ್ತು ಸೌರವ್ ದಾಸ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕರ್ನಾಟಕ ಮುಖ್ಯಮಂತ್ರಿ ಬದಲಾವಣೆಗೆ ಜನಾಕ್ರೋಶ ಕಾರಣ ಎನ್ನುವ ಪ್ರಧಾನಿ ಮೋದಿ ಹೇಳಿಕೆಗೆ ನಿಮ್ಮ ಸಹಮತ ಇದೆಯೇ?

ಇದೆ ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಬೆಂಗಳೂರು ಅಭಿವೃದ್ಧಿ ಖಾತೆಗೆ ಪಟ್ಟು ● ಹೈಕಮಾಂಡ್ ನಾಯಕರ ಒತ್ತಡಕ್ಕೆ ಮಣಿದು ನಿರ್ಧಾರ ಬದಲು

ರಾಮಲಿಂಗಾರೆಡ್ಡಿ ರಾಜೀನಾಮೆ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾತೆ ಹಂಚಿಕೆಯಾದ ಬೆನ್ನಲ್ಲೇ ಅಸಮಾಧಾನ ಹೊರಹಾಕಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ರಾಮಲಿಂಗಾರೆಡ್ಡಿ ಅವರು, ಕಾಂಗ್ರೆಸ್ ವರಿಷ್ಠರ ಒತ್ತಡಕ್ಕೆ ಮಣಿದು ತಮ್ಮ ನಿರ್ಧಾರದಿಂದ ಹಿಂದೆ ಸರಿದಿದ್ದಾರೆ.

ಜೂನ್ 3ರಂದು ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದಾಗ, 13 ಮಂದಿ ಸಚಿವರಾಗಿ ಪ್ರತಿಜ್ಞಾ ವಿಧಿ ಸ್ವೀಕರಿಸಿದ್ದರು. ನೂತನ ಸಚಿವರಿಗೆ ಜೂನ್ 4ರ ತಡರಾತ್ರಿ ಖಾತೆ ಹಂಚಿಕೆ ಮಾಡಲಾಗಿತ್ತು. ಶುಕ್ರವಾರ (ಜೂನ್ 5)ರಂದು ಪತ್ರಿಕಾಗೋಷ್ಠಿ ನಡೆಸಿದ್ದ ರಾಮಲಿಂಗಾರೆಡ್ಡಿ, ರಾಜೀನಾಮೆ ನೀಡುವುದಾಗಿ ಪ್ರಕಟಿಸಿದ್ದರು.

'2023ರಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದಾಗ ನನಗೆ ಬೆಂಗಳೂರು ಅಭಿವೃದ್ಧಿ ಖಾತೆ ನೀಡಿದ್ದರು. ಆಗ ನಮ್ಮ ಮನೆಗೆ ಬಂದಿದ್ದ ಶಿವಕುಮಾರ್ ಅವರು, 'ಈಗ ಅದನ್ನು ನನಗೆ ಬಿಟ್ಟುಕೊಡಿ. ನಾನು ಮುಖ್ಯಮಂತ್ರಿಯಾದಾಗ ಬೆಂಗಳೂರು ಅಭಿವೃದ್ಧಿ ಖಾತೆ ನಿಮಗೆ ನೀಡುವುದಾಗಿ' ಭರವಸೆ ನೀಡಿದ್ದರು. ಕೊಟ್ಟ ಮಾತಿಗೆ ಈಗ ತಪ್ಪಿದ್ದಾರೆ. ನನಗೆ ನೀಡಲಾಗಿರುವ ಜಲಸಂಪನ್ಮೂಲ ಖಾತೆಯನ್ನು ಒಪ್ಪಿಕೊಳ್ಳಲು ಆತ್ಮಸಾಕ್ಷಿ ಒಪ್ಪುತ್ತಿಲ್ಲ. ಹೀಗಾಗಿ ರಾಜೀನಾಮೆ ನೀಡುತ್ತಿದ್ದೇನೆ' ಎಂದು ರೆಡ್ಡಿ ಹೇಳಿದ್ದರು.

ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದ ಎರಡನೇ ದಿನದಲ್ಲಿ, ಕಾಂಗ್ರೆಸ್ ವರಿಷ್ಠರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಕೆ.ಸಿ. ವೇಣುಗೋಪಾಲ್ ಅವರು ಬೆಂಗಳೂರಿನಲ್ಲಿದ್ದಾಗಲೇ ಪಕ್ಷದ ಹಿರಿಯ ನಾಯಕರೊಬ್ಬರು ಅತೃಪ್ತಿ ಹೊರಹಾಕಿದ್ದರು. ರಾಜೀನಾಮೆ ಸಲ್ಲಿಸಿದ ಪ್ರಕರಣ ಕಾಂಗ್ರೆಸ್ ವರಿಷ್ಠರನ್ನು ಮುಜುಗರಕ್ಕೆ ದೂಡಿತ್ತು.

ಸುರ್ಜೇವಾಲಾ ಮನವೊಲಿಕೆ: ಶಿವಕುಮಾರ್ ಶುಕ್ರವಾರ ರಾತ್ರಿಯೇ ರಾಮಲಿಂಗಾರೆಡ್ಡಿ ಅವರನ್ನು ಭೇಟಿ ಮಾಡಿ, ನಿರ್ಧಾರದಿಂದ ಹಿಂದೆ ಸರಿಯುವಂತೆ ಮನವೊಲಿಸಲು ಯತ್ನಿಸಿದ್ದರು. ಆ ಬೆನ್ನಲ್ಲೇ, ಕಾಂಗ್ರೆಸ್ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರೂ ಮಧ್ಯಪ್ರವೇಶಿಸಿ ಸಂಧಾನ ನಡೆಸಿದರು.

ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಸುರ್ಜೇವಾಲಾ ಅವರನ್ನು ಶನಿವಾರ ಬೆಳಿಗ್ಗೆ ಭೇಟಿ ಮಾಡಿದ್ದ ರೆಡ್ಡಿ, ತಮ್ಮ ಅಸಮಾಧಾನಕ್ಕೆ ಕಾರಣವಾಗಿದ್ದ ವಿಚಾರವನ್ನು ತಿಳಿಸಿದ್ದರು.

'ಬೆಂಗಳೂರು ಅಭಿವೃದ್ಧಿ ಖಾತೆ ನೀಡುವುದಿಲ್ಲ ಎಂದಿದ್ದರೆ ನನಗೆ ಮೊದಲೇ ಹೇಳಬೇಕಿತ್ತು. ಮಾತು ಕೊಟ್ಟು ಈಗ ಹೀಗೆ ಮಾಡುವುದು ಸರಿಯಲ್ಲ. ಬೇರೆ ಖಾತೆ ನೀಡಲಾಗುತ್ತದೆ ಎಂದು ಮೊದಲೇ ತಿಳಿದಿದ್ದರೆ ಸಚಿವ ಸ್ಥಾನವನ್ನೇ ಸ್ವೀಕರಿಸುತ್ತಿರಲಿಲ್ಲ' ಎಂದು ರೆಡ್ಡಿ ಬೇಸರ ಹೊರಹಾಕಿದ್ದರು. ಅದಕ್ಕೆ ಪ್ರತಿಕ್ರಿಯಿಸಿದ ಸುರ್ಜೇವಾಲಾ, ಮುಖ್ಯಮಂತ್ರಿಯ ಜೊತೆ ಚರ್ಚಿಸಿ ಸಮಸ್ಯೆ ಸರಿಪಡಿಸುವ ಭರವಸೆ ನೀಡಿದ್ದರು.

ಬಳಿಕ ಶಾಸಕರ ಭವನದಲ್ಲಿ ಕೆಪಿಸಿಸಿ ಅಧ್ಯಕ್ಷ ಬಿ.ಕೆ ಹರಿಪ್ರಸಾದ್ ಅವರನ್ನು ರೆಡ್ಡಿ ಭೇಟಿ ಮಾಡಿದ್ದರು. ಈ ವೇಳೆ ಮಾತನಾಡಿದ ಹರಿಪ್ರಸಾದ್, 'ರೆಡ್ಡಿಯವರ ವಿಷಯದಲ್ಲಿ ಸಂವಹನ ಕೊರತೆಯಿಂದ ತಪ್ಪು ತಿಳಿವಳಿಕೆ ಆಗಿದೆ. ಅವರು ರಾಜೀನಾಮೆ ಹಿಂಪಡೆಯುವ ವಿಶ್ವಾಸವಿದೆ' ಎಂದಿದ್ದರು.

ವಿಧಾನಸೌಧದಲ್ಲಿ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಪುಣ್ಯಸ್ಮರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಶಿವಕುಮಾರ್, 'ರಾಮಲಿಂಗಾ ರೆಡ್ಡಿ ತಮ್ಮ ರಾಜೀನಾಮೆಯನ್ನು ವಾಟ್ಸ್ ಆ್ಯಪ್‌ನಲ್ಲಿ ಕಳಿಸಿಕೊಟ್ಟಿದ್ದು ನಿಜ. ಆದರೆ, ಯಾವುದೇ ಕಾರಣಕ್ಕೂ ಅವರ ರಾಜೀನಾಮೆ ಅಂಗೀಕರಿಸುವುದಿಲ್ಲ' ಎಂದು ಅವರು ಹೇಳಿದ್ದರು.



ಬೆಂಗಳೂರಿನಲ್ಲಿ ಶನಿವಾರ ಸಚಿವ ರಾಮಲಿಂಗಾರೆಡ್ಡಿ ಅವರು ಬಿ.ಕೆ ಹರಿಪ್ರಸಾದ್ ಅವರಿಗೆ ಹೂ ಗುಚ್ಛ ನೀಡಿದರು — ಪ್ರಜಾವಾಣಿ ಚಿತ್ರ

'ರಾಜಕೀಯ ಲಾಭ ಪಡೆಯುವ ನಿರೀಕ್ಷೆಯಲ್ಲಿ ಬಿಜೆಪಿ ಇತ್ತು'



ಸುರ್ಜೇವಾಲಾ

'ರಾಮಲಿಂಗಾ ರೆಡ್ಡಿ ಅವರ ಅನುಭವ, ಜಾಣ್ಮೆ ಕಾಂಗ್ರೆಸ್ ಪಕ್ಷಕ್ಕೆ ಅಮೂಲ್ಯವಾದುದು. ಅವರು ಕಾಂಗ್ರೆಸ್ ಪಕ್ಷದ ಆಸ್ತಿ. ಅವರು ರಾಜೀನಾಮೆ ವಾಪಸ್ ಪಡೆದಿದ್ದಾರೆ' ಎಂದು ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

'ಕಾಂಗ್ರೆಸ್ ಪಕ್ಷದಲ್ಲಿ ಅಧಿಕಾರ ಹಸ್ತಾಂತರ ಸುಗಮವಾಗಿ ಸಾಗಿರುವುದರಿಂದ ಆಘಾತಕ್ಕೆ ಒಳಗಾಗಿರುವ ಬಿಜೆಪಿ, ರೆಡ್ಡಿ ರಾಜೀನಾಮೆ ಪ್ರಕರಣದಿಂದ ರಾಜಕೀಯ ಲಾಭ ಪಡೆಯುವ ನಿರೀಕ್ಷೆಯಲ್ಲಿತ್ತು. ಈ ಕಾರಣಕ್ಕೆ ಬಿಜೆಪಿಯವರು, ವಿಕೆಟ್ ಬೀಳುತ್ತಿದೆ ಎಂದೆಲ್ಲಾ ಮಾತನಾಡಿದ್ದರು. ಆದರೆ, ಅವರಿಗೆ ಈಗ ನಿರಾಸೆಯಾಗಿದೆ' ಎಂದರು.

'ರಾಮಲಿಂಗಾರೆಡ್ಡಿ ಅವರ ಬಗ್ಗೆ ಕೆಲವು ಮಾಧ್ಯಮಗಳು ಹಾಗೂ ಬಿಜೆಪಿ ನಾಯಕರು ಊಹಾಪೋಹ ಹರಡುತ್ತಿದ್ದಾರೆ. 1973ರಿಂದ ಅವರು ಕಾಂಗ್ರೆಸ್ ಪಕ್ಷಕ್ಕಾಗಿ ದುಡಿಯುತ್ತಿದ್ದಾರೆ. ನಮ್ಮ ಪಕ್ಷದ ಕೆಲವು ನಾಯಕರು ಆಗ ಇನ್ನೂ ಹುಟ್ಟೇ ಇರಲಿಲ್ಲ. ಅವರು 1989ರಿಂದ ಕಾಂಗ್ರೆಸ್ ಪಕ್ಷದ ಶಾಸಕರಾಗಿದ್ದಾರೆ. ಎಂಟು ಬಾರಿ ಶಾಸಕರಾಗಿ, ಹಲವು ಬಾರಿ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ' ಎಂದರು.

'ರೆಡ್ಡಿ ಅವರ ರಾಜೀನಾಮೆ ವಿಷಯ ಗೊತ್ತಾಗುತ್ತಿದ್ದಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ಸಿದ್ದರಾಮಯ್ಯ ಮತ್ತು ನಾನು ಚರ್ಚಿಸಿದೆವು. ತಪ್ಪು ಸಂವಹನದಿಂದಾಗಿ ಅವರು ನಮ್ಮನ್ನು ಮತ್ತೊಮ್ಮೆ ಭೇಟಿ ಮಾಡಿದ್ದರು. ರಾಜೀನಾಮೆ ಹಿಂಪಡೆದಿರುವ ಅವರು ಮುಂದೆಯೂ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಸೈನಿಕನಾಗಿ ಹಾಗೂ ಸಚಿವರಾಗಿ ಕಾರ್ಯನಿರ್ವಹಿಸಲಿದ್ದಾರೆ' ಎಂದರು.

ಶುಕ್ರವಾರ ರಾತ್ರಿಯೇ ಸಿ.ಎಂ ಶಿವಕುಮಾರ್ ಕಾರ್ಯಾಚರಣೆ

ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ರಾಮಲಿಂಗಾರೆಡ್ಡಿ ಅವರು ತಮಿಳುನಾಡಿಗೆ ಪಯಣ ಬೆಳಸಿದ್ದರು. ಹೀಗಾಗಿ, ಯಾರ ಸಂಪರ್ಕಕ್ಕೂ ಸಿಕ್ಕಿರಲಿಲ್ಲ.

ರೆಡ್ಡಿ ಅವರ ಅತೃಪ್ತಿಯನ್ನು ಶಮನಗೊಳಿಸುವಂತೆ ಕಾಂಗ್ರೆಸ್ ಹೈಕಮಾಂಡ್, ಮುಖ್ಯಮಂತ್ರಿ ಶಿವಕುಮಾರ್‌ಗೆ ಸೂಚಿಸಿತ್ತು. ರೆಡ್ಡಿ ಅವರನ್ನು ಸಂಪರ್ಕಿಸಿದ್ದ ಶಿವಕುಮಾರ್ ಮನೆಗೆ ಬರುವುದಾಗಿ ತಿಳಿಸಿದ್ದರು. ತಾವು ಹೋಟೆಲ್‌ನಲ್ಲಿದ್ದು ಅಲ್ಲಿಗೆ ಬರುವಂತೆ ರೆಡ್ಡಿ ಅವರು ತಿಳಿಸಿದ್ದರು.

ಶುಕ್ರವಾರ ತಡರಾತ್ರಿಯೇ ಹೋಟೆಲ್‌ಗೆ ತೆರಳಿದ ಶಿವಕುಮಾರ್, ಸುದೀರ್ಘ ಸಮಾಲೋಚನೆ ನಡೆಸಿದರು. 'ನಾನೂ ನೀವು ಹಳೆ ಸ್ನೇಹಿತರು. ನಿಮ್ಮ ರಾಜೀನಾಮೆಯನ್ನು ಯಾವುದೇ ಕಾರಣಕ್ಕೂ ಅಂಗೀಕರಿಸುವುದಿಲ್ಲ. ನೀವು ನಮ್ಮ ಜತೆಗೆ ಇರಬೇಕು. ರಾಜೀನಾಮೆ ಸ್ವೀಕರಿಸದಂತೆ ಖರ್ಗೆ, ಸಿದ್ದರಾಮಯ್ಯ, ವೇಣುಗೋಪಾಲ್ ಅವರು ನಿರ್ದೇಶನ ನೀಡಿದ್ದಾರೆ. ಹೀಗಾಗಿ, ವಾಪಸ್ ತೆಗೆದುಕೊಳ್ಳಿ ಎಂದು ಹೇಳಿದರು. ರೆಡ್ಡಿ ಅವರಿಗೆ ದೂರವಾಣಿ ಕರೆ ಮಾಡಿದ ಖರ್ಗೆ, ಸಿದ್ದರಾಮಯ್ಯ, ವೇಣುಗೋಪಾಲ್ ಅವರೂ ಇದೇ ಸಲಹೆ ನೀಡಿದರು. ಹೀಗಾಗಿ, ರಾಜೀನಾಮೆ ವಾಪಸ್ ತೆಗೆದುಕೊಳ್ಳುವ ನಿರ್ಧಾರಕ್ಕೆ ರೆಡ್ಡಿ ಬಂದರು' ಎಂದು ಅವರ ಆಪ್ತಮೂಲಗಳು ಹೇಳಿವೆ.

ಸಮಾಲೋಚನೆ ಬಳಿಕ ರೆಡ್ಡಿ ಅವರೊಂದಿಗೆ ಸುದ್ದಿಗಾರರ ಜೊತೆ ಮಾತನಾಡಿದ ಶಿವಕುಮಾರ್, 'ರೆಡ್ಡಿ ಅವರು ತಮ್ಮ ನೋವನ್ನು ಹೇಳಿಕೊಂಡಿದ್ದಾರೆ. ಒಂದಷ್ಟು ತಪ್ಪು ಸಂವಹನ ಆಗಿದೆ, ಸರಿಪಡಿಸುತ್ತೇವೆ' ಎಂದಿದ್ದರು.

ಕಾಂಗ್ರೆಸ್‌ನ 5ನೇ ಅಭ್ಯರ್ಥಿಗೆ ಗೆಲುವು: ಹೆಬ್ಬಾರ ವಿಶ್ವಾಸ

ಶಿರಸಿ: 'ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್‌ನ 5ನೇ ಅಭ್ಯರ್ಥಿ ಖಂಡಿತ ಗೆಲುವು ಸಾಧಿಸಲಿದ್ದಾರೆ. ಈ ಚುನಾವಣೆಯಲ್ಲಿ ನಾನು ನನ್ನ ಆತ್ಮಸಾಕ್ಷಿಗೆ ಅನುಗುಣವಾಗಿ ಮತ ಹಾಕುವೆ. ನಾನು ಮತ್ತು ಶಾಸಕ ಎಸ್.ಟಿ.ಸೋಮಶೇಖರ ಇಬ್ಬರೂ ಒಟ್ಟಾಗಿಯೇ ಒಂದೇ ನಿರ್ಣಯ ಮಾಡುತ್ತೇವೆ' ಎಂದು ಶಾಸಕ ಶಿವರಾಮ ಹೆಬ್ಬಾರ ತಿಳಿಸಿದರು.

'ಈ ಬಾರಿ ವಿಧಾನಪರಿಷತ್‌ನ 7 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಲಿದ್ದಾರೆ ಎಂಬ ನಿರೀಕ್ಷೆಯಿತ್ತು. ಆದರೆ ಕಾಂಗ್ರೆಸ್‌ನಿಂದ 5ನೇ ಅಭ್ಯರ್ಥಿ ಕಣಕ್ಕಿಳಿದಿರುವುದರಿಂದ ಸ್ಪರ್ಧೆ ಏರ್ಪಟ್ಟಿದೆ' ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಸಂಪುಟಕ್ಕೆ ಇನ್ನೂ 20 ಶಾಸಕರನ್ನು ಸೇರಿಸಿಕೊಳ್ಳಲು ಅವಕಾಶವಿದೆ. ಸಿದ್ದರಾಮಯ್ಯ ಹಾಗೂ ಮುಖ್ಯಮಂತ್ರಿ ಅವರು ನನಗೆ ಸಚಿವ ಸ್ಥಾನದ ಭರವಸೆ ನೀಡಿದ್ದರು; ಕಾದು ನೋಡುತ್ತೇನೆ
ಲಕ್ಷ್ಮಣ ಸವದಿ, ಶಾಸಕ

ರಾಜ್ಯಸಭೆಗೆ ಖೇರಾ, ಮನ್ಸೂರ್, ಪರಿಷತ್‌ಗೆ ಹರಿಪ್ರಸಾದ್ ನಾಮಪತ್ರ

ಬೆಂಗಳೂರು: ಕರ್ನಾಟಕ ವಿಧಾನಸಭೆಯಿಂದ ರಾಜ್ಯಸಭೆಯ 4 ಸ್ಥಾನಗಳಿಗೆ ಜೂನ್ 18ರಂದು ನಡೆಯಲಿರುವ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಎಐಸಿಸಿ ವಕ್ತಾರ ಪವನ್ ಖೇರಾ ಮತ್ತು ಮನ್ಸೂರ್ ಅಲಿಖಾನ್ ಶನಿವಾರ ನಾಮಪತ್ರ ಸಲ್ಲಿಸಿದರು.

ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಮೂರು ಹಾಗೂ ಬಿಜೆಪಿಗೆ ಒಂದು ಸ್ಥಾನ ಸಿಗಲಿದೆ.

ನಾಮಪತ್ರ ಸಲ್ಲಿಸಲು ಜೂನ್ 8 ಕೊನೆ ದಿನವಾಗಿದೆ. ನಾಮಪತ್ರಗಳ ಪರಿಶೀಲನೆ 9ಕ್ಕೆ ನಡೆಯಲಿದ್ದು, ನಾಮಪತ್ರ ಹಿಂದಕ್ಕೆ ಪಡೆಯಲು 10 ಕೊನೆ ದಿನ. 18 ರ ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ ಮತದಾನ ನಡೆಯಲಿದೆ. ಮತಗಳ ಎಣಿಕೆ ಸಂಜೆ 5 ಕ್ಕೆ ನಡೆಯಲಿದೆ.

ವಿಧಾನ ಪರಿಷತ್– ನಾಮಪತ್ರ: ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗಬೇಕಾದ ಏಳು ಸ್ಥಾನಗಳಿಗೂ ಜೂನ್ 18ರಂದು ಚುನಾವಣೆ ನಡೆಯಲಿದೆ. ಕಾಂಗ್ರೆಸ್ ಅಭ್ಯರ್ಥಿಗಳಾದ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಬಿ.ಕೆ. ಹರಿಪ್ರಸಾದ್, ಹಾಲಿ ಸದಸ್ಯ ತಿಪ್ಪಣ್ಣಪ್ಪ ಕಮಕನೂರ, ಕಾಂಗ್ರೆಸ್ ಮುಖಂಡರಾದ ಪಿ.ವಿ. ಮೋಹನ್ ಹಾಗೂ ಮಳವಳ್ಳಿ ಶಿವಣ್ಣ ಅವರು ಶನಿವಾರ ನಾಮಪತ್ರ ಸಲ್ಲಿಸಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ರಾಜ್ಯಸಭಾ ಸದಸ್ಯ ನಾಸಿರ್ ಹುಸೇನ್, ಶಾಸಕರಾದ ಲಕ್ಷ್ಮಿ ಹೆಬ್ಬಾಳಕರ, ಅಶೋಕ ಪಟ್ಟಣ, ಅಲ್ಲಮಪ್ರಭು ಪಾಟೀಲ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ರಾಜೇಂದ್ರ ಪ್ರಸಾದ್ ಸಿ.ಎಂ ಆಪ್ತ ಕಾರ್ಯದರ್ಶಿ



ರಾಜೇಂದ್ರ

ಬೆಂಗಳೂರು: ಕೆಎಎಸ್ ಅಧಿಕಾರಿ ಎಂ.ಎಸ್. ರಾಜೇಂದ್ರ ಪ್ರಸಾದ್ ಅವರನ್ನು ಮುಖ್ಯಮಂತ್ರಿ ಅವರ ಆಪ್ತ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಆದೇಶಿಸಿದೆ.

ಡಿ.ಕೆ.ಶಿವಕುಮಾರ್ ಅವರು ಡಿಸಿಎಂ ಆಗಿದ್ದಾಗ, ಅವರ ಆಪ್ತ ಕಾರ್ಯದರ್ಶಿಯಾಗಿ ರಾಜೇಂದ್ರ ಕಾರ್ಯನಿರ್ವಹಿಸುತ್ತಿದ್ದರು.

ಕೆಂಗೇರಿ: ಚರ್ಮ ಕುಶಲಕರ್ಮಿಗಳಿಗೆ ಲಿಡ್ಕರ್‌ನಿಂದ ಪ್ರಥಮ ಬಾರಿಗೆ ರಾಜ್ಯಮಟ್ಟದಲ್ಲಿ ಆಯೋಜನೆ

ಪಾದರಕ್ಷೆ ತಯಾರಿಕಾ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಸಮಾಜ ಕಲ್ಯಾಣ ಇಲಾಖೆಯಡಿ ಬರುವ ಬಾಬು ಜಗಜೀವನ್‌ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವು (ಲಿಡ್ಕರ್) ಪ್ರಥಮ ಬಾರಿಗೆ ಚರ್ಮ ಕುಶಲಕರ್ಮಿಗಳಿಗೆ ರಾಜ್ಯಮಟ್ಟದ 'ಪಾದರಕ್ಷೆ ತಯಾರಿಕಾ ಸ್ಪರ್ಧೆ'ಯನ್ನು ಶನಿವಾರ ಆಯೋಜಿಸಿತ್ತು.

ರಾಜ್ಯದ ನೈಜ ಚರ್ಮ ಕುಶಲಕರ್ಮಿಗಳ ತಾಂತ್ರಿಕ ನೈಪುಣ್ಯ, ಪಾರಂಪರಿಕ ಕೌಶಲ ಹಾಗೂ ಸೃಜನಶೀಲತೆಯನ್ನು ಪ್ರೋತ್ಸಾಹಿಸಲು ಕೆಂಗೇರಿ ಸಮೀಪದ ಉಲ್ಲಾಳ ಉಪನಗರದಲ್ಲಿರುವ 'ಕಿಲ್ಟ್' ಸಂಸ್ಥೆಯಲ್ಲಿ ಈ ಸ್ಪರ್ಧೆ ನಡೆಯಿತು. ಸ್ಪರ್ಧಿಗಳು ಉತ್ಸಾಹದಿಂದ ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು, 'ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡಿಗರ ಪ್ರಾತಿನಿಧ್ಯ ಕೇವಲ ಶೇ. 3ರಷ್ಟಿದೆ. ಹೋಟೆಲ್ ಉದ್ಯಮದಲ್ಲೂ ಸ್ಥಳೀಯರ ಪಾಲುದಾರಿಕೆ ಅತಿ ಕಡಿಮೆ ಇದೆ. ಕೌಶಲ ಕೊರತೆ ಇದಕ್ಕೆ ಕಾರಣ. ಈ ನಿಟ್ಟಿನಲ್ಲಿ ಕೌಶಲ ವೃದ್ಧಿಗಾಗಿ ಲಿಡ್ಕರ್ ಸಂಸ್ಥೆ ಕಾರ್ಯಕ್ರಮ ರೂಪಿಸಿರುವುದು ಶ್ಲಾಘನೀಯ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಮೈಸೂರಿನ ರಾಜು ಅವರಿಗೆ ₹ 50 ಸಾವಿರ, ದ್ವಿತೀಯ ಸ್ಥಾನ ಪಡೆದ ವಿಜಯಪುರದ ಚಿದಾನಂದ ಜಾಧವ ಅವರಿಗೆ ₹ 30 ಸಾವಿರ ಹಾಗೂ ತೃತೀಯ ಸ್ಥಾನ ಪಡೆದ ಬೆಂಗಳೂರಿನ ಚಿನ್ನಪ್ಪ ಗಾರ್ಡನ್ ನಿವಾಸಿ ಕಾಳಿದಾಸ ಅವರಿಗೆ ₹ 20 ಸಾವಿರ ನಗದು ಬಹುಮಾನ ನೀಡಲಾಯಿತು. ಸಮಾಧಾನಕರ ಬಹುಮಾನವಾಗಿ ಚನ್ನರಾಯಪಟ್ಟಣದ ಗುರುರಾಜ್ ಮತ್ತು ಮೈಸೂರಿನ ಸ್ವಾಮಿ ಅವರಿಗೆ ತಲಾ ₹ 10 ಸಾವಿರ ನೀಡಲಾಯಿತು. ಲಿಡ್ಕರ್ ಅಧ್ಯಕ್ಷ ಮುಂಡರಗಿ ನಾಗರಾಜ್, ಕರ್ನಾಟಕ ಚರ್ಮ ಮತ್ತು ಫ್ಯಾಶನ್ ತಾಂತ್ರಿಕ ಸಂಸ್ಥೆಯ ನಿರ್ದೇಶಕ ಸಿದ್ದಲಿಂಗಪ್ಪ ಬಿ. ಪೂಜಾರ್ ಉಪಸ್ಥಿತರಿದ್ದರು.



ಲಿಡ್ಕರ್ ಏರ್ಪಡಿಸಿದ್ದ ರಾಜ್ಯಮಟ್ಟದ 'ಪಾದರಕ್ಷೆ ತಯಾರಿಕಾ ಸ್ಪರ್ಧೆ'ಯ ವಿಜೇತರಿಗೆ ಪುರುಷೋತ್ತಮ ಬಿಳಿಮಲೆ, ಕೆ.ಎಂ. ವಸುಂಧರಾ ಬಹುಮಾನ ವಿತರಿಸಿದರು

ಮಾರುಕಟ್ಟೆ ಕಲ್ಪಿಸುವ ಉದ್ದೇಶ: ವಸುಂಧರಾ

'ಚರ್ಮ ಕುಶಲಕರ್ಮಿಗಳು ಪೀಳಿಗೆಯಿಂದ ಬಂದಿರುವ ಕೌಶಲವನ್ನು ಹೊಂದಿದ್ದಾರೆ. ಅದಕ್ಕೆ ಹೊಸ ವಿನ್ಯಾಸ, ನಾವೀನ್ಯ ಹಾಗೂ ಆಧುನಿಕ ಮಾರುಕಟ್ಟೆಯನ್ನು ಕಲ್ಪಿಸುವುದು ಸ್ಪರ್ಧೆಯ ಮುಖ್ಯ ಉದ್ದೇಶ' ಎಂದು ಲಿಡ್ಕರ್ ವ್ಯವಸ್ಥಾಪಕ ನಿರ್ದೇಶಕಿ ಕೆ.ಎಂ.ವಸುಂಧರಾ ಹೇಳಿದರು.

'ರಾಜ್ಯದ ವಿವಿಧೆಡೆಯಿಂದ ಆಗಮಿಸುವ ಚರ್ಮ ಕುಶಲಕರ್ಮಿಗಳು ಪಾದರಕ್ಷೆ ತಯಾರಿಕಾ ಕೌಶಲ, ಸೃಜನಶೀಲ, ವಿನ್ಯಾಸ ಸಾಮರ್ಥ್ಯವನ್ನು ಈ ಸ್ಪರ್ಧೆಯ ಮೂಲಕ ಪ್ರದರ್ಶಿಸಲಾಗಿದೆ. ಆ ಮೂಲಕ ನಾಡಿನ ಚರ್ಮ ಕುಶಲಕರ್ಮಿಗಳ ಪ್ರತಿಭೆಯನ್ನು ಗುರುತಿಸಿ, ಗೌರವಿಸುವುದರ ಜೊತೆಗೆ ಅವರ ಉತ್ಪನ್ನಗಳಿಗೆ ಮಾರುಕಟ್ಟೆ ಅವಕಾಶಗಳನ್ನು ಸೃಷ್ಟಿಸುವ ಲಿಡ್ಕರ್‌ನ ಸದಾಶಯ ಈಡೇರಿಸಲಾಗುತ್ತಿದೆ. ಚರ್ಮ ಕೈಗಾರಿಕೆಯನ್ನು ಜೀವನೋಪಾಯವಾಗಿ ನಂಬಿರುವ ಕುಶಲಕರ್ಮಿಗಳಿಗೆ ಇದು ಪ್ರೋತ್ಸಾಹದಾಯಕ ವೇದಿಕೆ' ಎಂದು ಮಾಹಿತಿ ನೀಡಿದರು.

'ರಾಜಕಾರಣಕ್ಕಿಂತ ಭಕ್ತಿ ಮುಖ್ಯ'

ಪ್ರಜಾವಾಣಿ ವಾರ್ತೆ

ತುಮಕೂರು: 'ರಾಜ್ಯದ ಹಿತ ಕಾಪಾಡುವ ಜವಾಬ್ದಾರಿ ತೆಗೆದುಕೊಂಡ ಮೇಲೆ ಎಲ್ಲರ ಆಶೀರ್ವಾದ ಮುಖ್ಯ. ಹಾಗಾಗಿ, ಹಿಂದೂ ಶಾಸ್ತ್ರದ ಪ್ರಕಾರ ಪ್ರಮಾಣ ವಚನ ಸ್ವೀಕಾರ ಮಾಡಿದ್ದೇನೆ' ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ತುರುವೇಕೆರೆ ತಾಲ್ಲೂಕಿನ ಮಲ್ಲಘಟ್ಟ ಗಂಗಾಧರೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ, ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

'ನನಗೆ ರಾಜಕಾರಣಕ್ಕಿಂತ ಭಕ್ತಿ ಮುಖ್ಯ. ಭಕ್ತ ಮತ್ತು ಭಗವಂತನಿಗೂ ಇರುವ ಸಂಬಂಧ ವೈಯಕ್ತಿಕವಾದುದು. ಪ್ರಮಾಣ ವಚನ ಕಾರ್ಯಕ್ರಮಕ್ಕೆ ಎಲ್ಲ ಧರ್ಮಗಳ ಪೀಠದವರನ್ನೂ ಆಹ್ವಾನಿಸಿದ್ದೆ' ಎಂದರು.

'ಮಲ್ಲಘಟ್ಟ ಕೆರೆ ಹಾಗೂ ಗಂಗಾಧರೇಶ್ವರ ದೇವಾಲಯದ ಜತೆಗೆ ಭಾವನಾತ್ಮಕ ನಂಟಿದೆ. ಇಲ್ಲಿಗೆ ಬಂದರೆ ಮನಸ್ಸಿಗೆ ಸಂತೋಷ, ನೆಮ್ಮದಿ ಸಿಗುತ್ತದೆ' ಎಂದರು.

'ಮಲ್ಲಘಟ್ಟ ಸುತ್ತಮುತ್ತ ₹35 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾರ್ಯಗಳಾಗಿವೆ. ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು, ಕಾಡಸಿದ್ಧೇಶ್ವರ ಮಠದವರ ಜತೆಗೆ ಚರ್ಚಿಸಿ ಅಗತ್ಯ ನೆರವು ನೀಡಲಾಗುವುದು' ಎಂದರು.

'ಗವಿ'ಯಲ್ಲಿ ಅರ್ಧ ಗಂಟೆ ಪೂಜೆ

ತಿಪಟೂರು: ತಾಲ್ಲೂಕಿನ ನೊಣವಿನಕೆರೆಯ ಕಾಡಸಿದ್ಧೇಶ್ವರ ಮಠಕ್ಕೆ ಶನಿವಾರ ಭೇಟಿ ನೀಡಿದ್ದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು 'ಗವಿ'ಯಲ್ಲಿ ಅರ್ಧ ಗಂಟೆ ಪೂಜೆ ಸಲ್ಲಿಸಿದರು. ಈ ವೇಳೆ ಕರಿವೃಷಭದೇಶಿಕೇಂದ್ರ ಶಿವಯೋಗಿಶ್ವರ ಸ್ವಾಮೀಜಿ ಮಾತ್ರ ಜತೆಗಿದ್ದರು.

ಬಳಿಕ, ಕಾಡಸಿದ್ಧೇಶ್ವರ ದೇವಸ್ಥಾನಕ್ಕೆ ತೆರಳಿ ಗದ್ದುಗೆಗೆ ಪೂಜೆ ಸಲ್ಲಿಸಿದರು. ಆನೆಗೆ ಹಣ್ಣು ತಿನ್ನಿಸಿದರು. ಬಳಿಕ ನೊಣವಿನಕೆರೆ ಶ್ರೀಗಳ ವಸತಿ ಜಾಗ ಗುರುಭವನಕ್ಕೆ ತೆರಳಿ ರಾತ್ರಿ 8 ಗಂಟೆವರೆಗೆ ಸಮಾಲೋಚನೆ ನಡೆಸಿದರು.

'ನೊಣವಿನಕೆರೆ ಕಾಡಸಿದ್ಧೇಶ್ವರ ಮಠಕ್ಕೆ ನಾನು ಹೊಸಬನಲ್ಲ. 25 ವರ್ಷಗಳಲ್ಲಿ ಲೆಕ್ಕವಿಲ್ಲದಷ್ಟು ಬಾರಿ ಭೇಟಿ ನೀಡಿದ್ದೇನೆ. ಇವತ್ತು ಮುಖ್ಯಮಂತ್ರಿಯಾಗಿ ಇಲ್ಲಿಗೆ ಬಂದಿಲ್ಲ. ಭಕ್ತನಾಗಿ ಬಂದಿದ್ದು, ನನಗೂ ಸೇರಿದಂತೆ ರಾಜ್ಯಕ್ಕೆ ಒಳ್ಳೆಯದಾಗಲಿ ಎಂದು ಪ್ರಾರ್ಥಿಸಿದ್ದೇನೆ' ಎಂದು ಮಾಧ್ಯಮಗಳಿಗೆ ತಿಳಿಸಿದರು.

ಅಜ್ಜಯ್ಯನ ಪವಾಡದಿಂದ ಶಿವಕುಮಾರ್ ಮುಖ್ಯಮಂತ್ರಿ ಆಗಿದ್ದಾರೆ. ಅವರಿಗೆ ನೊಣವಿನಕೆರೆ ಮಠದ ಮೇಲೆ ಅಪಾರ ಭಕ್ತಿ. ಉಳಿದ ಮಠಗಳಿಗೂ ಅನುದಾನ ಕೊಡಲಿ
ರುದ್ರಮುನಿ ಸ್ವಾಮೀಜಿ, ಷಡಕ್ಷರ ಮಠ

ಭಾನುವಾರ, ಜೂನ್ 7, 2026 ₹ 7.00

www.prajavani.net

prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ದಾಖಲೆ 'ವೈಭವ'

ಐರ್ಲೆಂಡ್– ಇಂಗ್ಲೆಂಡ್ ಪ್ರವಾಸಕ್ಕೆ ಭಾರತ ಟಿ20 ತಂಡದಲ್ಲಿ 15ರ ಪೋರ ವೈಭವ ಸೂರ್ಯವಂಶಿ ಸ್ಥಾನ ಪಡೆದಿದ್ದಾರೆ. ಅವರು ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾದ ಅತಿ ಕಿರಿಯ ಆಟಗಾರ ಎನಿಸಿದ್ದಾರೆ



ರುಚಿ ಇದೆ...

ಚಿಕ್ಕಮಗಳೂರಿನಲ್ಲಿ ಅಳಿಲೊಂದು ಹಣ್ಣು ತಿನ್ನುತ್ತಾ ಕುಳಿತಿದ್ದ ದೃಶ್ಯ ಸೆರೆಯಾಗಿದ್ದು ಹೀಗೆ



ಜಕ್ಕೂರು ಕೆರೆಯಲ್ಲಿ ‘ವುಡನ್ ವಾಕ್‌ವೇ’

ರೈಲ್ವೆ ಮೇಲ್ಸೇತುವೆ ಕಾಮಗಾರಿ ವಾರದೊಳಗೆ ಪೂರ್ಣಗೊಳಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಕ್ಕೂರು ಕೆರೆಯಲ್ಲಿ ‘ವುಡನ್ ವಾಕ್‌ವೇ’ ನಿರ್ಮಾಣ ಮಾಡಲು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಶನಿವಾರ ಸೂಚಿಸಿದರು.

ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಜಕ್ಕೂರು ಕೆರೆ, ರೈಲ್ವೆ ಮೇಲ್ಸೇತುವೆ ಕಾಮಗಾರಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ನಂತರ ಅವರು ಮಾತನಾಡಿದರು.

ಜಕ್ಕೂರು ಕೆರೆಯ ರೈಲ್ವೆ ಹಳಿ ಸಮೀಪದ ಭಾಗದಲ್ಲಿ ಪಾದಚಾರಿ ಸೇತುವೆ ನಿರ್ಮಿಸುವ ಸಂಬಂಧ ಜಲಮಂಡಳಿ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಜಕ್ಕೂರು ಕೆರೆಯ ಪ್ರದೇಶದಲ್ಲಿ ‘ವುಡನ್ ವಾಕ್‌ವೇ’ ನಿರ್ಮಾಣಕ್ಕೆ ಯೋಜನೆ ರೂಪಿಸುವಂತೆ ನಿರ್ದೇಶನ ನೀಡಿದರು.

ಕೆರೆ ಸಮೀಪ ಜಲಮಂಡಳಿ ವತಿಯಿಂದ 10 ಎಂಎಲ್‌ಡಿ ಸಾಮರ್ಥ್ಯದ ಎಸ್‌ಟಿಪಿ ಕಾಮಗಾರಿ ಪ್ರಗತಿಯಲ್ಲಿದೆ. ಕೆರೆ ಹಾಗೂ ಎಸ್‌ಟಿಪಿ ನಡುವಿನ ರಸ್ತೆಯ ವಿಸ್ತರಣೆ ಮತ್ತು ಪಾದಚಾರಿ ಮಾರ್ಗ ನಿರ್ಮಾಣದ ಕುರಿತು ಪಾಲಿಕೆ, ಜಲಮಂಡಳಿ ಹಾಗೂ ಬಿಡಿಎ ಅಧಿಕಾರಿಗಳು ಚರ್ಚಿಸಿ ನೀಲನಕ್ಷೆ ಸಿದ್ಧಪಡಿಸಿ ವರದಿ ಸಲ್ಲಿಸುವಂತೆ ಸೂಚಿಸಿದರು.

ಕೆರೆ ಪಕ್ಕದಲ್ಲಿರುವ ರಸ್ತೆಯೊಂದಿಗೆ ಬಿಡಿಎ ಬಡಾವಣೆಯ ರಸ್ತೆಯನ್ನು ಸಂಪರ್ಕಿಸಿ ಪರ್ಯಾಯ ರಸ್ತೆಯಾಗಿ ಅಭಿವೃದ್ಧಿಪಡಿಸಲು ಕ್ರಮವಹಿಸಬೇಕು. ಇದೇ ಸ್ಥಳದಲ್ಲಿ ರೈಲ್ವೆ ಕೆಳಸೇತುವೆ ನಿರ್ಮಿಸುವ ಯೋಜನೆಯೂ ಇದ್ದು, ಈ ಕುರಿತು ಸಮಗ್ರವಾಗಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಜಕ್ಕೂರು ರೈಲ್ವೆ ಮೇಲ್ಸೇತುವೆಯ 600 ಮೀಟರ್ ಉದ್ದದ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಡಾಂಬರೀಕರಣ ಕಾಮಗಾರಿ ಮಾತ್ರ ಬಾಕಿಯಿದೆ. ಅದನ್ನು ವಾರದೊಳಗೆ ಪೂರ್ಣಗೊಳಿಸಿ ನಾಗರಿಕರ ಸೇವೆಗೆ ಸಮರ್ಪಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಬೇಕು ಎಂದು ಅವರು ಹೇಳಿದರು.

ಜಕ್ಕೂರು ಗ್ರಾಮದಲ್ಲಿ 800 ಮೀಟರ್ ಉದ್ದದ ರಸ್ತೆಯ ವೈಟ್ ಟಾಪಿಂಗ್ ಕಾಮಗಾರಿಗೆ ವೇಗ ನೀಡಬೇಕು. ಬೀದಿ ನಾಯಿಗಳಿಗೆ ಆಹಾರ ನೀಡುವ ಸ್ಥಳಗಳನ್ನು ಗುರುತಿಸಬೇಕು. ರೈತರ ಸಂತೆ ಬಳಿ ಪಾದಚಾರಿ ಮಾರ್ಗದ ಮೇಲಿನ ಒತ್ತುವರಿಯನ್ನು ಸಂಪೂರ್ಣವಾಗಿ ತೆರವುಗೊಳಿಸಬೇಕು. ಇಂದಿರಾ ಕ್ಯಾಂಟೀನ್ ಸುತ್ತಮುತ್ತಲಿನ ಪ್ರದೇಶದಲ್ಲಿ ಶುಚಿತ್ವ ಕಾಪಾಡುವಂತೆ ಸೂಚಿಸಿದರು.

ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್‌ಕುಮಾರ್, ಮುಖ್ಯ ಎಂಜಿನಿಯರ್ ರಾಘವೇಂದ್ರ ಪ್ರಸಾದ್ ಉಪಸ್ಥಿತರಿದ್ದರು.


ಮಹೇಶ್ವರ್ ರಾವ್, ಪೊಮ್ಮಲ ಸುನೀಲ್‌ಕುಮಾರ್ ಅವರು ಜಕ್ಕೂರಿನಲ್ಲಿ ಕಾಮಗಾರಿಗಳ ಪರಿಶೀಲನೆ ನಡೆಸಿದರು

ಕೇಂದ್ರ ನಗರ ಪಾಲಿಕೆ ಆಯುಕ್ತರಾಗಿ ಜಿ. ಜಗದೀಶ್ ಅಧಿಕಾರ ಸ್ವೀಕಾರ

‘ಉದ್ಯಾನಗಳನ್ನು ನಡಿಗೆದಾರರ ಸ್ನೇಹಿಯಾಗಿಸಿ’

‘ಮಕ್ಕಳು, ಹಿರಿಯ ನಾಗರಿಕರು, ಮಹಿಳೆಯರು ಹೆಚ್ಚಾಗಿ ವಾಯುವಿಹಾರಕ್ಕೆ ಬರುವ ಉದ್ಯಾನಗಳನ್ನು ‘ನಡಿಗೆದಾರರ ಸ್ನೇಹಿ’ಯನ್ನಾಗಿ ರೂಪಿಸಿ’ ಎಂದು ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಜಿ. ಜಗದೀಶ್ ಹೇಳಿದರು.


ಜಿ. ಜಗದೀಶ್

ಶನಿವಾರ ಅಧಿಕಾರ ಸ್ವೀಕರಿಸಿ, ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ‘ನಾವೆಲ್ಲರೂ ಸಾರ್ವಜನಿಕರ ಸೇವಕರಾಗಿದ್ದು, ಜನರೊಂದಿಗೆ ಸೌಜನ್ಯದಿಂದ ನಡೆದುಕೊಳ್ಳಬೇಕು’ ಎಂದು ಸೂಚಿಸಿದರು.

ಸಭೆಯಲ್ಲಿ ವಿವಿಧ ಇಲಾಖೆಗಳ ಪ್ರಗತಿ, ನಾಗರಿಕರಿಗೆ ನೀಡಲಾಗುತ್ತಿರುವ ಸೇವೆಗಳ ಗುಣಮಟ್ಟ, ಅಭಿವೃದ್ಧಿ ಕಾಮಗಾರಿಗಳು ಹಾಗೂ ಮುಂದಿನ ಕಾರ್ಯಯೋಜನೆಗಳ ಕುರಿತು ಸಮಗ್ರ ವಿವರ ಪಡೆದರು. ಇಲಾಖೆಗಳ ನಡುವೆ ಸಮನ್ವಯವನ್ನು ಮತ್ತಷ್ಟು ಬಲಪಡಿಸಿ, ಸಾರ್ವಜನಿಕರಿಗೆ ತ್ವರಿತ ಹಾಗೂ ಪರಿಣಾಮಕಾರಿ ಸೇವೆ ಒದಗಿಸಲು ಕಾನೂನಿನ ಅಡಿ ಜವಾಬ್ದಾರಿ ಯುತವಾಗಿ ಕಾರ್ಯನಿರ್ವಹಿಸಲು ಹೇಳಿದರು. ಮಾರುಕಟ್ಟೆ ಸೇರಿದಂತೆ ಬಾಡಿಗೆ ಪಾವತಿ ಮಾಡದ ಮಳಿಗೆಗಳನ್ನು/ಸ್ವತ್ತುಗಳನ್ನು ಖಾಲಿ ಮಾಡಿಸಬೇಕು. ತ್ಯಾಜ್ಯ ನಿರ್ವಹಣೆಗೆ ಸ್ವಚ್ಛತಾ ಸಿಬ್ಬಂದಿಗೆ ಹಾಜರಾತಿ ಕಡ್ಡಾಯಗೊಳಿಸಬೇಕು. ಪ್ರತಿ ದಿನ ಮನೆ ಮನೆ ತ್ಯಾಜ್ಯ ಸಂಗ್ರಹಣೆ ಶೇ 100 ಪ್ರಗತಿ ಸಾಧಿಸಬೇಕು ಎಂದರು.

ವಿದ್ಯುತ್ ಸಂಪರ್ಕ: ಒ.ಸಿಗೆ ಒಂದು ಬಾರಿ ವಿನಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಬೇಕಾದ ಸ್ವಾಧೀನಾನುಭವ ಪ್ರಮಾಣಪತ್ರಕ್ಕೆ (ಒ.ಸಿ) ಒಂದು ಬಾರಿ ವಿನಾಯಿತಿ ನೀಡಲಾಗಿದೆ.

ಮೇ 31ರ ಒಳಗೆ ಅರ್ಜಿ ಸಲ್ಲಿಸಿರುವವರಿಗೆ ಮಾತ್ರ ಈ ವಿನಾಯಿತಿ ದೊರೆಯಲಿದೆ. ಕಟ್ಟಡ ಪೂರ್ಣಗೊಂಡಿರುವ ಮತ್ತು ನಿಯಮಾನುಸಾರ ಅರ್ಹವಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ವಿದ್ಯುತ್ ಸರಬರಾಜು ಕಂಪನಿಗಳು ಸ್ಥಳ ಪರಿಶೀಲನೆ ನಡೆಸಿ, ಕಟ್ಟಡ ಭಾವಚಿತ್ರದೊಂದಿಗೆ ದಾಖಲು ಮಾಡಿ ಸಂಪರ್ಕ ನೀಡಲು ನಗರಾಭಿವೃದ್ಧಿ ಇಲಾಖೆ ನಿರ್ದೇಶನ ನೀಡಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ 2,400 ಚದರ ಅಡಿವರೆಗಿನ (ಶೇ 20 ಹೆಚ್ಚುವರಿ ವ್ಯತ್ಯಾಸದ ಮಿತಿಯೊಂದಿಗೆ) ಅಳತೆಯ ನಿವೇಶನಗಳಲ್ಲಿ ನಿರ್ಮಿಸಲಾಗಿರುವ ಜಿ + 3 ಅಂತಸ್ತಿನ ವಸತಿ ಕಟ್ಟಡಗಳು ಅಥವಾ ಸ್ಟಿಲ್ಟ್ ಪಾರ್ಕಿಂಗ್ + 4 ಮಹಡಿಗಳನ್ನು ಹೊಂದಿರುವ ವಸತಿ ಕಟ್ಟಡಗಳಿಗೆ ಈ ವಿನಾಯಿತಿ ಲಭಿಸಲಿದೆ.

ಈ ಬಗ್ಗೆ ಜೂನ್ 3ರಂದು ಸಚಿವ ಸಂಪುಟ ಕೈಗೊಂಡ ನಿರ್ಣಯದಂತೆ ಈ ಆದೇಶ ಹೊರಡಿಸಲಾಗಿದೆ.

ಸುದ್ದಿ 2 ನಿಮಿಷ

‘ಬೆಂಗಳೂರು ಕಾಪಾಡಲು ಹಸಿರು ಕಾರ್ಯಸೂಚಿ’

ಬೆಂಗಳೂರು: ‘ನಗರವು 15 ವರ್ಷಗಳಿಂದ ಉದ್ಯಾನ ನಗರಿ ಎಂಬ ಬಿರುದನ್ನು ಕಳೆದುಕೊಂಡು ‘ಗಾರ್ಬೇಜ್ ನಗರ’ ಎಂಬ ಕುಖ್ಯಾತಿಗೆ ಒಳಗಾಗಿದೆ. ಮುಂದಿನ ದಿನಗಳಲ್ಲಿ ಕಸಕ್ಕಾಗಿ ನಡೆಯುವ ಯುದ್ಧ ತಪ್ಪಿಸಲು ಸರ್ಕಾರವು ಹಸಿರು ಕಾರ್ಯಸೂಚಿ ಘೋಷಿಸಬೇಕು’ ಎಂದು ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಪೃಥ್ವಿ ರೆಡ್ಡಿ ಆಗ್ರಹಿಸಿದರು.

ಬೆಂಗಳೂರಿನ ಕಸ ನಿರ್ವಹಣೆಯ ಸಮಸ್ಯೆಯ ಪರಿಹಾರಕ್ಕಾಗಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ನಿವಾಸಿಗಳು ಕಸ ನಿರ್ವಹಣೆಗೆ ಕಟ್ಟಡ ತೆರಿಗೆಯ ಜೊತೆ ಕಸದ ತೆರಿಗೆಯನ್ನು ಸಹ ಪಾವತಿಸುತ್ತಿದ್ದಾರೆ. ತಾವು ಪಾವತಿಸುತ್ತಿರುವ ಕೋಟ್ಯಂತರ ಹಣ ಭ್ರಷ್ಟರ ಪಾಲಾಗುತ್ತಿರುವುದನ್ನು ನಿಲ್ಲಿಸಲು ಜನಾಂದೋಲನದ ಅಗತ್ಯವಿದೆ’ ಎಂದರು.

ವೃಕ್ಷ ವೈದ್ಯ ನಿಶಾಂತ್ ಮಾತನಾಡಿ ‘ಈ ಹಿಂದೆ ಸ್ಟೀಲ್ ಮೇಲ್ಸೇತುವೆ ವಿರುದ್ಧ, ಬನ್ನೇರುಘಟ್ಟ ಜೈವಿಕ ಉದ್ಯಾನದ ಉಳಿವಿಗಾಗಿ ನಡೆದಂತಹ ಬೃಹತ್ ಹೋರಾಟಗಳು ಸಂಪೂರ್ಣ ಸ್ತಬ್ಧವಾಗಿವೆ’ ಎಂದು ಹೇಳಿದರು.

ಕಸ ವಿಲೇವಾರಿ ತಜ್ಞ ರಾಜೇಶ್ ಬಾಬು ಮಾತನಾಡಿ, ‘ಕಸ ಸಂಗ್ರಹಣೆ ಮಾಡಿ ಸಂಸ್ಕರಣೆ ಮಾಡುತ್ತಿಲ್ಲ. ಕೇವಲ ಡಂಪಿಂಗ್ ಮಾತ್ರ ಆಗುತ್ತಿದೆ. ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ಸಂಸ್ಥೆಯು ಕೇವಲ ಟೆಂಡರ್‌ಗಳನ್ನು ಕರೆಯುವ ಸಂಸ್ಥೆಯಾಗಿದೆ. ಪ್ರತಿ ವರ್ಷ ಸಾವಿರಾರು ಟನ್ ಕಸ ಸಂಗ್ರಹಣೆಯ ಲೆಕ್ಕವನ್ನು ತೋರಿಸಿ ಜನತೆಯ ತೆರಿಗೆ ಹಣವನ್ನು ಸಂಪೂರ್ಣ ಪೋಲು ಮಾಡುತ್ತಿದ್ದಾರೆ’ ಎಂದರು.

ಆಮ್ ಆದ್ಮಿ ಪಕ್ಷದ ಕಾರ್ಯಾಧ್ಯಕ್ಷ ಸೀತಾರಾಮ್ ಗುಂಡಪ್ಪ, ಸಂಘಟನಾ ಕಾರ್ಯದರ್ಶಿ ಡಾ. ಸತೀಶ್ ಕುಮಾರ್, ಹಸಿರು ದಳದ ಚಿನ್ಮಯಿ, ಎಚ್‌ಎಸ್‌ಆರ್ ಬಡಾವಣೆ ಕಸ ಸಂಗ್ರಹಣ ಹೋರಾಟದ ಶಾಂತಿ ಸೇರಿದಂತೆ, ಪಕ್ಷದ ಮುಖಂಡರಾದ ಜಗದೀಶ್ ವಿ. ಸದಂ, ಬಸವರಾಜ ಮುದಿಗೌಡರ್, ಉಷಾ ಮೋಹನ್, ನವೀನ್ ಅಯ್ಯರ್, ಜಗದೀಶ್ ಚಂದ್ರ, ಪುಟ್ಟಣ್ಣಗೌಡ ಭಾಗವಹಿಸಿದ್ದರು.

ಪದವಿ ಪ್ರದಾನ ಸಮಾರಂಭ



ಬೆಂಗಳೂರು: ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜಿನ 59ನೇ ವಾರ್ಷಿಕ ಘಟಿಕೋತ್ಸವದಲ್ಲಿ 150 ಪದವೀಧರರಿಗೆ ಶುಕ್ರವಾರ ಪದವಿ ಪ್ರದಾನ ಮಾಡಲಾಯಿತು.

ಐವರು ವಿದ್ಯಾರ್ಥಿಗಳು 9 ರ‍್ಯಾಂಕ್ ಗಳಿಸಿದ್ದಾರೆ. ಅಕ್ಷಯ್ ಅಜೋಯ್ 4ನೇ ರ‍್ಯಾಂಕ್, ಅನನ್ಯಾ ವರ್ಷಿಣಿ 7, ರಾಚೆಲ್ ರಂಜನ್ 8, ಸುಜೇನ್ ಮೇರಿ 8 ಮತ್ತು ಜೈನಾಬ್ ಫಾತಿಮಾ 9ನೇ ರ‍್ಯಾಂಕ್ ಗಳಿಸಿದ್ದಾರೆ.

ಕ್ರೈಸ್ಟ್ ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿ ರೆವರೆಂಡ್. ಡಾ. ಜೋಸ್ ಸಿ.ಸಿ ಭಾಗವಹಿಸಿದ್ದರು. ಸೇಂಟ್ ಜಾನ್ಸ್ ನ್ಯಾಷನಲ್ ಅಕಾಡೆಮಿ ನಿರ್ದೇಶಕ ಜೆಸುದಾಸ್ ರಾಜಮಾಣಿಕ್ಕಂ ಪಾಲ್ಗೊಂಡಿದ್ದರು.

ಮನ್ಸೂರ್ ಆಸ್ತಿ ಶೇ 79ರಷ್ಟು ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭಾ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮನ್ಸೂರ್ ಅಲಿ ಖಾನ್ ಅವರ ಆಸ್ತಿಯ ಮೌಲ್ಯ ನಾಲ್ಕು ವರ್ಷಗಳಲ್ಲಿ ಶೇ 79ರಷ್ಟು ಹೆಚ್ಚಾಗಿದೆ.

ನಾಮಪತ್ರದ ಜತೆಗೆ ಅವರು ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ತಮ್ಮ ಮತ್ತು ಕುಟುಂಬದ ಒಟ್ಟು ಆಸ್ತಿಯ ಮೌಲ್ಯ ₹103.94 ಕೋಟಿ ಎಂದು ಘೋಷಿಸಿಕೊಂಡಿದ್ದಾರೆ. 2022ರಲ್ಲಿ ನಡೆದಿದ್ದ ಚುನಾವಣೆ ವೇಳೆ ಸಲ್ಲಿಸಿದ್ದ ಪ್ರಮಾಣ ಪತ್ರದಲ್ಲಿ ಅವರು ತಮ್ಮ ಮತ್ತು ಕುಟುಂಬದ ಆಸ್ತಿಯ ಮೌಲ್ಯ ₹58.07 ಕೋಟಿ ಎಂದು ಘೋಷಿಸಿಕೊಂಡಿದ್ದರು.

ಅಲಿ ಖಾನ್ ಅವರ ಹೆಸರಿನಲ್ಲಿ ₹84.28 ಕೋಟಿ, ಅವರ ಪತ್ನಿ ಹೆಸರಿನಲ್ಲಿ ₹19.21 ಕೋಟಿ ಮೌಲ್ಯದ ಸ್ಥಿರಾಸ್ತಿ ಇದೆ ಎಂಬ ವಿವರ ಪ್ರಮಾಣಪತ್ರದಲ್ಲಿದೆ. ಎಚ್‌ಎಸ್‌ಆರ್ ಬಡಾವಣೆಯಲ್ಲಿ ಇರುವ ನಿವೇಶನಗಳು, ನಗರದ ವಿವಿಧೆಡೆ ಇರುವ ವಸತಿ ಕಟ್ಟಡಗಳು, ಬೆಂಗಳೂರು ಗ್ರಾಮಾಂತರ, ಮೈಸೂರಿನ ಹಲವೆಡೆ ಅವರು ಹೊಂದಿರುವ ಕೃಷಿ ಜಮೀನು, ದುಬೈನ ವಿಲ್ಲಾವನ್ನು ಇದು ಒಳಗೊಂಡಿದೆ.


ಮನ್ಸೂರ್ ಅಲಿಖಾನ್

ಅಲಿ ಖಾನ್ ಅವರ ಹೆಸರಿನಲ್ಲಿ ₹14.53 ಕೋಟಿ, ಅವರ ಪತ್ನಿ ಹೆಸರಿನಲ್ಲಿ ₹9.42 ಕೋಟಿ ಮತ್ತು ಮಕ್ಕಳ ಹೆಸರಿನಲ್ಲಿ ₹45 ಲಕ್ಷ ಸೇರಿ ಒಟ್ಟು ₹24.40 ಕೋಟಿ ಮೌಲ್ಯದ ಚರಾಸ್ತಿ ಇದೆ ಎಂಬ ವಿವರ ಪ್ರಮಾಣಪತ್ರದಲ್ಲಿದೆ. ಲ್ಯಾಂಡ್ ರೋವರ್ ಡಿಫೆಂಡರ್, ಬಿಎಂಡಬ್ಲ್ಯು ಎಕ್ಸ್ 7 ಮತ್ತು ಔಡಿ ಎಸ್6 ಸ್ಪೋರ್ಟ್ಸ್‌ನಂತಹ ಐಷಾರಾಮಿ ಕಾರುಗಳು, ಚಿನ್ನಾಭರಣ, ಬ್ಯಾಂಕ್ ಠೇವಣಿಯನ್ನು ಇದು ಒಳಗೊಂಡಿದೆ.

ಅಲಿ ಖಾನ್ ಅವರು ₹6.29 ಕೋಟಿ ಮತ್ತು ಅವರ ಪತ್ನಿ ₹1.69 ಕೋಟಿಯಷ್ಟು ಸಾಲ ಹೊಂದಿದ್ದಾರೆ.

ಸರ್ಕಾರಕ್ಕೆ ಹೈಕೋರ್ಟ್ ನ್ಯಾಯಮೂರ್ತಿ ಸಂಜೀವ ಕುಮಾರ್ ಸಲಹೆ

‘ರೇಸ್‌ಕೋರ್ಸ್ ಕಿರು ಅರಣ್ಯ, ನಡಿಗೆ ಪಥವಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೃದಯ ಭಾಗದಲ್ಲಿರುವ ರೇಸ್‌ಕೋರ್ಸ್ ಭೂಮಿಯನ್ನು ಜನೋಪಯೋಗಿ ಹಾಗೂ ಪರಿಸರ ಸ್ನೇಹಿ ಉದ್ದೇಶಗಳಿಗೆ ಬಳಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನ್ಯಾಯಮೂರ್ತಿ ಹಂಚಾಟೆ ಸಂಜೀವ ಕುಮಾರ್ ಸಲಹೆ ನೀಡಿದ್ದಾರೆ.

ಈ ಕುರಿತು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ನಾಲ್ಕು ಪುಟಗಳ ಪತ್ರ ಬರೆದಿರುವ ಅವರು, ರೇಸ್ ಕೋರ್ಸ್ ಅನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸುವ ಸರ್ಕಾರದ ತೀರ್ಮಾನ ದೂರದರ್ಶಿ ಕ್ರಮವಾಗಿದೆ ಎಂದಿದ್ದಾರೆ

ರೇಸ್‌ಕೋರ್ಸ್‌ನ ಒಟ್ಟು ವಿಸ್ತೀರ್ಣ ಸುಮಾರು 85 ಎಕರೆ. ಈ ಪೈಕಿ 50 ಎಕರೆ ಪ್ರದೇಶವನ್ನು ಮಿಯಾವಾಕಿ ವಿಧಾನದಲ್ಲಿ ಸಾಂದ್ರ ಸ್ವದೇಶಿ ಅರಣ್ಯ ನಿರ್ಮಾಣಕ್ಕೆ ಮೀಸಲಿಡಬೇಕು. ಉಳಿದ ಪ್ರದೇಶವನ್ನು ನಾಗರಿಕರಿಗಾಗಿ ನಡಿಗೆ ಪಥ (ವಾಕಿಂಗ್ ಪಾಥ್) ಅಭಿವೃದ್ಧಿಪಡಿಸಬೇಕು. ಈ ಯೋಜನೆ ಮೂಲಕ ಸುಮಾರು 60ಕ್ಕೂ ಹೆಚ್ಚು ಜಾತಿಯ ಏಳು ಲಕ್ಷಕ್ಕೂ ಹೆಚ್ಚಿನ ಗಿಡಗಳನ್ನು ನೆಡಬಹುದು ಎಂದು ಹೇಳಿದ್ದಾರೆ.

50 ಎಕರೆ ಪ್ರದೇಶದಲ್ಲಿ ಮಿಯಾವಾಕಿ ಮಾದರಿಯ ಕಿರು ಅರಣ್ಯ ನಿರ್ಮಿಸುವುದು ಅತ್ಯಂತ ಪರಿಣಾಮಕಾರಿ ಮತ್ತು ದೀರ್ಘಕಾಲಿಕ ಪರಿಸರ ಸ್ನೇಹಿ ಉಪಕ್ರಮವಾಗಿರುತ್ತದೆ. ದಟ್ಟವಾದ ಹಸಿರು ಅರಣ್ಯ ಸೃಷ್ಟಿಸಿ, ವಾತಾವರಣದಲ್ಲಿನ ‘ಕಾರ್ಬನ್ ಡೈ ಆಕ್ಸೈಡ್’ ಅನ್ನು ಪರಿಣಾಮಕಾರಿಯಾಗಿ ಹೀರಿಕೊಳ್ಳುವ ಮೂಲಕ ಹವಾಮಾನ ಬದಲಾವಣೆ ತಗ್ಗಿಸಲು ಸಹಕಾರಿ ಆಗಲಿದೆ. ಅನೇಕ ಜಾತಿಯ ಪಕ್ಷಿಗಳು, ಚಿಕ್ಕ ಸಸ್ತನಿಗಳು, ಇತರೆ ಜೀವಿಗಳಿಗೆ ಸುರಕ್ಷಿತ ಆಶ್ರಯ ತಾಣವಾಗಿ ಪರಿಣಮಿಸಿ, ಸ್ಥಳೀಯ ಜೀವ ವೈವಿಧ್ಯತೆಯನ್ನು ಕಾಪಾಡಲು ಮತ್ತು ವೃದ್ಧಿಸಲು ಮಹತ್ವದ ಪಾತ್ರವಹಿಸುತ್ತದೆ ಎಂದು ತಿಳಿಸಿದ್ದಾರೆ.

ಸಲಹೆಗಳು

- ಸೈಕಲ್ ಮಾರ್ಗ, ಯೋಗ, ಧ್ಯಾನ ಕೇಂದ್ರ, ಹಿರಿಯ ನಾಗರಿಕರಿಗೆ ವಿಶ್ರಾಂತಿ ವಲಯ, ಮಕ್ಕಳ ಆಟದ ಮೈದಾನ ನಿರ್ಮಿಸಿ
- ಮಳೆ ನೀರು ಸಂಗ್ರಹ, ಕೃತಕ ಸರೋವರ ನಿರ್ಮಾಣ, ಸೌರಶಕ್ತಿ ಬಳಕೆ ಮೂಲಕ ಪರಿಸರ ಸ್ನೇಹಿ ಮಾದರಿ ವಲಯ ರೂಪಿಸಿ
- ಶಾಲಾ ಮಕ್ಕಳಿಗೆ ಪ್ರಕೃತಿ ಶಿಕ್ಷಣ ಶಿಬಿರ, ಸಾರ್ವಜನಿಕ ಸಂವಾದಕ್ಕೆ ಮುಕ್ತ ವೇದಿಕೆ ನಿರ್ಮಿಸಿ
- ಸಾರ್ವಜನಿಕ ಹಿತಾಸಕ್ತಿಗೆ ಮೀಸಲಿಟ್ಟು, ಯಾವುದೇ ವಾಣಿಜ್ಯ ಚಟುವಟಿಕೆಗೆ ಅವಕಾಶ ನೀಡಬಾರದು

ಮಿಯಾವಾಕಿ ಅರಣ್ಯದ ಸುತ್ತ ನಡಿಗೆ ಪಥ ಮಾಡುವುದರಿಂದ ನಾಗರಿಕರ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಮಹತ್ವದ ಕೊಡುಗೆ ನೀಡುತ್ತದೆ. ಹಿರಿಯರು, ಮಕ್ಕಳು ಮತ್ತು ವಿದ್ಯಾರ್ಥಿಗಳಿಗೆ ಪ್ರಕೃತಿ ಮಧ್ಯೆ ಕಾಲ ಕಳೆಯುವ ಅತ್ಯುತ್ತಮ ಕೇಂದ್ರವಾಗುತ್ತದೆ. ಸ್ಥಳೀಯ ಸಾವಿರಾರು ಗಿಡಗಳನ್ನು ನೆಟ್ಟು, ಹಸಿರು ಪ್ರದೇಶ ವಿಸ್ತರಿಸಬೇಕು. ಪಕ್ಷಿಗಳು, ಚಿಟ್ಟೆಗಳು ಮತ್ತು ಸಣ್ಣಜೀವಿಗಳಿಗೆ ಆಶ್ರಯ ಒದಗಿಸುವ ಜೀವ ವೈವಿಧ್ಯ ಪಾರ್ಕ್ ನಿರ್ಮಾಣ ಮಾಡಬೇಕು. ಇದು ಪ್ರಕೃತಿ ಸಂರಕ್ಷಣೆ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಕೇಂದ್ರವಾಗುತ್ತದೆ ಎಂದು ಹೇಳಿದ್ದಾರೆ.

ಈ ರೀತಿ ಅಭಿವೃದ್ಧಿಪಡಿಸಿದರೆ ರಾಷ್ಟ್ರಮಟ್ಟದಲ್ಲಿ ಮಾದರಿಯಾಗುವ ‘ಸುಸ್ಥಿರ ನಗರಾಭಿವೃದ್ಧಿ’ ಯೋಜನೆ ಆಗಲಿದೆ. ಪರಿಸರ ತಜ್ಞ ಶಿವಾನಂದ ಕಳವೆ ಹಾಗೂ ರಾಜ್ಯದಾದ್ಯಂತ ಮಿಯಾವಾಕಿ ಅರಣ್ಯ ಪ್ರದೇಶ ನಿರ್ಮಿಸಿ ರುವ ಧರೆ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ವೃಷಾಂಕ ಭಟ್ ಅವರ ಸಲಹೆ ಪಡೆಯ ಬಹುದು ಎಂದು ಉಲ್ಲೇಖಿಸಿದ್ದಾರೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿ.ವಿಯಿಂದ ವಿಶ್ವ ಪರಿಸರ ದಿನಾಚರಣೆ

‘ಒಬ್ಬ ವಿದ್ಯಾರ್ಥಿಗೆ ಒಂದು ಗಿಡ’ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಪರಿಸರ ದಿನದ ಪ್ರಯುಕ್ತ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ‘ಒಬ್ಬ ವಿದ್ಯಾರ್ಥಿಗೆ ಒಂದು ಗಿಡ’ ಅಭಿಯಾನವನ್ನು ಪ್ರಾರಂಭಿಸಿದೆ.

ರೋಟರಿ ಬೆಂಗಳೂರು ಸಮೃದ್ಧಿ ಸಂಸ್ಥೆಯ ಸಹಯೋಗದಲ್ಲಿ ವಿಶ್ವ ವಿದ್ಯಾಲಯ ಲಾಲ್‌ಬಾಗ್ ಪಶ್ಚಿಮ ದ್ವಾರದಿಂದ ಕೆಂಪೇಗೌಡ ಗೋಪುರ ದವರೆಗೆ ಹಮ್ಮಿಕೊಂಡಿದ್ದ ವಾಕಥಾನ್‌ನಲ್ಲಿ, ವಿಶ್ವವಿದ್ಯಾಲಯದ ಕುಲಪತಿ ಡಾ. ಭಗವಾನ್ ಬಿ.ಸಿ. ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

‘ಅಭಿಯಾನದಡಿ ಪ್ರತಿಯೊಬ್ಬ ವಿದ್ಯಾರ್ಥಿಯು ಕನಿಷ್ಠ ಒಂದು ಗಿಡ ನೆಟ್ಟು, ಅದರ ಪೋಷಣೆ ಮತ್ತು ಸಂರಕ್ಷಣೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. ವಿಶ್ವವಿದ್ಯಾಲಯವು ಶಿಕ್ಷಣದ ಜತೆಗೆ, ಸಾಮಾಜಿಕ ಜವಾಬ್ದಾರಿ, ಆರೋಗ್ಯಕರ ಜೀವನಶೈಲಿ ಮತ್ತು ಪರಿಸರ ಸುಸ್ಥಿರತೆಗೆ ವಿಶೇಷ ಆದ್ಯತೆ ನೀಡುತ್ತಿದೆ. ಹಸಿರು ಉಪಕ್ರಮ, ತ್ಯಾಜ್ಯ ನಿರ್ವಹಣೆ, ಪರಿಸರ ಸ್ನೇಹಿ ಮೂಲಸೌಕರ್ಯಗಳ ನಿರ್ಮಾಣ ಹಾಗೂ ಹವಾಮಾನ ಜವಾಬ್ದಾರಿಯಂತಹ ಕಾರ್ಯಕ್ರಮಗಳ ಮೂಲಕ ಸುಸ್ಥಿರ ಭವಿಷ್ಯದತ್ತ ಹೆಜ್ಜೆ ಇಡುತ್ತಿದೆ’ ಎಂದು ಹೇಳಿದರು.


ವಾಕಥಾನ್‌ನಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲಾಯಿತು

ಬೆಂಗಳೂರು ಉಪ ಪೊಲೀಸ್ ಆಯುಕ್ತ (ದಕ್ಷಿಣ ವಿಭಾಗ) ಕೋನಾ ವಂಶಿಕೃಷ್ಣ, ‘ಪರಿಸರ ದಿನ ಕೇವಲ ಒಂದು ದಿನದ ಆಚರಣೆಯಾಗಬಾರದು. ಪರಿಸರವನ್ನು ಪ್ರೀತಿಸುವ, ಕಾಪಾಡುವ ಕೆಲಸ ಮನೆಯಿಂದ ಆರಂಭವಾಗಬೇಕು. ಇದು ಕೇವಲ ಕಾಯ್ದೆ-ಕಾನೂನುಗಳಿಂದ ಸಾಧ್ಯವಾಗುವುದಿಲ್ಲ’ ಎಂದು ಹೇಳಿದರು.

ಪರಿಸರ ಸಂರಕ್ಷಣೆಯ ಸಂದೇಶ ಸಾರುವ ಭಿತ್ತಿಪತ್ರಗಳನ್ನು ಹಿಡಿದು ನಾಲ್ಕು ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಹೆಜ್ಜೆ ಹಾಕಿದರು. ಲಾಲ್‌ಬಾಗ್ ಕೆಂಪೇಗೌಡ ಗೋಪುರದ ಬಳಿ ಗಿಡಗಳೊಂದಿಗೆ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

ರೋಟರಿ ಬೆಂಗಳೂರು ಸಮೃದ್ಧಿಯ ನಾಗೇಂದ್ರ ಪ್ರಸಾದ್ ಬಿ.ಎಲ್., ವಿವಿ ಕುಲಸಚಿವ (ಮೌಲ್ಯಮಾಪನ) ರಿಯಾಜ್ ಭಾಷ ಎಸ್., ಹಣಕಾಸು ಅಧಿಕಾರಿ ಬಿ.ಕೆ. ಗಂಗಾಧರ ಉಪಸ್ಥಿತರಿದ್ದರು.

ಸ್ವಚ್ಛತೆಗೆ ‘ಯುಬಿ–100 ಅಭಿಯಾನ’

ಬೆಂಗಳೂರು: ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತೆ, ಸಾರ್ವಜನಿಕ ಆರೋಗ್ಯ ಹಾಗೂ ನಗರ ಸೌಂದರ್ಯೀಕರಣಕ್ಕೆ ಹೆಚ್ಚಿನ ಒತ್ತು ನೀಡಲು ‘ಉತ್ತರ ಬೆಂಗಳೂರು 100’ (ಯುಬಿ–100) ಅಭಿಯಾನಕ್ಕೆ ಚಾಲನೆ ನೀಡಲಾಗಿದೆ.

ಬ್ಯಾಟರಾಯನಪುರ ವಾರ್ಡ್‌ನ ಹೊರವರ್ತುಲ ರಸ್ತೆಯ ರಾಜಕಾಲುವೆ ಪ್ರದೇಶದಲ್ಲಿ ಗಿಡ ನೆಡುವ ಮೂಲಕ 45 ದಿನಗಳ ಅಭಿಯಾನಕ್ಕೆ ಆಯುಕ್ತ ಪೊಮ್ಮಲ ಸುನೀಲ್‌ಕುಮಾರ್ ಅವರು ವಿಶ್ವ ಪರಿಸರ ದಿನದಂದು ಚಾಲನೆ ನೀಡಿದರು.

‘ಪಾಲಿಕೆ ವ್ಯಾಪ್ತಿಯಲ್ಲಿ ಕಸ ಹಾಕುವ ಸ್ಥಳಗಳನ್ನು (ಬ್ಲ್ಯಾಕ್‌ಸ್ಪಾಟ್) ನಿರ್ಮೂಲನೆ ಮಾಡಲು ಅಧಿಕಾರಿಗಳು, ಸಿಬ್ಬಂದಿ ಹಾಗೂ ವಿವಿಧ ಸಂಘ-ಸಂಸ್ಥೆಗಳೊಂದಿಗೆ ಸಮಾಲೋಚಿಸಿ ಯೋಜನೆ ಸಿದ್ಧಪಡಿಸಲಾಗಿದೆ. ಮುಂದಿನ 45 ದಿನಗಳಲ್ಲಿ ಕಸ ಹಾಕುವ 100 ಬ್ಲ್ಯಾಕ್‌ಸ್ಪಾಟ್‌ಗಳನ್ನು ನಿರ್ಮೂಲನೆಗೊಳಿಸಿ, ಸ್ವಚ್ಛ ಹಾಗೂ ಸುಂದರ ಸಾರ್ವಜನಿಕ ಸ್ಥಳಗಳಾಗಿ ಪರಿವರ್ತಿಸುವ ಗುರಿಯನ್ನು ಹೊಂದಿದ್ದೇವೆ’ ಎಂದು ತಿಳಿಸಿದರು.

5 ಕೋಟಿ ಸಸಿ ನೆಡುವ ಅಭಿಯಾನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ವಿಶ್ವ ಪರಿಸರ ದಿನಾಚರಣೆ-2026ರ ಅಂಗವಾಗಿ ರಾಜ್ಯದಾದ್ಯಂತ 5 ಕೋಟಿ ಸಸಿಗಳ ನೆಡುವ ಹಾಗೂ ಜಲಮೂಲಗಳ ಪುನಶ್ಚೇತನಕ್ಕೆ ಸಂಬಂಧಿಸಿದ ಬೃಹತ್ ಪರಿಸರ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಹೆಬ್ಬಾಳದ ಕರ್ನಾಟಕ ಪಶು ವೈದ್ಯಕೀಯ ಕಾಲೇಜು ಆವರಣದಲ್ಲಿ ಕರ್ನಾಟಕ ಹೈಕೋರ್ಟ್, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಅರಣ್ಯ ಇಲಾಖೆ, ಕರ್ನಾಟಕ ಪಶು ವೈದ್ಯಕೀಯ, ಪ್ರಾಣಿ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ಪಶುವೈದ್ಯಕೀಯ ಮಂಡಳಿ ಹಾಗೂ ಧರೆ ಫೌಂಡೇಶನ್‌ಗಳ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ನಡೆಯಿತು.

‘ಹವಾಮಾನ ಕ್ರಿಯಾಶೀಲತೆ’ ಎಂಬ ಧ್ಯೇಯವಾಕ್ಯದಡಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ‘ಜಾಗತಿಕಮಟ್ಟದಲ್ಲಿ ಹವಾಮಾನ ಬದಲಾವಣೆ ಪರಿಣಾಮಗಳು ಗೋಚರಿಸುತ್ತಿದ್ದು, ಪರಿಸರ ಸಂರಕ್ಷಣೆ, ಸುಸ್ಥಿರ ಅಭಿವೃದ್ಧಿ ಎಲ್ಲರ ಜವಾಬ್ದಾರಿ’ ಎಂದರು.


ಪರಿಸರ ಅಭಿಯಾನಕ್ಕೆ ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಅವರು ಸಸಿ ನೆಡುವ ಮೂಲಕ ಚಾಲನೆ ನೀಡಿದರು

‘ಹೆಚ್ಚುತ್ತಿರುವ ಉಷ್ಣಾಂಶ, ಜಲಕ್ಷಾಮ, ಅರಣ್ಯನಾಶ ಹಾಗೂ ಜೀವ ವೈವಿಧ್ಯದ ಕುಸಿತವು ಮಾನವ ಸಮುದಾಯದ ಮುಂದಿರುವ ಗಂಭೀರ ಸವಾಲುಗಳಾಗಿವೆ. ರಾಜ್ಯದಾದ್ಯಂತ 5 ಕೋಟಿ ಸಸಿ ನೆಡುವ ಯೋಜನೆ ಹವಾಮಾನ ಬದಲಾವಣೆಯ ಪರಿಣಾಮ ತಗ್ಗಿಸಲು ನೆರವಾಗಲಿದೆ ಎಂದರು.

ಹೈಕೋರ್ಟ್ ನ್ಯಾಯಮೂರ್ತಿ ಅನು ಶಿವರಾಮನ್, ಪಶುವೈದ್ಯಕೀಯ, ಪ್ರಾಣಿ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಕೆ.ಸಿ.ವೀರಣ್ಣ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ, ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಎಂ.ಚಂದ್ರಶೇಖರ್ ರೆಡ್ಡಿ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್.ಶಶಿಧರ ಶೆಟ್ಟಿ, ಧರೆ ಫೌಂಡೇಶನ್‌ನ ನಿರ್ದೇಶಕ ಡಿ.ಎಂ.ಪೂರ್ಣೇಶ್, ಪಶುವೈದ್ಯಕೀಯ ಕಾಲೇಜಿನ ಡೀನ್ ಡಾ.ನಾಗರಾಜ್ ಆರ್. ಉಪಸ್ಥಿತರಿದ್ದರು.



ಭಾರತೀಯ ಸಮಾಜ ಸೇವಾ ಟ್ರಸ್ಟ್ ಹಾಗೂ ಬಂಜಾರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಕಾಡೆಮಿ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಹಾಗೂ ಸಾಧಕರಿಗೆ ವಾರ್ಷಿಕ ಪ್ರಶಸ್ತಿ ಪ್ರದಾನ, ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಮಾಜಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ, ಸಂಘಟಕ ಬೈರಮಂಗಲ ರಾಮೇಗೌಡ, ಸಮಾಜ ಸೇವಕರಾದ ರವಿಪೂಜಾರಿ, ಎನ್. ಗೋಪಾಲ ಕೃಷ್ಣ, ಅವಿನಾಶ್, ಕಿರಣ್ ಪ್ರಭು, ಅಧ್ಯಕ್ಷ ಶಿವ ಮಲ್ಲು, ಕಾರ್ಯದರ್ಶಿ ಹರೀಶ್ ಭಾಗವಹಿಸಿದ್ದರು


ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಬಿ. ದಿನೇಶ್, ವೈದ್ಯಕೀಯ ಅಧೀಕ್ಷಕ ಡಾ. ಪ್ರಭಾಕರ್ ಹಾಗೂ ಸಿಬ್ಬಂದಿ ಸಂಸ್ಥೆಯ ಆವರಣದಲ್ಲಿ ಶುಕ್ರವಾರ ಗಿಡ ನೆಟ್ಟು ನೀರೆರೆದರು



ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಆವರಣದಲ್ಲಿ ಶನಿವಾರ 'ಟೈಗರ್ ಕಪ್ ಕ್ರಿಕೆಟರ್ಸ್ ಫಾರ್ ವೈಲ್ಡ್‌ಲೈಫ್ ಕನ್ಸರ್ವೇಷನ್ ಸಂಸ್ಥೆ' ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ (ಕುಳಿತವರು ಎಡದಿಂದ) ಸುನಿಲ್ ವಿ. ಬೆಳವಿ, ಶರಣಪ್ಪ, ವೆಂಕಟೇಶ್ ಮತ್ತು ಇ.ವಿನಯ್ ಕುಮಾರ್ ಅವರಿಗೆ ‘ವನ್ಯಜೀವಿ ಸೇವಾ ಪ್ರಶಸ್ತಿ’ ನೀಡಿ ಗೌರವಿಸಲಾಯಿತು ಪ್ರಜಾವಾಣಿ ಚಿತ್ರ

ಟೈಗರ್ ಕಪ್: ಅರಣ್ಯ ಸಿಬ್ಬಂದಿಗೆ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕಾಡುಗಳಲ್ಲಿ ವನಸಂಪತ್ತು, ಜೀವವೈವಿಧ್ಯ ರಕ್ಷಣೆಯಲ್ಲಿ ತೊಡಗಿರುವ ಅರಣ್ಯ ಇಲಾಖೆಯ ನಾಲ್ವರು ಸಿಬ್ಬಂದಿಗೆ 'ಟೈಗರ್ ಕಪ್' ಕ್ರಿಕೆಟರ್ಸ್ ಫಾರ್ ವೈಲ್ಡ್‌ಲೈಫ್ ಕನ್ಸರ್ವೇಷನ್ ಸಂಸ್ಥೆಯ ವತಿಯಿಂದ ‘14ನೇ ವನ್ಯಜೀವಿ ಸೇವಾ ಪ್ರಶಸ್ತಿ-2026’ ಪ್ರದಾನ ಮಾಡಲಾಯಿತು.

ಶನಿವಾರ ಚಿನ್ನಸ್ವಾಮಿ ಕ್ರೀಡಾಂಗಣದ ಸಭಾಭವನದಲ್ಲಿ ನಡೆದ ಸಮಾರಂಭದಲ್ಲಿ ಅರಣ್ಯ ಇಲಾಖೆಯ ವೆಂಕಟೇಶ್ (ವೀರನಹೊಸಹಳ್ಳಿ ವೈಲ್ಡ್‌ಲೈಫ್ ರೇಜ್-ಬೀಟ್ ಫಾರೆಸ್ಟರ್), ಇ. ವಿನಯಕುಮಾರ್ (ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ, ಅರಣ್ಯ ಕಾವಲುಗಾರ), ಸುನೀಲ್ ವಿ ಬೆಳವಿ (ಬಿಆರ್‌ಟಿ ಹುಲಿ ಸಂರಕ್ಷಣಾ ವಲಯ ಅರಣ್ಯ- ಬೀಟ್ ಫಾರೆಸ್ಟರ್) ಮತ್ತು ಶರಣಪ್ಪ (ಸಂಗಮ ವನ್ಯಜೀವಿ ವಲಯ, ಕಾವೇರಿ ವನ್ಯಜೀವಿ ವಿಭಾಗ-ಬೀಟ್ ಫಾರೆಸ್ಟರ್) ಅವರಿಗೆ ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಪ್ರಶಸ್ತಿ ಪ್ರದಾನ ಮಾಡಿದರು. ಪ್ರಶಸ್ತಿ ಪುರಸ್ಕೃತರಿಗೆ ತಲಾ ₹1 ಲಕ್ಷ ನೀಡಲಾಯಿತು.

‘ತಮ್ಮಂತಹ ದಿಟ್ಟ ಸಿಬ್ಬಂದಿಯಿಂದ ಕಾಡು ಉಳಿಯುತ್ತಿದೆ. ವನ್ಯಸಂಪತ್ತು ಉಳಿಸಿ ಪರಿಸರ ಸಂರಕ್ಷಣೆಗೆ ಅಮೂಲ್ಯ ಕೊಡುಗೆ ನೀಡಿದ್ದೀರಿ. ಟೈಗರ್ ಕಪ್ ಕ್ರಿಕೆಟ್ ಟೂರ್ನಿ ಮೂಲಕ 14 ವರ್ಷಗಳಿಂದ ಉದಯೋನ್ಮುಖ ಆಟಗಾರರಿಗೆ ಅವಕಾಶ ಒದಗಿಸುತ್ತಿರುವುದು ಉತ್ತಮ ಪ್ರಯತ್ನ’ ಎಂದು ವೆಂಕಟೇಶ್ ಪ್ರಸಾದ್ ಹೇಳಿದರು.

ಟೈಗರ್ ಕಪ್ ಟೂರ್ನಿಯಲ್ಲಿ 16 ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್ ಆದ ಕ್ರೀಡಾಕ್ಷೇತ್ರ ತಂಡಕ್ಕೆ ಪ್ರಶಸ್ತಿ ವಿತರಿಸಲಾಯಿತು.

ಈ ಕಾರ್ಯಕ್ರಮಕ್ಕೆ ‘ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕಾ ಬಳಗ’ವು ಮಾಧ್ಯಮ ಪಾಲುದಾರಿಕೆ ವಹಿಸಿತ್ತು.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮೂನ್‌ವಾಕರ್ ಸಂಸ್ಥೆಯ ನಿರ್ದೇಶಕ ಕೃಷ್ಣ ವಸಿಷ್ಠ, ಟೆನ್‌ಎಕ್ಸ್ ಡೈರೆಕ್ಟರ್ ಕಾರ್ತಿಕ್, ಸೈಕಲ್ ಅಗರಬತ್ತಿ ಸಂಸ್ಥೆಯ ಪೃಥ್ವಿ ರಂಗಾ, ಟೈಗರ್ ಕಪ್ ಸಂಚಾಲಕ ಜೋಸೆಫ್ ಹೂವರ್, ಸಿದ್ವಿನ್ ಡೈರೆಕ್ಟರ್ ಆಶಾ, ಹಿರಿಯ ಅರಣ್ಯಾಧಿಕಾರಿ ವಿಶ್ವಜೀತ್ ಮಿಶ್ರಾ ಮತ್ತು ಸುಮನ್ ಟಿ.ವಿಯ ಸಿಇಒ ಯುಗಂಧರ್ ಹಾಜರಿದ್ದರು.

ಶ್ರೀಚೈತನ್ಯ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳ ಸಾಧನೆ

ಬೆಂಗಳೂರು: ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ–2026) ಶ್ರೀಚೈತನ್ಯ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಎಂಟು ರ‍್ಯಾಂಕ್‌ಗಳೊಂದಿಗೆ ಉತ್ತಮ ಸಾಧನೆ ಮಾಡಿದ್ದಾರೆ.


ಸುಚಿತಾ ಎಂ


ರಾಮ್ ನಿಖಿಲ್ ಪುವದಿ


ವೈಷ್ಣವಿ ದಾಸ್

ಯೋಗ ಮತ್ತು ನ್ಯಾಚುರೋಪಥಿ: ಎಂ.ಸುಚಿತಾ (3ನೇ ರ‍್ಯಾಂಕ್), ವೈಷ್ಣವಿ ದಾಸ್ (8ನೇ ರ‍್ಯಾಂಕ್). **ಪಶುವೈದ್ಯಕೀಯ ವಿಜ್ಞಾನ:** ಎಂ.ಸುಚಿತಾ (5ನೇ ರ‍್ಯಾಂಕ್), ವೈಷ್ಣವಿ ದಾಸ್ (9ನೇ ರ‍್ಯಾಂಕ್). **ಬಿಎಸ್‌ಸಿ ನರ್ಸಿಂಗ್:** ಎಂ.ಸುಚಿತಾ (5ನೇ ರ‍್ಯಾಂಕ್), ವೈಷ್ಣವಿ ದಾಸ್ (9ನೇ ರ‍್ಯಾಂಕ್). ಬಿ ಆ್ಯಂಡ್ ಡಿ ಫಾರ್ಮಸಿ: ಎಂ.ಸುಚಿತಾ (3ನೇ ರ‍್ಯಾಂಕ್), ರಾಮ್ ನಿಖಿಲ್ ಪುವದಿ (9ನೇ ರ‍್ಯಾಂಕ್) ಪಡೆದುಕೊಂಡಿದ್ದಾರೆ.

ಪರೀಕ್ಷೆಯಲ್ಲಿ ಗಮನಾರ್ಹ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಶ್ರೀ ಚೈತನ್ಯ ಶಿಕ್ಷಣ ಸಂಸ್ಥೆಗಳ ನಿರ್ದೇಶಕಿ ಸುಷ್ಮಾ ಬೊಪ್ಪಣ್ಣ ಅವರು ಅಭಿನಂದನೆ ಸಲ್ಲಿಸಿದರು.

ನ್ಯೂ ಇಂಡಿಯಾ ಗ್ರೂಪ್ ಅಧ್ಯಕ್ಷ ಹೇಮಾಂಶು ದೇಸಾಯಿ ಸಲಹೆ

‘ಗುರಿ ಸಾಧಿಸುವ ಛಲ ಇರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯಾರ್ಥಿಗಳು ಗುರಿ ಇಟ್ಟುಕೊಳ್ಳಬೇಕು. ಅದನ್ನು ಸಾಧಿಸುವ ಛಲ ಇರಬೇಕು’ ಎಂದು ನ್ಯೂ ಇಂಡಿಯಾ ಗ್ರೂಪ್ ಅಧ್ಯಕ್ಷ ಹಾಗೂ ಆರ್‌ಐಟಿ ಹಳೇ ವಿದ್ಯಾರ್ಥಿ ಹೇಮಾಂಶು ದೇಸಾಯಿ ಹೇಳಿದರು.

ರಾಮಯ್ಯ ಎಂಜಿನಿಯರಿಂಗ್ ಮಹಾವಿದ್ಯಾಲಯ (ಆರ್‌ಐಟಿ) ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಗುರಿ ಇಲ್ಲದೆ ಹೋದಲ್ಲಿ ಜೀವನ ದಿಕ್ಕು, ದೆಸೆ ಇಲ್ಲದಂತಾಗಲಿದೆ. ನಾನು ಒಂದು ಸಣ್ಣ ಕಂಪನಿ ಆರಂಭಿಸಿದಾಗ ಮೊದಲ ಆರ್ಡರ್‌ಗಾಗಿ ನಾನು ಒಂದು ವರ್ಷ ಕಾಯಬೇಕಾಗಿತ್ತು. ಆ ವೇಳೆ ಸಾಕಷ್ಟು ಜನರು ಈ ಕಂಪನಿ ಮುಚ್ಚಿ, ಬೇರೆ ಕೆಲಸ ಹುಡುಕಿಕೊಳ್ಳುವಂತೆ ಸಲಹೆ ನೀಡಿದರು. ಆದರೆ, ನಾನು ನನ್ನ ಗುರಿ ಬಿಡಲಿಲ್ಲ. ತಾಳ್ಮೆಯಿಂದ ಅದೇ ಕೆಲಸದಲ್ಲಿ ತೊಡಗಿದ್ದೆ, ಇಂದು ಒಳ್ಳೆಯ ಸ್ಥಾನದಲ್ಲಿ ನನ್ನ ಕಂಪನಿ ಇದೆ’ ಎಂದು ಅನುಭವ ಹಂಚಿಕೊಂಡರು.

‘ವಿದ್ಯಾರ್ಥಿಗಳು ಸಮಯಕ್ಕೆ ಹೆಚ್ಚಿನ ಮೌಲ್ಯ ನೀಡಬೇಕು. ಕಳೆದು ಹೋದ ಸಮಯ ಮತ್ತೆ ಸಿಗುವುದಿಲ್ಲ. ಸಿಕ್ಕ ಸಮಯವನ್ನು ಸದುಪಯೋಗಪಡಿಸಿಕೊಳ್ಳಬೇಕು. ಸಾಧಕರಿಗೂ ಇರುವುದು ದಿನಕ್ಕೆ 24 ಗಂಟೆಗಳು ಮಾತ್ರವೇ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು’ ಎಂದರು.

ಗೋಕುಲ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷ ಎಂ.ಆರ್. ಸೀತಾರಾಂ ಮಾತನಾಡಿ, ‘ಕೃತಕ ಬುದ್ಧಿಮತ್ತೆ ಬಂದ ಮೇಲೆ ಶೇಕಡ 20ರಷ್ಟು ಉದ್ಯೋಗ ಕಡಿತವಾಗಿರುವುದು ನಿಜ. ಆದರೆ, ಇದನ್ನು ವಿದ್ಯಾರ್ಥಿಗಳು ಸವಾಲಾಗಿ ಸ್ವೀಕರಿಸಬೇಕು. ತಂತ್ರಜ್ಞಾನವನ್ನು ನಾವು ಒಳ್ಳೆಯ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳಬೇಕು. ಅದು ಜನರಿಗೆ ಉಪಯೋಗವಾಗಬೇಕು’ ಎಂದು ಹೇಳಿದರು.



ರಾಮಯ್ಯ ಎಂಜಿನಿಯರಿಂಗ್ ಮಹಾವಿದ್ಯಾಲಯ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹೇಮಾಂಶು ದೇಸಾಯಿ ಅವರನ್ನು ಎಂ.ಆರ್. ಸೀತಾರಾಂ ಅವರು ಸನ್ಮಾನಿಸಿದರು

ಬಿ.ಇ., ಬಿ.ಆರ್ಕ್, ಎಂ.ಟೆಕ್, ಎಂ.ಆರ್ಕ್, ಎಂಬಿಎ, ಎಂಸಿಎ ಸೇರಿದಂತೆ ಒಟ್ಟು 1,882 ವಿದ್ಯಾರ್ಥಿಗಳು ಪದವಿ ಪಡೆದುಕೊಂಡರು. ಕೆಲವು ವಿದ್ಯಾರ್ಥಿಗಳಿಗೆ ‘ಬೆಸ್ಟ್ ಸ್ಟೂಡೆಂಟ್ ಅವಾರ್ಡ್’ ನೀಡಿ ಅಭಿನಂದಿಸಲಾಯಿತು.

ಆರ್‌ಐಟಿಯ ಪ್ರಾಂಶುಪಾಲ ಎನ್.ವಿ.ಆರ್. ನಾಯ್ಡು, ಜಿಇಎಫ್ ಸಲಹೆಗಾರ ಕರಿಸಿದ್ದಪ್ಪ, ಮುಖ್ಯ ಕಾರ್ಯನಿರ್ವಾಹಕ ಪಾರ್ಶ್ವನಾಥ್ ಎಚ್.ವಿ., ಆರ್‌ಐಟಿ ನಿರ್ದೇಶಕ ಎಂ.ಆರ್. ಸಂಪಂಗಿರಾಮಯ್ಯ, ಉಪಾಧ್ಯಕ್ಷ ಎಂ.ಆರ್. ಜಾನಕಿರಾಮ್, ನಿರ್ದೇಶಕ ಎಂ.ಆರ್. ರಾಮಯ್ಯ ಭಾಗವಹಿಸಿದ್ದರು.

● www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

‘ಪ್ರಗ್ಗು’ಗೆ ಕಿರೀಟ



ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಪ್ರತಿಷ್ಠಿತ ನಾರ್ವೆ ಚೆಸ್ ಟೂರ್ನಿಯಲ್ಲಿ ಶನಿವಾರ ಪ್ರಶಸ್ತಿ ಗೆದ್ದರು. ಈ ಸಾಧನೆ ಮಾಡಿದ ಭಾರತದ ಮೊದಲ ಆಟಗಾರ ಅವರಾಗಿದ್ದಾರೆ

ಬಾಂಬ್ ಸ್ಫೋಟ: ಟಿಎಂಸಿ ಮಾಜಿ ಶಾಸಕ ಬಂಧನ 9

ಅಡುಗೆ ಎಣ್ಣೆ: ಪೊಟ್ಟಣದ ಗಾತ್ರ ನಿಗದಿ 8

ರಾಮಲಿಂಗಾ ರೆಡ್ಡಿ ರಾಜೀನಾಮೆ ವಾಪಸ್

ಬೆಂಗಳೂರು: ಇಷ್ಟಪಟ್ಟಿದ್ದ ಖಾತೆ ಸಿಗಲಿಲ್ಲವೆಂಬ ಕಾರಣಕ್ಕೆ ತೀವ್ರ ಅಸಮಾಧಾನಗೊಂಡು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಕಾಂಗ್ರೆಸ್ ಹಿರಿಯ ನಾಯಕ ರಾಮಲಿಂಗಾರೆಡ್ಡಿ, ವರಿಷ್ಠರ ಒತ್ತಡಕ್ಕೆ ಮಣಿದು ರಾಜೀನಾಮೆ ಹಿಂಪಡೆದಿದ್ದಾರೆ.

ಡಿ.ಕೆ. ಶಿವಕುಮಾರ್ ನೇತೃತ್ವದ ಸಂಪುಟದಲ್ಲಿ ರೆಡ್ಡಿ ಅವರಿಗೆ ಜಲಸಂಪನ್ಮೂಲ ಖಾತೆ ನೀಡಲಾಗಿದೆ. ಆದರೆ, ಅವರು ತಮಗೆ ಈ ಹಿಂದೆ ಶಿವಕುಮಾರ್ ನೀಡಿದ್ದ ವಾಗ್ದಾನದಂತೆ ಬೆಂಗಳೂರು ಅಭಿವೃದ್ಧಿ ಖಾತೆ ನೀಡಬೇಕೆಂದು ಪಟ್ಟು ಹಿಡಿದು ರಾಜೀನಾಮೆ ನೀಡಿದ್ದರು.

ಎಲ್‌ಪಿಜಿ ಸಿಲಿಂಡರ್ ₹29ರಷ್ಟು ಏರಿಕೆ

ನವದೆಹಲಿ (ಪಿಟಿಐ): ಗೃಹ ಬಳಕೆಯ 14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ದರವನ್ನು ₹29ರಷ್ಟು ಶನಿವಾರ ಏರಿಕೆ ಮಾಡಲಾಗಿದೆ.

ಇದರೊಂದಿಗೆ ತೈಲ ಮಾರಾಟ ಕಂಪನಿಗಳು ಕಳೆದ ಮೂರು ತಿಂಗಳಲ್ಲಿ ಎರಡನೇ ಬಾರಿಗೆ ದರ ಹೆಚ್ಚಳ ಮಾಡಿದಂತಾಗಿದೆ. ಈ ಹಿಂದೆ ಮಾರ್ಚ್ 7ರಂದು ₹60ರಷ್ಟು ಏರಿಕೆಯಾಗಿತ್ತು.

ಜೂನ್ 7ರಿಂದ ಜಾರಿಗೆ ಬರುವಂತೆ ದೆಹಲಿಯಲ್ಲಿ ಸಿಲಿಂಡರ್ ದರ ₹913ರಿಂದ ₹942ಕ್ಕೆ ಏರಿಕೆ ಆಗಲಿದೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಜೈಲಿಗೆ ಬೇಕು ಸುಧಾರಣೆ

ಬಹುತೇಕ ಕಾರಾಗೃಹಗಳಲ್ಲಿ ಮೊಬೈಲ್, ಗಾಂಜಾ, ಸಿಗರೇಟು, ಮದ್ಯ ಪತ್ತೆ ಸಾಮಾನ್ಯ

● ಸಿದ್ದಯ್ಯ ಹಿರೇಮಠ

ಒಳನೋಟ

ದಾವಣಗೆರೆ: ರಾಜ್ಯದ ಅತ್ಯಂತ ಹಳೆಯ ಕಾರಾಗೃಹಗಳಲ್ಲಿ ಒಂದಾದ ಹಿಂಡಲಗಾ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿರುವ ಅಪರಾಧಿ ಜಯೇಶ್ ಪೂಜಾರಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ನಾಗ್ಪುರದ ಕಚೇರಿಗೆ ಜೈಲಿನಿಂದಲೇ ಬೆದರಿಕೆ ಕರೆ ಮಾಡಿ ₹100 ಕೋಟಿಗೆ ಬೇಡಿಕೆ ಇಡುತ್ತಾನೆ. ಹಣ ಕೊಡದಿದ್ದರೆ ಗಡ್ಕರಿ ಅವರನ್ನು ಕೊಲೆ ಮಾಡುವುದಾಗಿ ಬೆದರಿಸುತ್ತಾನೆ. ‘ನಾನು ಭೂಗತ ಲೋಕದ ಪಾತಕಿ ದಾವೂದ್ ಇಬ್ರಾಹಿಂ ಗುಂಪಿನ ಸದಸ್ಯ’ ಎಂದೂ ಹೇಳಿಕೊಳ್ಳುತ್ತಾನೆ. ಇದರಿಂದಾಗಿ ಹಿಂಡಲಗಾ ಜೈಲು ದೇಶವ್ಯಾಪಿ ಸುದ್ದಿಯಾಗುತ್ತದೆ.

2023ರಲ್ಲಿ ಒಮ್ಮೆ ಕರೆ ಮಾಡಿದ್ದ ಜಯೇಶ್ ಪೂಜಾರಿ, 2024ರಲ್ಲಿ ಮತ್ತೆ ಕರೆ ಮಾಡಿ ಬೆದರಿಕೆ ಒಡ್ಡುತ್ತಾನೆ. ಕೊಲೆ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿರುವ ಈತನ ವಿರುದ್ಧ ಪ್ರಾಣ ಬೆದರಿಕೆಯ ಮತ್ತೊಂದು ಪ್ರಕರಣ ದಾಖಲಾಗಿದೆ.

ಜೈಲಿನಲ್ಲಿರುವವರಿಗೆ ಮೊಬೈಲ್ ಫೋನ್ ಸಿಕ್ಕಿದ್ದು ಹೇಗೆ? ಎಲ್ಲಿಂದ ಬಂತು? ಹೆಚ್ಚಿನ ಭದ್ರತೆ ಇದ್ದರೂ ಅದನ್ನು ಒಳಗೆ ತಂದು ತಲುಪಿಸಿದವರು ಯಾರು? ಕಾರಾಗೃಹ ಸಿಬ್ಬಂದಿ ಕೈದಿಗಳ ಚಲನವಲನದ ಮೇಲೆ ನಿಗಾ ಇರಿಸುವುದಿಲ್ಲವೇ? ಅಪರಾಧಿಗಳಿಗೆ ಮೊಬೈಲ್ ತಂದು ಕೊಟ್ಟು ಮತ್ತೊಂದು ಅಪರಾಧ ಎಸಗಲು ನೆರವು ನೀಡಿದವರ ಉದ್ದೇಶವೇನು? ಅಂತಹವರನ್ನು ಪತ್ತೆ ಮಾಡಲಾಗಿದೆಯೇ? ಮಾಡಿದಲ್ಲಿ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ? ಎಂಬ ಪ್ರಶ್ನೆಗಳಿಗೆ ಉತ್ತರ ಸಿಗುವುದಿಲ್ಲ.

ಬಹುತೇಕ ಕಾರಾಗೃಹಗಳಲ್ಲಿ ಮೊಬೈಲ್, ಗಾಂಜಾ, ಸಿಗರೇಟು, ಮದ್ಯ ಸಿಗುವುದು ಸಾಮಾನ್ಯ ಸಂಗತಿ. ಜೈಲಿನೊಳಗೆ ತಂಬಾಕು, ಮದ್ಯ ಸಾಗಣೆ ಮಾಡಿದ ಆರೋಪದಡಿ ಧಾರವಾಡದ ಕೇಂದ್ರ ಕಾರಾಗೃಹದ ಇಬ್ಬರು ವಾರ್ಡರ್‌ಗಳು ಹಾಗೂ ಆಹಾರ ಸಾಮಗ್ರಿ ಪೂರೈಸುವ ಆಟೊರಿಕ್ಷಾ ಚಾಲಕನೊಬ್ಬನನ್ನು ಬಂಧಿಸಲಾಗಿತ್ತು.

▸ 6



ಬೆಳಗಾವಿಯ ಅತಿ ಹಳೆಯದಾದ ಹಿಂಡಲಗಾ ಜೈಲಿನ ಹೊರ ನೋಟ

‘ಭ್ರಷ್ಟಾಚಾರ ಕಿತ್ತೆಸೆಯದಿದ್ದಲ್ಲಿ ಮತ್ತಷ್ಟು ಸಮಸ್ಯೆ’

ಸರ್ಕಾರವು ಕಾರಾಗೃಹಗಳಲ್ಲಿನ ಸಮಸ್ಯೆಗಳ ಬಗ್ಗೆ ಅರಿಯಲು ಪ್ರತಿ ಜಿಲ್ಲೆಯಲ್ಲೂ ಜಿಲ್ಲಾಧಿಕಾರಿ ನೇತೃತ್ವದಲ್ಲಿ ವೀಕ್ಷಣಾ ಸಮಿತಿ ರಚಿಸಿದೆ. ಆ ಸಮಿತಿ ಕನಿಷ್ಠ 3 ತಿಂಗಳಿಗೊಮ್ಮೆ ತನ್ನ ವ್ಯಾಪ್ತಿಯ ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲಿಸಿ, ಅಲ್ಲಿನ ಕೈದಿಗಳ ಸ್ಥಿತಿಗತಿ ಅರಿತು ಅಗತ್ಯ ಕ್ರಮಕ್ಕೆ ಶಿಫಾರಸು ಮಾಡಬೇಕು. ಆ ಸಮಿತಿಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ನ್ಯಾಯಾಧೀಶರು, ಆರೋಗ್ಯ, ಲೋಕೋಪಯೋಗಿ, ಶಿಕ್ಷಣ ಇಲಾಖೆಯ ಅಧಿಕಾರಿಗಳೂ ಇರುತ್ತಾರೆ. ಗಣ್ಯ ನಾಗರಿಕರನ್ನೂ ಸದಸ್ಯರನ್ನಾಗಿ ನೇಮಿಸಲಾಗುತ್ತದೆ. ಇವರ ಅವಧಿ ಮೂರು ವರ್ಷಗಳದ್ದಾಗಿರುತ್ತದೆ.

ಸಮಿತಿಯು ಜೈಲು ವೀಕ್ಷಣೆಗೆ ವರ್ಷಕ್ಕೆ ಒಮ್ಮೆ ಹೋದರೂ ಹೆಚ್ಚು. ಹೀಗೆ ಹೋಗುವ ಸದಸ್ಯರೆಲ್ಲ ಜೈಲು ಮುಖ್ಯಸ್ಥರ ಕೊಠಡಿಯಲ್ಲಿ ಕುಳಿತು ಚಹಾ ಸೇವಿಸಿ, ಬಿಸ್ಕೆಟ್ ತಿಂದು ಒಂದು ಸುತ್ತು ಹಾಕಿ ವಾಪಸಾಗುತ್ತಾರೆ.

‘ಇದೊಂದು ಗೌರವಪೂರ್ವಕ ಹುದ್ದೆ. ಸಮಿತಿಯೇ ಕಾಟಾಚಾರಕ್ಕೆ ಎಂಬಂತಿದೆ. ಭ್ರಷ್ಟಾಚಾರ ಎಲ್ಲೆಡೆ ಇದ್ದಂತೆಯೇ ಕಾರಾಗೃಹ ವ್ಯವಸ್ಥೆಯಲ್ಲೂ ಇದೆ. ಅದನ್ನು ಬೇರು ಸಮೇತ ಕಿತ್ತೆಸೆಯದಿದ್ದಲ್ಲಿ ಸಮಸ್ಯೆ ಇನ್ನಷ್ಟು ಜಟಿಲಗೊಳ್ಳಲಿದೆ’ ಎಂದು ಬಳ್ಳಾರಿ ಕೇಂದ್ರ ಕಾರಾಗೃಹ ವೀಕ್ಷಣಾ ಸಮಿತಿಯ ಸದಸ್ಯ, ಸಾಮಾಜಿಕ ಹೋರಾಟಗಾರ ಟಿ.ಜಿ. ವಿಠ್ಠಲ್ ಹೇಳುತ್ತಾರೆ.

ನೀಟ್ ಆಕಾಂಕ್ಷಿ ಆತ್ಮಹತ್ಯೆ ಪ್ರಕರಣ: ತನಿಖಾಧಿಕಾರಿಗೆ ನೋಟಿಸ್

ವಿವರ ಪುಟ ▸ 9

ಸಿಜೆಪಿ ಪ್ರತಿಭಟನೆ

ನವದೆಹಲಿ (ಪಿಟಿಐ): ನೀಟ್–ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ಸಿಬಿಎಸ್‌ಇ ಪರೀಕ್ಷಾ ವ್ಯವಸ್ಥೆಯಲ್ಲಿನ ಲೋಪಗಳ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ), ಜಂತರ್ ಮಂತರ್‌ನಲ್ಲಿ ಶನಿವಾರ ಪ್ರತಿಭಟನೆ ನಡೆಸಿತು.

ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳು ಮತ್ತು ಯುವಜನರು ಸೇರಿದಂತೆ ನೂರಾರು ಮಂದಿ ಪಾಲ್ಗೊಂಡರು. ಸಾಮಾಜಿಕ ಮಾಧ್ಯಮದಲ್ಲಿ ಸಂಚಲನ ಸೃಷ್ಟಿಸಿರುವ ಸಿಜೆಪಿಯು ಕೇಂದ್ರ ಸರ್ಕಾರದ ವಿರುದ್ಧ ನಡೆಸಿದ ಮೊದಲ ಬೃಹತ್ ಪ್ರತಿಭಟನೆ ಇದಾಗಿದೆ. ಜಂತರ್ ಮಂತರ್ ಸೇರಿದಂತೆ ರಾಷ್ಟ್ರದ ರಾಜಧಾನಿಯ ಹಲವೆಡೆ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಮುನ್ನೆಚ್ಚರಿಕೆ ಕ್ರಮವಾಗಿ ಪ್ರಧಾನ್ ಅವರ ನಿವಾಸಕ್ಕೆ ಭದ್ರತೆ ಒದಗಿಸಲಾಗಿತ್ತು.



ಬೆಂಗಳೂರು ಮೇಲುಗೈ

ಸಿಇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ–2026) ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಶನಿವಾರ ಪ್ರಕಟಿಸಿದ್ದು, ಏಳೂ ವಿಭಾಗಗಳಲ್ಲಿ ಬೆಂಗಳೂರಿನ ವಿದ್ಯಾರ್ಥಿಗಳೇ ಮೊದಲ ಸ್ಥಾನ ಪಡೆದಿದ್ದಾರೆ.

ಏಳರಲ್ಲಿ ಆರು ವಿಭಾಗಗಳು ಮೊದಲ ಸ್ಥಾನ ವಿದ್ಯಾರ್ಥಿನಿಯರ ಪಾಲಾಗಿವೆ. ಈ ಬಾರಿ ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳೇ ಪಾರುಪತ್ಯ ಮೆರೆದಿದ್ದಾರೆ.

ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಸಿಇಟಿ ಫಲಿತಾಂಶವನ್ನು ಪ್ರಕಟಿಸಿದರು.

10ಕ್ಕೆ ಸೀಟು ಹಂಚಿಕೆ ಆರಂಭ: ಎಂಜಿನಿಯರಿಂಗ್ ಸೇರಿದಂತೆ ವಿವಿಧ ಕೋರ್ಸ್‌ಗಳಿಗೆ ಜೂನ್ 10ರಿಂದ ಸೀಟು ಹಂಚಿಕೆ ಕೌನ್ಸೆಲಿಂಗ್ ಪ್ರಕ್ರಿಯೆಗಳು ಆರಂಭಿಸಲಾಗುವುದು. ಈ ಬಾರಿ ನೀಟ್ ಫಲಿತಾಂಶಕ್ಕೆ ಕಾಯುವುದಿಲ್ಲ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದರು.

ವಿವರ ಪುಟ ▸ 7

ಹವಾಮಾನ ಮುನ್ಸೂಚನೆ: ನಗರದಲ್ಲಿ ಗುಡುಗು ಸಹಿತ ಮಳೆ ಸಾಧ್ಯತೆ



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಬೆಂಗಳೂರು ಜಿಲ್ಲಾ ಮಂಡಳಿ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು

ನೀಟ್: ಕಠಿಣ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಹಿಂದಿರುವ ಅಂತರರಾಜ್ಯ ಮಾಫಿಯಾ ಮತ್ತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಅಧಿಕಾರಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ (ಎಐಎಸ್‌ಎಫ್) ಬೆಂಗಳೂರು ಜಿಲ್ಲಾ ಮಂಡಳಿ ಶನಿವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿತು.

ಎಐಎಸ್‌ಎಫ್ ರಾಜ್ಯಾಧ್ಯಕ್ಷೆ ವೀಣಾ ನಾಯ್ಕ್ ಮಾತನಾಡಿ, 'ವಿದ್ಯಾರ್ಥಿಗಳಿಗೆ ಈ ಪರೀಕ್ಷೆಗಳು ಕೇವಲ ಅರ್ಹತಾ ಪರೀಕ್ಷೆಗಳಲ್ಲ. ಅವರ ಶೈಕ್ಷಣಿಕ ಮತ್ತು ವೃತ್ತಿ ಜೀವನದ ಕನಸುಗಳನ್ನು ನಿರ್ಧರಿಸುವ ಮಹತ್ವದ ಹಂತಗಳಾಗಿವೆ. ಇಂತಹ ಪರೀಕ್ಷೆಗಳ ಪಾರದರ್ಶಕತೆ ಮತ್ತು ನ್ಯಾಯಸಮ್ಮತತೆಯ ಮೇಲೆ ಧಕ್ಕೆ ಉಂಟಾದಾಗ ಯುವ ಪೀಳಿಗೆಯ ಭವಿಷ್ಯವನ್ನೇ ಅನಿಶ್ಚಿತತೆಗೆ ತಳ್ಳುತ್ತದೆ' ಎಂದು ಹೇಳಿದರು.

ಕಾರ್ಯದರ್ಶಿ ಎಂ.ಮಂಜುನಾಥ, 'ಎನ್‌ಟಿಎಯಲ್ಲಿ ರಚನಾತ್ಮಕ ಸುಧಾರಣೆ ತರಬೇಕು ಅಥವಾ ಪರೀಕ್ಷಾ ಜವಾಬ್ದಾರಿಗಳನ್ನು ವಿಕೇಂದ್ರೀಕರಿಸಬೇಕು. ಕೋಚಿಂಗ್ ಸೆಂಟರ್‌ಗಳ ಹಿಡಿತದಿಂದ ಶಿಕ್ಷಣ ಮುಕ್ತಗೊಳಿಸಲು ಕಠಿಣ ರಾಷ್ಟ್ರೀಯ ನಿಯಮಾವಳಿ ಜಾರಿಗೊಳಿಸಬೇಕು. ಪರೀಕ್ಷಾ ಒತ್ತಡ ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಹಾಗೂ ಸಮಗ್ರ ಮಾನಸಿಕ ಸಮಾಲೋಚನೆ ಕೇಂದ್ರಗಳನ್ನು ಆರಂಭಿಸಬೇಕು' ಎಂದು ಆಗ್ರಹಿಸಿದರು.

'ಪ್ರಶ್ನೆಪತ್ರಿಕೆ ಸೋರಿಕೆಯ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಹಾಗೂ ಎನ್‌ಟಿಎ ಅಧ್ಯಕ್ಷರು ತಕ್ಷಣವೇ ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸಿದ್ದಾರೆ. ಪ್ರತಿಭಟನೆಯಲ್ಲಿ ಎಐಎಸ್‌ಎಫ್‌ನ ಅಮಿತ್, ಶಾಂತರಾಜ ಜೈನ್, ವೀರಪ್ಪ ಪಾಲ್ಗೊಂಡಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರಯೋಜನಗಳು ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

Teachers/ Professors

SVR College of Commerce & Management Studies (Approved by AICTE & Affiliated to Bangalore University) HSR Layout, Bangalore 560102 www.svrinstitutions.com
Applications invited for Professors & Asst. Professors in Commerce, Management & Computer Science
Send resume to svrfaculty@gmail.com Ph: 9886461664

WANTED MALE/ Female Teacher (I to X) English & P.E. Teacher Cambridge English School, Mathikere, Yeshwanthpur, Bangalore-54. Contact:- 9379191544.

WANTED ENGLISH MEDIUM TRAINED B.Ed/ D.Ed LADY TEACHERS for Primary and High School to teach Maths & Science/ English/ Hindi/ Computer Faculty. Salary with PF, ESI Facilities Contact in Person- 10 am- 3 pm on all working days - Secretary, Deccan Educational Society®, Near Sampige Theater, Malleswaram, Mob: 9353382686, 7094390262

SRI-AYYAPPAN NURSERY PRIMARY AND HIGH SCHOOL BENSON TOWN BANGALORE-46. (9986155417/9113062970) WANTED GARDUATES With B.Ed, PUC With NTT/MONTESSORI, PE-TEACHERS, sriayyappaninstitutions@gmail.com

WANTED EXPERIENCED Principal'and Lectures_for Suryodaya High School PU'and Degree_College female typist near Electronicity Bangalore_Immediately Contact: 9632081875/ 7975796544.

SRIGURU INTERNATIONAL PUBLIC SCHOOL (Proposed to be affiliated to the CBSE, New Delhi)
Join our Dedicated & Growing School Community!
WE ARE HIRING!
Inspire, Educate, Make a Difference!
Seeking Passionate Professionals
- KG / Montessori Faculty
- PRT/TGT/PGT Faculty – English, Hindi, Science, Mathematics, Social Science, Computer Science, Physical Education
- Admin & Other Areas – Office Admin, Front Office Admin

Walk-in Interview Monday - Friday 10 AM – 2 PM
Salary & Remuneration as per Qualification & Experience
+91 80956 55755 / +91 80957 55855
Drop off your detailed CV, with your latest passport size photo, at the school front office, in a sealed envelope or apply to : info@siguruips.com
#37/2A, Ramaiahpalya Main Road, Thagachaguppe, Kumbalgodu, Bengaluru - 560 074

RAJAJINAGAR PARENTS' EDUCATION SOCIETY
GOLDEN RAY INTERNATIONAL PUBLIC SCHOOL (CBSE)
Sy No.45/2, Gorinabele Village, Kasaba Hobli, Nelamangala Taluk, B'lore Rural District - 562123. Mobile : 95382 47010.
WALK-IN-INTERVIEW for the Post of Teachers on 08.06.2026 between 10.00 a.m. to 1.00 p.m. at GRIPS

Subject	Qualification
English	M.A. / B.A. B.Ed.
Kannada	M.A. / B.A. B.Ed.
Hindi	M.A. / B.A. B.Ed.
Mathematics	M.Sc. / B.Sc. B.Ed.
Science	M.Sc. / B.Sc. B.Ed.
Social Science	M.A. / B.A. B.Ed.
Pre-primary	Graduation with NTT/MTT.
P E Teacher	B.PEd.

Secretary, RPES, Rajajinagar, Bangalore.

POORNAPRAJNA EDUCATION CENTRE, INDIRANAGAR (Promoted & Managed by Udupi Shree Admaru Matha Education Council)
CA Site No. 48, New Thippasandra, HAL 3rd Stage, Bengaluru -75
CBSE Affiliated school, Affiliation No.831617
CBSE affiliated school invites application for the following posts:

Hindi Teacher	BA/ MA in Hindi with B.Ed/ M.Ed Min 1 year experience
Sanskrit Teacher	BA/ MA in Sanskrit with B.Ed/ M.Ed Min 1 year experience
Primary Asst. Teacher	Any Degree with Min 1 year experience
SUPW/ Craft Teacher (Part time)	Degree with expert in Craft, Glass Painting, Tailoring, Embroidery, Cooking etc..

Apply immediately to Hon. Secretary
Email: contact.indiranagar@ppec.edu.in last date 15th June 2026, Monday

GEORGIAN ASSOCIATION BANGALORE (P B No 25040, Hosur Road Museum Road Post Office, Bengaluru-560025)
1. Georgian Association Bangalore is looking for an English Teacher to teach English Communication Classes for the students of Class VI to XII in a reputed school near Brigade Road, Bengaluru. Monthly Remuneration will be Rs 50,000/- (Rupees Fifty Thousand Only)
2. Essential Qualifications are as follows:-
(a) Master's Degree in English from a recognized university
(b) Minimum 3 Years of Teaching/Training Experience in English Communication Skills either in School/Institution / Corporate.
(c) Basic Knowledge of Computer and Online Teaching.
3. Interested/Qualified persons can send their CV/Bio Data to rmsb25@gmail.com along with supporting documents on or before 15 Jun 2026. After scrutinizing of CVs/Bio data, shortlisted candidates will be called for interview.
President

PRIMARY SCHOOL TEACHER And KANNADA TEACHER FOR HIGH SCHOOL. Walk-in ABDUL BARI'S ENGLISH HIGH SCHOOL, Haines Road, Near Coles-Park. WhatsApp: 9353111888

SECAB SCHOOL, BSK II Stage, Kadirenahalli, Bangalore-70. Require experienced TEACHERS for High School Mathematics, Science & Kannada Contact: 99160-87586/ 95914-83296

WANTED TRAINED TEACHERS to teach PRIMARY Section. Contact: 93435-31234 MOOKAMBIKA SCHOOLl, NR.Colony, B'lore-560019 Email: secretarymookambikaschool@gmail.com

WANTED MALE candidates to teach English & Social Science for VIII and IX Std- 6 pm to 9 pm, Contact in person 10 am -6 pm- The Secretary, Deccan Educational Society®, Malleswaram, Mob: 9353382686, 7094390262

VIKAS SCHOOL BSK 3rd Stage Bangalore-85 Require B.Ed TEACHERS to Teach I Language ENGLISH for High School and Primary Classes, Diploma ARTS & CRAFTS and Parttime YOGA for NURSERY. Contact: 9448110651/ 96204-48778 between 11-1 pm

Engg/ Production Technical

CIVIL ENGINEER, 5+years Experience, Office in Jakkur, Site North Bangalore, Computer Knowledge Must. 9343771149 info@behlconstruction.com

General

DIRECT RECRUITMENT NOTIFICATION Applications are invited from eligible candidates for the following positions in Dakshina Kannada Growers Organic Collective Farmer Producer Company Limited, a company registered under the Ministry of Corporate Affairs, Government of India. The company is expanding its operations and opening new branches at Bangalore, Hassan, Mysore, Shivamogga, Mangalore, Moodbidri, Kundapura, Surathkal, Karkala, Udupi.Available Positions* Manager* Assistant Manager* Cash Officer* Loan Officer* Customer Service Officer* Field Collection Officer Total Vacancies : 65 Positions Salary 18,500 to 45,000 per month (based on qualification and experience) Employee Benefits* ESI* PF Eligibility Candidates from all districts of Karnataka are eligible to apply. Last Date for Application 20-06-2026 Contact*S. Satish Nayak* +91 99804 96533 +91 94486 27226. Interested candidates are requested to apply on or before the last date.

Part-Time Jobs

HIRING SABP ON-ROLL PTE Employee, HDFC Subsidiary, Salary 96K. Age 42-69. Experience Only: 9019186799

Security & Detectives

REQUIRED FIELD OFFICER, SECURITY GUARDS, HOUSEKEEPING STAFF with good salary, free accommodation and food. 9945516505

Wanted

REQUIRED ACCOUNTANT with experience in TallyPrime / Tally ERP. Knowledge of GST. 1-3 years experience. B.Com preferred. Salary negotiable. Contact: 6361231869

BUSINESS

Business to Business

Finance

WE ARRANGE Loan against Commerical/ Residential Building/ School Building/ Hospital Building / Convention Hall/ Bar & Restaurant Property. Business loan from Schedule Banks. Jyothi 8971132289, 9380509779.

NEED LOAN avail @ 5.5% pm Personal, Business, Educational, Takeover all types Loan. Capital One Finance. Call/ WhatsApp: 7678360713.

RV Institute of Management – Go change the world
Register for PGCET/KMAT 2026
one week intensive coaching for MBA now & get admission in your dream institution..
Mode of coaching Hybrid (Offline in the Campus & Online platform - Zoom)
Date: 8th June to 13th June 2026(One Week)
Time 9.00am to 2.00pm (on all days)
Registration fee Rs.500/- (Includes certificate & study material)
Scan QR code below to register online & pay the fee
Placement Summary for 2023-2025
PGCET Code B262
Top 15 Rankers who join our institution from PGCET (within 100 Rank) will be given a merit scholarship of Rs 50,000/-.
Scholarship of Rs 50,000/- to Top 15 Academic Performers in MBA 1st year (above 7.0 CGPA)
Please call: 90089 60025 / 080 26547048, for more information
E-mail : rvimpgcet@gmail.com Website : www.rvim.edu.in

GOLDEN OPPORTUNITY Property Investors Fully Secured Layout Project Best Returns 1year Project. Genuine's Only. 9902678314

Business Offers

General

CONTAINER FOR SALE 40X8X8.5 FEET GOOD CONDITION AT HUBLICONTACT 9008667955

Machinery & Tools

MACHINERY FOR SALE: Wire Drawing Unit, Binding Wire Unit, Wire Nails Unit of 10 Machineries, Lathe, Drill etc., Contact: 76763-73976

EDUCATIONAL

Special Courses

NIRWANA NATURE HEALING, Doddaballapur Tq. Free Therapist Training:Naturopathy, Yoga & Ayurveda One Year Course. Eligibility-12th Studied. Kannada/English Knowing. Stipend- First Semester Rs.5000/-PM. 2nd Semester Rs.8,000/-PM. Free Food & Accommodation. Details Call- 9811907711. Dr BTC Murthy

PUBLIC NOTICE

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಶ್ರೀ ವಾಗೀಶ್ ರಾಜಪ್ಪ ಶೆಟ್ಟಿ, ತಂದೆ: ರಾಜಪ್ಪ ಶೆಟ್ಟಿ, ವಿಳಾಸ: ಸಹಕಾರ್ ನಗರ, ಬೆಂಗಳೂರು, ಇವರು ಮತ್ತು ಸಹ ಖರೀದಿದಾರರು, ಕೆಳಗೆ ವಿವರಿಸಲಾದ ಕೃಷಿ ಜಮೀನನ್ನು ಶ್ರೀಮತಿ ಮುನಿಲಕ್ಷ್ಮಿ ಆರ್, ಪತಿ: ಪಿ.ರಮೇಶ್ ರೆಡ್ಡಿ, ಇವರಿಂದ ಖರೀದಿಸಲು ಉದ್ದೇಶಿಸಿದ್ದಾರೆ.

ಆಸ್ತಿ ವಿವರ:

ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಕಸಬಾ ಹೋಬಳಿ, ಶ್ಯಾನುಭೋಗನಹಳ್ಳಿ ಗ್ರಾಮದಲ್ಲಿರುವ ಸರ್ವೇ ನಂ. 29/2, ಒಟ್ಟು 3 ಎಕರೆ, 24 ಗುಂಟೆ, 30 ಗುಂಟೆ ಬಿ-ಕರಾಬ್, ವ್ಯಾಪ್ತಿಯ ಕೃಷಿ ಜಮೀನು, ಇದರ ಚತುರ್ಭುಜ ಸೀಮೆಗಳು ಹೀಗಿವೆ:- ಪೂರ್ವಕ್ಕೆ : ಮಾಗಡಿ ರಸ್ತೆ, ಪಶ್ಚಿಮಕ್ಕೆ: ಆರ್.ನಾಗರಾಜು ಅವರ ಜಮೀನು ಸೈ ನಂ.29/6, ಉತ್ತರಕ್ಕೆ : ಸಿದ್ದ ಗಂಗಯ್ಯ ಅವರ ಜಮೀನು ಸೈ ನಂ.29/1, ದಕ್ಷಿಣಕ್ಕೆ : ಮಾಗಡಿ ರಸ್ತೆ.

ಮೇಲ್ಕಂಡ ಆಸ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ಯಾವುದೇ ಹಕ್ಕು, ಸ್ವಾಮ್ಯ, ಬಾಧ್ಯತೆ, ಹಂಚಿಕೆ, ಗಿರವಿ, ಲೀನ್, ಬಾಡಿಗೆ, ವಂಶಪಾರಂಪರ್ಯ ಹಕ್ಕು, ನ್ಯಾಯಾಲಯ ವ್ಯಾಜ್ಯ, ಸರ್ಕಾರದ ಸ್ವಾಧೀನ ಪ್ರಕ್ರಿಯೆ, ಅಡಮಾನ, ತಡೆ ಆದೇಶ ಅಥವಾ ಇತರೆ ಯಾವುದೇ ಹಕ್ಕು/ಆಕ್ಷೇಪಣೆ ಇದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 (ಹದಿನೈದು) ದಿನಗಳೊಳಗಾಗಿ ದಾಖಲೆಗಳ ಸಮೇತ ಕೆಳಸಹಿ ಮಾಡಿದ ವಕೀಲರಿಗೆ ಲಿಖಿತವಾಗಿ ತಿಳಿಸಬೇಕು.

ನಿಗದಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಸ್ವೀಕರಿಸದಿದ್ದಲ್ಲಿ, ಮೇಲ್ಕಂಡ ಆಸ್ತಿ ಯಾವುದೇ ಬಾಧ್ಯತೆ ಗಳಿಲ್ಲದೆ ಖರೀದಿ ಪ್ರಕ್ರಿಯೆಗೆ ಯೋಗ್ಯವಾಗಿದೆ ಎಂದು ಪರಿಗಣಿಸಲಾಗುವುದು ಮತ್ತು ನಂತರ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಂದೀಪ್ ಶಿವಮೂರ್ತಿ, ವಕೀಲರು
ಜುಡಿಷಿಯಲ್ ಕಾಲೋನಿ, ಬೆಂಗಳೂರು,
ಸಂಪರ್ಕ ಸಂಖ್ಯೆ: 9945592982
ಬೆಂಗಳೂರು, 07-06-2026

SOCIAL SERVICES

Old Age Home

SUKHSHANTHI LUXURY Retirement Home, near Sarjapura Bangalore Rs. 22,575/- monthly Rs. 1,500 per day furnished accommodation. 3 Meals, 24X7 Nurse, Ambulance. Call: 9341289357

MORE Classifieds Ads on Subsequent Pages

VIVEKANANDA INSTITUTE OF TECHNOLOGY
AN INSTITUTE OF JANATHA EDUCATION SOCIETY® Recognised by GOK, Affiliated to VTU Approved by AICTE
KCET CODE: E087
NAAC A – Accredited Colleges Engg. | Law | Degree
Admission Open 2026-27
B.E: ENGINEERING CSE | ISE | AI&ML ECE | MECH | CIVIL
VIVEKANANDA COLLEGES
PHARMA: D.PHARM, B.PHARM, M. PHARM | LAW: 3 YEAR LL.B, 5 YEAR : B.A | B.COM LL.B | DEGREE: B.A | B.SC | B.ED, B.COM : REG. | BDA | LSCM, M.COM | MANAGEMENT: BCA, BBA, MBA
95139 53482 76250 13637
R & D Centers | Excellent Placement | 4.4 Lac Avg. P.A CTC | Skill Lab | Campus Hostel
VKIT Campus: Gudimavu, Kumbalagodu, Off. Mysuru Road, Bengaluru-74. Email : principal@vitb.ac.in Web : vitb.ac.in
Main Campus: Dr. Rajkumar Road, Next to Orion Mall, Rajajinagar, Bengaluru-55 E-mail : admission@vivekanandacolleges.in Web : vivekanandacolleges.in

A JAIN INSTITUTION
ADARSH GROUP OF INSTITUTIONS
5th Main Road, Chamarajpet, Bengaluru-18 | www.agieducation.org
ADMISSIONS OPEN
PUC SCIENCE: PCMB | PCMCs | PCME – With CET NEET JEE
PUC COMMERCE: MSBA | SEBA | CsSBA | HEBA | CsEBA
DEGREE COURSES: BBA | BCA | BCOM | BA | BSC
PG COURSES: MBA | MCOM
EVENING COLLEGE: PUC | BCOM | MCOM
NAAC A GRADE
Scholarship for meritorious students
SCAN FOR SCHOLARSHIPS
PUC | UG DEGREE | EVENING COLLEGE | PG MBA
+91 74067 40011/22 www.agieducation.org

MATRIMONIAL

Brides Wanted

Hindu

VOKKALIGA, 33 Years, 5' 8", M Tch, Working MNC with family Business at Mangalore. Seeks Suitable Bride of same Community. - Contact - 7259189399 9945073333

Urdu

Wanted Bride
Sunni Shaikh Muslim boy, born Jan-1997, MBA qualified, financially strong businessman from a respectable family, seeking a compatible match. (080-69072057)

Wanted Bride
Sunni Muslim doctor boy, born in 1994, MBBS/MD, well-settled, from a respectable family, seeking a suitable match. (080-69144026)

Wanted Bride
Canada-settled Sunni Muslim boy, 31 years old, MS Engineer (PR holder), well-established professionally, seeking an educated suitable match. (9164400029)

COMMERCIAL SPACE AVAILABLE FOR RENT
READY TO MOVE – Suitable for CA / ADVOCATE OFFICES, Marketing Agencies, Banks, Insurance Companies
BUILT-UP AREA: Ground Floor 2500 sqft | First Floor 2950 sqft | Second Floor 2950 sqft | Third Floor 2950 sqft | Terrace Floor 964 Sqft
FEATURES & AMENITIES
- 1750+ square feet on Ground and Mezzanine Floor, with Big Hall /Conference Room
- Fully furnished with 6 Air conditioners, 3 Washrooms and 1 Pantry
- Comes with 2 Generators, one car park & only 2-minute walk to Multi-Level Car Park
- 24x7 Security Services, Borewell & Corporation Water, 3KVA Power

IDEAL FOR YOUR BUSINESS GROWTH
Call- 98450 81345

ಆರ್‌ಐಟಿ: ವಿದ್ಯಾರ್ಥಿಗಳ ಪ್ರತಿಭೆ ಅನಾವರಣ



ರಾಮಯ್ಯ ಎಂಜಿನಿಯರಿಂಗ್ ಮಹಾವಿದ್ಯಾಲಯದ ಕ್ಯಾಂಪಸ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಪ್ರಾಯೋಗಿಕ ಮಾದರಿಗಳನ್ನು ಪ್ರದರ್ಶಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಯ್ಯ ಎಂಜಿನಿಯರಿಂಗ್ ಮಹಾವಿದ್ಯಾಲಯದ (ಆರ್‌ಐಟಿ) ಕ್ಯಾಂಪಸ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಪ್ರಾಯೋಗಿಕ ಮಾದರಿಗಳನ್ನು ಪ್ರದರ್ಶಿಸಿದರು.

ಕಂಪ್ಯೂಟರ್ ಸೈನ್ಸ್, ಮೆಕ್ಯಾನಿಕಲ್, ಸಿವಿಲ್ ಎಂಜಿನಿಯರಿಂಗ್ ಸೇರಿದಂತೆ ಹಲವಾರು ವಿಭಾಗಗಳಲ್ಲಿ ವಿದ್ಯಾರ್ಥಿಗಳು ವಿವಿಧ ಮಾದರಿಗಳ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಂಡರು. ಮಳೆ ನೀರಿನ ಸಂಗ್ರಹ, ಐಆರ್ - ವಿಆರ್, ಸ್ಮಾರ್ಟ್ ಗ್ರಿಡ್ ಸೇರಿ ಹಲವು ಮಾದರಿಗಳು ಗಮನ ಸೆಳೆದವು.

ಆರ್‌ಐಟಿ ಹಳೇ ವಿದ್ಯಾರ್ಥಿ ಹಾಗೂ ಗ್ಲೋಬಲ್ ಇನ್ಸ್ ಕಂಪನಿಯ ಸಿಇಒ ಸುಹಾಸ್ ಗೋಪಿನಾಥ್, ಗೋಕುಲ ಎಜುಕೇಶನ್ ಫೌಂಡೇಶನ್ ಉಪಾಧ್ಯಕ್ಷ ಎಂ.ಆರ್. ಜಾನಕಿರಾಮ್, ಆರ್‌ಐಟಿ ನಿರ್ದೇಶಕ ಎಂ.ಆರ್.ಕೋದಂಡರಾಮ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸುಹಾಸ್ ಗೋಪಿನಾಥ್ ಮಾತನಾಡಿ, ‘ಉದ್ಯೋಗಿಗಳು ಕೌಶಲ ಶಿಕ್ಷಣದ ಕಡೆ ಗಮನ ನೀಡಬೇಕು’ ಎಂದು ಸಲಹೆ ನೀಡಿದರು.

ಎಂ.ಆರ್.ಕೋದಂಡರಾಮ ಅವರು ಮಾತನಾಡಿ, ‘ಎರಡು ದಿನದ ಕಾರ್ಯಕ್ರಮದಲ್ಲಿ 1,700ಕ್ಕೂ ಹೆಚ್ಚು ಮಾದರಿಗಳನ್ನು ಪ್ರದರ್ಶನಕ್ಕೆ ಇರಿಸಲಾಗಿದೆ’ ಎಂದರು.

ಆರ್‌ಐಟಿ ಪ್ರಾಂಶುಪಾಲ ಡಾ.ಎನ್.ವಿ.ಆರ್.ನಾಯ್ಡು, ಜಿಇಎಫ್ ಕಾರ್ಯನಿರ್ವಾಹಕ ಎಚ್.ವಿ. ಪಾರ್ಶ್ವನಾಥ್, ಜಿಇಎಫ್ ಸಲಹೆಗಾರ ಡಾ.ಕರಿಸಿದ್ದಪ್ಪ ಭಾಗವಹಿಸಿದ್ದರು.

‘ಪರಮೇಶ್ವರ ರಾಜೀನಾಮೆ ನೀಡಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉಪ ಮುಖ್ಯಮಂತ್ರಿ ಸ್ಥಾನ ಒಪ್ಪಿಕೊಳ್ಳುವ ಮೂಲಕ ಪರಿಶಿಷ್ಟ ಸಮುದಾಯದ ಸ್ವಾಭಿಮಾನಕ್ಕೆ ಧಕ್ಕೆ ತಂದಿರುವ ಜಿ. ಪರಮೇಶ್ವರ ಅವರು ತಕ್ಷಣ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಸಚಿವ ಸಂಪುಟದಿಂದ ಹೊರಬರಬೇಕು’ ಎಂದು ಕರ್ನಾಟಕ ನವ ಜಾಗೃತಿ ವೇದಿಕೆ ಆಗ್ರಹಿಸಿದೆ.

‘ರಾಜೀನಾಮೆ ನೀಡದಿದ್ದರೆ ವಿವಿಧ ದಲಿತ ಸಂಘಟನೆಗಳು ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಪ್ರತಿಭಟನೆ ನಡೆಸಲಿದ್ದಾರೆ’ ಎಂದು ವೇದಿಕೆ ಅಧ್ಯಕ್ಷ ಅನಂತರಾಯಪ್ಪ ಎಚ್ಚರಿಕೆ ನೀಡಿದ್ದಾರೆ.

‘ಈ ಹಿಂದೆ ಮೂರು ಬಾರಿ ಅವಕಾಶ ವಂಚಿತರಾಗಿದ್ದ ಪರಮೇಶ್ವರ, ಈ ಬಾರಿಯಾದರೂ ಮುಖ್ಯಮಂತ್ರಿಯಾಗಿ ಪರಿಶಿಷ್ಟ ಸಮುದಾಯಕ್ಕೆ ಘನತೆ, ಗೌರವ ತರುತ್ತಾರೆಂದು ನಿರೀಕ್ಷೆ ಮಾಡಿದ್ದೆವು. ಆದರೆ, ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಲಾಗಿದೆ. ಆ ಸ್ಥಾನವನ್ನು ಅವರು ನಿರಾಕರಿಸಿದ್ದರೆ ಸಮುದಾಯದ ದೃಷ್ಟಿಯಲ್ಲಿ ಹೀರೊ ಆಗುತ್ತಿದ್ದರು. ಆದರೆ, ಈಗ ಅವರ ನಡೆಯಿಂದ ಪರಿಶಿಷ್ಟರು ಮುಜುಗರ ಪಡುವಂತಾಗಿದೆ’ ಎಂದಿದ್ದಾರೆ.

‘ಪರಮೇಶ್ವರ ಅವರಿಗೆ ಸ್ಥಾನಮಾನ ನೀಡಿರುವುದು ಅವರ ವೈಯಕ್ತಿಕ ವಿಚಾರವಲ್ಲ. ಸಮುದಾಯದ ಘನತೆ, ಸ್ವಾಭಿಮಾನದ ಪ್ರಶ್ನೆ. ಅವರು ಕೊಟ್ಟ ಸ್ಥಾನವನ್ನು ವಹಿಸಿಕೊಂಡಿರುವುದು, ‘ದಲಿತರು ಕೊಟ್ಟಿದ್ದಕ್ಕೆ ಕೈ ಒಡ್ಡುವ ನಿಕೃಷ್ಟ ಜನಾಂಗ’ ಎಂಬಂತಾಗಿದೆ. ಅವರು ರಾಜೀನಾಮೆ ನೀಡುವ ಮೂಲಕ ದಲಿತರ ಆತ್ಮಗೌರವ ಹಾಗೂ ಸ್ವಾಭಿಮಾನ ಎತ್ತಿಹಿಡಿಯಬೇಕು’ ಎಂದೂ ಅವರು ಆಗ್ರಹಿಸಿದ್ದಾರೆ.

ಜಮೀರ್‌ಗೆ ಸಚಿವ ಸ್ಥಾನಕ್ಕೆ ಒತ್ತಾಯ

ವಿವಿಧೆಡೆ ಪ್ರತಿಭಟನೆ • ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಬಿ.ಝಡ್. ಜಮೀರ್ ಅಹಮದ್ ಖಾನ್ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿ ಅವರ ಬೆಂಬಲಿಗರು ಶನಿವಾರ ಪ್ರತಿಭಟನೆ ನಡೆಸಿದರು.

ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಇನ್ನೂ 13 ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಜಮೀರ್ ಅವರು ಆ ಕಾರ್ಯಕ್ರಮದಿಂದ ಅರ್ಧಕ್ಕೆ ಎದ್ದು ಹೊರಬಂದಿದ್ದರು. ಬುಧವಾರವೇ ಚಾಮರಾಜಪೇಟೆಯ ಹಲವೆಡೆ ಸಣ್ಣ ಪ್ರಮಾಣದ ಪ್ರತಿಭಟನೆಗಳು ನಡೆದಿದ್ದವು.

ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಜಮೀರ್ ಅವರ ಬೆಂಬಲಿಗರು ಶುಕ್ರವಾರ ಸಂಜೆ ಸ್ವಾತಂತ್ರ್ಯ ಉದ್ಯಾನದಲ್ಲಿ ದಿಢೀರ್ ಎಂದು ಪ್ರತಿಭಟನೆ ನಡೆಸಿದ್ದರು. ನಂತರ ಶನಿವಾರ ಬೆಳಿಗ್ಗೆ ನಗರದ ಮೈಸೂರು ರಸ್ತೆಯ ಸಿರ್ಸಿ ವೃತ್ತದಲ್ಲಿ ಮೌನ ಪ್ರತಿಭಟನೆ ನಡೆಸುವುದಾಗಿ ಚಾಮರಾಜಪೇಟೆ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಂ.ವಿನಾಯಕ ಮತ್ತು ಜಗಜೀವನರಾಂ ನಗರ ಬ್ಲಾಕ್ ಕಾಂಗ್ರೆಸ್ ಸಮಿತಿಯ ಎಂ.ಗೌಸಿ ಕರೆ ನೀಡಿದ್ದರು.

ಅದರಂತೆ ಬೆಳಿಗ್ಗೆ ಸಿರ್ಸಿ ವೃತ್ತದ ಬಳಿ ನೂರಾರು ಮಂದಿ ಸೇರಿ, ಜಮೀರ್ ಅವರ ಪರವಾಗಿ ಫಲಕಗಳನ್ನು ಪ್ರದರ್ಶಿಸಿದರು. ನಂತರ ಮಾನವ ಸರಪಳಿ ನಿರ್ಮಿಸಿ, ರಸ್ತೆ ತಡೆ ನಡೆಸಿದರು. ಸಂಚಾರ ಅಸ್ತವ್ಯಸ್ತವಾದ ಕಾರಣ ಪೊಲೀಸರು ಪ್ರತಿಭಟನಕಾರರನ್ನು ವಶಕ್ಕೆ ಪಡೆದು ಕರೆದೊಯ್ದರು. ಈ ಬಗ್ಗೆ ಸುದ್ದಿವಾಹಿನಿಗಳಲ್ಲಿ ವರದಿ ಪ್ರಸಾರವಾದ ಬೆನ್ನಲ್ಲೇ ನಗರದ ಶಿವಾಜಿನಗರ, ಸರ್ವಜ್ಞನಗರ, ಪುಲಕೇಶಿನಗರದ ಹಲವೆಡೆ ಅವರ ಬೆಂಬಲಿಗರು ದಿಢೀರ್ ಎಂದು ರಸ್ತೆಗೆ ಇಳಿದು ಪ್ರತಿಭಟನೆ ನಡೆಸಿದರು. ಹೀಗಾಗಿ ನಗರದ ಈ ಭಾಗಗಳಲ್ಲೂ ಸಂಚಾರ ಅಸ್ತವ್ಯಸ್ತವಾಯಿತು.



ಜಮೀರ್ ಅಹಮದ್ ಖಾನ್ ಅವರ ಬೆಂಬಲಿಗರು ನಗರದ ಮೈಸೂರು ರಸ್ತೆಯ ಸಿರ್ಸಿ ವೃತ್ತದ ಬಳಿ ಶನಿವಾರ ಪ್ರತಿಭಟನೆ ನಡೆಸಿದರು

ಎಚ್.ಸಿ. ಮಹದೇವಪ್ಪಗೆ ಸಚಿವ ಸ್ಥಾನ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಚ್.ಸಿ.ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡಬೇಕು. ಇಲ್ಲದೇ ಇದ್ದಲ್ಲಿ ರಾಜ್ಯದಾದ್ಯಂತ ಹೋರಾಟ ನಡೆಸುತ್ತೇವೆ’ ಎಂದು ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಕರ್ನಾಟಕ ರಾಜ್ಯ ದಲಿತ ಸಂಘಟನೆಗಳ ಒಕ್ಕೂಟವು ಶನಿವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ‘ದಲಿತರ ಹೆಸರಿನಲ್ಲಿಯೇ ಅಧಿಕಾರಕ್ಕೆ ಬರುವ ಕಾಂಗ್ರೆಸ್ ಸರ್ಕಾರವು ದಲಿತರಿಗೆ ಮುಖ್ಯಮಂತ್ರಿ ಮತ್ತು ಸಚಿವ ಸ್ಥಾನ ನೀಡದೆ ವಂಚಿಸುತ್ತಿದೆ. ಕಾಂಗ್ರೆಸ್ ಸರಿಪಡಿಸದಿದ್ದರೆ, ನಾವು ಬೇರೆ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ’ ಎಂದರು.

‘ದಲಿತರು ದಶಕಗಳಿಂದಲೂ ಕಾಂಗ್ರೆಸ್ ಅನ್ನು ಬೆಂಬಲಿಸುತ್ತಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಮತ್ತು ಪರಮೇಶ್ವರ ಅವರಿಗೆ ಮುಖ್ಯಮಂತ್ರಿ ಹುದ್ದೆ ತಪ್ಪಿಸಲಾಯಿತು. 2013ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಎರಡು ವರ್ಷಗಳ ನಂತರ ಪರಮೇಶ್ವರ ಅವರಿಗೆ ಸಚಿವ ಸ್ಥಾನ ನೀಡಲಾಗಿತ್ತು. 2023ರಲ್ಲಿ ಈ ತಪ್ಪನ್ನು ಸರಿಪಡಿಸಲು ಇದ್ದ ಅವಕಾಶವನ್ನು ಕಾಂಗ್ರೆಸ್ ಕಡೆಗಣಿಸಿತು. ಈಗಲೂ ದಲಿತರಿಗೆ ಮುಖ್ಯಮಂತ್ರಿ ಹುದ್ದೆ ನೀಡಿಲ್ಲ. ಸಚಿವ ಸಂಪುಟದಿಂದಲೂ ಹಲವು ದಲಿತ ನಾಯಕರನ್ನು ಹೊರಗಿಟ್ಟಿದ್ದಾರೆ’ ಎಂದರು.

‘2023ರ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಲು ಎಚ್.ಸಿ.ಮಹದೇವಪ್ಪ ಮಹತ್ವದ ಪಾತ್ರ ವಹಿಸಿದ್ದರು. ಅವರಿಗೆ ಈಗ ಸಚಿವ ಸ್ಥಾನ ನೀಡಿಲ್ಲ’ ಎಂದು ದೂರಿದರು.

ಒಕ್ಕೂಟದ ಪರವಾಗಿ ಎಚ್.ಸಿ.ಸಿದ್ದಲಿಂಗಯ್ಯ, ಮಾವಳ್ಳಿ ಶಂಕರ್, ವಾಣಿ ಶಿವರಾಂ, ಎನ್. ಮೂರ್ತಿ, ಡಿ.ಶಿವಶಂಕರ್, ಸಿದ್ದಪ್ಪ ಅವರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಸಿದ್ದರಾಮಯ್ಯ ಅವರ ಜತೆಗಿದ್ದ ದಲಿತ ನಾಯಕರನ್ನು ಗುರಿ ಮಾಡಿ, ಮೂಲೆಗುಂಪು ಮಾಡಲಾಗುತ್ತಿದೆ. ಇದು ದಲಿತರಿಗೆ ಮಾಡುತ್ತಿರುವ ಅನ್ಯಾಯವೆಂದೇ ಪರಿಗಣಿಸಬೇಕಾಗುತ್ತದೆ

ಜ್ಞಾನಪ್ರಕಾಶ ಸ್ವಾಮೀಜಿ, ಉರಿಲಿಂಗಪೆದ್ದಿ ಮಠ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Abbigere

SALE 66X165 Corner land Commercial and Residential Site 80 ft Road Abbigere. Contact. 9845720810

Anjanapura

WANTED BDA & BDA Approved Sites Anjanapura, Banashankari 6th Stage, Jp-Nagar 8th/ 9th Phase, Kanakapura Road, NPKL, SMV Layout ANY MEASUREMENT CONTACT: 9845298419

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

"BUYING AND Selling of Residency/ Commercial/ Industrial Properties in Bangalore only genuine Buyers/ Sellers Call: 9845286505"

SALE, BSK 6th stage, 4th 'B' Block, BDA 50x80`West facing nextto corner semi-commercial, Owner Meeting: 9620341818

"AVAILABLE" BANASHANKARI 6th Stage, 4th Block Maruthi Layout, 30x46,South Facing Genuine Buyers Contact: 9900097239

BANASHANKARI 6TH stage. 50x80. Commercial 100 Feet Road. And 40x60. Corners Sites For Sale. -9916817739

BTM Layout

BTM 6TH Stage BDA 20x33 Building, Sale 5 Floor 1.4L Monthly Rent, 2.40Cr. Owner: 9900966336

BTM 6TH STAGE AKSHAYA NAGAR 52X72 SEC, 60x80 EF, 50X97 SF 12000/- NEGO. 9449655947/ 6361162072

Basaweshwaranagar

BASVESHWARNAGAR 40×60 South Rajajinagar 45×90, 50×80 West, East Commercial Site and Building Immediate Sale 8660075308

Electronic City

KHB Sites Near India 2nd International Cricket Stadium
Jigani, Electronic city, Bommasandra, Ready for Registration, SBI Bank loan avbl, Land owner Sites Call: 70260 13388

Girinagar

30X55 (WEST) Girinagar 3rd Phase, Close to 50 Feet Road, Excellent Location. Clear Documents. 24,000/ SFT. GK- 94480-56369/ 80500-99266

Hennur

HENNUR 20X45 West Facing B ekatha Site sale HIREMATH LAYOUT, KOTHANUR Rs. 6000/- Fixed. 9945033366

J P Nagar

J.P.NAGAR 8TH Phase Near R.V.College, 40x60 Residential BDA site, North, 40feet Road, 4,44,00,000/- 9739995042

Kempegowda Layout

PLATINUM PROPERTIES Kempegowda Layout BDA available for Site 20x30, 30x40, 40x60, 50x80 Contact: 8884709409/ 9916291629

COMMERCIAL SITE Sale 50x80 East Facing BDA 300ft Road Rs. 15000/- Negotiable Nadaprabu Kempegowda Layout: 9916826976

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

BDA SITE for Sale at Kempegowda Layout, 3rd Block, F Sector, 30x40 North and Anjanapura 30x40 and 40x60 South Facing Mob: 9901549488

Multiple Locations

AMRUTHHALLI 30/40 North facing site, 11,999/- RMV Extentions south facing site 30/50, 27,999/-. Phone No. 9844322310/ 8217007930.

Nelamangala

BYRASHETTYHALLI VILLAGE. Aiswarya County. BMRDA. 40X60. East facing site for sale. loan available. Owner. 9620117773

Rajajinagar

RAJAJINAGAR FOR Sale BDA 2nd Stage A Block 34X60 North/ West Rs 27000/- Cheque Payment 2% Comission: 8884255563

R T Nagar

R.T.NAGAR 80 FEET MAIN ROAD BDA Commercial Site 50X80 For Sale Top Location Contact: 9738111222

Sahakarnagar

SAHAKARNAGAR SALE 2400SQFT SOUTH FACING Site Clear Title, 23rd Cross 7th Main. Immediate Sale: 9880515577

SAHAKARNAGAR 30X40 Semi commercial 40x60, Jakkur MCECHS 30x40 EF New 4BHK Duplex house. 9535658860

Sadashiva Nagar

LOWER PALACE Arcade Sadashivnagar old-House 20X25 R.T.NAGAR BDA-SITE 40X60, 50X88 RMV 35X88. Thomas:9448473358 9740183922

Thanisandra

SALE BDA 'PURELY RESIDENTIAL' Site 30x50 Behind Purvankara Atmosphere Thanisandra, 3km from Ring Road, Manyata. 2.20Cr. 9845442054

Uttarahalli

UTTARAHALLI PLOT Sale 55'x65' BBMP A Khatha. North Facing, Lake View Rs.15,000/- sft. Call: 6362348146.

Vishweshwariah Layout

SITE FOR SALE 50x80 West Facing Residential Vishveshwaraiya Layout, 8th Block Genuine Buyer Call 8105688602

VISHWESHWARAIAH 3RD Block 20x30 EF 3rd Floor House Rs. 1,25,00000/- Kempegowda 2nd Block Site. 491 20x30 West Rs. 57,00000/- Negotiable: 9845793121

"VISVESHWARAIAH 6TH BLOCK near KLE Law College 50x80 North & Nagarabhavi BDA Complex 40x60 East. 9448432633"

AVAILABLE VISHWESHWARAIAH Layout 6th Block N/W Corner 1230Sqft Opp Park, Near 100ft Road, Good Location 40ft Road: 8553908699

VISVESHWARAIAH LAYOUT BDA SITE 40X60 Nr Oxford School 6th Stage Call: 9740183922 9448473358 Thomas

BDA SITE SALE 660 Sqft NORTH WEST CORNER SMV LAYOUT RATE 1.25 CR. CONTACT: 9108133156

DIRECT OWNER Available/ Wanted (NRI) 20x30, 30x40 Sites or House Sale Vishweshwaraiah Layout: 9620696913/ 9880781399

Vidyaranyapura

NEAR SAMBRAM College Best County 2, DC Conversion A/E Katha 40x60 WF, 37.5x40 WF BBMP B/E Katha, 2 BHK Rent, 1st, 2nd, 3rd New Building with Lift Sale: 8296895858

Mysore

MYSORE KHB KENCHALGUD 30X40 SITE. SOUTH FACING, 43 LAKHS OWNER CONTACT: 8105683396/ 96068 66368

House

Banashankari

BANASHANKARI 3RD Stage, HOUSE SALE 3 Floor East, 32x54, 30 feet Road 4.50.Cr. 9945443877, 9845135208

Jayanagar

JP.NAGAR 3RD PhaseHouse`N/F`& East`30x40,4.5cr &. 2700sft`9.8CR 40x60`S/F`6th` Phase`30x40`BDA 3.3cr`2ndPhase 30x50`N/F`5.3CR & W/F`5.6CR Call:9008481314

J P Nagar

SALE 20X30 Building West Facing J.P.Nagar 4th Phase Rs. 25000 Per Sft Good Location Contact: 9880425607

Kolar

3 FLOOR Building house for sale. Rs. 95 Lakhs (Negotiable). Location: Karahalli, Bangarpet Taluk. Brokers Excuse. Contact:- 9916499979/ 8746929435.

Flat

Nagarabhavi

FLATS FOR-SALE @ Nagarabhavi/ Chandra Layout 2 & 3 BHK Ready to Move In Good Location Call:9538472420 9845066608

Vidyaranyapura

FULLY FURNISHED Flat For sale situated in Vidyaranaya Pura Chikkabettadahalli, Stone View Residency Built-up area 1000sqft, Broker excuse Direct Party Contact:9412258826 / 9880877599

Whitefield

GOPALAN ATLANTIS, WHITEFIELD Semi furnished 3 BHK for SALE| 1,755 sq.ft.| High Floor| North- East entrance, Good ventilation, sunlight. 1330 carpet. Large car park. Single owner. Immaculate. Rarely available in this configuration. 3 sunset- view balconies| Custom pooja unit Vaastu compliant| Walk-in wardrobe| Modular kitchen Clubhouse, Gym, Pool, Tennis, Metro– all close Contact: +91 9880413134/ 6362718455

Agricultural Land

Mysore Road

"CONTACT FOR Selling/Buying Lands Near Ramnagar, Chanapatna, Sathnur,Halgur Areas (Prefect Transaction and Documentation Assured) 9845178335"

Hosur

HOSUR AGRICULTURAL Land for sale 1.5acre 320x200feet 500meters from STRR Bagalur 3crores. Contact: 9945033366

Commercial Land

Kengeri

SALE- CONVERTED Betterment Paid Land extent 35000 sqft A Khata. E Khata available. Opp to Kengeri Metro Station. Rs. 12000 per sqft. Brokers Excuse. Contact: 9880459141.

Yeshwanthpur

LAND FOR SALE Prime Corner LAND For SALE GURGUNTEPALYA Junction Yeshwanthpur TUMKUR ROAD 25,000 sft . BDA For: Hotel. Hospital Commercial. Retail Contact: 80506 34666 73378 44260

Commerical

Yeshwanthpur

FOR SALE: Premium 4500SFT fully-furnished office`space with OC`pre-leased to`150`year old Switzerland Company fetching 3.2L.monthly rental`income in`Yeshwanthpur Price:15k/sft. Call:9916055055

Industrial & Factory

Hoskote

PRIME INDUSTRIAL LAND FOR SALE 1 Acre at KIADB Hosakote. Call: 7795990009 9743508995

Out-Station

INDUSTRIAL PLOT for sale At shivamogga 18000 Sqft.Land , 15 H.P. Power with Shed.. Genuine Buyers contact: Mobile: 9448850414/9480265208

INDUSTRIAL PLOT for sale At shivamogga 18000 Sqft.Land , 15 H.P. Power with Shed.. Genuine Buyers contact: Mobile: 9448850414/9480265208

Residential/ Commercial

Multiple Locations

LANDS AVAILABLE FOR SALE BIDADI, RAMANAGAR, CHANNAPATTANA, NELAMANGALA, DEVANAHALLI, DABASPETE, STRR Road, HOSAKOTE Extent of 1, 2, 5, 25 upto 50 ACRES Suitable For Warehouse, Industrial, Villa Plots, and Farmhouse. CALL: 9845 488 488

Old Madras Road

FOR SALE A KHATA OMR MAIN ROAD FACING SHOWROOM/ COMMERCIAL PROPERTY. SUITABLE FOR OFFICE/INSTITUTE/BPO/CLINIC CONTACT 9948661379

Commercial Building

Malleshwaram

FULLY FURNISHED 16,000sft. A/C Showroom For RENT/SALE On Prime Busy Commercial Area, 8th Cross, Malleswaram. 9845358544/ 9448477419

REAL ESTATE BUYING

Sites

Bannerghatta Road

WANTED FOR direct buyer 30x40 site in Nandanavana, Nisarga Layout, Bannerghatta Road, Owner's only- 9739995042

R T Nagar

WANTED SITE/ Flat in and Around RT Nagar, Sultanpalya. For immediate Settlement.Contact: 9845575731

Vijayanagar

VIJAYANAGARA/ M C layout Wanted 60x40/ 40x50 vacant site/ building, East/ North facing only. contact immediately 9901985699. No brokers please

Vishweshwariah Layout

BUYING/ SELLING 20x30,30x40,40x60 50x80 BDA sites VISHWESHWARAIAH LAYOUT,BSK 6th-stage KEMPEGOWDA-LAYOUT.Contact: 9844533371/ 9341733480

RENTAL PROPERTIES

Accommodation Available

Commercial

BASAVANAGUDI NORTH East Corner Office Space Available for Rent on the 1st, 2nd,and 3rd floors Near Kalidasa Circle Bus Stand.Suitable for offices.Contact: 9900555550

Flats

FULLY FURNISHED Senior Living in Devanahalli. 2BHK. 33K including maintenance. 9482562481

MALLESWARAM: NEAR Vidyamandir. 2BHK Flat 1000sft. Vegetarians, Rent 40000/-. Plus Maintenance (Slightly Negotiable). 9845243757

House

RENT- NEWLY Built Duplex 4BHK House with Lift, Modular Kitchen, Carparking, Semi-furnished, Veg only. @ BCMC Layout Close to Vajarahalli Metro Station Kanakapura Road. Call:9845050263

MORE Classifieds Ads on Subsequent Pages

‘ಪಿಟಿಸಿಎಲ್: ಅಸಾಂವಿಧಾನಿಕ ತೀರ್ಪು ಸಹಿಸಲ್ಲ’


ಸಾರ್ವಜನಿಕ ಅಹವಾಲು ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಮೂರ್ತಿ ಗೋಪಾಲ ಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಸಾಂವಿಧಾನಿಕ, ಅಸಂಬದ್ಧ ತೀರ್ಪುಗಳನ್ನು ನ್ಯಾಯಮೂರ್ತಿಗಳು ನೀಡಿದರೆ ಜನರು ಸಹಿಸುವುದಿಲ್ಲ. ಪ್ರಶ್ನೆ ಮಾಡಲಿದ್ದಾರೆ. ಜನ ಪ್ರವಾಹದಂತೆ ಹರಿದು ಬರಲಿದ್ದಾರೆ. ಆಗ ಇಂಥ ತೀರ್ಪುಗಳು ಉಳಿಯುವುದಿಲ್ಲ’ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲ ಗೌಡ ಹೇಳಿದರು.

ಆಲ್ ಇಂಡಿಯಾ ಲಾಯರ್ಸ್ ಅಸೋಸಿಯೇಷನ್ ಫಾರ್ ಜಸ್ಟೀಸ್ (ಎಐಎಲ್‌ಎಜೆ), ಮಂಥನ್ ಲಾ, ಆಲ್ಟರ್ನೇಟಿವ್ ಲಾ ಫೋರಮ್ (ಎಎಲ್‌ಎಫ್), ಪಿಟಿಸಿಎಲ್ ಕಾಯ್ದೆ ಭೂಮಿ ವಂಚಿತರ ಹೋರಾಟ ಸಮಿತಿ ಮತ್ತು ಸ್ವತಂತ್ರ ಪ್ರಗತಿಪರ ಸಂಶೋಧಕರು ಶನಿವಾರ ಹಮ್ಮಿಕೊಂಡಿದ್ದ ‘ಪಿಟಿಸಿಎಲ್ ಕಾಯ್ದೆ-1978ರ ಅನುಷ್ಠಾನದಲ್ಲಿನ ಸಮಸ್ಯೆಗಳು’ ಕುರಿತ ರಾಜ್ಯ ಮಟ್ಟದ ಸಾರ್ವಜನಿಕ ಅಹವಾಲು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಪಿಟಿಸಿಎಲ್ ಕಾಯ್ದೆಯಡಿ ವಿಳಂಬವಾಗಿ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು ಅರ್ಜಿಯನ್ನು ತಿರಸ್ಕರಿಸಿದ್ದಾರೆ. ಕಾಲಮಿತಿಯನ್ನು ಯಾವ ಆಧಾರದಲ್ಲಿ ವಿಧಿಸಿದ್ದೀರಿ? ಕಾಯ್ದೆಯ ಸೆಕ್ಷನ್ 5ಕ್ಕೆ ಕಾಲಮಿತಿ ಹೇಗೆ ಸೇರಿಸಿದ್ದೀರಿ? ಕಾನೂನಿನಲ್ಲಿ ಇಲ್ಲದೇ ಇರುವುದನ್ನು ಸೇರಿಸುವ ಅಧಿಕಾರವನ್ನು ನಿಮಗೆ ಕೊಟ್ಟವರು ಯಾರು? ಸಂವಿಧಾನದ ಆಶಯಕ್ಕೆ, ರಾಜ್ಯ ನೀತಿಯ ನಿರ್ದೇಶನ ತತ್ವಗಳಿಗೆ ವಿರುದ್ಧವಾಗಿ ತೀರ್ಪು ನೀಡುವವರು ನ್ಯಾಯಾಧೀಶರು ಹೇಗಾಗುತ್ತಾರೆ’ ಎಂದು ಪ್ರಶ್ನಿಸಿದರು.



ಪಿಟಿಸಿಎಲ್ ಕಾಯ್ದೆಯ ಅನುಷ್ಠಾನದಲ್ಲಿರುವ ಸಮಸ್ಯೆಗಳ ಕುರಿತು ಸಾರ್ವಜನಿಕ ಅಹವಾಲು ಕಾರ್ಯಕ್ರಮದಲ್ಲಿ ತೀರ್ಪುಗಾರ ಮಂಡಳಿ ಸದಸ್ಯರಾದ ಜ್ಯೋತಿ ರಾಜ್, ಎಸ್‌ಎಂ. ಜಾಮದಾರ, ನ್ಯಾ. ವಿ.ಗೋಪಾಲ ಗೌಡ, ಡಿ. ತಂಗರಾಜ್ ಮತ್ತು ಎಚ್‌ಎಲ್ ವೆಂಕಟೇಶ್ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

‘ಕಾಲಮಿತಿಯ ಕಾರಣ ನೀಡಿ ಅರ್ಜಿ ತಿರಸ್ಕರಿಸಿರುವುದು ಮಂಚೇಗೌಡ ಮತ್ತು ಇತರರು ಹಾಗೂ ಕರ್ನಾಟಕ ರಾಜ್ಯ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಮೂವರು ನ್ಯಾಯಮೂರ್ತಿಗಳ ಪೀಠ ನೀಡಿದ ತೀರ್ಪಿನ ಉಲ್ಲಂಘನೆಯಾಗಿದೆ. ಕಾನೂನು ತಿಳಿದುಕೊಳ್ಳಬೇಕು. ಇಲ್ಲದೇ ಇದ್ದರೆ ನಾವೇ ಕಾನೂನು ತಿಳಿಸುವ ಕೆಲಸ ಮಾಡುತ್ತೇವೆ’ ಎಂದು ಎಚ್ಚರಿಸಿದರು.

ರಾಜ್ಯಾಂಗ, ಕಾರ್ಯಾಂಗ, ನ್ಯಾಯಾಂಗಗಳಲ್ಲಿ ಬಡವರ ಬಗ್ಗೆ, ಎಸ್‌ಸಿ, ಎಸ್‌ಟಿ, ಹಿಂದುಳಿದವರು, ಮಹಿಳೆಯರು, ರೈತರ ಸಮಸ್ಯೆ ಬಗ್ಗೆ ಕಾಳಜಿ ಇರುವವರು ಇಲ್ಲದೇ ಇರುವುದರಿಂದಲೇ ಪಿಟಿಸಿಎಲ್ ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ. ಇದಕ್ಕೆ ಕಾರಣರಾದ ಅಧಿಕಾರಿಗಳನ್ನು ವಜಾ ಮಾಡಬೇಕು ಎಂದು ಆಗ್ರಹಿಸಿದರು.


ನಿವೃತ್ತ ಐಎಎಸ್ ಅಧಿಕಾರಿ ಎಸ್.ಎಂ.ಜಾಮದಾರ ಮಾತನಾಡಿ ‘ಪಿಟಿಸಿಎಲ್ ಕಾಯ್ದೆಯು ಸಾಮಾಜಿಕ ಅನ್ಯಾಯಕ್ಕೆ ಹಿಡಿದ ಕನ್ನಡಿ. ಸಾವಿರಾರು ವರ್ಷಗಳಿಂದ ಸಾಮಾಜಿಕ ಅನ್ಯಾಯ ಮಾಡುತ್ತಾ ಬರಲಾಗಿದ್ದು, ಸ್ವಾತಂತ್ರ್ಯ ನಂತರವೂ ಮುಂದುವರಿದಿದೆ. ವೈದಿಕಶಾಹಿ ಮನಸ್ಥಿತಿಗಳೇ ಅಧಿಕಾರ ಸ್ಥಾನದಲ್ಲಿ ಇರುವುದರಿಂದ ಅವರ ಮನಸ್ಸನ್ನು ಬದಲಾಯಿಸಲು ಆಗುತ್ತಿಲ್ಲ. ಈ ಅನ್ಯಾಯದ ವಿರುದ್ಧ ರಾಜ್ಯ ಮಾತ್ರವಲ್ಲ, ರಾಷ್ಟ್ರಮಟ್ಟದಲ್ಲಿ ಚಳವಳಿ ಕಟ್ಟಬೇಕು’ ಎಂದು ಹೇಳಿದರು.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ರಾಮನಗರ ಮತ್ತು ದಾವಣಗೆರೆ ಜಿಲ್ಲೆಗಳಿಂದ ಬಂದ ಸಂತ್ರಸ್ತರು ತಮ್ಮ ಅಹವಾಲುಗಳನ್ನು ಸಲ್ಲಿಸಿದರು.

ಪಿಟಿಸಿಎಲ್ ಕಾಯ್ದೆಯಲ್ಲಿರುವ ಲೋಪಗಳನ್ನು ಸರಿಪಡಿಸಲು ಮತ್ತು ಅನುಷ್ಠಾನದಲ್ಲಿ ಆಗುತ್ತಿರುವ ತೊಡಕುಗಳನ್ನು ನಿವಾರಿಸಲು ಸರ್ಕಾರಕ್ಕೆ ಶಿಫಾರಸುಗಳನ್ನು ಮಾಡಲಾಗುವುದು. ಕರ್ತವ್ಯ ನಿರ್ವಹಿಸಿದ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ತಿಳಿಸಲಾಗುವುದು ಎಂದು ತೀರ್ಪುಗಾರರ ಮಂಡಳಿ ಸದಸ್ಯರು ತಿಳಿಸಿದರು. ಕಾಯ್ದೆಯಲ್ಲಿರುವ ಕಾನೂನು ತೊಡಕುಗಳ ಬಗ್ಗೆ ವಕೀಲ ಕ್ಲಿಫ್ಟನ್ ಡಿ'ರೋಜಾರಿಯೊ ಮಾತನಾಡಿದರು.

ನಿವೃತ್ತ ಐಎಎಸ್ ಅಧಿಕಾರಿ ಡಿ. ತಂಗರಾಜ್, ಭೂಶಕ್ತಿ ಕೇಂದ್ರ ಅಧ್ಯಕ್ಷೆ ಜ್ಯೋತಿ ರಾಜ್, ಪಿಟಿಸಿಎಲ್ ಕಾನೂನು ತಜ್ಞ ಎಚ್.ಎಲ್. ವೆಂಕಟೇಶ್, ಹೋರಾಟ ಸಮಿತಿಯ ಅಧ್ಯಕ್ಷ ಮಂಜುನಾಥ್ ಉಪಸ್ಥಿತರಿದ್ದರು.


7 ಮಂದಿಗೆ ‘ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ’



ಡಿ.ಎಸ್‌.ಚೌಗಲೆ



ಓರ್ಗಲ್ಲಯ್ಯ ದ್ವಾರನಕುಂಟೆ



ಗುರುನಾಥ ಅಕ್ಕಣ್ಣ



ಸುಕನ್ಯಾ ಸೂನಗಹಳ್ಳಿ



ಸುಜಾತಾ ಚಲವಾದಿ



ವಿನಯ ಗುಂಟೆ



ಶೋಭಾ ನಾಯಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾಭಿಮಾನಿ ಕರ್ನಾಟಕ ವೇದಿಕೆ ನೀಡುವ 2025ನೇ ಸಾಲಿನ ‘ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ’ಗೆ ಸಾಹಿತ್ಯದ ವಿವಿಧ ಪ್ರಕಾರಗಳ ಏಳು ಕೃತಿಗಳು ಆಯ್ಕೆಯಾಗಿವೆ.

ರಂಗಭೂಮಿ ಲೇಖನಗಳು ವಿಭಾಗದಲ್ಲಿ ಡಿ.ಎಸ್. ಚೌಗಲೆ ಅವರ ‘ಥರ್ಡ್ ಬೆಲ್’, ಸಂಕೀರ್ಣ ವಿಭಾಗದಲ್ಲಿ ಸುಕನ್ಯಾ ಸೂನಗಹಳ್ಳಿ ಅವರ ‘ಕಬ್ಬಿನ ಸಿಹಿ ವರ್ಧಿಸುವ ಅಮ್ಮ ಡಾ.ಜಾನಕಿ ಅಮ್ಮಾಳ್’, ಓರ್ಗಲ್ಲಯ್ಯ ದ್ವಾರನಕುಂಟೆ ಅವರ ‘ವಿಶ್ವ ವಿಸ್ಮಯ’, ಕಾದಂಬರಿ ವಿಭಾಗದಲ್ಲಿ ಗುರುನಾಥ ಅಕ್ಕಣ್ಣ ಅವರ ‘ಕೊಂಡವರುಳಿದರೇ’, ಕಥಾ ಸಂಕಲನ ವಿಭಾಗದಲ್ಲಿ ವಿನಯ ಗುಂಟೆ ಅವರ ‘ಬನದ ಕರಡಿ’, ಕವನ ಸಂಕಲನ ವಿಭಾಗದಲ್ಲಿ ಶೋಭಾ ನಾಯಕ ಅವರ ‘ಅರ್ಧ ಮುಖಗಳ ಶಹರು’ ಕೃತಿ ಆಯ್ಕೆಯಾಗಿದೆ.

ಪ್ರಬಂಧ ಸಂಕಲನ ವಿಭಾಗದಲ್ಲಿ ನೀಡುವ ‘ಡಾ. ಸಿ. ಸೋಮಶೇಖರ್ ಮತ್ತು ಶ್ರೀಮತಿ ಸರ್ವಮಂಗಳ ದತ್ತಿ ಪ್ರಶಸ್ತಿ’ಗೆ ಸುಜಾತಾ ಚಲವಾದಿ ಅವರ ‘ಮನುಷ್ಯ ಮತ್ತು ಪ್ರೀತಿ’ ಕೃತಿ ಭಾಜನವಾಗಿದೆ. ಪ್ರಶಸ್ತಿಯು ಪ್ರಬಂಧ ಸಂಕಲನ ವಿಭಾಗದಲ್ಲಿ ₹ 5 ಸಾವಿರ ಹಾಗೂ ಉಳಿದ ವಿಭಾಗದಲ್ಲಿ ತಲಾ ₹2,500 ನಗದು ಒಳಗೊಂಡಿದೆ.

ಇದೇ 13ರಂದು ಸಂಜೆ 5 ಗಂಟೆಗೆ ಶೇಷಾದ್ರಿಪುರಂ ಕಾಲೇಜಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಸ: ತಕ್ಷಣ ತೆರವಿಗೆ ತಾಕೀತು

ಬ್ಲ್ಯಾಕ್‌ಸ್ಪಾಟ್‌ಗಳ ಗುರುತು: ಲೋಕಾಯುಕ್ತ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಆರ್.ಟಿ.ನಗರ, ಬ್ಯಾಟರಾಯನಪುರ, ಆನಂದನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳ ವ್ಯಾಪ್ತಿಯ ರಸ್ತೆಯಲ್ಲಿ ರಾಶಿ ಹಾಕಲಾಗಿರುವ ಕಸವನ್ನು ತಕ್ಷಣವೇ ತೆರವು ಮಾಡಿ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಪಾಲಿಕೆಗಳ ಅಧಿಕಾರಿಗಳಿಗೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ತಾಕೀತು ಮಾಡಿದರು.

ರಸ್ತೆಯಲ್ಲೇ ಕಸ ಹಾಕುತ್ತಿರುವ ಮತ್ತು ಹಲವು ದಿನಗಳವರೆಗೂ ಅದನ್ನು ತೆರವು ಮಾಡದೇ ಇರುವ ಬಗ್ಗೆ ಲೋಕಾಯುಕ್ತ ಸಂಸ್ಥೆಗೆ ದೂರುಗಳು ಬಂದಿದ್ದವು. ತನಿಖೆಯ ಭಾಗವಾಗಿ ಲೋಕಾಯುಕ್ತರು ಈ ಸ್ಥಳಗಳಿಗೆ ದಿಢೀರ್ ಭೇಟಿ ನೀಡಿದರು.

ಸಾರ್ವಜನಿಕ ಸ್ಥಳಗಳಲ್ಲಿ, ರಸ್ತೆಗಳಲ್ಲಿ ಕಸವನ್ನು ರಾಶಿ ಹಾಕಿರುವುದು ಲೋಕಾಯುಕ್ತರ ಭೇಟಿಯ ವೇಳೆ ಗೊತ್ತಾಯಿತು. ಅವುಗಳನ್ನು ಬ್ಲ್ಯಾಕ್‌ಸ್ಪಾಟ್‌ಗಳೆಂದು ಗುರುತು ಮಾಡಿ, ಕಸವನ್ನು ತೆರವು ಮಾಡಲು ತಕ್ಷಣವೇ ಕ್ರಮ ತೆಗೆದುಕೊಳ್ಳಿ. ಶೀಘ್ರವೇ ವರದಿ ಸಲ್ಲಿಸಿ ಎಂದು ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಐದು ತಂಡಗಳ ಭೇಟಿ: ಜಿಬಿಎಯ ಐದೂ ಪಾಲಿಕೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳಗಳಲ್ಲೇ ಕಸ ರಾಶಿ ಹಾಕುತ್ತಿರುವುದನ್ನು ಗುರುತಿಸಿ, ಅವುಗಳನ್ನು ಬ್ಲ್ಯಾಕ್‌ಸ್ಪಾಟ್‌ಗಳೆಂದು ವರ್ಗೀಕರಿಸಲು ಲೋಕಾಯುಕ್ತರು ಐದು ತಂಡಗಳನ್ನು ರಚಿಸಿದ್ದಾರೆ. ಲೋಕಾಯುಕ್ತದ ತಾಂತ್ರಿಕ ವಿಭಾಗದ ಅಧಿಕಾರಿಗಳನ್ನು ಒಳಗೊಂಡ ಈ ಐದು ತಂಡಗಳು ನಗರದ ವಿವಿಧ ಭಾಗಗಳಿಗೆ ಶುಕ್ರವಾರ ಭೇಟಿ ನೀಡಿ, ಪರಿಶೀಲನೆ ನಡೆಸಿವೆ.



ಆರ್‌.ಟಿ.ನಗರ 1ನೇ ಬ್ಲಾಕ್‌ನ 12ನೇ ಅಡ್ಡರಸ್ತೆಯಲ್ಲಿ ರಾಶಿ ಹಾಕಲಾಗಿರುವ ಕಸವನ್ನು ಹಲವು ದಿನಗಳಿಂದ ತೆರವು ಮಾಡದಿರುವ ಬಗ್ಗೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್‌.ಪಾಟೀಲ ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು

13ಕ್ಕೆ ಪ್ರಶಸ್ತಿ ಪ್ರದಾನ

ಬೆಂಗಳೂರು: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯು ವ್ಯಂಗ್ಯಚಿತ್ರಕಾರ್ತಿ ಮಾಯಾ ಕಾಮತ್ ಅವರ 75ನೇ ಜನ್ಮದಿನದ ಪ್ರಯುಕ್ತ ಆಯೋಜಿಸಿದ್ದ ‘ಮಾಯಾ ಕಾಮತ್ ಸ್ಮಾರಕ ವ್ಯಂಗ್ಯಚಿತ್ರ ಸ್ಪರ್ಧೆ’ಯ ವಿಜೇತರು ಹಾಗೂ ವ್ಯಂಗ್ಯಚಿತ್ರಕಾರ ಸುಭಾನಿ ಅವರಿಗೆ ‘ಬಾರ್ಟನ್ ಪ್ರಶಸ್ತಿ 2026’ ಪ್ರದಾನ ಮಾಡಲಾಗುತ್ತದೆ.

ಜೂನ್ 13ರಂದು ದಿ ಪ್ರೆಸಿಡೆಂಟ್ ಹೋಟೆಲ್‌ನಲ್ಲಿ ಬೆಳಿಗ್ಗೆ 10.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಚಿತ್ರ ಕಲಾವಿದ ಬಾಲನ್ ನಂಬಿಯಾರ್, ಶಿಲ್ಪಿ ಸಿ.ಎಸ್. ಲಕ್ಷ್ಮೀ, ವ್ಯಂಗ್ಯಚಿತ್ರಕಾರ ಸಂದೀಪ ಅಧ್ವರ್ಯ, ಟ್ರಸ್ಟಿ ಅಮರನಾಥ ಕಾಮತ್, ಭರತ ಮೆಹತಾ ಭಾಗವಹಿಸುವರು.

ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿಯಲ್ಲಿ ವಿದೇಶಿ ವ್ಯಂಗ್ಯಚಿತ್ರ ಪ್ರದರ್ಶನ ಜೂ. 27ರವರೆಗೆ ಏರ್ಪಡಿಸಲಾಗಿದೆ.

ಸಾಧಕರಿಗೆ ಪ್ರಶಸ್ತಿ ಪ್ರದಾನ

ಬೆಂಗಳೂರು: ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಎಂ.ಎಸ್.ಅಭಿಜಿತ್, ಜಿ.ಕೆ. ಬಾಲಾಜಿ, ಆರ್.ಭರತ್, ಇಂದಿರಾ ಶ್ಯಾಮ ಪ್ರಸಾದ್, ಮಂಚನಬೆಲೆ ಶ್ರೀನಿವಾಸ್, ಸತೀಶ್ ಮಲ್ಲಾರಿಕಾಡ್ ಅವರನ್ನು ನಗರದ ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ವಿದ್ಯಾ ಮಂದಿರದಲ್ಲಿ ಸನ್ಮಾನಿಸಲಾಯಿತು.

ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರ 70ನೇ ಜನ್ಮದಿನ ಪ್ರಯುಕ್ತ ಆಯೋಜಿಸಿದ್ದ ಸಮಾರಂಭದಲ್ಲಿ ಮಾತನಾಡಿದ ದಿ ಆರ್ಟ್ ಆಫ್ ಲಿವಿಂಗ್‌ನ ರಮಾನಂದ ರಾವ್, ‘ಜನರ ಕಲ್ಯಾಣಕ್ಕೆ ಸಮಯ, ಶ್ರಮವನ್ನು ಮುಡಿಪಾಗಿಡುವ ನಿಸ್ವಾರ್ಥ ಜನಸೇವಕರಿಂದ ಮಾತ್ರ ಸಮಾಜ ಮತ್ತು ದೇಶವು ಬಲಗೊಳ್ಳುತ್ತದೆ’ ಎಂದರು.

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕ ಸಿದ್ದಲಿಂಗಪ್ಪ ಬಿ. ಪೂಜಾರಿ, ಮಾರ್ಸ್ ಹೋಮ್‌ಬೇಸ್ ಸಂಸ್ಥೆಯ ನಿರ್ದೇಶಕ ಕೃಷ್ಣಮೂರ್ತಿ ಮಂಜುನಾಥ್, ಸ್ವಾಮಿ ಶರಣಾನಂದ, ಪ್ರಸಾದ್ ಕೊನ್ನಾರ್, ಆನಂದ್ ರಾಜೇಂದ್ರನ್ ಪಾಲ್ಗೊಂಡಿದ್ದರು.

ಬಾಲಕಿ ಹತ್ಯೆ: ತಾಯಿ, ಪ್ರಿಯಕರನ ಮೇಲೆ ಶಂಕೆ

ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಬಯಲಾದ ಕೊಲೆ ರಹಸ್ಯ

• ಬಾಲಕಿಯದ್ದು ಸಹಜ ಸಾವು ಎಂದು ಬಿಂಬಿಸಿದ್ದ ಆರೋಪಿಗಳು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕಾಡುಗೋಡಿ ಠಾಣಾ ವ್ಯಾಪ್ತಿಯ ಸೀಗೇಹಳ್ಳಿ ವಿಲ್ಲಾದಲ್ಲಿ ಘಟನೆ
- ಎಫ್‌ಎಸ್‌ಎಲ್ ವರದಿ ಬಂದ ಬಳಿಕ ಸ್ಪಷ್ಟತೆ ಸಿಗಲಿದೆ: ಪೊಲೀಸರು

ಬೆಂಗಳೂರು: ಕಾಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಾರ್ಚ್ 24ರಂದು ಆರು ವರ್ಷದ ಬಾಲಕಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದ ಪ್ರಕರಣಕ್ಕೆ ಈಗ ತಿರುವು ಸಿಕ್ಕಿದ್ದು, ತಾಯಿ ಹಾಗೂ ಆಕೆಯ ಪ್ರಿಯಕರನ ಮೇಲೆ ಕೊಲೆ ಶಂಕೆ ವ್ಯಕ್ತವಾಗಿದೆ.

ಬಾಲಕಿಯ ತಂದೆ ಪ್ರವೀಣ್ ನೀಡಿದ ದೂರಿನ ಮೇಲೆ ಪತ್ನಿಯ ಪ್ರಿಯಕರ ಮೋಹನ್ ಎಂಬುವವರನ್ನು ಕಾಡುಗೋಡಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಪ್ರಿಯಾಂಕಾ ತಲೆಮರೆಸಿಕೊಂಡಿದ್ದು, ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಆರಂಭದಲ್ಲಿ ಬಾಲಕಿಯದ್ದು ಸಹಜ ಸಾವು ಎಂದೇ ಆರೋಪಿಗಳು ಬಿಂಬಿಸಿದ್ದರು. ಆದರೆ, ಮರಣೋತ್ತರ ಪರೀಕ್ಷೆಯಿಂದ ಬಾಲಕಿಗೆ ಒದ್ದು ಉಸಿರು ಗಟ್ಟಿಸಿ ಕೊಲೆ ಮಾಡಲಾಗಿದೆ ಎಂಬುದು ಕಂಡುಬಂದಿದೆ. ಕಾಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯ ಸೀಗೇಹಳ್ಳಿ ವಿಲ್ಲಾದಲ್ಲಿ ಘಟನೆ ನಡೆದಿದ್ದು, ಬಾಲಕಿಯ ತಾಯಿ ಪ್ರಿಯಾಂಕಾ ಹಾಗೂ ಆಕೆಯ ಪ್ರಿಯಕರ ಮೋಹನ್ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದೆ.

ದಾವಣಗೆರೆಯ ಪ್ರವೀಣ್ ಹಾಗೂ ಬೆಂಗಳೂರಿನ ಪ್ರಿಯಾಂಕಾ ಅವರು 2007ರಲ್ಲಿ ಮದುವೆ ಆಗಿದ್ದರು. ಈ ದಂಪತಿಗೆ 17 ವರ್ಷ ಹಾಗೂ 6 ವರ್ಷದ ಇಬ್ಬರು ಹೆಣ್ಣುಮಕ್ಕಳಿದ್ದಾರೆ.

‘ಕೆಲವು ತಿಂಗಳ ಹಿಂದೆ ಪ್ರಿಯಾಂಕಾಗೆ ಕಾಲೇಜು ಗೆಳೆಯ ಮೋಹನ್ ಭೇಟಿ ಆಗಿದ್ದರು. ಇಬ್ಬರೂ ಮತ್ತೆ ಸ್ನೇಹ ಬೆಳೆಸಿ ಸುತ್ತಾಟ ನಡೆಸುತ್ತಿದ್ದರು. ಈ ವಿಷಯ ಪತಿ ಪ್ರವೀಣ್‌ಗೆ ಗೊತ್ತಾಗಿ ಪ್ರಶ್ನಿಸಿದ್ದರು. ಮನೆಯಲ್ಲೂ ಇದೇ ವಿಚಾರಕ್ಕೆ ಪ್ರತಿನಿತ್ಯ ಗಲಾಟೆ ನಡೆಯುತ್ತಿತ್ತು. ಬಳಿಕ ಪತಿಗೆ ವಿಚ್ಛೇದನ ನೀಡಿದ್ದ ಪ್ರಿಯಾಂಕಾ, ಕಾಡುಗೋಡಿಯ ಪ್ರಿಯಕರನ ಮನೆಗೆ ತೆರಳಿದ್ದರು. ಕಿರಿಯ ಮಗಳನ್ನೂ ಜತೆಗೆ ಕರೆದೊಯ್ದಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಾರ್ಚ್ 24ರಂದು ಚಿಕ್ಕ ಮಗಳು ಅನುಮಾನಾಸ್ಪದವಾಗಿ ಮೃತಪಟ್ಟಿದ್ದಳು. ಮಗಳ ಸಾವಿನ ಬಗ್ಗೆ ಪ್ರವೀಣ್ ಅವರು ಪ್ರಿಯಾಂಕಾ ಅವರನ್ನು ಪ್ರಶ್ನಿಸಿದ್ದರು. ಮಗುವಿಗೆ ಬಿರಿಯಾನಿ ಮತ್ತು ಐಸ್‌ಕ್ರೀಮ್ ಕೊಡಿಸಿದ್ದೆ. ಬಳಿಕ ಕಾರಿನಲ್ಲಿ ಎ.ಸಿ ಹಾಕಿ ಮಲಗಿಸಿದ್ದೆ. ರಾತ್ರಿ ಮನೆಗೆ ಹೋದಾಗ ಮಗು ಚೆನ್ನಾಗಿಯೇ ಇತ್ತು. ಆದರೆ, ಬೆಳಿಗ್ಗೆ ನೋಡುವಷ್ಟರಲ್ಲಿ ಮೃತಪಟ್ಟಿತ್ತು ಎಂದು ಹೇಳಿದ್ದರು. ಆದರೂ ಅನುಮಾನ ಬಂದು ಪ್ರವೀಣ್ ಅವರು ಮಗಳ ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿದ್ದರು’ ಎಂದು ಮೂಲಗಳು ಹೇಳಿವೆ.

ಬೆದರಿಸಿ ಸಹಿ ಪಡೆದಿದ್ದ ಪ್ರಿಯಾಂಕಾ

‘ಏಕಾಂಗಿಯಾಗಿ ಕಾಶಿಗೆ ಹೋಗಿ ಬರುತ್ತೇನೆ ಎಂದು ಪತ್ನಿ ಆರು ತಿಂಗಳ ಹಿಂದೆ ಹೇಳಿದ್ದಳು. ನಂತರ, ದುಬೈಗೆ ಹೋಗಿ ಬರುತ್ತೇನೆ ಎಂದೂ ಹೇಳಿದ್ದಳು. ಇಬ್ಬರೂ ಮಕ್ಕಳನ್ನು ನನ್ನ ಬಳಿಯೇ ಬಿಟ್ಟು ಹೋಗಿದ್ದಳು. ಅದಾದ ಮೇಲೆ ಗಲಾಟೆ ಆರಂಭಿಸಿದ್ದಳು. ಯಾವ ಕಾರಣಕ್ಕೆ ಗಲಾಟೆ ಮಾಡುತ್ತಿದ್ದೀಯಾ ಎಂದು ಪ್ರಶ್ನಿಸಿದಾಗ, ವಿಚ್ಛೇದನ ಕೊಡುವಂತೆ ಬೆದರಿಕೆ ಹಾಕಿದ್ದಳು. ಅರ್ಜಿಗೆ ಸಹಿ ಹಾಕದಿದ್ದರೆ ಮಕ್ಕಳನ್ನೂ ಜೀವಂತ ಇರಲು ಬಿಡುವುದಿಲ್ಲವೆಂದು ಬೆದರಿಸಿದ್ದಳು. ಹೆದರಿ ನಾನೂ ಸಹಿ ಹಾಕಿದ್ದೆ’ ಎಂದು ಪ್ರವೀಣ್ ಹೇಳಿದರು.

ಅರ್ಜಿಗೆ ಸಹಿ ಹಾಕಿದ ಮೇಲೆ ದಾವಣಗೆರೆಗೆ ತೆರಳಿದ್ದೆ. ನಂತರ ಕರೆ ಮಾಡಿದ್ದ ಪತ್ನಿ, ಮೋಹನ್ ಜತೆಗೆ ಮದುವೆ ಆಗಿದೆ. ಬೇಕಾದರೆ 15 ದಿನಕ್ಕೊಮ್ಮೆ ಮಕ್ಕಳನ್ನು ನೋಡಿಕೊಂಡು ಹೋಗಬಹುದು ಎಂದು ಹೇಳಿದ್ದಳು. ಮಾರ್ಚ್ 23ರಂದು ಪ್ರಿಯಾಂಕಾ ಅವರ ಅಣ್ಣ ಕರೆ ಮಾಡಿ ವೈಟ್‌ಫೀಲ್ಡ್‌ಗೆ ಬರುವಂತೆ ಹೇಳಿದ್ದರು. ದಾವಣಗೆರೆಯಿಂದ ಬಂದು ಪರಿಶೀಲಿಸಿದಾಗ ಮಗಳು ಮೃತಪಟ್ಟಿದ್ದಳು ಎಂದು ಪ್ರವೀಣ್ ಹೇಳಿದರು.

‘ಸಂಬಂಧಕ್ಕೆ ಅಡ್ಡಿಯಾಗುವ ಭಯ ಹಾಗೂ ಮಗುವಿನ ಮೈಬಣ್ಣದ ಕಾರಣಕ್ಕೆ ಮಗಳನ್ನು ಕೊಲೆ ಮಾಡಲಾಗಿದೆ’ ಎಂದು ಪ್ರವೀಣ್ ಆರೋಪಿಸಿದ್ದಾರೆ.

ವಿದೇಶದ ವೈದ್ಯರಿಗೆ ವರದಿ ಕಳುಹಿಸಿದ್ದ ತಂದೆ

ಅಪರಾಧ ಸುದ್ದಿ

ಏಪ್ರಿಲ್ 4ರಂದು ಮರಣೋತ್ತರ ಪರೀಕ್ಷೆಯ ವರದಿ ಬಂದಿತ್ತು. ಆ ವರದಿಯನ್ನು ವಿದೇಶದಲ್ಲಿ ವೈದ್ಯರಾಗಿ ಕೆಲಸ ಮಾಡುತ್ತಿರುವ ಸ್ನೇಹಿತರೊಬ್ಬರಿಗೆ ಪ್ರವೀಣ್ ಕಳುಹಿಸಿದ್ದರು. ವರದಿ ಪರಿಶೀಲಿಸಿದ್ದ ಅವರು ‘ಇದು ಸಹಜ ಸಾವಿನಂತೆ ಕಾಣುತ್ತಿಲ್ಲ. ದೇಹದಲ್ಲಿ ಗಂಭೀರ ಹಲ್ಲೆಯ ಲಕ್ಷಣಗಳಿವೆ. ಉಸಿರು ಗಟ್ಟಿಸಿ ಸಾಯಿಸಲಾಗಿದೆ ಎಂಬುದಾಗಿ ಹೇಳಿದ್ದರು. ಅದಾದ ಮೇಲೆ ಪ್ರವೀಣ್ ಪೊಲೀಸರಿಗೆ ಅಧಿಕೃತವಾಗಿ ದೂರು ನೀಡಿದ್ದರು’ ಎಂದು ಮೂಲಗಳು ಹೇಳಿವೆ.

‘ವಿಧಿ ವಿಜ್ಞಾನ ಪ್ರಯೋಗಾಯಲದ (ಎಫ್‌ಎಸ್‌ಎಲ್) ವರದಿ ಬಂದ ಬಳಿಕ ಪ್ರಕರಣಕ್ಕೆ ಮತ್ತಷ್ಟು ಸ್ಪಷ್ಟತೆ ಸಿಗಲಿದೆ. ಸದ್ಯದಲ್ಲೇ ಎಫ್‌ಎಸ್‌ಎಲ್ ವರದಿ ಬರಲಿದೆ’ ಎಂದು ಪೊಲೀಸರು ಹೇಳಿದರು.


ಸುದ್ದಿ 2 ನಿಮಿಷ

‘ವೈದ್ಯರ ಮೇಲಿನ ಹಲ್ಲೆ ತಡೆಗೆ ಕಾನೂನು ಬಲಪಡಿಸಿ’

ಬೆಂಗಳೂರು: ರಾಜಸ್ಥಾನದಲ್ಲಿ ಡಾ.ಆನಂದ್ ಗುಪ್ತ ಅವರ ಮೇಲಿನ ದಾಳಿ ಖಂಡಿಸಿರುವ ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರ್ನಾಟಕ ಶಾಖೆ, ವೈದ್ಯರಿಗೆ ಸೂಕ್ತ ರಕ್ಷಣೆ ಒದಗಿಸಲು ಕಾನೂನು ಬಲಪಡಿಸುವಂತೆ ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿದೆ.

ಡಾ.ಆನಂದ್ ಗುಪ್ತ ಅವರು ಐಎಂಎ ರಾಜಸ್ಥಾನ ರಾಜ್ಯ ಘಟಕದ ಅಧ್ಯಕ್ಷರಾಗಿದ್ದಾರೆ. ಅವರು ಹಲ್ಲೆಗೊಳಗಾದ ತಮ್ಮ ಸಹೋದ್ಯೋಗಿ ಜೆ.ಪಿ. ಶರ್ಮ ಅವರನ್ನು ರಕ್ಷಿಸಲು ತೆರಳಿದಾಗ ದಾಳಿ ನಡೆದಿತ್ತು.

‘ವೈದ್ಯರ ರಕ್ಷಣೆ ಸರ್ಕಾರದ ಜವಾಬ್ದಾರಿ. ಆರೋಗ್ಯ ವೃತ್ತಿಪರರ ಮೇಲಿನ ನಿರಂತರ ದಾಳಿಗಳು ಭಯ ಮತ್ತು ಅಭದ್ರತೆಯ ವಾತಾವರಣ ಸೃಷ್ಟಿಸುತ್ತವೆ. ವೈದ್ಯಕೀಯ ಕ್ಷೇತ್ರದಲ್ಲಿರುವ ಹಾಗೂ ಪ್ರವೇಶಿಸುವವರಿಗೆ ಇಂತಹ ಘಟನೆಗಳು ನಿರುತ್ಸಾಹಗೊಳಿಸಿ, ಈ ಕ್ಷೇತ್ರದಲ್ಲಿನ ಪ್ರತಿಭೆಗಳು ಬೇರೆ ದೇಶಗಳಿಗೆ ವಲಸೆ ಹೋಗುವ ಸಾಧ್ಯತೆಯಿರುತ್ತದೆ’ ಎಂದು ಐಎಂಎ ಕರ್ನಾಟಕ ಶಾಖೆ ಅಧ್ಯಕ್ಷ ಡಾ.ವೀರಭದ್ರಯ್ಯ ಟಿ.ಎ. ತಿಳಿಸಿದ್ದಾರೆ.



‘ಸಾರ್ವಜನಿಕರು, ನಾಗರಿಕ ಸಮಾಜ ಸಂಸ್ಥೆಗಳು, ವೃತ್ತಿಪರ ಸಂಸ್ಥೆಗಳು ಇಂತಹ ಹಿಂಸಾಚಾರವನ್ನು ಖಂಡಿಸಬೇಕು. ವೈದ್ಯರು, ಆರೋಗ್ಯ ಸಂಸ್ಥೆಗಳನ್ನು ರಕ್ಷಿಸಲು ಕಠಿಣ ಕಾನೂನನ್ನು ಜಾರಿಗೆ ತರಬೇಕು. ಅಪರಾಧಿಗಳ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ.

₹2 ಲಕ್ಷ ಲಂಚ: ಮೂವರ ಸೆರೆ

ಬೆಂಗಳೂರು: ನಿಯಮ ಉಲ್ಲಂಘಿಸಿ ನಿರ್ಮಿಸಿದ್ದ ಕಟ್ಟಡದ ತೆರವಿಗಾಗಿ ನೀಡಿದ್ದ ನೋಟಿಸ್ ಅನ್ನು ವಜಾ ಮಾಡಲು ₹2 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಉತ್ತರ ಪಾಲಿಕೆಯ ಇಬ್ಬರು ಎಂಜಿನಿಯರ್ ಮತ್ತು ಮಾಹಿತಿ ಹಕ್ಕು ಕಾರ್ಯಕರ್ತರೊಬ್ಬರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಕಾಡುಗೋಡಿಯ ನಿವಾಸಿ ಪರಮೇಶ್ ವೆಂಕಟೇಶ್ ಎಂಬುವವರು ಕೊಡಿಗೆಹಳ್ಳಿಯ ಆರ್ಯನ್ ಎನ್‌ಕ್ಲೇವ್ ಅಪಾರ್ಟ್‌ಮೆಂಟ್‌ನಲ್ಲಿ ನಿರ್ಮಾಣ ಕಾಮಗಾರಿ ನಡೆಸುತ್ತಿದ್ದಾರೆ. ಅವರು ಅನುಮೋದಿತ ನಕ್ಷೆಯನ್ನು ಉಲ್ಲಂಘಿಸಿರುವ ಬಗ್ಗೆ ಕೊಡಿಗೆಹಳ್ಳಿ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಜಿ.ನಾಗಭೂಷಣ ಅವರು ನೋಟಿಸ್ ನೀಡಿದ್ದರು.

ನೋಟಿಸ್ ರದ್ದುಪಡಿಸುವಂತೆ ಕೋರಿ ಪರಮೇಶ್ ಅವರು ಅರ್ಜಿ ಸಲ್ಲಿಸಿದ್ದರು. ಈ ಕೆಲಸ ಮಾಡಿಕೊಡಲು ನಾಗಭೂಷಣ ಅವರು ಸಹಾಯಕ ಎಂಜಿನಿಯರ್ ಪ್ರವೀಣ್ ಎ.ಆರ್. ಮೂಲಕ ₹3 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಮಾತುಕತೆಯ ನಂತರ ₹2 ಲಕ್ಷ ಲಂಚಕ್ಕೆ ಒಪ್ಪಿಕೊಂಡಿದ್ದರು. ರಿಯಲ್ ಎಸ್ಟೇಟ್ ಏಜೆಂಟ್ ಮತ್ತು ಮಾಹಿತಿ ಹಕ್ಕು ಕಾರ್ಯಕರ್ತ ಮನ್ಸೂರ್ ಅಲಿ ಮಧ್ಯಸ್ಥಿಕೆಯಲ್ಲಿ ಈ ಮಾತುಕತೆ ನಡೆದಿತ್ತು. ಈ ಬಗ್ಗೆ ಪರಮೇಶ್ ಅವರು ದೂರು ನೀಡಿದ್ದರು.

ಲೋಕಾಯುಕ್ತ ಎಸ್‌ಪಿ ಶಿವಪ್ರಕಾಶ್ ದೇವರಾಜು ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ರೂಪಿಸಲಾಗಿತ್ತು. ಅದರಂತೆ ದೂರುದಾರರು ಆರೋಪಿಗಳ ಕಚೇರಿಗೆ ತೆರಳಿ ಪ್ರವೀಣ್ ಅವರಿಗೆ ಲಂಚದ ಹಣ ನೀಡಿದ್ದರು. ಇದೇ ವೇಳೆ ದಾಳಿ ನಡೆಸಿ ಮೂವರನ್ನೂ ಬಂಧಿಸಲಾಯಿತು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಮರಕ್ಕೆ ದ್ವಿಚಕ್ರ ವಾಹನ ಡಿಕ್ಕಿ: ಸವಾರ ಸಾವು

ಬೆಂಗಳೂರು: ಚಿಕ್ಕಬಾಣಾವಾರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಸೊಂಡೆಕೊಪ್ಪ ರಸ್ತೆಯ ಲಕ್ಕೇನಹಳ್ಳಿಯಲ್ಲಿ ದ್ವಿಚಕ್ರ ವಾಹನವು ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದು ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸೊಂಡೆಕೊಪ್ಪ ಬಾಣಸವಾಡಿ ನಿವಾಸಿ ನರಸಿಂಹಮೂರ್ತಿ(27) ಮೃತಪಟ್ಟವರು. ನರಸಿಂಹ ಮೂರ್ತಿ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಶುಕ್ರವಾರ ರಾತ್ರಿ ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದಾಗ ಲಕ್ಕೇನಹಳ್ಳಿ ಸಮೀಪ ಕಲ್ಲಿನ ಮೇಲೆ ಹತ್ತಿದ ದ್ವಿಚಕ್ರ ವಾಹನ ನಿಯಂತ್ರಣ ಕಳೆದುಕೊಂಡು ರಸ್ತೆಬದಿಯ ಮರಕ್ಕೆ ಅಪ್ಪಳಿಸಿದ್ದರಿಂದ ನರಸಿಂಹಮೂರ್ತಿ ಗಂಭೀರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ತಿಳಿಸಿದರು.

ಚಿಕ್ಕಬಾಣಾವಾರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಗ್ನೇಯ ವಿಭಾಗದ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲು

ಮದುವೆ ನೆಪ: ₹35 ಲಕ್ಷ ದೋಚಿದ ಯುವತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮ್ಯಾಟ್ರಿಮೋನಿಯಲ್ ವೆಬ್‌ಸೈಟ್’ ಮೂಲಕ ಪರಿಚಯವಾಗಿದ್ದ ಯುವತಿ ಹೂಡಿಕೆಯ ಹೆಸರಿನಲ್ಲಿ ಯುವಕನಿಂದ ₹35 ಲಕ್ಷ ದೋಚಿದ್ದು, ಆಗ್ನೇಯ ವಿಭಾಗದ ಸೈಬರ್ ಅಪರಾಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಅನಿಲ್‌ಕುಮಾರ್ ಎಂಬುವರು ವಂಚನೆಗೆ ಒಳಗಾಗಿದ್ದಾರೆ. ಅನಿಲ್ ಕುಮಾರ್ ನೀಡಿರುವ ದೂರು ಆಧರಿಸಿ, ಆಗ್ನೇಯ ವಿಭಾಗದ ಸೈಬರ್ ಠಾಣೆಯ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಬಲಿಜ ಸಮುದಾಯದ ಮ್ಯಾಟ್ರಿಮೋನಿಯಲ್ ವೆಬ್‌ಸೈಟ್‌ನಲ್ಲಿ ಅನಿಲ್ ಹೆಸರು ನೋಂದಣಿ ಮಾಡಿಕೊಂಡು ಸಂಗಾತಿಯ ಹುಡುಕಾಟದಲ್ಲಿ ಇದ್ದರು. ಫೆಬ್ರುವರಿ 1ರಂದು ಭಾಸ್ಕರ್ ರಾವ್ ಎಂಬುವರು ವಾಟ್ಸ್‌ಆ್ಯಪ್ ಕರೆ ಮಾಡಿ, ‘ನಿಮ್ಮ ಪ್ರೊಫೈಲ್ ನಮಗೆ ಇಷ್ಟ ಆಗಿದೆ’ ಎಂದು ಹೇಳಿ ಮೊಬೈಲ್ ನಂಬರ್ ವಿನಿಮಯ ಮಾಡಿಕೊಂಡಿದ್ದರು. 3 ದಿನ ಕಳೆದ ಮೇಲೆ ಲಕ್ಷ್ಮಿ ಎಂಬ ಯುವತಿ ಕರೆ ಮಾಡಿ ಅನಿಲ್ ವಿಶ್ವಾಸ ಗಳಿಸಿಕೊಂಡಿದ್ದರು. ಇಬ್ಬರೂ ಆಗಾಗ್ಗೆ ಮೊಬೈಲ್‌ನಲ್ಲಿ ಮಾತುಕತೆ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

‘ಭವಿಷ್ಯದ ಹಿತದೃಷ್ಟಿಯಿಂದ ಆನ್‌ಲೈನ್ ಕ್ರಿಪ್ಟೊನಲ್ಲಿ ಹೂಡಿಕೆ ಮಾಡಿದ್ದೇನೆ. ಇಬ್ಬರೂ ಮದುವೆಯಾದ ಬಳಿಕ ಮುಂದೆ ನಮಗೆ ಹಣ ಮುಖ್ಯ ಆಗಲಿದೆ. ಕ್ರಿಪ್ಟೊ ಟ್ರೇಡಿಂಗ್‌ನಲ್ಲಿ ಹೂಡಿಕೆ ಮಾಡಿದರೆ, ಹೆಚ್ಚಿನ ಲಾಭ ಪಡೆಯಬಹುದು ಎಂಬುದಾಗಿ ಲಕ್ಷ್ಮಿ ಹೇಳಿದ್ದರು. ಅಲ್ಲದೇ ಲುಮಿಕ್ಸ್ ಎಕ್ಸ್‌ಚೇಂಜ್ ವೆಬ್‌ಸೈಟ್‌ನಲ್ಲಿ ಹೂಡಿಕೆ ಮಾಡುವಂತೆ ಆರೋಪಿ ಪ್ರೇರೇಪಿಸಿದ್ದರು’ ಎಂದು ಅನಿಲ್ ನೀಡಿರುವ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಮದುವೆಯಾದ ಬಳಿಕ ಹೂಡಿಕೆ ಮಾಡುವುದಾಗಿ ಅನಿಲ್ ಹೇಳಿದ್ದರು. ಅದಕ್ಕೂ ಆರೋಪಿ ಲಕ್ಷ್ಮಿ ಒಪ್ಪಿರಲಿಲ್ಲ. ಆರಂಭದಲ್ಲಿ ₹60 ಸಾವಿರ ಹಣ ಹೂಡಿಕೆ ಮಾಡಿದ್ದ ಅನಿಲ್, ಬಳಿಕ ವಿವಿಧ ಬ್ಯಾಂಕ್‌ಗಳಿಂದ ₹35 ಲಕ್ಷ ಸಾಲ ಪಡೆದು ಹೂಡಿಕೆ ಮಾಡಿದ್ದರು. ಕ್ರಿಪ್ಟೊ ವ್ಯಾಲೆಟ್‌ನಲ್ಲಿ 77 ಸಾವಿರ ಯುಎಸ್‌ಡಿಟಿ ಇರುವಂತೆ ತೋರಿಸಲಾಗಿತ್ತು. ಲಾಭದ ಹಣ ಹಿಂಪಡೆಯಲು ಅನಿಲ್ ಪ್ರಯತ್ನಿಸಿದಾಗ ಖಾತೆಯನ್ನು ನಿಷ್ಕ್ರಿಯಗೊಳಿಸಲಾಗಿತ್ತು’ ಎಂದು ಮೂಲಗಳು ಹೇಳಿವೆ.

ಹೂಡಿಕೆ ಹೆಸರಿನಲ್ಲಿ ಹಲವರಿಗೆ ವಂಚನೆ

ಬೆಂಗಳೂರು: ಹೂಡಿಕೆಯ ಹೆಸರಿನಲ್ಲಿ ಹಲವರಿಂದ ಹಣ ಪಡೆದು ವಂಚನೆ ನಡೆಸಿರುವ ಆರೋಪಿಯ ವಿರುದ್ಧ ರಾಮಮೂರ್ತಿನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೋಲಾರ ಜಿಲ್ಲೆ ಅಪ್ಪಸಂದ್ರ ಗ್ರಾಮದ ವಿ.ಹರೀಶ್ ನೀಡಿದ ದೂರಿನ ಮೇಲೆ ಹೊಯ್ಸಳ ನಗರದಲ್ಲಿದ್ದ ಎಸ್‌ಎಲ್‌ವಿ ಮಹಿಳಾ ಮಾರ್ಟ್‌ನ ಮುಖ್ಯಸ್ಥ ಬೊಮ್ಮಲ ರಾಜೇಶ್ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ಹರೀಶ್ ಅವರ ಸ್ನೇಹಿತ ಕೆ.ಎಸ್.ಪ್ರವೀಣ್ ಅವರು ಎಸ್‌ಎಲ್‌ವಿ ಮಹಿಳಾ ಮಾರ್ಟ್‌ನಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದರು. ಈ ಮಾರ್ಟ್‌ನಲ್ಲಿ ಹೂಡಿಕೆ ಮಾಡಿದರೆ, ಕಂಪನಿ ಹೆಚ್ಚಿನ ಲಾಭ ನೀಡಲಿದೆ ಎಂಬುದಾಗಿ ಹೇಳಿದ್ದರು. ಈ ವಿಷಯವನ್ನು ಹರೀಶ್ ಅವರು ತಮ್ಮ ಸ್ನೇಹಿತರಾದ ರಂಗಸ್ವಾಮಿ ಹಾಗೂ ದೀನವತಿ ಅವರಿಗೂ ತಿಳಿಸಿದ್ದರು. ಅದಾದ ಮೇಲೆ ಹರೀಶ್ ಕಂಪನಿಯ ಕಚೇರಿಗೆ ತೆರಳಿ, ಷರತ್ತುಗಳ ಬಗ್ಗೆ ಮಾಹಿತಿ ಪಡೆದಿದ್ದರು. ಬಳಿಕ ₹7 ಲಕ್ಷ ಹೂಡಿಕೆ ಮಾಡಿದ್ದರು. ಹೂಡಿಕೆ ಮಾಡಿದ ಬಳಿಕ ಕಂಪನಿಯವರು ಅಗರಬತ್ತಿ ಪ್ಯಾಕಿಂಗ್ ಕೆಲಸವನ್ನು ಹರೀಶ್ ಅವರಿಗೇ ವಹಿಸಿದ್ದರು’ ಎಂದು ಮೂಲಗಳು ಹೇಳಿವೆ.

‘ಪ್ರತಿ ತಿಂಗಳು ₹28 ಸಾವಿರ ನೀಡುವುದಾಗಿ ಮಾತುಕತೆ ನಡೆದಿತ್ತು. ಮೊದಲ ಕಂತಿನ ಹಣವನ್ನು ಕಂಪನಿ ಪಾವತಿಸಿತ್ತು. ಅದಾದ ಮೇಲೆ ಹಣ ಪಾವತಿ ಆಗಿರಲಿಲ್ಲ. ಹೊಯ್ಸಳ ನಗರದ ಮುಖ್ಯರಸ್ತೆಯ ಕಚೇರಿಗೆ ವಿಚಾರಿಸಲು ಹೋಗಿದ್ದರು. ಆದರೆ, ಆರೋಪಿ ಕಚೇರಿಯನ್ನು ಖಾಲಿ ಮಾಡಿಕೊಂಡು ಹೋಗಿದ್ದರು’ ಎಂದು ದೂರು ನೀಡಲಾಗಿದೆ.

‘ಸದ್ಯಕ್ಕೆ ಒಂದು ಪ್ರಕರಣ ದಾಖಲಾಗಿದೆ. ಇದೇ ರೀತಿ ನೂರಾರು ಮಂದಿಗೆ ಲಕ್ಷಾಂತರ ರೂಪಾಯಿ ವಂಚನೆ ನಡೆಸಲಾಗಿದೆ ಎಂಬುದು ಕಂಡುಬಂದಿದೆ. ತನಿಖೆ ಮುಂದುವರಿದಿದೆ’ ಎಂದು ಪೊಲೀಸರು ಹೇಳಿದರು.

ಅರಣ್ಯದೊಳಗೆ ಪಾರ್ಟಿ; ಮೂವರ ವಿರುದ್ಧ ಪ್ರಕರಣ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಅರಣ್ಯದೊಳಗಿನ ಮದ್ದೂರು ವಲಯದ ಕಳ್ಳಬೇಟೆ ಶಿಬಿರದ ಬಳಿ ಮದ್ಯಸೇವನೆ ಮಾಡಿದ ಆರೋಪದ ಮೇಲೆ ರೌಡಿಶೀಟರ್ ಮಹದೇವ ಪ್ರಸಾದ್, ನಾಗೇಗೌಡ, ಚೇತನ್ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ.

ಆರೋಪಿಗಳು ಅಭಯಾರಣ್ಯದೊಳಗೆ ಮದ್ಯ ಸೇವನೆ ಮಾಡಿರುವ ಫೋಟೊ ಸಾಮಾಜಿಕ ಜಾಲತಾಣದಲ್ಲಿ ಸುದ್ದಿಯಾಗಿ ಪರಿಸರವಾದಿಗಳಿಂದ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಇದರ ಬೆನ್ನಲ್ಲೇ ಅರಣ್ಯ ಇಲಾಖೆ ಅಧಿಕಾರಿಗಳು ಮೂವರ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಸೆಕ್ಷನ್ 27(1), (4) ಅಡಿ ಪ್ರಕರಣ ದಾಖಲಿಸಿದ್ದಾರೆ. ಸದ್ಯ ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ.



ವಿದ್ಯಾರಣ್ಯಪುರದ ನರಸಿಪುರ ಗ್ರಾಮಠಾಣಾ ವ್ಯಾಪ್ತಿಯ ಸರ್ಕಾರಿ ಭೂಮಿ ಕಬಳಿಕೆ ತೆರವುಗೊಳಿಸುವಂತೆ ಒತ್ತಾಯಿಸಿ ಸ್ಥಳೀಯರು ಪ್ರತಿಭಟನೆ ನಡೆಸಿದರು

ಸರ್ಕಾರಿ ಭೂಮಿ ಕಬಳಿಕೆ ಆರೋಪ: ಧರಣಿ

ಪ್ರಜಾವಾಣಿ ವಾರ್ತೆ

ಯಲಹಂಕ: ವಿದ್ಯಾರಣ್ಯಪುರದ ನರಸಿಪುರ ಗ್ರಾಮಠಾಣಾ ವ್ಯಾಪ್ತಿಯಲ್ಲಿ ಸರ್ಕಾರಿ ಜಮೀನನ್ನು ಕಬಳಿಸಿದ್ದಾರೆ ಎಂದು ಆರೋಪಿಸಿ ಸ್ಥಳೀಯರು ವಿದ್ಯಾರಣ್ಯಪುರದಲ್ಲಿ ಪ್ರತಿಭಟನೆ ನಡೆಸಿದರು.

ನರಸಿಪುರ ನಾಗರಿಕರ ಸಂಘಟನೆಯ ಸದಸ್ಯರಾದ ಇ.ಕೃಷ್ಣಪ್ಪ, ಜಿ. ನಾರಾಯಣ ಮೂರ್ತಿ, ಚಂದ್ರು ನೇತೃತ್ವದಲ್ಲಿ ನಾಗರಿಕರು, ಬೆಂಗಳೂರು ಉತ್ತರ ಮಹಾನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅವರಿಗೆ ದೂರು ಸಲ್ಲಿಸಿದರು.

‘ವಿದ್ಯಾರಣ್ಯಪುರ 100 ಅಡಿ ರಸ್ತೆಯಲ್ಲಿರುವ 1 ಎಕರೆ 28 ಗುಂಟೆ ಸರ್ಕಾರಿ ಜಮೀನಿನ ಇಂದಿನ ಮಾರುಕಟ್ಟೆ ಮೌಲ್ಯ ಸುಮಾರು ₹204 ಕೋಟಿ ಆಗಿದ್ದು, ಪ್ರಭಾವಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿ ಭೂಮಿಯನ್ನು ಕಬಳಿಸಿದ್ದಾರೆ’ ಎಂದು ಇ.ಕೃಷ್ಣಪ್ಪ ಆರೋಪಿಸಿದರು.

‘ನಕಲಿ ದಾಖಲೆಗಳನ್ನು ಆಧರಿಸಿ, ಮಹಾನಗರ ಪಾಲಿಕೆ ಅಧಿಕಾರಿಗಳಿಂದ ಖಾತೆಗಳನ್ನು ಮಾಡಿಸಿಕೊಂಡಿದ್ದಾರೆ. ಆ ಖಾತೆಗಳನ್ನು ತಕ್ಷಣ ರದ್ದುಪಡಿಸಬೇಕು ಎಂದು ಆಯುಕ್ತರಿಗೆ ಮನವಿ ಸಲ್ಲಿಸಲಾಗಿದೆ’ ಎಂದು ಹೋರಾಟಗಾರ ಜಿ.ನಾರಾಯಣಮೂರ್ತಿ ತಿಳಿಸಿದರು.

ಪ್ರಕರಣವನ್ನು ಪರಿಶೀಲಿಸಿ, ಅಕ್ರಮವಾಗಿ ಖಾತೆಗಳನ್ನು ಮಾಡಿಸಿರುವುದು ಕಂಡುಬಂದರೆ ರದ್ದುಪಡಿಸಿ, ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆಯಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಭರವಸೆ ನೀಡಿದರು.

ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಅಂಗೀಕೃತ ಚಿತ್ರಕಲಾ ವಿದ್ಯಾಲಯಗಳಲ್ಲಿ ಬಿ.ಎಫ್.ಎ ಅಥವಾ ಎಂ.ಎಫ್.ಎ ವ್ಯಾಸಂಗ ಮಾಡುತ್ತಿರುವ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲಲಿತಕಲಾ ಅಕಾಡೆಮಿಯು ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಿದೆ.

ಚಿತ್ರಕಲೆಯನ್ನು ಉತ್ತೇಜಿಸುವ ದೃಷ್ಟಿಯಿಂದ ಶೈಕ್ಷಣಿಕ ವಿದ್ಯಾಭ್ಯಾಸದ ಅವಧಿಯಲ್ಲಿ ಒಮ್ಮೆ ಮಾತ್ರ ವಿದ್ಯಾರ್ಥಿ ವೇತನ ನೀಡಲಾಗುತ್ತಿದ್ದು, ರಾಜ್ಯದ ವಿದ್ಯಾರ್ಥಿಗಳು ಮಾತ್ರ ಅರ್ಹರಾಗಿರುತ್ತಾರೆ.

ಅರ್ಜಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು-560002 ಇಲ್ಲಿಗೆ ಜೂನ್ 30ರೊಳಗೆ ತಲುಪಿಸಬೇಕು.

ಮಾಹಿತಿಗೆ ವೆಬ್‌ಸೈಟ್: https://lalitkala.karnataka.gov.in, ಇ-ಮೇಲ್ kla.karnataka@gmail.com, ದೂರವಾಣಿ 080-2248027 ಮೂಲಕ ಸಂಪರ್ಕಿಸಬಹುದು ಎಂದು ರಿಜಿಸ್ಟ್ರಾರ್ ಎನ್. ನಮ್ರತ ತಿಳಿಸಿದ್ದಾರೆ.

ಖಾತೆ ಹಂಚಿಕೆ ಗೊಂದಲ: ಆರ್.ಅಶೋಕ ಲೇವಡಿ

‘ಕೃಷಿಗೆ ಸಚಿವರಿಲ್ಲ, ಶಿಕ್ಷಣ ಇಲಾಖೆಗೆ ದಿಕ್ಕಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಂಗಾರು ಬಿತ್ತನೆಗೆ ಸಿದ್ಧತೆ ನಡೆದಿರುವ ಹೊತ್ತಿನಲ್ಲಿ ರಾಜ್ಯದಲ್ಲಿ ಕೃಷಿ ಸಚಿವರಿಲ್ಲ. ಶೈಕ್ಷಣಿಕ ವರ್ಷದ ಆರಂಭವಾಗುತ್ತಿರುವ ವೇಳೆಗೆ ಶಿಕ್ಷಣ ಸಚಿವರೂ ಇಲ್ಲ. ಲೂಟಿ ಹೊಡೆಯಲು ಅವಕಾಶವಿರುವ ಖಾತೆಗಳೇ ಬೇಕು ಎಂದು ಕಾಂಗ್ರೆಸ್‌ನ ಸಚಿವರು ಪೈಪೋಟಿಗೆ ಇಳಿದಿದ್ದು, ಅವರ ಆದ್ಯತೆ ಏನು ಎಂಬುದು ರಾಜ್ಯದ ಜನರ ಎದುರು ಬೆತ್ತಲಾಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

ಖಾತೆ ಹಂಚಿಕೆ ವಿಚಾರದಲ್ಲಿ ಅಸಮಾಧಾನಗೊಂಡು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ರಾಮಲಿಂಗಾರೆಡ್ಡಿ ಅವರನ್ನು ಭೇಟಿ ಮಾಡಲು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜಯನಗರದ ಹೋಟೆಲ್‌ಗೆ ತಡರಾತ್ರಿ ಭೇಟಿ ನೀಡಿದ್ದರ ಚಿತ್ರವನ್ನು ಅಶೋಕ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ನಿಮ್ಮ ಜನಪರ ಆಡಳಿತ ಅಂದರೆ ಇದೇನಾ’ ಎಂದು ಮುಖ್ಯಮಂತ್ರಿ ಅವರನ್ನು ಪ್ರಶ್ನಿಸಿದ್ದಾರೆ.

‘ರಾಜ್ಯಕ್ಕೆ ಮುಂಗಾರು ಪ್ರವೇಶಿಸುತ್ತಿದೆ. ಬಿತ್ತನೆ ಬೀಜಗಳ ಲಭ್ಯತೆ, ರಸಗೊಬ್ಬರಗಳ ಪೂರೈಕೆ, ಬೆಳೆ ಸಾಲ, ಬೆಳೆ ವಿಮೆ, ಮಳೆಯ ಸ್ಥಿತಿಯ ಅವಲೋಕನ ಎಲ್ಲದರ ಕಾಳಜಿ ವಹಿಸಬೇಕಾದ ಸಚಿವರು ಇಲ್ಲದೆ ಕೃಷಿ ಇಲಾಖೆ ಅನಾಥವಾಗಿದೆ. ಇನ್ನೊಂದೆಡೆ ಶಾಲಾ–ಕಾಲೇಜುಗಳು ಆರಂಭವಾಗಿವೆ. ಸೋರುವ ಚಾವಣಿ, ಶಿಥಿಲ ಗೋಡೆಗಳ ರಿಪೇರಿ, ಶಿಕ್ಷಕರ ಕೊರತೆ ನೀಗಿಸಬೇಕಾದ ಸಂದರ್ಭದಲ್ಲಿ ಶಿಕ್ಷಣ ಇಲಾಖೆಗೆ ದಿಕ್ಕು ತೋರಿಸಬೇಕಾದ ಸಚಿವರಿಲ್ಲ’ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

‘ಇಷ್ಟೆಲ್ಲಾ ತುರ್ತುಗಳು ರಾಜ್ಯದ ಎದುರು ಇದ್ದರೂ, ಗುತ್ತಿಗೆ ಮತ್ತು ಕಮಿಷನ್ ದಂಧೆಗೆ ಅನುಕೂಲಕರ ಖಾತೆ ಬೇಕು ಎಂದು ಸಚಿವರು ರಣಹದ್ದುಗಳಂತೆ ಪೈಪೋಟಿಗೆ ಬಿದ್ದಿದ್ದಾರೆ. ಆಡಳಿತ ಯಂತ್ರ ಕುಸಿದಿದೆ. ಕಾಂಗ್ರೆಸ್‌ನ ಒಳಜಗಳ, ಅಧಿಕಾರದ ಕಿತ್ತಾಟಕ್ಕೆ ಜನತೆ ಬಲಿಯಾಗುತ್ತಿದ್ದಾರೆ’ ಎಂದಿದ್ದಾರೆ.

‘ಬೆಂಗಳೂರು ಅಭಿವೃದ್ಧಿ ಸಚಿವ ಲೆಕ್ಕಕ್ಕಿಲ್ಲ’



ಆರ್.ಅಶೋಕ

‘ಮುಖ್ಯಮಂತ್ರಿ ಶಿವಕುಮಾರ್ ಅವರೇ, ಬೆಂಗಳೂರು ಅಭಿವೃದ್ಧಿ ಖಾತೆಯನ್ನು ಹೈಕಮಾಂಡ್ ಸಮರ್ಥ ಸಚಿವರೊಬ್ಬರಿಗೆ ನೀಡಿದೆ ಎಂದಿದ್ದೀರಿ. ಆದರೆ, ಬಿಡಿಎ ಮತ್ತು ಬಿಎಂಆರ್‌ಡಿಎ ಚುಕ್ಕಾಣಿಯನ್ನು ನಿಮ್ಮ ಬಳಿಯೇ ಉಳಿಸಿಕೊಂಡಿದ್ದೀರಿ. ಹಾಗಾದರೆ ಸಚಿವರಿಗೆ ಉಳಿದಿದ್ದೇನು’ ಎಂದು ಆರ್.ಅಶೋಕ ಪ್ರಶ್ನಿಸಿದ್ದಾರೆ.

‘ಸಮರ್ಥರಿಗೆ ಈ ಖಾತೆ ಕೊಟ್ಟಿದ್ದೇವೆ ಎಂದು ಡಂಗುರ ಸಾರಿದ್ದಷ್ಟೇ ಬಂತು. ಬೆಂಗಳೂರು ಅಭಿವೃದ್ಧಿ ಸಚಿವರು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದೆ’ ಎಂದು ಟೀಕಿಸಿದ್ದಾರೆ.

ನಗರದಲ್ಲಿ ಇಂದು

ವಿಶ್ವ ಪರಿಸರ ದಿನ ಕಾರ್ಯಕ್ರಮ: ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಗಾಂಧಿನಗರ, ಬೆಳಿಗ್ಗೆ 8ರಿಂದ


ಭಕ್ತಿ ಭಾವಾನಂದಂ ಅಖಂಡ ಭಜನೆ: ಆಯೋಜನೆ ಹಾಗೂ ಸ್ಥಳ: ಸತ್ಯಸಾಯಿ ಆಶ್ರಮ, ಕಾಡುಗೋಡಿ, ವೈಟ್‌ಫೀಲ್ಡ್, ಬೆಳಿಗ್ಗೆ 9

ಯುವ ಸಮಾವೇಶ: ಉಪನ್ಯಾಸ: ಸ್ವಾಮಿ ಜಪಸಿದ್ಧಾನಂದಜಿ ಮಹಾರಾಜ್, ಸ್ವಾಮಿ ಬೋಧ ಸ್ವರೂಪಾನಂದಜಿ ಮಹಾರಾಜ್, ಆಯೋಜನೆ ಹಾಗೂ ಸ್ಥಳ: ರಾಮಕೃಷ್ಣ ಮಠ, ಸ್ವಾಮಿ ವಿವೇಕಾನಂದ ರಸ್ತೆ, ಹಲಸೂರು, ಬೆಳಿಗ್ಗೆ 10

ಭರತನಾಟ್ಯ: ನೇಯಾ ಭಾಸ್ಕರ್, ಅತಿಥಿ: ಕಾಮಾಕ್ಷಿ, ವೈ.ಕೆ.ಸಂಧ್ಯಾ ಶರ್ಮ, ಆಯೋಜನೆ: ನಟರಾಜರಂಗಂ, ಸ್ಥಳ: ಧ್ವನಿ, ಸಿಎಂಆರ್‌ಐಟಿ ಕಾಲೇಜು, ಶ್ರೀನಿವಾಸ ರೆಡ್ಡಿ ಬಡಾವಣೆ, ಬ್ರೂಕ್‌ಫೀಲ್ಡ್, ಬೆಳಿಗ್ಗೆ 10.30

ಮಹಿಳಾ ಸಾಹಿತ್ಯ ಸಮ್ಮೇಳನ ಮತ್ತು ‘ಕರ್ನಾಟಕ ಸಂಗೀತ ಸಂವರ್ಧಿನಿ’ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಮನು ಬಳಿಗಾರ್, ಸಮ್ಮೇಳನಾಧ್ಯಕ್ಷತೆ: ಭ್ರಮರ ಬಹದ್ದೂರ್, ಪ್ರಶಸ್ತಿ ಪ್ರದಾನ: ಆರ್. ಸುನಂದಮ್ಮ, ಅತಿಥಿ: ಕೆ.ಜಿ.ಲಕ್ಷ್ಮಿನಾರಾಯಣಪ್ಪ, ಪ್ರಶಸ್ತಿ ಪುರಸ್ಕೃತರು: ನಾಗಮಣಿ ಮನೋಹರ, ಭಾಗ್ಯಲಕ್ಷ್ಮಿ ಮದನ್‌ಗೋಪಾಲ್, ಆಯೋಜನೆ: ಸಮರ್ಥ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ಕುವೆಂಪು ಅವರ ಪ್ರಕೃತಿ ಬಗೆಗಿನ ಬರವಣಿಗೆಯನ್ನು ಕೇಂದ್ರೀಕರಿಸಿ ‘ಕಾಡಿನ ಕವಿ’ ವಿಚಾರಗೋಷ್ಠಿ: ವನಮಾಲಾ ವಿಶ್ವನಾಥ್, ಉಮಾ ಮಹಾದೇವನ್, ಸುಂದರ್ ಸರುಕ್ಕೈ, ನಿರ್ವಹಣೆ: ಕಾರ್ತಿಕ್ ವೆಂಕಟೇಶ್, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6



ಕುವೆಂಪು

ಜಾನಪದ ಮತ್ತು ಸುಗಮ ಸಂಗೀತ ಡಿಪ್ಲೊಮಾ ಶಾಲೆಯ ವಾರ್ಷಿಕೋತ್ಸವ: ಉದ್ಘಾಟನೆ: ವೈ.ಕೆ. ಮುದ್ದುಕೃಷ್ಣ, ‘ಸಂಗೀತ ಸಿರಿ–2025’ ಸಂಚಿಕೆ ಬಿಡುಗಡೆ: ಎಚ್.ಎನ್.ಆರತಿ, ಉಪಸ್ಥಿತಿ: ಹಿ.ಚಿ. ಬೋರಲಿಂಗಯ್ಯ, ಬಿ.ವಿ.ಶ್ರೀನಿವಾಸ್, ಅಧ್ಯಕ್ಷತೆ: ವೇಮಗಲ್ ನಾರಾಯಣಸ್ವಾಮಿ, ಆಯೋಜನೆ: ಡಾ.ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಪ್ರತಿಷ್ಠಾನ, ಸ್ಥಳ: ಗಾಂಧಿ–ನೆಹರು ರಂಗಮಂದಿರ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30

ವಿದ್ಯಾರ್ಥಿ ವೇತನ ವಿತರಣೆ: ಅತಿಥಿ: ವಾಸುದೇವ ಕೆ. ಆತ್ರೆ, ಅಧ್ಯಕ್ಷತೆ: ಡಾ. ವಿಜಯಲಕ್ಷ್ಮಿ ದೇಶಮಾನೆ, ಆಯೋಜನೆ: ಸಾರ್ಥಕ ಶಿಕ್ಷಣ ಚಾರಿಟಬಲ್ ಟ್ರಸ್ಟ್, ಸ್ಥಳ: ಪೈ ವೈಸರಾಯ್ ಹೋಟೆಲ್, ಜಯನಗರ 3ನೇ ಹಂತ, ಬೆಳಿಗ್ಗೆ 10.30

ಗವರ್ನರ್ಸ್ ಕಪ್ ಗಾಲ್ಫ್ ಕ್ರೀಡಾಕೂಟದ ಬಹುಮಾನ ವಿತರಣೆ: ಥಾವರಚಂದ್ ಗೆಹಲೋತ್, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಗಾಲ್ಫ್ ಕ್ಲಬ್, ಮಧ್ಯಾಹ್ನ 12.30

ಮಹಾನಗರದಲ್ಲೊಂದು ಮಾತಿನ ಮಂಟಪ–2ರ ಸರಣಿಯಡಿ ಎರಡು ತಾಳಮದ್ದಳೆ: ಹಲವು ಕವಿಗಳಿಂದ ಸಂಪಾದಿಸಲ್ಪಟ್ಟ ‘ಕರ್ಣಭೇದನ, ಹಲಸಿನ ಹಳ್ಳಿ ನರಸಿಂಹ ಶಾಸ್ತ್ರಿ ಅವರು ರಚಿಸಿದ ‘ಭೀಷ್ಮ ವಿಜಯ’ ತಾಳಮದ್ದಳೆ ಪ್ರದರ್ಶನ, ಹಿಮ್ಮೇಳ: ಪ್ರಸನ್ನ ಭಟ್ ಬಾಳ್ಕಲ್, ಕಾವ್ಯಶ್ರೀ ಅಜೇರು, ಅಕ್ಷಯ್ ಆಚಾರ್ಯ ಬಿದ್ಕಲ್ ಕಟ್ಟೆ, ಅಕ್ಷಯ್ ರಾವ್ ವಿಟ್ಲ , ಮನೋಜ್ ಆಚಾರ್ಯ, ಶಿಖಿನ್ ಶರವೂರು, ಮುಮ್ಮೇಳ: ಸಂಕದಗುಂಡಿ ಗಣಪತಿ ಭಟ್, ಪವನ್ ಕಿರಣಕೆರೆ, ಹರೀಶ್ ಬೊಳಂತಿಮೊಗರು, ಸುಣ್ಣಂಬಳ ವಿಶ್ವೇಶ್ವರ ಭಟ್, ಜಬ್ಬಾರ್ ಸಮೋ, ರಾಧಾಕೃಷ್ಣ ಕಲ್ಚಾರ್, ವಾಸುದೇವ ರಂಗಾಭಟ್, ಅವಿನಾಶ್ ಉಬರಡ್ಕ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಮಧ್ಯಾಹ್ನ 2



‘ಮಿಸ್ಟರ್ ರಾವ್ ಆ್ಯಂಡ್ ಅಸೋಸಿಯೇಟ್ಸ್’ ನಾಟಕದ ದೃಶ್ಯ


‘ಕ್ರೇಜಿ ಕುಟುಂಬ’ ಮತ್ತು ‘ಮಿಸ್ಟರ್ ರಾವ್ ಆ್ಯಂಡ್ ಅಸೋಸಿಯೇಟ್ಸ್’ ನಾಟಕಗಳ ಪ್ರದರ್ಶನ: ರಚನೆ: ಸತೀಶ್ ಹುಳಿಯಾರ್, ಭೀಷ್ಮ ರಾಮಯ್ಯ, ನಿರ್ದೇಶನ: ಸತೀಶ್ ಐತಾಳ್, ಬಾಷ್ ರಾಘವೇಂದ್ರ, ಆಯೋಜನೆ ಮತ್ತು ತಂಡ: ಅಂತರಂಗ ಬಹಿರಂಗ ಸ್ಥಳ: ಸಿ.ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 4 ಮತ್ತು 7

‘ಡಯಲ್ ಎಂ ಫಾರ್ ಮರ್ಡರ್’ ನಾಟಕ ಪ್ರದರ್ಶನ: ನಿರ್ದೇಶನ: ಸುಜಯ್ ಘೋರ್ಪಾಡ್ಕರ್, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಮಧ್ಯಾಹ್ನ 3.30

‘ಕಲಾನ್ವೇಷಕರ ಸ್ಮರಣೆ: ಅ.ಲ. ನರಸಿಂಹನ್ ಮತ್ತು ಎನ್. ಮರಿಶಾಮಾಚಾರ್ ಅವರ ಬಗ್ಗೆ ವಿಚಾರಸಂಕಿರಣ, ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಉಪಸ್ಥಿತಿ: ಪ.ಸ. ಕುಮಾರ್, ಸಿ. ಚಂದ್ರಶೇಖರ್, ಅಧ್ಯಕ್ಷತೆ: ಎಂ.ಎಸ್. ಮೂರ್ತಿ, ಆಯೋಜನೆ: ಬೆಂಗಳೂರು ಆರ್ಟ್ ಫೌಂಡೇಷನ್, ಸ್ಥಳ: ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರಬಾ ರಸ್ತೆ, ಸಂಜೆ 4

‘ತರಳಬಾಳು ಯಕ್ಷಾಭಿಯಾನ’ ಕಾರ್ಯಕ್ರಮ: ‘ನಳ–ದಮಯಂತಿ’ ಯಕ್ಷಗಾನ ಪ್ರದರ್ಶನ, ಹಿಮ್ಮೇಳ: ರಾಘವೇಂದ್ರ ಆಚಾರ್ಯ, ಶಶಾಂಕ ಆಚಾರ್ಯ, ಪ್ರಜ್ವಲ್ ಮುಂಡಾಡಿ, ಮುಮ್ಮೇಳ: ಶೇಖರ ಶೆಟ್ಟಿ ಯಳಬೇರು, ಶಶಿಕಾಂತ್ ಶೆಟ್ಟಿ ಕಾರ್ಕಳ, ನವೀನ್ ಶೆಟ್ಟಿ ಐರ್‌ಬೈಲ್, ಶಿಥಿಲ್ ಶೆಟ್ಟಿ ಐರ್‌ಬೈಲ್, ಪ್ರಶಾಂತ ಹೆಗಡೆ ಮೂರೂರು, ರಾಘವೇಂದ್ರ ಶೆಟ್ಟಿ ಕೊಡ್ಲಾಡಿ, ಮನೋಜ್ ಭಟ್, ರಾಮಕೃಷ್ಣ ಭಟ್, ಸಂತೋಷ್ ಶೆಟ್ಟಿ, ಸುಜಯ್ ಕೋಳಿಗಾರ, ಆನಂದ ಇಡಗುಂಜಿ, ಆಯೋಜನೆ ಹಾಗೂ ಸ್ಥಳ: ತರಳಬಾಳು ಕೇಂದ್ರ, ಬಿಡಿಎ ಕಾಂಪ್ಲೆಕ್ಸ್ ಹತ್ತಿರ, ಆರ್.ಟಿ.ನಗರ, ಸಂಜೆ 4

‘ಜೀವನ್ಮುಖಿ’ ಪತ್ರಿಕೆಯ 19ನೇ ವಾರ್ಷಿಕೋತ್ಸವ, ವಾರ್ಷಿಕ ಪ್ರಶಸ್ತಿ ಪ್ರದಾನ, ಸ್ಮರಣ ಸಂಚಿಕೆ ಬಿಡುಗಡೆ: ಹಂಪ ನಾಗರಾಜಯ್ಯ, ಪ್ರಶಸ್ತಿ ಪ್ರದಾನ: ಟಿ. ತಿಮ್ಮೇಗೌಡ, ಅಧ್ಯಕ್ಷತೆ: ಪಿ. ಮಲ್ಲಿಕಾರ್ಜುನಪ್ಪ, ಪ್ರಶಸ್ತಿ ಪುರಸ್ಕೃತರು: ಆರತಿ ಕೃಷ್ಣ, ಕೆ.ಎ. ದಯಾನಂದ, ಎನ್. ಯತೀಶ್, ನಂ. ನಂಜಪ್ಪ ರಾಜಣ್ಣ, ಆಯೋಜನೆ: ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 4.30




ಹಂಪ ನಾಗರಾಜಯ್ಯ

ವಾರ್ಷಿಕ ಪುರಸ್ಕಾರ ಪ್ರದಾನ ಸಮಾರಂಭ ಹಾಗೂ ಭಾರತೀಯ ನಾದ ಸೌರಭ ಸಂಗೀತೋತ್ಸವ: ಅತಿಥಿಗಳು: ಕೆ.ವಾಗೀಶ್, ಸತೀಶ್ ಹಂಪಿಹೊಳಿ, ಪ್ರಶಸ್ತಿ ಪುರಸ್ಕೃತರು: ಎನ್.ಎಸ್. ಗುಂಡಾಶಾಸ್ತ್ರಿ, ಎನ್.ಎಸ್. ಪ್ರಸಾದ್, ಹಿಂದೂಸ್ತಾನಿ ಗಾಯನ: ವಾಗೀಶ ಭಟ್, ತಬಲಾ: ಮಧುಸೂದನ್ ಮುತಾಲಿಕ್, ಹಾರ್ಮೋನಿಯಂ: ಶಿವಕುಮಾರ್ ಮಹಂತ, ಗಾಯನ: ಸ್ಮೃತಿ ಎಸ್. ಭಟ್, ತಬಲಾ: ಎಂ. ಪ್ರಣವ್ ಪೈ, ಹಾರ್ಮೋನಿಯಂ: ಪ್ರಣವ್ ಪಡಿಯಾರ್, ಮ್ಯಾಂಡೋಲಿನ್: ಎನ್. ಎಸ್. ಪ್ರಸಾದ್, ತಬಲಾ: ಸತೀಶ್ ಹಂಪಿಹೊಳಿ, ಆಯೋಜನೆ: ಸರಸ್ವತೀ ಸಂಗೀತ ವಿದ್ಯಾಲಯ, ಸ್ಥಳ: ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಜಯನಗರ 9ನೇ ಬ್ಲಾಕ್, ಸಂಜೆ 4.30

‘ಯುಗಪ್ರವರ್ತಕ ಡಾ.ಹೆಡಗೇವಾರ್’ ನಾಟಕ ಪ್ರದರ್ಶನ: ತಂಡ: ನಾದಬ್ರಹ್ಮ, ಸ್ಥಳ: ನ್ಯೂ ಹೊರೈಜನ್ ಕಾಲೇಜ್ ಆಫ್ ಎಂಜಿನಿಯರಿಂಗ್, ಕಾವೇರಪ್ಪ ಲೇಔಟ್, ಕಾಡುಬೀಸನಹಳ್ಳಿ, ಸಂಜೆ 5

‘ಅಧಿಕ ಮಾಸದಲ್ಲಿ ಹರಿ ಕುಣಿದ’ ವಿಶೇಷ ದಾಸವಾಣಿ: ಗಾಯನ: ಕನಕಗಿರಿ ಹುಸೇನ್ ಸಾಬ್, ಪ್ರಸನ್ನ ಕೊರ್ತಿ, ರಮ್ಯಾ ಸುಧೀರ್, ಅನುಕೃಪ ರೌಡೂರ್ ಪುರೋಹಿತ್, ಕೆ.ಪಿ. ಶಿಶಿರ್, ಕೀಬೋರ್ಡ್: ಅಮಿತ್ ಶರ್ಮಾ, ತಬಲಾ: ಶ್ರೀನಿವಾಸ ಕಾಖಂಡಕಿ, ಆಯೋಜನೆ: ದಾಸವಾಣಿ ಕರ್ನಾಟಕ ಸಂಸ್ಥೆ, ಸ್ಥಳ: ಪುಣ್ಯಾಧಾಮ, ರಾಜಾಜಿನಗರ 1ನೇ ಬ್ಲಾಕ್, ಸಂಜೆ 5



ವಾರಿಜಾಶ್ರೀ ವೇಣುಗೋಪಾಲ್

ವಾರಿಜಾಶ್ರೀ ವೇಣುಗೋಪಾಲ್ ಅವರಿಂದ ಸಂಗೀತ ಕಾರ್ಯಾಗಾರ: ಆಯೋಜನೆ: ಪರಮ್ ಕಲ್ಚರ್, ಸ್ಥಳ: ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಸ್ಟುಡಿಯೊ ಆವರಣ, ಬೆಳಿಗ್ಗೆ 11

‘ಮಾಸದ ಮಾಧುರ್ಯ’ ಸಂಗೀತ ಸಂಜೆ: ಅತಿಥಿ: ಸಿ.ಎನ್.ಅಶ್ವತ್ಥನಾರಾಯಣ, ಉಪಸ್ಥಿತಿ: ಜಿ.ಎಸ್. ಹೆಗಡೆ, ಗಾಯನ: ಸಂಗೀತಾ ಎಲ್. ನಾಯ್ಕ್, ತಬಲಾ: ಕೌಶಿಕ ಭಟ್ಟ, ಹಾರ್ಮೋನಿಯಂ: ವಿಘ್ನೇಶ ಭಾಗವತ, ಆಯೋಜನೆ: ಭಾವುರಾವ್ ದೇಶಪಾಂಡೆ ಸ್ಮಾರಕ ಟ್ರಸ್ಟ್, ಸ್ಥಳ: ಜಗನ್ನಾಥ ಭವನ, ಮಲ್ಲೇಶ್ವರ, ಸಂಜೆ 5

‘ಸುಯೋಧನ’ ಪೌರಾಣಿಕ ನಾಟಕ ಪ್ರದರ್ಶನ: ರಚನೆ: ಎಸ್.ವಿ.ಕೃಷ್ಣಶರ್ಮ, ವಿನ್ಯಾಸ ಮತ್ತು ನಿರ್ದೇಶನ: ಶಿವು ಹೊನ್ನಿಗನಹಳ್ಳಿ, ಆಯೋಜನೆ ಮತ್ತು ತಂಡ: ಬಿಂಕ ಬಿನ್ನಾಣರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..

nagaradalli_indu@prajavani.co.in

ಅಂಗಾಂಗ ಕಸಿ: ಜೀವನದ 2ನೇ ಅವಕಾಶ– ವರುಣ್ ಆನಂದ್

ಬೆಂಗಳೂರು: ರೇನ್‌ಬೋ ಮಕ್ಕಳ ಆಸ್ಪತ್ರೆ ಮತ್ತು ರೇನ್‌ಬೋ ಆಸ್ಪತ್ರೆಗಳ ಬರ್ತ್‌ರೈಟ್ ಜಂಟಿಯಾಗಿ ನಗರದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಅಂಗಾಂಗ ಕಸಿ ದಿನದ ಕಾರ್ಯಕ್ರಮದಲ್ಲಿ ಮಕ್ಕಳ ಅಂಗಾಂಗ ಕಸಿ ಬಗ್ಗೆ ಜಾಗೃತಿ ಮೂಡಿಸಲಾಯಿತು.

‘ಅಂಗಾಂಗ ದಾನದ ಸುತ್ತಲಿನ ತಪ್ಪು ಕಲ್ಪನೆಗಳಿಂದಾಗಿ ಅಂತಿಮ ಹಂತದ ಅಂಗಾಂಗ ವೈಫಲ್ಯಕ್ಕೊಳಗಾದ ಅನೇಕ ಮಕ್ಕಳು ಸಕಾಲದಲ್ಲಿ ಅಂಗಾಂಗ ಸಿಗದೆ ಸಮಸ್ಯೆ ಎದುರಿಸುತ್ತಿದ್ದಾರೆ. ವೈದ್ಯಕೀಯ ಕ್ಷೇತ್ರದಲ್ಲಿನ ಆವಿಷ್ಕಾರಗಳಿಂದ ಕಸಿ ಪ್ರಕ್ರಿಯೆ ಸುಲಭಸಾಧ್ಯವಾದರೂ, ಅಂಗಾಂಗಗಳು ಕಸಿಗೆ ಸಿಗುತ್ತಿಲ್ಲ. ಆದ್ದರಿಂದ ತಪ್ಪುಕಲ್ಪನೆಯನ್ನು ಹೋಗಲಾಡಿಸಿ, ಅಂಗಾಂಗ ದಾನಕ್ಕೆ ಪ್ರೋತ್ಸಾಹಿಸಬೇಕು’ ಎಂದು ವೈದ್ಯರು ಅಭಿಪ್ರಾಯಪಟ್ಟರು.

ಅಂಗಾಂಗ ಕಸಿಯ ನಂತರದ ತಮ್ಮ ಜೀವನಾನುಭವವನ್ನು ಹಂಚಿಕೊಂಡ ಕ್ರೀಡಾಪಟು ವರುಣ್ ಆನಂದ್, ‘ಅಂಗಾಂಗ ಕಸಿ ಎಂಬುದು ಕೇವಲ ವೈದ್ಯಕೀಯ ಪ್ರಕ್ರಿಯೆಯಾಗಿರದೆ, ಅದು ಜೀವನದ ಎರಡನೇ ಅವಕಾಶವಾಗಿದೆ. ಪ್ರತಿಯೊಬ್ಬ ಅಂಗಾಂಗ ದಾನಿಗೂ ಜೀವಗಳನ್ನು ಪರಿವರ್ತಿಸುವ ಮತ್ತು ಹೊಸ ಆರಂಭಕ್ಕಾಗಿ ಕಾಯುತ್ತಿರುವ ರೋಗಿಗಳಲ್ಲಿ ಭರವಸೆ ಮೂಡಿಸುವ ಶಕ್ತಿ ಇರಲಿದೆ’ ಎಂದು ಹೇಳಿದರು.

ಬೆಂಗಳೂರು ರೇಸ್

ಝುಕ್ಕಾರೊ ಗೆಲ್ಲುವ ನಿರೀಕ್ಷೆ

ಹೆಚ್‌ಹೆಚ್ ಕೃಷ್ಣರಾಜ ಒಡೆಯರ್ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಝುಕ್ಕಾರೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಗ್ಲೋರಿಯಸ್ ಸ್ಟ್ರೈಡ್ಸ್ 8, ಫ್ಲೈಟ್ ಆಫ್ ಫ್ಯಾನ್ಸಿ 7, ಸಿಕ್ಯಾನ್ 2
2ನೇ ರೇಸ್: ಡೈನಾಮಿಕ್ ಫೋರ್ಸ್ 1, ಸದರ್ನ್ ಫೋರ್ಸ್ 3, ಎಲ್ ಅಲಾಮಿನ್ 2
3ನೇ ರೇಸ್: ರೀಗಲ್ ರಿಯಾಲಿಟಿ 6, ಲೆಗಸಿ ಫೀಲ್ಡ್ 4, ಹೈಮಿರಿಚ್ 3
4ನೇ ರೇಸ್: ಫ್ಲೈಟ್ ಆನ್ 10, ರೀಕೊ 2, ಜೆರ್ಸಿ ಕಿಂಗ್ 5
5ನೇ ರೇಸ್: ಝುಕ್ಕಾರೊ 2, ಮೇಯ್ನ್ ಮ್ಯಾಜಿಕ್ 3, ಪೊಸಿಟಾನೊ 4
6ನೇ ರೇಸ್: ಪ್ಲೆಡ್ಜ್ 1, ಕ್ವೀನ್‌ಡಮ್ 6, ಅಮೇಜಿಂಗ್ ಸ್ಟ್ರೈಡ್ 3

ಉತ್ತಮ ಬೆಟ್: ರೀಗಲ್ ರಿಯಾಲಿಟಿ

ಜಾಕ್‌ಪಾಟ್‌ಗೆ	1ನೇ ಟ್ರಬಲ್	2ನೇ ಟ್ರಬಲ್
2,3,4,5,6	1,2,3	4,5,6



ಹಾವೇರಿ ತಾಲ್ಲೂಕಿನ ಅಗಡಿಯಲ್ಲಿ ಹಳ್ಳ ಒಡೆದು ಶನಿವಾರ ಮನೆಗಳಿಗೆ ನೀರು ನುಗ್ಗಿತ್ತು. ನಿವಾಸಿಗಳು ಆತಂಕದಲ್ಲಿ ನಿಂತಿದ್ದರು – ಪ್ರಜಾವಾಣಿ ಚಿತ್ರ



ಭಾರಿ ಮಳೆಯಿಂದಾಗಿ ಮಂಗಳೂರಿನ ಕೊಡಿಯಾಲ್‌ಬೈಲ್‌ನಲ್ಲಿ ಜಲಾವೃತಗೊಂಡ ರಸ್ತೆಯಲ್ಲಿ ವಾಹನ ಸವಾರರು ಸಾಗಿದರು ಚಿತ್ರ : ಫಕ್ರುದ್ದೀನ್ ಎಚ್

ಮಳೆ ಅಬ್ಬರ: ತುಂಬಿ ಹರಿದ ಹಳ್ಳ

ಕಿತ್ತೂರು ಕರ್ನಾಟಕ, ಮಂಗಳೂರಿನಲ್ಲಿ ಗುಡುಗು ಸಹಿತ ವರ್ಷಧಾರೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಧಾರವಾಡ, ಗದಗ, ವಿಜಯಪುರ, ಉತ್ತರ ಕನ್ನಡ, ಬೆಳಗಾವಿ, ಬಾಗಲಕೋಟೆ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಶನಿವಾರ ಜೋರು ಮಳೆ ಸುರಿಯಿತು.

ಗದಗ, ಲಕ್ಷ್ಮೇಶ್ವರ, ನರೇಗಲ್, ಮುಳಗುಂದ, ಗಜೇಂದ್ರಗಡ, ಹುಬ್ಬಳ್ಳಿಯಲ್ಲಿ ಗುಡುಗಿನ ಆರ್ಭಟದೊಂದಿಗೆ ಮಳೆ ಸುರಿಯಿತು. ನರೇಗಲ್ ಹೋಬಳಿಯ ಗಡ್ಡಿಹಳ್ಳ, ಅಗಸರ ಹಳ್ಳ, ಅಬ್ಬಿಗೇರಿ ಹಳ್ಳ, ಮಾರನಬಸರಿ ಹಳ್ಳ, ಹಾಲಕೆರೆ ಹಳ್ಳ ತುಂಬಿ ಹರಿದವು.

ವಿಜಯಪುರ ಜಿಲ್ಲೆಯ ತಾಳಿಕೋಟೆ, ಕಲಕೇರಿ, ಬಸವನಬಾಗೇವಾಡಿ, ಮುದ್ದೇಬಿಹಾಳ, ಹೊರ್ತಿ, ಇಂಚಗೇರಿ ಭಾಗದಲ್ಲಿ ಗುಡುಗು, ಸಿಡಿಲಿನೊಂದಿಗೆ ಧಾರಾಕಾರ ಮಳೆ ಸುರಿಯಿತು.

ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದ ತಾಲ್ಲೂಕುಗಳಲ್ಲಿ ಹಾಗೂ ಘಟ್ಟದ ಮೇಲಿನ ಹಲವೆಡೆ ಬಿರುಸಿನ ಮಳೆ ಸುರಿದಿದೆ. ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರು, ಸವದತ್ತಿ, ಗೋಕಾಕ್, ಮೂಡಲಗಿ ಹಾಗೂ ಯರಗಟ್ಟಿಯಲ್ಲಿಯೂ ಮಳೆಯಾಗಿದೆ. ಬಾಗಲಕೋಟೆ, ಬೆನಕಟ್ಟಿ, ಹುನಗುಂದ, ಶಿರೂರ ಸೇರಿದಂತೆ ವಿವಿಧೆಡೆ ಗುಡುಗು, ಮಿಂಚಿನೊಂದಿಗೆ ಮಳೆ ಸುರಿಯಿತು.

ಹಳ್ಳ ಒಡೆದು ಮುಖ್ಯರಸ್ತೆ ಬಂದ್: ಹಾವೇರಿ ಜಿಲ್ಲೆಯಾದ್ಯಂತ ಶನಿವಾರ ಸಂಜೆಯಿಂದ ರಾತ್ರಿಯವರೆಗೂ ಜೋರು ಮಳೆಯಾಗಿದ್ದು, ಹಲವು ಕಡೆಗಳಲ್ಲಿ ಹಳ್ಳಗಳು ತುಂಬಿ ರಸ್ತೆ ಮೇಲೆ ನೀರು ಹರಿಯಿತು.

ಹಾವೇರಿ ನಗರ, ತಾಲ್ಲೂಕಿನ ಅಗಡಿ, ಬಸಾಪುರ, ಯಲಗಚ್ಚ, ಕರ್ಜಗಿ, ಹಳೇ ರಿತ್ತಿ, ಗುತ್ತಲ ಹಾಗೂ ಸುತ್ತಮುತ್ತಲು ಮಳೆ ಜೋರಾ ಗಿತ್ತು. ಬ್ಯಾಡಗಿ, ರಾಣೆಬೆನ್ನೂರು, ಹಾನಗಲ್ ತಾಲ್ಲೂಕಿನಲ್ಲೂ ಮಳೆಯ ಆರ್ಭಟ ಹೆಚ್ಚಿತ್ತು.

ಮಳೆಯಿಂದಾಗಿ ಅಗಡಿ ಬಳಿಯ ಹಳ್ಳದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಯಿತು. ನೀರಿನ ರಭಸಕ್ಕೆ ಹಳ್ಳ ಒಡೆದು, ಜಮೀನು ಹಾಗೂ ರಸ್ತೆಗೆ ನೀರು ನುಗ್ಗಿತು. ಹಾವೇರಿ–ಗುತ್ತಲ ರಸ್ತೆಯಲ್ಲಿ ಮೂರ್ನಾಲ್ಕು ಗಂಟೆ ವಾಹನಗಳ ಸಂಚಾರ ಬಂದ್ ಆಗಿತ್ತು. ರಸ್ತೆ ಮೇಲೆಯೇ ಐದಾರು ಅಡಿಯಷ್ಟು ನೀರು ನಿಂತಿತ್ತು.

ಮೆಣಸಿನಕಾಯಿ ಬೆಳೆಯಿದ್ದ ಜಮೀನುಗಳಲ್ಲಿಯೂ ನೀರು ನಿಂತುಕೊಂಡಿತ್ತು. ಜಮೀನು ಕೆರೆಯಂತಾಗಿತ್ತು. ತಿಮ್ಮೇನಹಳ್ಳಿ ಕ್ರಾಸ್‌ನಲ್ಲಿರುವ ಬಸ್ ತಂಗುದಾಣಕ್ಕೂ ನೀರು ನುಗ್ಗಿತ್ತು. ಅಗಡಿಯ ಆನಂದವನ ಮಠಕ್ಕೂ ಭಾಗಶಃ ನೀರು ನುಗ್ಗಿತ್ತು. ಮಠಕ್ಕೆ ಬಂದಿದ್ದ ಭಕ್ತರು, ನೀರಿನಲ್ಲಿಯೇ ನಡೆದುಕೊಂಡು ಹೋದರು.

ಮೂರು ದಿನ ಧಾರಾಕಾರ ಮಳೆ ಸಾಧ್ಯತೆ

ಮಂಗಳೂರು: ಮಂಗಳೂರು ಸೇರಿ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆ ಶನಿವಾರ ಉತ್ತಮ ಮಳೆ ಸುರಿಯಿತು. ಉಡುಪಿ ಜಿಲ್ಲೆಯಲ್ಲಿ ಬೆಳಿಗ್ಗೆಯಿಂದ ಮಧ್ಯಾಹ್ನದ ವರೆಗೆ ಸಾಧಾರಣ ಮಳೆಯಾಯಿತು.

ನಗರದ ಕೊಡಿಯಾಲ್‌ಬೈಲ್ ಮತ್ತು ಕೊಡಿಯಾಲ್‌ಗುತ್ತು ರಸ್ತೆಗಳಲ್ಲಿ ನೀರು ನಿಂತ ಕಾರಣ ವಾಹನ ಸವಾರರು ಮತ್ತು ಪಾದಚಾರಿಗಳು ತೊಂದರೆ ಅನುಭವಿಸಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಂದಿನ ಎರಡು ಅಥವಾ ಮೂರು ದಿನ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ ಎಂದು ತಿಳಿಸಿರುವ ಭಾರತೀಯ ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದೆ. ಕರಾವಳಿಯಲ್ಲಿ 40ರಿಂದ 60 ಕಿಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇರುವುದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಸೂಚಿಸಲಾಗಿದೆ.



ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ನರನಾಳ–ಚಿಮ್ಮನಚೋಡ ಮಧ್ಯದ ರಸ್ತೆ ಕುಸಿದು ಸಂಚಾರ ಸ್ಥಗಿತಗೊಂಡಿದೆ

ರಸ್ತೆ ಕುಸಿತ, ಸಂಚಾರ ಸ್ಥಗಿತ

ಕಲಬುರಗಿ: ಚಿಂಚೋಳಿ, ಕಾಳಗಿ ಮತ್ತು ಸೇಡಂ ತಾಲ್ಲೂಕಿನಲ್ಲಿ ಶನಿವಾರ ಭಾರಿ ಮಳೆಯಾಗಿದ್ದು, ಚಿಂಚೋಳಿ ತಾಲ್ಲೂಕಿನ ನರನಾಳ-ಚಿಮ್ಮನಚೋಡ ಮಾರ್ಗದಲ್ಲಿ ಕಾಲುವೆಯ ಮೇಲಿನ ರಸ್ತೆ ಕುಸಿದಿದೆ. ಚಿಂಚೋಳಿ- ಭಾಲ್ಕಿ ಪಟ್ಟಣ ಸಂಪರ್ಕಿಸುವ ರಸ್ತೆಯಲ್ಲಿ ಸಂಚಾರ ಸ್ಥಗಿತಗೊಂಡಿದೆ.

ಭಾಲ್ಕಿ-ಚಿಂಚೋಳಿ ರಾಜ್ಯ ಹೆದ್ದಾರಿ 75ರ ಕೆಳಗೆ ಕಾಲುವೆ (ನಾಲೆ) ಹಾದು ಹೋಗಿದ್ದು ಮೇಲಿನ ಸಿಮೆಂಟ್ ಕಾಂಕ್ರೀಟ್ ಬೆಡ್ ಮತ್ತು ಡಾಂಬರ್ ರಸ್ತೆಯಿತ್ತು. ರಸ್ತೆ-ಕಾಂಕ್ರೀಟ್ ಬೆಡ್ ಜೋಡಣೆಯಾಗುವ ಸ್ಥಳದಲ್ಲಿ ಬಿರುಕು ಬಿಟ್ಟು ಕುಸಿದಿದೆ. ತುರ್ತಾಗಿ ಸಂಚರಿಸಲು ಕುಸಿತದ ಸ್ಥಳದಲ್ಲಿ ಮುರುಮ್ ತುಂಬಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಂಚಮಸಾಲಿ ಪೀಠದ ಒಂದೂವರೆ ಕೆ.ಜಿ. ಚಿನ್ನ ನಾಪತ್ತೆ: ಆರೋಪ

ದಾವಣಗೆರೆ: 'ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರು ಪೀಠಕ್ಕೆ ಸೇರಿದ ಒಂದೂವರೆ ಕೆ.ಜಿ. ಚಿನ್ನ ನಾಪತ್ತೆಯಾಗಿದೆ. ಈ ಚಿನ್ನ ಟ್ರಸ್ಟಿಗಳ ಬಳಿ ಇತ್ತು. ಅವರು ಲೆಕ್ಕ ಒಪ್ಪಿಸದೇ ಸತ್ಯ ಮುಚ್ಚಿಟ್ಟಿದ್ದಾರೆ' ಎಂದು 'ಲೆಕ್ಕ ಕೊಡಿ ಚಳವಳಿ'ಯ ಮುಖಂಡ ಸೋಮಣ್ಣ ಬೇವಿನಮರದ ಆರೋಪಿಸಿದರು.

'2008ರಲ್ಲಿ ಹರಿಹರದ ಪಂಚಮಸಾಲಿ ಮಠ ಸ್ಥಾಪಿಸುವಾಗ ನಡೆದ ಕಾರ್ಯಕ್ರಮದಲ್ಲಿ ಭಕ್ತರು ಮಠದ ಶ್ರೀಗಳಿಗೆ ಚಿನ್ನದ ಉಂಗುರ ಸೇರಿ ಅಂದಾಜು ಒಂದೂವರೆ ಕೆ.ಜಿ. ಚಿನ್ನದ ಆಭರಣವನ್ನು ದಾನವಾಗಿ ನೀಡಿದ್ದರು. ಇತ್ತೀಚೆಗೆ ಭಕ್ತರು ಈ ವಿಷಯವನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಸ್ವಾಮೀಜಿಗೆ ನೀಡಿದ್ದ ಎಲ್ಲ ಆಭರಣಗಳನ್ನು ಟ್ರಸ್ಟ್‌ನವರೇ ಇಟ್ಟುಕೊಂಡಿದ್ದರು' ಎಂದು ಹನಗವಾಡಿ ಬಳಿ ಶನಿವಾರ ನಡೆದ ಲೆಕ್ಕ ಕೊಡಿ ಚಳವಳಿಯ ಸಭೆಯಲ್ಲಿ ಹೇಳಿದರು.

'ಟ್ರಸ್ಟ್‌ನವರು ₹ 27 ಕೋಟಿ ನಗದು ಕುರಿತ ಲೆಕ್ಕವನ್ನು ಮಾತ್ರ ಸಮಾಜದ ಮುಂದೆ ಇಟ್ಟಿದ್ದಾರೆ. ಮಠದ ಹೆಸರಿನಲ್ಲಿರುವ ಬೆಳ್ಳಿ, ಬಂಗಾರ ಎಷ್ಟು, ಮಠಕ್ಕೆ ಸೇರಿದ ಜಮೀನು ಎಲ್ಲೆಲ್ಲಿದೆ ಎಂಬ ಕುರಿತ ದಾಖಲೆಗಳನ್ನು ತಕ್ಷಣವೇ ಬಹಿರಂಗಪಡಿಸಬೇಕು' ಎಂದು ಆಗ್ರಹಿಸಿದರು.

ವಿಚಾರಣೆ ಮುಂದೂಡಿಕೆ: ಪಂಚಮಸಾಲಿ ಗುರುಪೀಠದ ಪದಚ್ಯುತ ಪೀಠಾಧ್ಯಕ್ಷ ವಚನಾನಂದ ಶ್ರೀಗಳಿಗೆ ಪೋಕ್ಸೊ ಪ್ರಕರಣದಲ್ಲಿ ನೀಡಿರುವ ನಿರೀಕ್ಷಣಾ ಜಾಮೀನು ರದ್ದತಿ ಕೋರಿ ಪೊಲೀಸರು ಸಲ್ಲಿಸಿರುವ ಅರ್ಜಿ ವಿಚಾರಣೆಯು ಜೂನ್ 11ಕ್ಕೆ ಮುಂದೂಡಿಕೆಯಾಗಿದೆ.

ಇಂಡುವಾಳು: ರೈತಸಂಘ ನೇತೃತ್ವದ 1295 ಕಿ.ಮೀ. ಪಾದಯಾತ್ರೆ ಮುಕ್ತಾಯ

ಸರ್ಕಾರಿ ಶಾಲೆ ಉಳಿವಿಗೆ 'ಪಂಜಿನ ಮೆರವಣಿಗೆ'

ಪ್ರಜಾವಾಣಿ ವಾರ್ತೆ

ಮಂಡ್ಯ: ಏಕರೂಪ ಸಮಾನ ಶಿಕ್ಷಣ ಜಾರಿ ಹಾಗೂ ಸರ್ಕಾರಿ ಶಾಲೆಗಳ ಉಳಿವಿಗೆ ಆಗ್ರಹಿಸಿ ರೈತ ಸಂಘದ ನೇತೃತ್ವದಲ್ಲಿ ಶನಿವಾರ ಬೃಹತ್ ಪಂಜಿನ ಮೆರವಣಿಗೆ ನಡೆಯಿತು. ಐದು ಕಿ.ಮೀ. ಪಾದಯಾತ್ರೆಯಲ್ಲಿ ಕನ್ನಡ ಮಾಧ್ಯಮ ಶಾಲೆಗಳ ಪರ ಘೋಷಣೆ ಮೊಳಗಿದವು.

ತಾಲ್ಲೂಕಿನ ಇಂಡುವಾಳು ಗ್ರಾಮದಿಂದ ಸಂಜೆ 6.30ಕ್ಕೆ ಆರಂಭವಾದ ಪಂಜಿನ ಮೆರವಣಿಗೆ ಹಳೆ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಸಾಗಿ, ರಾತ್ರಿ 8ಕ್ಕೆ ಮಂಡ್ಯ ನಗರದ ಜೆ.ಸಿ. ವೃತ್ತ ತಲುಪಿತು. ಮಾನವ ಸರಪಳಿ ರಚಿಸಿ ಕೆಲಕಾಲ ರಸ್ತೆ ತಡೆ ನಡೆಸಿದರು. ಪಂಜುಗಳನ್ನು ರಸ್ತೆ ಮೇಲೆ ಒಟ್ಟಿಗೆ ಸುರಿದಾಗ ಬೆಂಕಿ ಧಗಧಗನೆ ಉರಿಯಿತು. ಸ್ಥಳದಲ್ಲೇ ಇದ್ದ ಅಗ್ನಿಶಾಮಕದಳದ ಸಿಬ್ಬಂದಿ ಬೆಂಕಿ ನಂದಿಸಿದರು. ಪೊಲೀಸರು ಪಂಜುಗಳನ್ನು ತೆರವುಗೊಳಿಸಿದರು.



ಏಕರೂಪ ಸಮಾನ ಶಿಕ್ಷಣ ಜಾರಿ ಹಾಗೂ ಸರ್ಕಾರಿ ಶಾಲೆಗಳ ಉಳಿವಿಗೆ ಆಗ್ರಹಿಸಿ ರೈತ ಸಂಘದ ನೇತೃತ್ವದಲ್ಲಿ ಮಂಡ್ಯ ತಾಲ್ಲೂಕಿನ ಇಂಡುವಾಳು ಗ್ರಾಮದಿಂದ ಮಂಡ್ಯ ನಗರದವರೆಗೆ ಶನಿವಾರ ಪಂಜಿನ ಮೆರವಣಿಗೆ ನಡೆಯಿತು –ಪ್ರಜಾವಾಣಿ ಚಿತ್ರ

ರೈತಸಂಘದ ಕಾರ್ಯಕರ್ತರು, ಎಸ್‌ಡಿಎಂಸಿ ಸದಸ್ಯರು, ಕನ್ನಡಪರ ಸಂಘಟನೆಗಳ ಪ್ರತಿನಿಧಿಗಳು, ಕನ್ನಡ ಶಾಲೆಗಳ ಪ್ರೇಮಿಗಳು, ವಿದ್ಯಾರ್ಥಿಗಳು, ಮಕ್ಕಳ ಪೋಷಕರು ಸೇರಿದಂತೆ 500ಕ್ಕೂ ಅಧಿಕ ಮಂದಿ ಪಂಜು ಹಿಡಿದು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. ಸರ್ಕಾರಿ ಕನ್ನಡ ಶಾಲೆಗಳನ್ನು ಯಾವುದೇ ಕಾರಣಕ್ಕೂ ಮುಚ್ಚಬಾರದು ಎಂದು ಆಗ್ರಹಿಸಿದರು.

ಮೈಸೂರು, ತುಮಕೂರು, ಹಾಸನ, ಬೆಂಗಳೂರು, ರಾಮನಗರ, ಚಾಮರಾಜನಗರ, ಕೊಡಗು, ಧಾರವಾಡ, ಹಾಗೂ ಮಂಡ್ಯ ಜಿಲ್ಲೆಯ ವಿವಿಧ ಭಾಗಗಳಿಂದ ಬಂದಿದ್ದ ಕನ್ನಡ ಪ್ರೇಮಿಗಳು 'ಏಕರೂಪ ಶಿಕ್ಷಣ ಜಾರಿಯಾಗಬೇಕು' ಎಂದು ಘೋಷಣೆ ಮೊಳಗಿಸಿದರು.

ಜಿಲ್ಲೆಯ ಎಸ್.ಡಿ.ಎಂ.ಸಿ ಸಂಘದ ಸಹಕಾರದೊಂದಿಗೆ ಈಗಾಗಲೇ 1,295 ಕಿ.ಮೀ. ಪಾದಯಾತ್ರೆ ಸತತ 55 ದಿನ ನಡೆದಿದೆ. ಒಟ್ಟು 233 ಪಂಚಾಯಿತಿಗಳ ಮೂಲಕ ಒಂದು ಸಾವಿರಕ್ಕೂ ಹೆಚ್ಚು ಹಳ್ಳಿಯ ಶಾಲೆಗಳನ್ನು ತಲುಪಿದೆ.

ಶಾಸಕ ಸಲಗರಗೆ ಜಾಮೀನು ರಹಿತ ವಾರಂಟ್

ಬಸವಕಲ್ಯಾಣ (ಬೀದರ್ ಜಿಲ್ಲೆ): ಬಕ್ರೀದ್ ಹಬ್ಬದ ವೇಳೆ ನಡೆದ ಗಲಾಟೆ ಪ್ರಕರಣ ಸಂಬಂಧ ಬಸವಕಲ್ಯಾಣ ಕ್ಷೇತ್ರದ ಬಿಜೆಪಿ ಶಾಸಕ ಶರಣು ಸಲಗರ ಅವರಿಗೆ ಜಾಮೀನುರಹಿತ ಬಂಧನ ವಾರಂಟ್ ಹೊರಡಿಸಲಾಗಿದೆ.




ಶರಣು ಸಲಗರ

ಬೆಂಗಳೂರಿನ 42ನೇ ಎಸಿಜೆಎಂ ಕೋರ್ಟ್ ವಾರಂಟ್ ಜಾರಿ ಮಾಡಿದೆ. 2023ರ ಜುಲೈನಲ್ಲಿ ಬಕ್ರೀದ್ ಹಬ್ಬದಂದು ನಗರದ ಮುಸ್ಲಿಂ ಸಮುದಾಯದವರ ಮನೆಗೆ ಹೋಗಿ ಅಕ್ರಮವಾಗಿ ಗೋಹತ್ಯೆ ನಡೆದಿದೆ ಎಂದು ಸಲಗರ ಗಲಾಟೆ ನಡೆಸಿದ್ದಕ್ಕಾಗಿ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು. ಈ ಸಂಬಂಧ ಪೊಲೀಸರು ಈಗಾಗಲೇ ಕೋರ್ಟ್‌ಗೆ ಆರೋಪಪಟ್ಟಿ ಸಲ್ಲಿಸಿದ್ದಾರೆ. ವಿಚಾರಣೆಗೆ ಹಾಜರಾಗದ ಕಾರಣ ವಾರಂಟ್ ಹೊರಡಿಸಲಾಗಿದೆ. ಇವರ ಜೊತೆಯಲ್ಲಿದ್ದ ಇತರೆ 9 ಜನರ ವಿರುದ್ಧವೂ ವಾರಂಟ್ ಜಾರಿಯಾಗಿದೆ.

ನಗರ ಠಾಣೆಯ ಸಿಪಿಐ, ಎಸ್‌ಐ ಸಲಗರ ನಿವಾಸಕ್ಕೆ ಶನಿವಾರ ಭೇಟಿ ನೀಡಿದ್ದಾರೆ. ಆದರೆ, ಶಾಸಕರು ಮನೆಯಲ್ಲಿ ಇರಲಿಲ್ಲ ಎಂದು ತಿಳಿದು ಬಂದಿದೆ.

ನಿಧನ ವಾರ್ತೆ

ಜನಾರ್ದನ ಮರವಂತೆ



ಕುಂದಾಪುರ (ಉಡುಪಿ): ಪತ್ರಕರ್ತ, ನಿವೃತ್ತ ಪ್ರಾಂಶುಪಾಲ ಎಸ್.ಜನಾರ್ದನ ಮರವಂತೆ (88) (ಜನಾರ್ದನ್ ಮೇಷ್ಟ್ರು) ಶನಿವಾರ ನಿಧನರಾದರು.

ಅವರು ಹಲವು ವರ್ಷಗಳ ಕಾಲ 'ಪ್ರಜಾವಾಣಿ' ಪತ್ರಿಕೆಯ ಬೈಂದೂರು ಅರೆಕಾಲಿಕ ವರದಿಗಾರರಾಗಿದ್ದರು. ಮರವಂತೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದ ಅವರು, ರಾಷ್ಟ್ರೀಯ ಪಂಚಾಯತ್ ರಾಜ್ ಸಲಹಾ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು.

ಅವರಿಗೆ ಇಬ್ಬರು ಪುತ್ರರು ಇದ್ದಾರೆ. ಭಾನುವಾರ (ಜೂನ್ 7) ಮಧ್ಯಾಹ್ನದ ಬಳಿಕ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಜೈಲಿಗೆ ಬೇಕು ಸುಧಾರಣೆ

ಒಂದನೇ ಪುಟದಿಂದ...

ಜೈಲಿನಲ್ಲಿರುವ ಕೈದಿಗಳಿಗೆ ಮೊಬೈಲ್ ಫೋನ್‌ಗಳು ಸುಲಭವಾಗಿ ಸಿಗುತ್ತಿರುವುದಕ್ಕೆ ಭ್ರಷ್ಟ ವ್ಯವಸ್ಥೆಯೇ ಕಾರಣ ಎಂಬುದು ಸ್ಪಷ್ಟ. ಜೈಲಿನ ಅಧಿಕಾರಿಗಳ ಕಣ್ತಪ್ಪಿಸಿ ಒಳಗಡೆ ನಿಷೇಧಿತ ವಸ್ತುಗಳನ್ನು ಕೊಂಡೊಯ್ಯಲು ಸಾಧ್ಯವೇ ಇಲ್ಲ. ಒಂದೊಮ್ಮೆ ಸಾಧ್ಯ ಎಂದಾದರೆ ಅದಕ್ಕೆ ಕಾರಣ ಭದ್ರತಾ ಲೋಪ ಎಂಬುದೂ ಸುಸ್ಪಷ್ಟ.

ಕೆಲವೆಡೆ ಕಾರಾಗೃಹಗಳು ಊರ ಮಧ್ಯದಲ್ಲೇ ಇವೆ. ಅಥವಾ ಮೊದಲು ಹೊರಗಿದ್ದ ಜೈಲುಗಳು ಊರು ಬೆಳೆದ ಕಾರಣಕ್ಕೆ ಈಗ ಮಧ್ಯದಲ್ಲಿರಬಹುದು. ಕೆಲವು ಜೈಲುಗಳಲ್ಲಿ 20ರಿಂದ 25 ಅಡಿ ಎತ್ತರದ ಕಾಂಪೌಂಡ್‌ಗಳಿವೆ. ಆದರೂ, ಬೀಡಿ, ಸಿಗರೇಟ್, ಗಾಂಜಾ, ಮದ್ಯದ ಪೌಚ್‌ಗಳನ್ನು ಕಾಗದದಲ್ಲಿ ಸುತ್ತಿ ಅದರ ಮೇಲೆ ಕೈದಿಯ ಹೆಸರು ಬರೆದು ಕಾಂಪೌಂಡ್ ಪಕ್ಕದಲ್ಲಿ ನಿಂತು ಜೈಲಿನೊಳಗೆ ಎಸೆಯಲಾಗುತ್ತಿದೆ. ಅದನ್ನು ಹೆಸರಿರುವವರಿಗೇ ಮುಟ್ಟಿಸಬೇಕೆಂಬ 'ಹೊಂದಾಣಿಕೆ' ಒಳಗಿದ್ದವರಲ್ಲಿದೆ. ವಸ್ತುಗಳನ್ನು ಎಸೆಯುವ ವಿಷಯ ಜೈಲು ಸಿಬ್ಬಂದಿಗೆ ಗೊತ್ತಾಗದಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ಇಂತಿಷ್ಟು ಹೊತ್ತಿಗೇ ಎಸೆಯಬೇಕು ಎಂಬ ಸಂದೇಶವನ್ನೂ ಹೊರಗಿನವರಿಗೆ ನೀಡಲಾಗಿರುತ್ತದೆ. ಇದನ್ನು ತಪ್ಪಿಸಲೆಂದೇ ಇಡೀ ಜೈಲು ಆವರಣಕ್ಕೇ ಹಸಿರು ಬಣ್ಣದ ಜಾಲರಿ ಕಟ್ಟಲಾಗಿದೆ. ಆದರೂ ನಿಷೇಧಿತ ವಸ್ತುಗಳು ಜೈಲಿನೊಳಗೆ ಸೇರುತ್ತಲೇ ಇವೆ.

ಜಾಮರ್ ಇದ್ದರೂ ಇಲ್ಲ ಪ್ರಯೋಜನ: ಮೊಬೈಲ್ ಫೋನ್, ಚಾರ್ಜರ್‌ಗಳು ಎಗ್ಗಿಲ್ಲದೇ ಜೈಲಿನ ಒಳನುಗ್ಗುತ್ತಿವೆ. ಅದನ್ನು ಬಳಸುವವರು ಸುಲಭಕ್ಕೆ ಸಿಕ್ಕಿಹಾಕಿಕೊಳ್ಳದಂತೆ ಸಿಮ್ ಕಾರ್ಡ್‌ಗಳನ್ನೂ ಬದಲಿಸುತ್ತಾರೆ. ಸಿಮ್ ಕಾರ್ಡ್‌ಗಳೂ ಅಕ್ರಮವಾಗಿ ಜೈಲು ಸೇರುತ್ತಿವೆ. ಕೈದಿಗಳು ಕದ್ದುಮುಚ್ಚಿ ಮೊಬೈಲ್ ಬಳಸುವುದಕ್ಕೆ ಕಡಿವಾಣ ಹಾಕಲೆಂದೇ ವಿವಿಧ ಜೈಲುಗಳಲ್ಲಿ ಕೋಟ್ಯಂತರ ರೂಪಾಯಿ ವ್ಯಯಿಸಿ ಮೊಬೈಲ್ ಜಾಮರ್ ಅಳವಡಿಸಲಾಗಿದೆ. ಆದರೂ ಕೈದಿಗಳು ಮೊಬೈಲ್ ಬಳಸುವುದು ನಿಂತಿಲ್ಲ. ಪ್ರತಿ ಸಲ ಪೊಲೀಸ್ ಅಧಿಕಾರಿಗಳು ದಾಳಿ ಮಾಡಿದಾಗ ಹತ್ತಾರು ಮೊಬೈಲ್‌ಗಳು ಸಿಗುವುದು ಸಾಮಾನ್ಯವಾಗಿದೆ.

ಜೈಲು ಕಟ್ಟಡಗಳ ಸುತ್ತಮುತ್ತಲಿನ 2 ಕಿ.ಮೀ ವ್ಯಾಪ್ತಿಯಲ್ಲಿ ಮೊಬೈಲ್ ಸಿಗ್ನಲ್ ಸಮಸ್ಯೆ ಕಾಣಿಸುತ್ತಿದ್ದು, ತಮಗೆ ಮಾತನಾಡಲೂ ಆಗುತ್ತಿಲ್ಲ ಎಂದು ಸುತ್ತಮುತ್ತಲಿನ ನಿವಾಸಿಗಳು ಅಳಲು ತೋಡಿಕೊಳ್ಳುತ್ತಾರೆ. ಕೆಲವೆಡೆ 2–ಜಿ, 3–ಜಿ ನೆಟ್‌ವರ್ಕ್‌ನ ಜಾಮರ್ ಇವೆ. ಈಗ ಬಳಕೆಯಲ್ಲಿರುವ ನೆಟ್‌ವರ್ಕ್ 5–ಜಿ. ಅದನ್ನು ನಿಯಂತ್ರಿಸುವ ಜಾಮರ್‌ಗಳಿಲ್ಲ ಎಂದು ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆಯ ಅಧಿಕಾರಿಗಳು ಹೇಳುತ್ತಾರೆ.

ಪ್ರತ್ಯೇಕ ಭದ್ರತಾ ವ್ಯವಸ್ಥೆ: 'ಬೆಳಗಾವಿಯ ಹಿಂಡಲಗಾ, ಬಳ್ಳಾರಿ, ಬೆಂಗಳೂರಿನ ಪರಪ್ಪನ ಅಗ್ರಹಾರ, ಕಲಬುರಗಿ, ಧಾರವಾಡ, ವಿಜಯಪುರ, ಮೈಸೂರು ಮತ್ತು ಶಿವಮೊಗ್ಗದಲ್ಲಿರುವ ಕೇಂದ್ರ ಕಾರಾಗೃಹಗಳು, ಮಂಗಳೂರಿನಲ್ಲಿರುವ ಜಿಲ್ಲಾ ಕಾರಾಗೃಹಕ್ಕೆ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ (ಕೆಎಸ್‌ಐಎಸ್‌ಎಫ್) ಸಿಬ್ಬಂದಿಯನ್ನು ಭದ್ರತೆ ಮತ್ತು ತಪಾಸಣೆಗೆ ನಿಯೋಜಿಸಲಾಗಿದೆ. ಸ್ವತಃ ಜೈಲರ್ ಒಳ ಹೋಗುವಾಗಲೂ ತಪಾಸಣೆ ಕಡ್ಡಾಯ. ಆದರೂ ನಿಷೇಧಿತ ವಸ್ತು ಕೈದಿಗಳ ಕೈಸೇರಿದರೆ ಒಳಗೆ ಕೆಲಸ ಮಾಡುವ ಸಿಬ್ಬಂದಿಯನ್ನೇ ಹೊಣೆ ಮಾಡಲಾಗುತ್ತದೆ. ನಿಷೇಧಿತ ವಸ್ತುಗಳನ್ನು ಕದ್ದುಮುಚ್ಚಿ ಬಳಸುವ ಕೈದಿಗಳ ಮೇಲೆ ನಿಗಾ ಇರಿಸುವಷ್ಟು ಸಿಬ್ಬಂದಿ ಜೈಲುಗಳಲ್ಲಿ ಇಲ್ಲ. ತಪಾಸಣೆ ವ್ಯವಸ್ಥೆಯನ್ನು ಬಿಗಿಗೊಳಿಸಿದರೆ ಇದನ್ನು ತಡೆಯಬಹುದು ಎಂಬುದು ಅಧಿಕಾರಿಗಳ ಸಲಹೆ.


ವಿಜಯಪುರ ಜಿಲ್ಲಾ ಕೇಂದ್ರ ಕಾರಾಗೃಹದ (ದರ್ಗಾ ಜೈಲ್) ಒಳ ಆವರಣ

ಗುಂಪು ಹೊಡೆದಾಟದಲ್ಲಿ ಭಾಗಿಯಾಗಿ ಜೈಲಿಗೆ ಬಂದವರು ಜೈಲರ್ ಮೇಲೇ ಹಲ್ಲೆ ನಡೆಸಿದ ಪ್ರಕರಣಗಳು ವರದಿಯಾಗಿವೆ. ಬಾಗಲಕೋಟೆ ಜಿಲ್ಲೆಯ ಜಮಖಂಡಿಯಲ್ಲಿರುವ ತಾಲ್ಲೂಕು ಕಾರಾಗೃಹದಲ್ಲಿ ತೀರಾ ಈಚೆಗೆ ಕೈದಿಗಳ ನಡುವಿನ ಜಗಳ ಬಿಡಿಸಲು ಯತ್ನಿಸಿದ ಜೈಲರ್ ಮೇಲೆ ಹಲ್ಲೆ ನಡೆಸಿ, ಅವರ ಕೈ ಮುರಿಯಲಾಗಿತ್ತು. ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಣೆ ಮಾಡಿದ ಪ್ರಕರಣದ ಆರೋಪಿಗಳು ಈ ಹಲ್ಲೆ ಮಾಡಿದ್ದು, ಅವರ ವಿರುದ್ಧ ಪೊಲೀಸರು ಮತ್ತೊಂದು ಪ್ರಕರಣ ದಾಖಲಿಸಿದ್ದಾರೆ.

ಸುಧಾರಣೆ ಆಗುತ್ತಿಲ್ಲ: ಶಿಕ್ಷೆಗೊಳಗಾದ ಕೈದಿಗಳ ಮನಃಪರಿವರ್ತನೆ ಮಾಡಲು ಬಂಧಿಖಾನೆ ವ್ಯವಸ್ಥೆ ಇದೆ. ಆದರೆ, ಇತ್ತೀಚಿನ ದಿನಗಳಲ್ಲಿ ಹದಗೆಟ್ಟು ಹೋಗಿರುವ ಕಾರಾಗೃಹ ವ್ಯವಸ್ಥೆಯನ್ನೇ ತಿದ್ದುವ, 'ಸುಧಾರಣೆ' ತರುವ ಅಗತ್ಯ ಇದೆ ಎಂದು ಬಳ್ಳಾರಿ ಕೇಂದ್ರ ಕಾರಾಗೃಹ ವೀಕ್ಷಣಾ ಸಮಿತಿ ಸದಸ್ಯ ಟಿ.ಜಿ.ವಿಠ್ಠಲ್ ಅಭಿಪ್ರಾಯಪಡುತ್ತಾರೆ.

ಅಪರಾಧ ಸಾಬೀತಾಗಿ ಶಿಕ್ಷೆಗೆ ಒಳಗಾದವರನ್ನೂ, ವಿಚಾರಣಾಧೀನ ಕೈದಿಗಳನ್ನೂ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗುತ್ತದೆ. ಜಿಲ್ಲಾ ಮಟ್ಟದ ಉಪ ಕಾರಾಗೃಹಗಳು (ಸಬ್ ಜೈಲ್), ತಾಲ್ಲೂಕು ಮಟ್ಟದ ಕಾರಾಗೃಹಗಳಲ್ಲಿ ವಿಚಾರಣಾಧೀನ ಕೈದಿಗಳನ್ನು ಮಾತ್ರ ಇರಿಸಲಾಗುತ್ತದೆ. ನಿತ್ಯವೂ ಒಂದಿಲ್ಲೊಂದು ಜೈಲಿನಲ್ಲಿ ಗದ್ದಲ, ಹೊಡೆದಾಟದಂತಹ ಘಟನೆಗಳು ನಡೆಯುತ್ತಲೇ ಇವೆ. ಮುಕ್ತ ವಾತಾವರಣದಲ್ಲಿ ಅಪರಾಧ ಎಸಗಿ ಜೈಲು ಪಾಲಾದವರೇ ಜೈಲಲ್ಲೂ ಮತ್ತದೇ ಚಟುವಟಿಕೆಯಲ್ಲಿ ಭಾಗಿಯಾಗುತ್ತ ಭೀತಿ ಸೃಷ್ಟಿಸುತ್ತಿದ್ದಾರೆ ಎನ್ನುತ್ತಾರೆ.

ಸ್ವಾತಂತ್ರ್ಯಪೂರ್ವದಲ್ಲಿದ್ದ ಕಾರಾಗೃಹ ವ್ಯವಸ್ಥೆ ಈಗ ಇಲ್ಲ. ಹೊರ ಪ್ರಪಂಚದ ಸಂಪರ್ಕ ಸಂಪೂರ್ಣ ನಿಷಿದ್ಧ ಎಂಬ ಕಾರಣದಿಂದ ಆಗ ಜೈಲುಗಳಲ್ಲಿ ಇರುವುದೇ ಕಠಿಣ ಶಿಕ್ಷೆ ಎನಿಸಿಕೊಳ್ಳುತ್ತಿತ್ತು. ಈಗ ಬಂಧಿಖಾನೆ ವಾಸ ಶಿಕ್ಷೆಯೇ ಅಲ್ಲ ಎಂಬಂತಾಗಿದೆ. ಹೊರಗಡೆ ಸಿಗುವ ಸಕಲ ಸೌಲಭ್ಯಗಳು ಜೈಲಿನಲ್ಲಿ ಲಭ್ಯವಿರುವುದು ಇದಕ್ಕೆ ಕಾರಣ. ಮಾನವ ಹಕ್ಕುಗಳು ಅಪರಾಧಿಗಳನ್ನು ಸ್ವಲ್ಪ ಪ್ರಮಾಣದಲ್ಲಿ ರಕ್ಷಣೆ ಮಾಡುತ್ತಿವೆ ಎಂದೂ ಅವರು ಹೇಳುತ್ತಾರೆ.

ಕೈದಿಗಳು ಸಂಬಂಧಿಗಳೊಂದಿಗೆ ಸಂಪರ್ಕದಲ್ಲಿರಲು ಬಯಸುತ್ತಾರೆ. ಅವರಿಗೆ ವಾರಕ್ಕೆ ಮೂರು ಬಾರಿ ಸ್ಥಿರ ದೂರವಾಣಿ ಬಳಸಲು ಅವಕಾಶ ಕಲ್ಪಿಸಲಾಗಿದೆ.

ಸ್ಥಗಿತಗೊಂಡಿದೆ ತರಬೇತಿ!

ಕಾರಾಗೃಹ ಸಿಬ್ಬಂದಿಗೆ ತರಬೇತಿ ನೀಡುವ ರಾಜ್ಯದ ಏಕೈಕ ಸಂಸ್ಥೆ ಮೈಸೂರು ನಗರದಲ್ಲಿದ್ದು, ಹೊಸ ಸಿಬ್ಬಂದಿಯ ನೇಮಕಾತಿಯಾಗದೆ ನಾಲ್ಕೈದು ವರ್ಷಗಳಿಂದ ತರಬೇತಿ ಸ್ಥಗಿತವಾಗಿದೆ. ಹಾಲಿ ಸಿಬ್ಬಂದಿಗೆ ಕೌಶಲಾಭಿವೃದ್ಧಿ ತರಬೇತಿಯಷ್ಟೇ ನಡೆಯುತ್ತಿದೆ. ಇಲ್ಲಿ ಪ್ರಾಂಶುಪಾಲ ಸೇರಿ 20 ಜನ ಸಿಬ್ಬಂದಿ ಇದ್ದಾರೆ.

9 ತಿಂಗಳ ಪಠ್ಯ ಬೋಧನೆ ಹಾಗೂ ದೈಹಿಕ ತರಬೇತಿ ಸದ್ಯ ಸ್ಥಗಿತಗೊಂಡಿದ್ದು, ಸಿಬ್ಬಂದಿ ನೇಮಕಾತಿ ನಡೆದರಷ್ಟೇ ಪುನರಾರಂಭಗೊಳ್ಳಲಿದೆ.

ಸದ್ಯ ಮೂರು ಅಥವಾ ಐದು ದಿನಗಳ ಕೌಶಲಾಭಿವೃದ್ಧಿ ತರಬೇತಿಯ ಪ್ರತಿ ತಂಡದಲ್ಲಿ ರಾಜ್ಯದ ವಿವಿಧ ಕಾರಾಗೃಹಗಳ 20 ಸಿಬ್ಬಂದಿ ಇರುತ್ತಾರೆ. ತಿಂಗಳಲ್ಲಿ ನಾಲ್ಕು ತಂಡಗಳಿಗೆ ತರಬೇತಿ ನಡೆಯುತ್ತದೆ.

ಕಾರಾಗೃಹದೊಳಗೆ ನಿಷೇಧಿತ ವಸ್ತು ಕೊಂಡೊಯ್ಯುವುದನ್ನು ತಪ್ಪಿಸುವುದು ಹೇಗೆ? ಯಾವ ರೀತಿ ತಪಾಸಣೆ ನಡೆಸಬೇಕು? ಕೈದಿಗಳ ನಿರ್ವಹಣೆ, ಜೈಲಿಗೆ ಬಂದ ಆರಂಭದಲ್ಲಿ ಆಪ್ತ ಸಮಾಲೋಚನೆ ನಡೆಸುವ ವಿಧದ ಬಗ್ಗೆ ಬೋಧನೆ ಮಾಡಲಾಗುತ್ತಿದೆ. ಆ ಮೂಲಕ, ಕೈದಿಗಳ ಆತ್ಮಹತ್ಯೆಯಂತಹ ಪ್ರಕರಣಗಳು ನಡೆಯದಂತೆ ನೋಡಿಕೊಳ್ಳಲು ಸಿಬ್ಬಂದಿಯನ್ನು ಹುರಿದುಂಬಿಸಲಾಗುತ್ತಿದೆ.

'ರಿಫ್ರೆಶ್‌ಮೆಂಟ್ ತರಬೇತಿಗಳಲ್ಲಿ ಪಠ್ಯ ವಿಚಾರಗಳ ಬದಲಿಗೆ, ಅನಿವಾರ್ಯ ಸನ್ನಿವೇಶಗಳ ನಿರ್ವಹಣೆ ಕುರಿತು ಬೋಧಿಸಲಾಗುತ್ತಿದೆ' ಎಂದು ಸಂಸ್ಥೆಯ ಪ್ರಾಂಶುಪಾಲ ಓಬಳೇಶಪ್ಪ ತಿಳಿಸಿದ್ದಾರೆ.

ಆದರೆ, ಕರೆಗಳನ್ನು 'ರೆಕಾರ್ಡ್' ಮಾಡಿಕೊಳ್ಳುವ ಪದ್ಧತಿ ಇರುವುದರಿಂದ ಖಾಸಗಿತನಕ್ಕೆ ಧಕ್ಕೆ ಆಗುತ್ತದೆ ಎಂದು ಬಹುತೇಕರು 'ಕಳ್ಳದಾರಿ'ಯ ಮೂಲಕ ಮೊಬೈಲ್ ಫೋನ್ ತರಿಸಿಕೊಂಡು ಕದ್ದುಮುಚ್ಚಿ ಮಾತನಾಡುತ್ತಾರೆ. ಸಮಾಜಘಾತುಕ, ವಿಚ್ಛಿದ್ರಕಾರಿ ಚಟುವಟಿಕೆಯಲ್ಲಿ ತೊಡಗಿ ಜೈಲು ಪಾಲಾದ ಕೆಲವರು ಮೊಬೈಲ್ ಬಳಸಿ ಹೊರ ಜಗತ್ತನ್ನೂ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಹವಣಿಸುತ್ತಾರೆ ಎಂದು ಅವರು ಮಾಹಿತಿ ನೀಡುತ್ತಾರೆ.

ದಟ್ಟಣೆ; ಸಿಬ್ಬಂದಿ ಕೊರತೆ

ಕಾರಾಗೃಹಗಳಲ್ಲಿನ ಸ್ಥಳಾವಕಾಶ ಮೀರಿ ಕೈದಿಗಳಿದ್ದಾರೆ. ಶಿವಮೊಗ್ಗದಲ್ಲಿರುವ ಕಾರಾಗೃಹದ ಮಿತಿ 500. ಆದರೆ, ಅಲ್ಲಿರುವ ಕೈದಿಗಳ ಸಂಖ್ಯೆ 800 ಮೀರಿದೆ. ಪರಪ್ಪನ ಅಗ್ರಹಾರದ ಮಿತಿ 3,000. ಅಲ್ಲಿರುವವರ ಸಂಖ್ಯೆ 5,000ಕ್ಕೂ ಅಧಿಕ. ಕಲಬುರಗಿ, ಧಾರವಾಡ ಮತ್ತಿತರ ಕಡೆಯ ಕಾರಾಗೃಹಗಳೂ ಇದಕ್ಕೆ ಹೊರತಲ್ಲ. ಇಷ್ಟು ಪ್ರಮಾಣದ ಕೈದಿಗಳ ನಿಯಂತ್ರಣಕ್ಕೂ, ಮೇಲುಸ್ತುವಾರಿಗೂ ಇರುವ ಸಿಬ್ಬಂದಿಯ ಸಂಖ್ಯೆ ಅತ್ಯಲ್ಪ.

ರಾಜ್ಯದ ಎಲ್ಲ ಕಾರಾಗೃಹಗಳಲ್ಲಿ ಅಗತ್ಯವಿರುವ ಒಟ್ಟು ಸಿಬ್ಬಂದಿಯ ಪೈಕಿ ಶೇ 50ರಷ್ಟು ಸಿಬ್ಬಂದಿಯ ಕೊರತೆ ಇದೆ. ಲಭ್ಯ ಸಿಬ್ಬಂದಿಯಲ್ಲೇ ಶೇ 50ರಷ್ಟು ಮಹಿಳೆಯರಿದ್ದಾರೆ. ಅವರನ್ನು ಗಂಭೀರ ಸ್ವರೂಪದ ಅಪರಾಧದಲ್ಲಿ ತೊಡಗಿದ ಕೈದಿಗಳಿರುವ ಹಾಗೂ ಪುರುಷ ಕೈದಿಗಳಿರುವ ಸೆಲ್‌ಗಳ ಮೇಲ್ವಿಚಾರಣೆಗೆ ನಿಯೋಜಿಸುವುದು ಅಪಾಯಕಾರಿ ಎನ್ನುವುದು ಸಾಬೀತಾಗಿದೆ.

ಕೈದಿಗಳ ಮೇಲೆ ನಿಗಾ ಇರಿಸಲು ಬೇಕಿರುವ ವಾರ್ಡರ್, ಹೆಡ್ ವಾರ್ಡರ್‌ಗಳ ಕೊರತೆ ಇದೆ. ನಿಯಮಾನುಸಾರ ಒಬ್ಬ ಸಿಬ್ಬಂದಿ ಆರು ಕೈದಿಗಳನ್ನು ನಿರ್ವಹಿಸಬೇಕು. ಸದ್ಯ 14ಕ್ಕೂ ಹೆಚ್ಚು ಕೈದಿಗಳಿಗೆ ಒಬ್ಬ ಸಿಬ್ಬಂದಿ ಇದ್ದಾರೆ. ಇನ್ನೂ ಎರಡು ಪಟ್ಟು ಸಿಬ್ಬಂದಿಯ ಅಗತ್ಯವಿದೆ. ಆದರೆ, ಸರ್ಕಾರ ನೇಮಕಾತಿಗೆ ಕ್ರಮ ಕೈಗೊಂಡಿಲ್ಲ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಇಲಾಖೆಯ ಅಧಿಕಾರಿಯೊಬ್ಬರು ಹೇಳುತ್ತಾರೆ.

ಇಲಾಖೆಯ ಸಿಬ್ಬಂದಿಗೆ ಮೊದಲಿದ್ದ ಸಂಬಳ ಮತ್ತಿತರ ಸೌಲಭ್ಯವನ್ನು ಈಗ ಕಡಿತಗೊಳಿಸಲಾಗಿದೆ. ಮೊದಲು ಜೈಲಧಿಕಾರಿಗಳು ಪೊಲೀಸ್ ಅಧಿಕಾರಿಗಳಿಗಿಂತ ಅಧಿಕ ಸಂಬಳ, ಸೌಲಭ್ಯ ಹೊಂದಿದ್ದರು. ಕಾರಾಗೃಹಗಳ ಪುನಶ್ಚೇತನಕ್ಕೆ ಅಗತ್ಯವಿರುವ ಅನುದಾನವನ್ನೂ ಇತ್ತೀಚಿನ ವರ್ಷಗಳಲ್ಲಿ ನೀಡಲಾಗುತ್ತಿಲ್ಲ. ಇದರಿಂದಾಗಿ ಕಾರಾಗೃಹ ಸಿಬ್ಬಂದಿ ಹಾದಿ ತಪ್ಪುತ್ತಿದ್ದು, ಲಂಚಕ್ಕೆ ಕೈಚಾಚುತ್ತಿದ್ದಾರೆ. ಕೆಲವೆಡೆ ಪರಿಸ್ಥಿತಿಯ ಕೈಗೊಂಬೆಗಳಾಗಿ ಲಂಚ ತೆಗೆದುಕೊಳ್ಳುವ ಅನಿವಾರ್ಯತೆಗೂ ಕೆಲವರು ಒಳಗಾಗುತ್ತಿದ್ದಾರೆ. ಲಂಚ ತೆಗೆದುಕೊಳ್ಳುವುದು ಖಂಡಿತ ಒಪ್ಪಿತವಲ್ಲ. ಆದರೆ, ಸ್ಥಳೀಯವಾಗಿ ಬೇರು ಬಿಟ್ಟಿರುವ ಪ್ರಭಾವಿಗಳ ಒತ್ತಡವೂ ಸಿಬ್ಬಂದಿ ತಪ್ಪು ಹಾದಿ ಹಿಡಿಯಲು ಪ್ರೇರಣೆಯಂತಿದೆ. ಈ ನ್ಯೂನತೆಗಳನ್ನು ಸರಿಪಡಿಸುವ ಕೆಲಸ ಮೊದಲು ಆಗಬೇಕು ಎಂದು ಅವರು ಅಭಿಪ್ರಾಯಪಡುತ್ತಾರೆ.

ರಾಜ್ಯದ ಎಲ್ಲ ಜೈಲುಗಳಲ್ಲೂ ಸಿ.ಸಿ.ಟಿ.ವಿ ಕ್ಯಾಮೆರಾ ನಿಗಾ ವ್ಯವಸ್ಥೆ ಮೇಲ್ದರ್ಜೆಗೆ ಏರಬೇಕಿದೆ. ಈಗ ಭದ್ರತಾ ಲೋಪ ಆಗಬಹುದಾದ ಪ್ರದೇಶಗಳಲ್ಲಿ ಮಾತ್ರವೇ ಸಿ.ಸಿ.ಟಿ.ವಿ ನಿಗಾ ಇರಿಸಲಾಗಿದೆ. ಕೈದಿಗಳ ಪ್ರತಿಯೊಂದು ಚಲನವಲನದ ಮೇಲೆ ನಿಗಾ ಇಡಲು ಸುಧಾರಿತ ವ್ಯವಸ್ಥೆ ಬೇಕಿದೆ ಎಂದು ಅವರು ತಿಳಿಸುತ್ತಾರೆ.

ನಿಯಮ ಬಿಗಿಗೊಳಿಸಿ

ಮಾದಕ ವಸ್ತುಗಳು ಜೈಲು ಸೇರುತ್ತವೆ. ಅದನ್ನು ಸೇವಿಸಿದ ಕೈದಿಗಳು ಪರಸ್ಪರ ಹೊಡೆದಾಡಿಕೊಳ್ಳುತ್ತಾರೆ. ಅಗತ್ಯ ಸಿಬ್ಬಂದಿ ಇಲ್ಲದ್ದರಿಂದ ಹೊಡೆದಾಟ ನಿಯಂತ್ರಣಕ್ಕೆ ತರುವಷ್ಟರೊಳಗೆ ಅನಾಹುತ ಘಟಿಸಿರುತ್ತದೆ. ಅವರು ಮಾದಕವಸ್ತು ಸೇವಿಸಿ ಅಮಲಿನಲ್ಲೇ ಅಪರಾಧ ಎಸಗಿ ಜೈಲು ಸೇರಿರುತ್ತಾರೆ. ಜೈಲಿನೊಳಗೆ ಮಾದಕ ವಸ್ತು ಬಂದಿದ್ದು ಹೇಗೆ? ಎಂಬ ಬಗ್ಗೆ ಪರಿಶೀಲನೆ ನಡೆಸಿ, ಅದನ್ನು ತಂದುಕೊಟ್ಟ ಸಿಬ್ಬಂದಿ ಅಥವಾ ಇತರರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ. ಹೊರ ಜಗತ್ತಿನಲ್ಲೂ ನಿಷೇಧಿತವಾಗಿರುವ ಮಾದಕವಸ್ತು ಜೈಲಿಗೆ ಹೇಗೆ ಬರುತ್ತಿದೆ? ಅದನ್ನು ಕೈದಿಗೆ ತಂದು ಕೊಟ್ಟವನಷ್ಟೇ ಅಲ್ಲದೆ ಮಾರಿದವರನ್ನೂ, ಅದರ ಹಿಂದಿರುವ ಜಾಲ ಯಾವುದು ಎಂಬುದನ್ನೂ ಭೇದಿಸಿ, ಅದನ್ನು ಬೇರುಮಟ್ಟದಲ್ಲಿ ಮಟ್ಟಹಾಕುವಲ್ಲಿ ವಿಫಲವಾಗುತ್ತಿರುವುದು ಏಕೆ? ಎಂದು ಸಾಮಾಜಿಕ ಕಾರ್ಯಕರ್ತ ಕೆ.ಗೋಣಿಬಸಪ್ಪ ಪ್ರಶ್ನಿಸುತ್ತಾರೆ.

ಜೈಲುಗಳಲ್ಲಿ ಮಾದಕ ವಸ್ತು ಸೇವಿಸಿದವರ ವಿರುದ್ಧ ಮಾದಕ ದ್ರವ್ಯ ಸೇವನೆ ತಡೆ ಕಾಯ್ದೆ ಅಡಿ ಪ್ರಕರಣ ದಾಖಲಿಸಲು ಅವಕಾಶವಿಲ್ಲ. ಹಳೆಯ ಕಾಲದ ಕಾನೂನುಗಳೇ ಈಗಲೂ ಜಾರಿಯಲ್ಲಿವೆ. ಅವುಗಳಿಗೆ ತಿದ್ದುಪಡಿ ತಂದು ನೂತನ ಕಾಯ್ದೆ ಜಾರಿಗೊಳಿಸಬೇಕು ಎಂಬ ಬೇಡಿಕೆಯೂ ಬೆಟ್ಟದೆದುರಿನ ನರಿಯ ಕೂಗಿನಂತಾಗಿದೆ ಎಂಬುದು ಕಾರಾಗೃಹದ ಕೆಳಹಂತದ ಅಧಿಕಾರಿಗಳ ಅಳಲು.

ಕೆಲಸ, ಸಂಬಳ ಬೇಕು: ಶಿಕ್ಷಾ ಬಂದಿಗಳ ಆಸಕ್ತಿಯಂತೆ ಜೈಲುಗಳಲ್ಲಿ ಉದ್ಯೋಗ ನೀಡಲಾಗುತ್ತದೆ. ಬೇಕರಿ, ಎಲೆಕ್ಟ್ರಿಕಲ್, ಸಿದ್ಧ ಉಡುಪುಗಳ ತಯಾರಿ, ಡೇಟಾ ಎಂಟ್ರಿ, ಹೊಲಿಗೆ, ವೆಲ್ಡಿಂಗ್, ಪೇಪರ್ ಬ್ಯಾಗ್ ತಯಾರಿಕೆ... ಹೀಗೆ ಹತ್ತಾರು ವಿಭಾಗಗಳಲ್ಲಿ ಕೈದಿಗಳು ತರಬೇತಿ ಪಡೆಯುತ್ತಿದ್ದಾರೆ ಎಂದು ಇಲಾಖೆಯ ಹಿರಿಯ ಅಧಿಕಾರಿಗಳು ಮಾಹಿತಿ ನೀಡುತ್ತಾರೆ. ಆದರೆ, ಸಜಾ ಬಂದಿಗಳಿಗೆ ಸಮರ್ಪಕವಾದ ಉದ್ಯೋಗ ನೀಡುವ ವ್ಯವಸ್ಥೆ ಅನೇಕ ಕಡೆ ಇಲ್ಲ ಎಂದು ಕೈದಿಗಳು ದೂರುತ್ತಾರೆ.

ಕೃಷಿ, ಬಡಗಿತನ, ಗಾರೆ ಕೆಲಸ, ಕರಕುಶಲ ಕಲೆ, ಎಲೆಕ್ಟ್ರಿಕಲ್ ಕೆಲಸ ಸೇರಿದಂತೆ ಕೈದಿಗಳ ಆಸಕ್ತಿಗೆ ಅನುಗುಣವಾಗಿ ಜೈಲುಗಳಲ್ಲಿ ಉದ್ಯೋಗ ನೀಡಲಾಗುತ್ತದೆ. ಅಂಥ ಕೈದಿಗಳಿಗೆ ನೀಡುವ ಸಂಬಳ ಹೆಚ್ಚಿಸಬೇಕು ಎಂಬ ಬೇಡಿಕೆಯಿದೆ. ಆದರೆ, ಸರ್ಕಾರ ಕೈದಿಗಳಿಗೆ ನೀಡಬೇಕಾದ ಸಂಬಳದ ಬಾಬತ್ತಿನಲ್ಲೇ ಅಂದಾಜು ₹ 30 ಕೋಟಿ ಬಾಕಿ ಇರಿಸಿಕೊಂಡಿದೆ.

'ಕೈದಿಗಳಿಗೆ ಅವರವರ ಕೌಶಲ ಮತ್ತು ಅನುಭವದ ಆಧಾರದಲ್ಲಿ ನಾಲ್ಕು ಹಂತಗಳಲ್ಲಿ ನಿತ್ಯ ಕನಿಷ್ಠ ₹ 524ರಿಂದ ಗರಿಷ್ಠ ₹ 663 ವೇತನ ನೀಡಲಾಗುತ್ತಿದೆ. ಜೈಲಿನಿಂದ ಬಿಡುಗಡೆಯಾದ ಬಳಿಕ ಅವರು ಹೊರಗಡೆ ಸ್ವಯಂ ಉದ್ಯೋಗ ಕೈಗೊಳ್ಳಲು ಅವಕಾಶ ಕಲ್ಪಿಸುವ ಯೋಜನೆಯನ್ನೂ ರೂಪಿಸಲಾಗುತ್ತಿದೆ. ಕೆಲವೊಂದು ರಾಷ್ಟ್ರೀಕೃತ ಬ್ಯಾಂಕ್‌ಗಳ ಜತೆ ಚರ್ಚಿಸಿ ₹ 2 ಲಕ್ಷದಿಂದ ₹ 3 ಲಕ್ಷದವರೆಗೆ ಸಾಲ ಕೊಡಿಸಲು ಪ್ರಯತ್ನಿಸಲಾಗುತ್ತಿದೆ. ಈ ಯೋಜನೆ ಬೇರೆ ರಾಜ್ಯಗಳಲ್ಲಿ ಜಾರಿಯಲ್ಲಿದೆ' ಎಂದು ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ ಮಹಾ ನಿರ್ದೇಶಕ ಅಲೋಕ್ ಕುಮಾರ್ ತಿಳಿಸುತ್ತಾರೆ.

ಸುಧಾರಣೆಯತ್ತ ಹೆಜ್ಜೆ

ಅಕ್ರಮ ಚಟುವಟಿಕೆಗಳಿಂದ ಅಪಖ್ಯಾತಿಗೆ ಒಳಗಾಗಿರುವ ರಾಜ್ಯದ ಜೈಲುಗಳು ಈಗ ಸುಧಾರಣೆಯತ್ತ ಹೆಜ್ಜೆ ಇರಿಸಿವೆ ಎಂದು ಸರ್ಕಾರ ಹೇಳುತ್ತದೆ. ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ನಿರ್ಧರಿಸಿ, ಮೊದಲ ಹೆಜ್ಜೆಯಾಗಿ ಬೆಂಗಳೂರಿನಲ್ಲಿರುವ ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ ಪ್ರಧಾನ ಕಚೇರಿಯಲ್ಲಿ 'ಸೆಂಟ್ರಲ್ ಕಮಾಂಡ್ ಸೆಂಟರ್' ಸ್ಥಾಪಿಸಲಾಗಿದೆ ಎಂದು ನಿಕಟಪೂರ್ವ ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳುತ್ತಾರೆ.

ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆರ್. ಹಿತೇಂದ್ರ ನೇತೃತ್ವದ ಉನ್ನತ ಮಟ್ಟದ ಸಮಿತಿಯ ಶಿಫಾರಸಿನಂತೆ 'ಸೆಂಟ್ರಲ್ ಕಮಾಂಡ್ ಸೆಂಟರ್'ಗೆ ಕೇಂದ್ರ ಕಾರಾಗೃಹಗಳು ಮತ್ತು ಮಂಗಳೂರು, ತುಮಕೂರು, ಬೆಂಗಳೂರು ದಕ್ಷಿಣ ಮತ್ತು ಚಾಮರಾಜನಗರ ಜಿಲ್ಲಾ ಕಾರಾಗೃಹಗಳ ಒಟ್ಟು 1,076 ಕ್ಯಾಮೆರಾಗಳ ಸಂಪರ್ಕ ಕಲ್ಪಿಸಲಾಗಿದೆ.

ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿಯನ್ನು ಪ್ರಧಾನ ಕಚೇರಿಯಲ್ಲಿ ಕುಳಿತು ನೋಡಬಹುದಾಗಿದೆ. ಕೈದಿಗಳ ಚಲನವಲನ ಹಾಗೂ ಸಿಬ್ಬಂದಿಯ ಚಟುವಟಿಕೆಗಳ ಮೇಲೂ ನಿಗಾ ಇರಿಸಬಹುದಾಗಿದೆ. ಮುಂದಿನ ದಿನಗಳಲ್ಲಿ ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಕಾರಾಗೃಹಗಳ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ ನಡೆಸಲು ಇಲಾಖೆ ಸಿದ್ಧತೆ ನಡೆಸಿದೆ ಎಂದು ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಆಧಾರಿತ 332 ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದ್ದು, ಕೈದಿಗಳ ಓಡಾಟ ಮತ್ತು ಸಿಬ್ಬಂದಿಯ ಚಲನವಲನ ಪರಿಶೀಲಿಸಲಾಗುತ್ತದೆ. ಕಮಾಂಡ್ ಸೆಂಟರ್‌ಗೆ 20 ಸಿಬ್ಬಂದಿಯನ್ನು ನಿಯೋಜಿಸಿದ್ದು, ದಿನದ 24 ಗಂಟೆಯೂ ಪಾಳಿ ಪ್ರಕಾರ ಕಾರ್ಯ ನಿರ್ವಹಿಸಲಿದ್ದಾರೆ.

'ಕೈದಿಗಳ ಬ್ಯಾರಕ್‌ಗಳ ಮೇಲೆ ಜೈಲಿನ ಸಿಬ್ಬಂದಿ ದಾಳಿ ನಡೆಸಿ ಪರಿಶೀಲಿಸಿದಾಗ ಮೊಬೈಲ್, ಸಿಮ್‌ಗಳು ಪತ್ತೆಯಾಗಿವೆ. ಮೊಬೈಲ್ ಸಾಗಿಸಿದವರು, ಇದಕ್ಕೆ ಸಹಕರಿಸಿದವರು ಹಾಗೂ ನಿಷೇಧಿತ ವಸ್ತುವನ್ನು ಕಾರಾಗೃಹದಲ್ಲಿ ಉಪಯೋಗಿಸಿದವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ' ಎಂದು ಅಲೋಕ್ ಕುಮಾರ್ ಮಾಹಿತಿ ನೀಡಿದ್ದಾರೆ.

'ಅನಿರೀಕ್ಷಿತ ತಪಾಸಣೆಯಲ್ಲಿ ಭಾಗಿಯಾದ ಅಧಿಕಾರಿ ಮತ್ತು ಸಿಬ್ಬಂದಿಗೆ ₹ 10,000 ನಗದು ಬಹುಮಾನ ಮತ್ತು ಪ್ರಶಂಸಾ ಪತ್ರ ನೀಡಿ ಗೌರವಿಸಲಾಗುತ್ತಿದೆ. ಕಾರಾಗೃಹ ಸುಧಾರಣಾ ಸಂಕಲ್ಪ ಅಭಿಯಾನದಡಿ ಮೊಬೈಲ್ ಹಾಗೂ ಇತರೆ ನಿಷೇಧಿತ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಘಟನೆ ಕುರಿತು ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಎಫ್‌ಐಆರ್ ದಾಖಲಾಗಿದೆ. ಕೈದಿಗಳ ಭೇಟಿಗೆ ಬರುವ ಸಂದರ್ಶಕರಿಗೆ ಡಿಜಿಟಲ್ ಟೋಕನ್ ನೀಡುವ ಪದ್ಧತಿ ಜಾರಿಗೊಳಿಸಲಾಗಿದೆ. ಹಂತಹಂತವಾಗಿ ಜೈಲುಗಳ ಸುಧಾರಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದರು.

ಆದರೂ ಗಲಾಟೆ, ನಿಷೇಧಿತ ವಸ್ತುಗಳ ಅಕ್ರಮ ಪ್ರವೇಶ ನಿರಂತರವಾಗಿ ನಡೆಯುತ್ತಲೇ ಇದೆ. ಎಐ ಕ್ಯಾಮೆರಾ ಬಂದ ನಂತರವೂ ವಿವಿಧ ಜೈಲುಗಳಲ್ಲಿ 200ಕ್ಕೂ ಹೆಚ್ಚು ಮೊಬೈಲ್‌ಗಳು ಪತ್ತೆಯಾಗಿವೆ. ವ್ಯವಸ್ಥೆ ಚಾಪೆ ಕೆಳಗೆ ತೂರಿದರೆ ಅಕ್ರಮ ಎಸಗುವವರು ರಂಗೋಲಿ ಕೆಳಗೆ ತೂರುತ್ತಿದ್ದಾರೆ ಎಂದು ಕಾರಾಗೃಹ ವೀಕ್ಷಣಾ ಸಮಿತಿ ಸದಸ್ಯರು ಆರೋಪಿಸುತ್ತಾರೆ.

ಪೂರಕ ಮಾಹಿತಿ: ಬಷೀರ್ ಅಹ್ಮದ್ ನಗಾರಿ, ಕೆ.ಎಸ್. ಸುನೀಲ್, ಪ್ರವೀಣಕುಮಾರ್ ಪಿ.ವಿ ಹಾಗೂ ವಿವಿಧ ಬ್ಯೂರೊಗಳಿಂದ.

> **ರಾಜ್ಯದ ಜೈಲುಗಳಲ್ಲಿ ನಡೆಯುವ ಅಕ್ರಮಗಳ ತಡೆ ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ಕಮಾಂಡ್ ಸೆಂಟರ್ ಸ್ಥಾಪಿಸಲಾಗಿದೆ. ಇದರಿಂದ ಬಹಳಷ್ಟು ಸುಧಾರಣೆಯಾಗುತ್ತದೆ. ಜೈಲುಗಳಿಗೆ ಭೇಟಿ ನೀಡುವವರ ವಸ್ತುಗಳ ತಪಾಸಣೆ ನಡೆಸುವುದು, ಸಿಬ್ಬಂದಿಯ ಕಾರ್ಯ ಚಟುವಟಿಕೆಗಳ ಮೇಲೆ ಕಮಾಂಡ್ ಸೆಂಟರ್‌ನಿಂದ ನಿಗಾ ವಹಿಸಲು ಸಾಧ್ಯವಾಗುತ್ತದೆ**
> **ಡಾ.ಜಿ.ಪರಮೇಶ್ವರ,** ನಿಕಟಪೂರ್ವ ಗೃಹಸಚಿವ ಮತ್ತು ಹಾಲಿ ಉಪಮುಖ್ಯಮಂತ್ರಿ

> **ವಿಜಯಪುರದ ಕೇಂದ್ರ ಕಾರಾಗೃಹ (ದರ್ಗಾ ಜೈಲ್) ದಲ್ಲಿ ಸದ್ಯ 140 ಸಿಬ್ಬಂದಿ ಹಾಗೂ 570 ಕೈದಿಗಳು ಇರುವುದರಿಂದ ದಟ್ಟಣೆ ಇದೆ. 20 ಹುದ್ದೆಗಳು ಖಾಲಿ ಇವೆ. ನಗರದ ಹೊರಭಾಗ ಅರಕೇರಿಯಲ್ಲಿ ₹158 ಕೋಟಿ ವೆಚ್ಚದಲ್ಲಿ ಹೊಸ ಕಾರಾಗೃಹ ನಿರ್ಮಾಣವಾಗುತ್ತಿದ್ದು, ಮುಕ್ತಾಯದ ಹಂತದಲ್ಲಿದೆ. ಹಳೆಯ ಜೈಲಿನಿಂದ ಹೊಸ ಜೈಲಿಗೆ ಸ್ಥಳಾಂತರವಾದರೆ ಸಿಬ್ಬಂದಿ ಕೊರತೆ ಹೆಚ್ಚಾಗಲಿದೆ**
> **ಕೊಟ್ರೇಶ್ ಬಿ.ಎಂ.,** ಅಧೀಕ್ಷಕ, ವಿಜಯಪುರ ಕೇಂದ್ರ ಕಾರಾಗೃಹ


ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಪತ್ತೆಯಾಗಿದ್ದ ನಿರ್ಬಂಧಿತ ವಸ್ತುಗಳು (ಸಂಗ್ರಹ ಚಿತ್ರ)

ಪತ್ತೆಯಾಗುತ್ತಿವೆ ಚಾಕು, ಚೂರಿ, ಕತ್ತರಿ

ಕಾರಾಗೃಹಗಳಲ್ಲಿ ಚಾಕು, ಚೂರಿ, ಕತ್ತರಿ, ಬ್ಲೇಡ್ ಮತ್ತಿತರ ಹರಿತವಾದ ವಸ್ತುಗಳು ಪತ್ತೆಯಾಗುತ್ತಿವೆ. ಕೊಡಗು ಜಿಲ್ಲಾ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಗಳಿಬ್ಬರ ನಡುವೆ ಈಚೆಗೆ ಹೊಡೆದಾಟ ನಡೆದಿದ್ದು, ಅವರ ಪೈಕಿ ಒಬ್ಬ ಗಂಭೀರವಾಗಿ ಗಾಯಗೊಂಡಿದ್ದ. ಇಂತಹ ಪ್ರಕರಣ ಉಳಿದ ಕಡೆಯೂ ಪತ್ತೆಯಾಗುತ್ತಿದೆ.

ಕೊಲೆ ಹಾಗೂ ಕೊಲೆಯತ್ನ ಪ್ರಕರಣಗಳಲ್ಲಿ ಇಬ್ಬರೂ ಜೈಲು ಸೇರಿದ್ದರು. ಅಂಥವರ ಕೈಗೆ ಮತ್ತೆ ಹರಿತವಾದ ವಸ್ತುಗಳು ಸಿಕ್ಕಿರುವುದು ಕಾರಾಗೃಹ ವ್ಯವಸ್ಥೆಯ ಮೇಲೆ ಶಂಕೆ ಮೂಡಲು ಕಾರಣವಾಗಿದೆ.

'ಕೆಲವು ಕಾರಾಗೃಹಗಳಲ್ಲಿ ಕೈದಿಗಳೇ ಅಡುಗೆ ಮಾಡುತ್ತಾರೆ. ತರಕಾರಿ ಹೆಚ್ಚಲು ಚಾಕು ಬಳಕೆಯಾಗುತ್ತದೆ. ಕೈದಿಗಳು ನಿಯಮಿತವಾಗಿ ತಲೆಕೂದಲು, ಗಡ್ಡ (ಕಟಿಂಗ್, ಶೇವಿಂಗ್) ತೆಗೆಯಲು ಸರ್ಕಾರವೇ ಕ್ಷೌರಿಕರನ್ನು ನೇಮಿಸಿರುತ್ತದೆ. ಆದರೆ, ಖಾಸಗಿ ಜಾಗಗಳಲ್ಲಿ ಬೆಳೆಯುವ ಕೂದಲನ್ನು ಕತ್ತರಿಸಿಕೊಳ್ಳಲು ಕೈದಿಗಳು ಸಣ್ಣಸಣ್ಣ ಚಾಕು, ಕತ್ತರಿಯನ್ನು ಬಚ್ಚಲಲ್ಲೋ, ಶೌಚಾಲಯದಲ್ಲೋ ಮುಚ್ಚಿಟ್ಟುಕೊಂಡಿರುತ್ತಾರೆ. ಹೊಡೆದಾಟದ ಸಂದರ್ಭ ಕೆಲವರು ಅಂಥವನ್ನೇ ಬಳಸುತ್ತಾರೆ. ಅವರಿಗೆ ಅಗತ್ಯವಿರುವ ಈ ವಸ್ತುಗಳನ್ನು ಬಳಸಕೂಡದು ಎಂದು ತಾಕೀತು ಮಾಡಲಾಗದು' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ವಿವರಿಸಿದರು.


ಹಿಂಡಲಗಾ ಕೇಂದ್ರ ಕಾರಾಗೃಹದ ಮೇಲೆ ದಾಳಿ ನಡೆಸಿ ಕೈದಿಗಳ ಸೆಲ್ ಪರಿಶೀಲಿಸುತ್ತಿರುವುದು (ಸಂಗ್ರಹ ಚಿತ್ರ)

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 7-6-2001

• **ಮಹಾರಾಷ್ಟ್ರ – ಕರ್ನಾಟಕ ಗಡಿ ಪ್ರಶ್ನೆ ಇತ್ಯರ್ಥಕ್ಕೆ ಸಭೆ**

ಮುಂಬೈ, ಜೂನ್ 6 (ಪಿಟಿಐ): ಮಹಾರಾಷ್ಟ್ರ ಮತ್ತು ಕರ್ನಾಟಕದ ನಡುವಣ ಗಡಿ ವಿವಾದವನ್ನು ಬಗೆಹರಿಸಲು ಸದ್ಯವೇ ಉಭಯ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಕರೆದು ಚರ್ಚಿಸುವುದಾಗಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಇಲ್ಲಿ ತಿಳಿಸಿದರು.

ಇಂತಹ ಗಡಿ ವಿವಾದದ ಬಗೆಗೆ ಇದುವರೆಗಿನ ಮುಖ್ಯಮಂತ್ರಿಗಳ ಸಭೆ ಮೂಲಕ ಮಾತುಕತೆ ನಡೆಯದಿರುವುದು ತಮಗೆ ವಿಷಾದವನ್ನು ಉಂಟು ಮಾಡಿದೆ ಎಂದರು.

75 ವರ್ಷಗಳ ಹಿಂದೆ

ಗುರುವಾರ, 7-6-1951

• **ಪಾರ್ಲಿಮೆಂಟ್ ಸದಸ್ಯರೊಬ್ಬರ ಮೇಲೆ ಅನೀತಿ ವರ್ತನೆ ಆಪಾದನೆ**

ಲಂಡನ್, ಜೂನ್ 6– ಮುಂಬೈ ಚಿನಿವಾರ ಕಟ್ಟೆ ಸಂಘದೊಂದಿಗೆ ನಡೆಸಿದರೆ ಎಂದು ಆಪಾದಿಸಲಾಗಿರುವ ಕೆಲ ವ್ಯವಹಾರಗಳ ಸಂಬಂಧದಲ್ಲಿ ಹೆಚ್.ಜಿ. ಮುದ್ಗಲ್ ಎಂಬ ಸದಸ್ಯರ ವರ್ತನೆಗಳ ಕುರಿತು ವಿಚಾರಣೆ ನಡೆಸಲು ಸಮಿತಿಯೊಂದನ್ನು ನೇಮಿಸಬೇಕೆಂದು ಬಯಸಿ ಪ್ರಧಾನಿ ಜವಾಹರ ನೆಹರೂ ಅವರು ಮಂಡಿಸಿದ ನಿರ್ಣಯದ ಮೇಲೆ ಇಂದು ಪಾರ್ಲಿಮೆಂಟು ಮೂರು ಗಂಟೆಗಳ ಚರ್ಚೆ ನಡೆಸಿತಾದರೂ ಯಾವ ನಿರ್ಧಾರಕ್ಕೂ ಬರಲಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

07 ಜೂನ್ 2026 ಭಾನುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಕೃಷ್ಣ ಸಪ್ತಮಿ ಗಂ.27-25, **ನಕ್ಷತ್ರ:** ಧನಿಷ್ಠಾ ಗಂ.07-56, **ಯೋಗ:** ವೈಧೃತಿ ಗಂ.10-02, **ಕರಣ:** ಭದ್ರಾ ಗಂ.15-09, ವೃಷಭ ಮಾಸದ 24 ನೇ ದಿನ. **ಮಳೆ ನಕ್ಷತ್ರ:** ರೋಹಿಣಿ 4 ನೇ ಪಾದ. **ರಾಹುಕಾಲ:** ಸಾಯಂಕಾಲ 04-30-06-00, **ಸೂರ್ಯೋದಯ:** 06-06, **ಸೂರ್ಯಾಸ್ತ :** 06-52, **ಮುಸ್ಲಿಂ ದಿನಾಂಕ:** 21 ದುಲ್ ಹಿಜ್ಜಾ, **ಅದೃಷ್ಟ ಸಂಖ್ಯೆ :** 2, 9

ಮೇಷ: ಕೈ ಬಿಟ್ಟಿರುವ ಯೋಜನೆಗಳನ್ನು ಮತ್ತೆ ಮುಂದುವರಿಸಲು ಒತ್ತಡ ಬರಬಹುದು. ಇನ್ನೊಬ್ಬರ ನಯವಾದ ಮಾತುಗಳಿಗೆ ಮರುಳಾಗಬೇಡಿ. ಅನಿವಾರ್ಯವಿದ್ದರೂ ಸಂಬಂಧಿಕರಲ್ಲಿ ಹಣದ ವ್ಯವಹಾರ ನಡೆಸಬೇಡಿ.

ವೃಷಭ: ಕೆಲಸದ ಒತ್ತಡ ಕಡಿಮೆಯಾಗುವುದಲ್ಲದೆ ಲಾಭಕರವಾಗಿ ಮುಗಿಯುವುದು. ಆಪ್ತರು ನಿಮ್ಮ ನೆರವಿಗಾಗಿ ಕಾದುಕುಳಿತುಕೊಳ್ಳಬಹುದು. ಹೂಡಿಕೆ ವಿಚಾರದಲ್ಲಿ ದೀರ್ಘಾಲೋಚನೆ ನಡೆಸುವುದು ಉತ್ತಮ.

ಮಿಥುನ: ಮನುಷ್ಯ ಪ್ರಯತ್ನದ ಜೊತೆ ಗಣಪತಿಯ ಮೊರೆ ಹೋಗುವುದರಿಂದ ಕಾರ್ಯ ಸಿದ್ಧಿಯಾಗಲಿದೆ. ನಿತ್ಯದ ದಿನಚರಿಯಲ್ಲಿ ಬದಲಾವಣೆ ಇರುವುದಿಲ್ಲ. ಆರ್ಥಿಕತೆಗಿಂತ ಸಂಬಂಧ ಮುಖ್ಯವೆಂಬುವುದನ್ನು ಮರೆಯದಿರಿ.

ಕರ್ಕಾಟಕ: ಕುಟುಂಬ ನಿರ್ವಹಣೆಯಲ್ಲಿ ವಿಪರೀತ ಖರ್ಚು ಕಾಣಿಸಲಿದೆ. ಆದರೆ, ಆದಾಯಕ್ಕೆ ಕೊರತೆ ಇಲ್ಲ. ವಿದ್ಯಾಭ್ಯಾಸದಲ್ಲಿ ವಿದ್ಯಾರ್ಥಿಗಳು ಹೆಚ್ಚು ಶ್ರಮ ವಹಿಸಬೇಕು. ಕೆಲಸದಲ್ಲಿ ಬಡ್ತಿ ಅಥವಾ ಬದಲಾವಣೆಯ ಯೋಚನೆ ಬರಲಿದೆ.

ಸಿಂಹ: ಇಂದು ಜರುಗಲಿರುವ ಸಂಗತಿಯೊಂದು ಗಾಢ ಪರಿಣಾಮ ಬೀರಿ, ನಿಮ್ಮ ವೃತ್ತಿಗೆ ಸಂಬಂಧಿಸಿದಂತೆ ಉತ್ತಮ ನಿರ್ಧಾರ ಕೈಗೊಳ್ಳಲು ಸಹಾಯವಾಗಲಿದೆ. ಅನಿರೀಕ್ಷಿತ ಪ್ರಯಾಣವು ಬದುಕಿನ ಹೊಸ ದಾರಿಗೆ ಕಾರಣವಾಗಲಿದೆ.

ಕನ್ಯಾ: ಹವ್ಯಾಸಿ ಕಲಾವಿದರಾದ ನೀವು ಇಂದು ಕತೆ, ಕವನಗಳ ಬರವಣಿಗೆಯಲ್ಲಿ ಹೆಚ್ಚಿನ ಸಮಯ ಕಳೆಯುವಿರಿ. ಈ ದಿನ ನಿಮ್ಮ ಪ್ರತಿಭೆಯು ಸಂಬಂಧಪಟ್ಟವರ ಗಮನ ಸೆಳೆಯಲಿದೆ. ಮಕ್ಕಳು ನಿಮಗೆ ಸಂತಸ ತರಲಿದ್ದಾರೆ.

ತುಲಾ: ಬಾಕಿ ಉಳಿದಂತಹ ಕೆಲಸಗಳೆಲ್ಲವೂ ಅಂತಿಮ ಹಂತಕ್ಕೆ ಬಂದು ತಲುಪುವುವು. ಹತ್ತಿರದವರೊಂದಿಗೆ ಮುಕ್ತವಾದ ಮಾತುಕತೆಯು ಭೂ ವ್ಯವಹಾರದಲ್ಲಿ ಲಾಭವನ್ನು ತಂದುಕೊಡಲಿದೆ.

ವೃಶ್ಚಿಕ: ಸಮಾಜ ಸೇವೆಯನ್ನು ಹವ್ಯಾಸವನ್ನಾಗಿ ಮಾಡಿಕೊಂಡಿರುವ ನಿಮಗೆ ಅದರಿಂದ ಪ್ರಚಾರದ ಜೊತೆಗೆ ರಾಜಕೀಯ ಸೇರಲು ಆಹ್ವಾನ ದೊರೆಯಲಿದೆ. ವಿದ್ಯುತ್ ವಲಯದ ಕಾರ್ಮಿಕರು ಹೆಚ್ಚಿನ ಜಾಗ್ರತೆಯನ್ನು ವಹಿಸಿ.

ಧನು: ತಪ್ಪು ತಿಳಿವಳಿಕೆಯಿಂದಾಗಲಿ ಅಥವಾ ಅತಿಯಾದ ಆಸೆಯಿಂದಾಗಲಿ ಹಣವನ್ನು ಕಳೆದುಕೊಳ್ಳುವ ಸನ್ನಿವೇಶಗಳು ಎದುರಾಗಬಹುದು. ಬಾಲ್ಯದಲ್ಲಿ ನಿಮ್ಮ ಯೋಗಕ್ಷೇಮವನ್ನು ನೋಡಿದವರನ್ನು ಭೇಟಿಯಾಗುವಿರಿ.

ಮಕರ: ಭವಿಷ್ಯದ ಭದ್ರತೆಯ ಕುರಿತ ನಿಮ್ಮ ಕಾಳಜಿ ಕುಟುಂಬದವರಿಗೆ ಸಂತೃಪ್ತಿಯನ್ನು ತಂದು ಕೊಡುವುದು. ನಿಮ್ಮ ಆಸೆ ಆಕಾಂಕ್ಷೆಗಳಿಗೆ ಅಥವಾ ಯೋಚನೆಗಳಿಗೆ ನಿಮ್ಮವರಿಂದಲೇ ಅಡ್ಡಿ ಎದುರಾಗಬಹುದು.

ಕುಂಭ: ವಿದ್ಯಾರ್ಥಿ ಜೀವನ ನಡೆಸುತ್ತಿರುವವರು ಮನೋರಂಜನೆಗಿಂತ ಓದಿನ ಮೇಲೆ ಅದಷ್ಟು ಗಮನ ಹರಿಸುವುದು ಒಳ್ಳೆಯದು. ವೈದ್ಯರಾಗಿದ್ದಲ್ಲಿ ನಿಮ್ಮ ಕೈಗುಣದ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಕೇಳುವಿರಿ.

ಮೀನ: ಮಾತಿನ ಚತುರತೆಯಿಂದ ಇತರರನ್ನು ಗೆಲ್ಲುವ ಸಾಮರ್ಥ್ಯ ನಿಮ್ಮಲ್ಲಿದೆ. ಆದರೆ ನಿಮ್ಮ ಮಾತುಗಳು ಬೇರೆಯವರ ದುಃಖಕ್ಕೆ ಕಾರಣವಾಗದಂತೆ ಗಮನಿಸಿ. ಭೋಜನದ ಕ್ರಮ ಅಥವಾ ಸಮಯದಲ್ಲಿ ವ್ಯತ್ಯಾಸಗಳಾಗಬಹುದು.

ಪದಬಂಧ 6426


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಎಡದಲ್ಲಿಯೇ ಮೆಟ್ಟು ಇದೆಯಲ್ಲಾ! (3)
2.ಇಲ್ಲದ್ದನ್ನು ಹೊರಿಸಿ ಹೇಳುವುದು (3)
4.ಬೆಳದಿಂಗಳನ್ನು ಸೇವಿಸಿ ಜೀವಿಸುತ್ತದೆಯೆಂದು ನಂಬಲಾದ ಹಕ್ಕಿ (4)
7.ಉಕ್ಕಡದ ಬಳಿಕೊಡುವ ತೆರಿಗೆ (3)
8.ಕಂಬಿಯ ಹಿಂದೆ ತೋರಿದ ಜಂಬ (2)
9.ಭವನದ ಹತ್ತಿರವಿರುವ ಪತಿ (3)
10.ದಿಟ್ಟೆಯ ಬಾಹು! (2)
11.ಹಸೆ ಹಾಕುವಲ್ಲಿ ಬೆಳೆದ ಪಾಚಿ (3)
12.ಶಿರದ ರಕ್ಷಣೆಗಾಗಿ ಧರಿಸುವ ಟೊಪ್ಪಿಗೆ (4)
14.ಮರಮಟ್ಟುಗಳನ್ನು ನಾಶ ಮಾಡುವ ಕೀಟ (3)
15.ಹಣದಲ್ಲಿ ಪ್ರಾಣವಿದೆ (3)

ಮೇಲಿಂದ ಕೆಳಕ್ಕೆ

1.ಎಡಗೈ ಬಳಸಿ ಕೆಲಸ ಮಾಡುವವನು (3)
3.ಪತಿಯೊಂದಿಗಿರುವ ಕಾಲಾಳು (3)
5.ಅಡಕೆಯನ್ನು ಹೀಗೂ ಹೇಳುತ್ತಾರೆ (3)
6.ಖಡ್ಗದಿಂದ ಮಾಡುವ ಸಾಧನೆ (5)
7.ಈತ ಬಲು ಆಲಸಿ (5)
10.ಹಳ್ಳಿಗನ ಗ್ರಹಚಾರವೇ ಉಲ್ಟಾ ಆಗಿದೆ (3)
11.ಮರದ ಮೆಟ್ಟು ಇಲ್ಲಿದೆ (3)
13.ಹಳೆಯ ಕಥೆಯಿದು (3)



6425ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಪರ್ವ 3.ಭವಿಷ್ಯ 5.ಕ್ಷೇತ್ರ 6.ಅಧಮ 7.ಮಹಾರಾಜ 8.ಸತ್ಯವಾನ 10.ತವಂಬಜಾಂ 11.ಚಾಡಿಕೋರ 13.ತಸ್ಕರ 14.ಭಾರ 15.ಅಗಸೆ 17.ದ್ರವ

ಮೇಲಿಂದ ಕೆಳಕ್ಕೆ:
1.ಸ್ತಂಭ 2.ಪತ್ರ 4.ವಿರಹಾ 5.ಕ್ಷೇಮಸಮಾಚಾರ 6.ಅಜಗಜಾಂತರ 7.ಮಥಿತ 9.ನಶ್ವರ 12.ಕೋಡಗ 14.ಭಾವ 16.ಸೆತ್ತೆ

ಸುಡೊಕು 6809

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	5		1			4		7
6		9		5				
	4		8				6	
4			5		9	2		1
	2			4			5	
3		5	2		8			6
5	7					8		9
		1	4		5		7	
	8			7			3	

6808 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಿಇಟಿ: ಏಳರಲ್ಲೂ ಬೆಂಗಳೂರೇ ಪ್ರಥಮ

ಎಂಜಿನಿಯರಿಂಗ್ ಕೋರ್ಸ್‌ಗೆ ಆರ್.ವಿ ಕಾಲೇಜಿನ ತನಿಷಾ ಕಾರ್ತಿಕ್ ಮೊದಲು • ರಾಜ್ಯ ಪಠ್ಯಕ್ರಮದವರ ಮೇಲುಗೈ

3,30,646 ಸಿಇಟಿಗೆ ಅರ್ಜಿ ಸಲ್ಲಿಸಿದ್ದ ವಿದ್ಯಾರ್ಥಿಗಳು

3,09,014 ಪರೀಕ್ಷೆ ಬರೆದಿದ್ದ ವಿದ್ಯಾರ್ಥಿಗಳು

2,92,782 ವಿವಿಧ ಕೋರ್ಸ್‌ಗಳಿಗೆ ಅರ್ಹತೆ ಪಡೆದವರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ-2026) ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಶನಿವಾರ ಪ್ರಕಟಿಸಿದ್ದು, ಏಳು ವಿಭಾಗಗಳಲ್ಲೂ ಬೆಂಗಳೂರಿನ ವಿದ್ಯಾರ್ಥಿಗಳೇ ಮೊದಲ ಸ್ಥಾನ ಪಡೆದಿದ್ದಾರೆ.

ಎಂಜಿನಿಯರಿಂಗ್‌ನಲ್ಲಿ ಆರ್.ವಿ. ಕಾಲೇಜಿನ ತನಿಷಾ ಕಾರ್ತಿಕ್, ಬಿ.ಎಸ್‌ಸಿ ಕೃಷಿಯಲ್ಲಿ ಅದೇ ಕಾಲೇಜಿನ ನಿನಾದ್ ವಶಿಷ್ಠ, ಪಶು ವೈದ್ಯಕೀಯ, ನರ್ಸಿಂಗ್ ಸೇರಿದಂತೆ ಉಳಿದ ಐದೂ ಕೋರ್ಸ್‌ಗಳಲ್ಲಿ ಬೇಸ್ ಪಿಯು ಕಾಲೇಜಿನ ನಯನಾ ಗೋಪಿ ಮೊದಲ ಸ್ಥಾನ ತಮ್ಮದಾಗಿಸಿಕೊಂಡಿದ್ದಾರೆ.

ಏಳರಲ್ಲಿ ಆರು ಮೊದಲ ಸ್ಥಾನ ವಿದ್ಯಾರ್ಥಿನಿಯರ ಪಾಲಾಗಿವೆ. ಮೊದಲ ಸ್ಥಾನವನ್ನು ವಿದ್ಯಾರ್ಥಿನಿಯರಿಗೆ ಬಿಟ್ಟುಕೊಟ್ಟರೂ ಎಂಜಿನಿಯರಿಂಗ್, ಬಿ-ಫಾರ್ಮಾ ಮತ್ತು ಫಾರ್ಮಾ-ಡಿಯ ಮೊದಲ ಹತ್ತರಲ್ಲಿ ಏಳು ಸ್ಥಾನ, ಪಶು ವೈದ್ಯಕೀಯ, ಕೃಷಿ ವಿಜ್ಞಾನ, ಬಿ.ಎಸ್‌ಸಿ ನರ್ಸಿಂಗ್‌ನಲ್ಲಿ ತಲಾ ಆರು, ಯೋಗ ಮತ್ತು ನ್ಯಾಚುರೋಪಥಿಯಲ್ಲಿ ಐದು ಸ್ಥಾನಗಳು ಬಾಲಕರ ಪಾಲಾಗಿವೆ. ಫಲಿತಾಂಶದಲ್ಲಿ ಬೆಂಗಳೂರು, ಮಂಗಳೂರು ಹಾಗೂ ದಾವಣಗೆರೆ ಸಿಂಹಪಾಲು ಪಡೆದಿವೆ.

ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಸಿಇಟಿ ಫಲಿತಾಂಶವನ್ನು ಪ್ರಕಟಿಸಿದರು.

ಸರ್ಕಾರಿ ಕಾಲೇಜು ವಿದ್ಯಾರ್ಥಿಯ ಸಾಧನೆ: ಪಶು ವೈದ್ಯಕೀಯ, ಬಿ.ಎಸ್‌ಸಿ ನರ್ಸಿಂಗ್ ವಿಭಾಗಗಳಲ್ಲಿ ವಿಜಯಪುರದ ಬಿಜಾಪುರ ಸರ್ಕಾರಿ ಬಾಲಕರ ಪಿಯು ಕಾಲೇಜಿನ ಬಸವರಾಜ್ ಆವತಿ 4ನೇ ಸ್ಥಾನ ಪಡೆದಿದ್ದಾರೆ. ಹಾಗೆಯೇ ಅವರು, ಬಿ-ಫಾರ್ಮಾ ಮತ್ತು ಫಾರ್ಮಾ-ಡಿಯಲ್ಲಿ 6ನೇ ರ್‍ಯಾಂಕ್, ಯೋಗ ಮತ್ತು ನ್ಯಾಚುರೋಪಥಿಯಲ್ಲಿ 10ನೇ ರ್‍ಯಾಂಕ್ ತಮ್ಮದಾಗಿಸಿಕೊಂಡಿದ್ದಾರೆ. ಉಳಿದ ಕೋರ್ಸ್‌ಗಳಲ್ಲಿ ಮೊದಲ 10 ಸ್ಥಾನಗಳು ಖಾಸಗಿ ಕಾಲೇಜು ವಿದ್ಯಾರ್ಥಿಗಳ ಪಾಲಾಗಿದೆ.

ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳದೇ ಪಾರುಪತ್ಯ: ಕಳೆದ ಸಾಲಿನಲ್ಲಿ ಬಿ.ಎಸ್‌ಸಿ (ಕೃಷಿ), ಯೋಗ ಮತ್ತು ನ್ಯಾಚುರೋಪಥಿ ಹೊರತುಪಡಿಸಿ ಉಳಿದ ವಿಭಾಗಗಳಲ್ಲಿ ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯ (ಸಿಬಿಎಸ್‌ಇ) ಪಠ್ಯಕ್ರಮ ಓದಿದ್ದ ವಿದ್ಯಾರ್ಥಿಗಳು ಮೇಲುಗೈ ಸಾಧಿಸಿದ್ದರು. ಆದರೆ, ಈ ಬಾರಿ ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳೇ ಪಾರುಪತ್ಯ ಮೆರೆದಿದ್ದಾರೆ.

ರಾಜ್ಯ ಪಠ್ಯಕ್ರಮದಲ್ಲಿ ಓದಿದ 9 ವಿದ್ಯಾರ್ಥಿಗಳು, ಪಶು ವೈದ್ಯಕೀಯದಲ್ಲಿ 8, ಕೃಷಿ ವಿಜ್ಞಾನದಲ್ಲಿ 10 ಬಿ.ಎಸ್‌ಸಿ ನರ್ಸಿಂಗ್‌ನಲ್ಲಿ 8, ಯೋಗ ಮತ್ತು ನ್ಯಾಚುರೋಪಥಿಯಲ್ಲಿ 8, ಬಿ-ಫಾರ್ಮಾ, ಫಾರ್ಮಾ-ಡಿಯಲ್ಲಿ ತಲಾ 7 ವಿದ್ಯಾರ್ಥಿಗಳು ಮೊದಲ 10ರ ಒಳಗೆ ಸ್ಥಾನ ಪಡೆದಿದ್ದಾರೆ. ಮೊದಲ 100 ಸ್ಥಾನಗಳಲ್ಲಿ 81 ಸ್ಥಾನ ರಾಜ್ಯಪಠ್ಯಕ್ರಮ ವಿದ್ಯಾರ್ಥಿಗಳ ಪಾಲಾಗಿವೆ.

'ಸಿಬಿಎಸ್‌ಇ 12ನೇ ತರಗತಿ ಫಲಿತಾಂಶ ಕುಸಿತ, ಮರು ಎಣಿಕೆ ಫಲಿತಾಂಶವವನ್ನು ಸಿಇಟಿ ಅರ್ಹತಾ ಪಟ್ಟಿಗೆ ಪರಿಗಣಿಸದಿರುವ ಕಾರಣ ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳೇ ಮೇಲುಗೈ ಸಾಧಿಸಲು ಕಾರಣವಾಗಿರಬಹುದು. ಕನ್ನಡ ಮಾಧ್ಯಮ, ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಸಾಧನೆಯೂ ತೃಪ್ತಿಕರವಾಗಿಲ್ಲ' ಎನ್ನುತ್ತಾರೆ ಖಾಸಗಿ ಕಾಲೇಜು ಉಪನ್ಯಾಸಕ ರಮೇಶ್ ಆರ್ಯ.

ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಭೌತವಿಜ್ಞಾನ, ರಸಾಯನವಿಜ್ಞಾನ ವಿಷಯಗಳ ತಲಾ ಒಂದು ಪ್ರಶ್ನೆಗೆ ಕೃಪಾಂಕ ನೀಡಲಾಗಿದೆ. ಜೀವವಿಜ್ಞಾನ ವಿಷಯದ ಒಂದು ಪ್ರಶ್ನೆಗೆ ಎರಡು ಉತ್ತರಗಳನ್ನು (ಎರಡು ಅಥವಾ ಮೂರನೇ ಉತ್ತರ) ಸರಿ ಉತ್ತರ ಎಂದು ಪರಿಗಣಿಸಿ ಅಂಕ ನೀಡಲಾಗಿದೆ.

'ಈ ಬಾರಿ ಅಂಗವಿಕಲ ಅಭ್ಯರ್ಥಿಗಳ ದಾಖಲೆ ಹಾಗೂ ವೈದ್ಯಕೀಯ ತಪಾಸಣೆಯ ಪ್ರಕ್ರಿಯೆಯನ್ನು ಸರಳಗೊಳಿಸಲಾಗಿದೆ. ಅಭ್ಯರ್ಥಿಗಳನ್ನು ತಪಾಸಣೆ ಮಾಡುವ ವೈದ್ಯರೇ ತಮ್ಮ ಲಾಗಿನ್ ಮೂಲಕ ಅಭ್ಯರ್ಥಿಗಳ ಅರ್ಹತೆಯ ಮಾಹಿತಿಯನ್ನು ದಾಖಲಿಸಲು ಪೋರ್ಟಲ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ. ಪ್ರಾಧಿಕಾರದ ಸರ್ವರ್‌ಗಳಲ್ಲಿ ಇದು ಸಂಗ್ರಹವಾಗಲಿದ್ದು, ಗೋಪ್ಯತೆ ಕಾಪಾಡಲಾಗುತ್ತದೆ' ಎಂದು ಎಂದು ಶರಣಪ್ರಕಾಶ ಪಾಟೀಲ ಮಾಹಿತಿ ನೀಡಿದರು.

ಹೊರ ರಾಜ್ಯಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ತಮ್ಮ ಅಂಕಗಳನ್ನು ನಮೂದಿಸಲು ಲಿಂಕ್ ನೀಡಲಾಗಿತ್ತು. ಕೇರಳ, ಮಹಾರಾಷ್ಟ್ರ, ಸೇರಿದಂತೆ ಕೆಲ ರಾಜ್ಯಗಳ ವಿದ್ಯಾರ್ಥಿಗಳು ಅಂಕಗಳನ್ನು ಅನ್‌ಲೈನ್ ಮೂಲಕವೇ ನಮೂದಿಸಿದ್ದಾರೆ' ಎಂದು ತಿಳಿಸಿದರು.

ಹಿಜಾಬ್ ವಿವಾದ: ಸ್ಥಳದಲ್ಲೇ ಫಲಿತಾಂಶ

ಹಿಜಾಬ್ ವಿಚಾರಕ್ಕೆ ಪರೀಕ್ಷೆ ಬರೆಯಲು ನಿರಾಕರಿಸಿದ್ದ ವಿದ್ಯಾರ್ಥಿನಿಗೆ ಸರಾಸರಿ ಅಂಕದ ಆಧಾರದಲ್ಲಿ 'ಸ್ಪಾಟ್ ರ್‍ಯಾಂಕಿಂಗ್' ನೀಡಲಾಗಿದೆ. ಜನಿವಾರ ತೆಗೆಸಿದ್ದ ಪ್ರಕರಣದ ನಾಲ್ವರು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಅವರ ಮನವಿಯಂತೆ 'ಬೆಸ್ಟ್ ಆಫ್ ಟು' ಆಯ್ಕೆಗೆ ನಿಯಮದಲ್ಲಿ ಅವಕಾಶ ಇಲ್ಲದ ಕಾರಣ, ಪರೀಕ್ಷೆ ಬರೆದಿದ್ದ ಆಧಾರದಲ್ಲಿ ಫಲಿತಾಂಶ ನೀಡಲಾಗಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದರು.

ಸತತ ಎರಡು ವರ್ಷಗಳ ಶ್ರಮದ ಫಲಕ್ಕೆ ಮೊದಲ ಸ್ಥಾನ ಸಿಕ್ಕಿದೆ. ಕಾಲೇಜಿನಲ್ಲಿಯೇ ಬೇಸ್ ಜತೆ ಸಂಯೋಜಿತ ತರಬೇತಿ ಇತ್ತು. ಮನೆಯಲ್ಲಿಯೂ ಕನಿಷ್ಠ ನಾಲ್ಕು ಗಂಟೆ ಓದುತ್ತಿದ್ದೆ. ಅಂದಿನ ಪಾಠಗಳನ್ನು ಅಂದೇ ಮುಗಿಸುತ್ತಿದ್ದೆ. ಮುಂದೆ ಕಂಪ್ಯೂಟರ್ ಸೈನ್ಸ್ ಓದುವ ಯೋಚನೆ ಇದೆ. ಜೆಇಇನಲ್ಲಿ ಶೇ 99.82 ಫಲಿತಾಂಶ ಬಂದಿದೆ. ಸೈಕ್ಲಿಂಗ್ ಮಾಡುವ, ಕಾದಂಬರಿ ಓದುವ ಹವ್ಯಾಸವಿದೆ

ತನಿಷಾ ಕಾರ್ತಿಕ್, (ಎಂಜಿನಿಯರಿಂಗ್ ಮೊದಲ ಸ್ಥಾನ)



ಎಂಜಿನಿಯರಿಂಗ್‌ನಲ್ಲಿ ಮೊದಲ ಸ್ಥಾನ ಪಡೆದ ತನಿಷಾ ಅವರು ತಂದೆ ಕಾರ್ತಿಕ್, ತಾಯಿ ಆರ್ತಿ, ತಂಗಿ ಹರ್ಷಿತಾ ಜತೆ ಸಂಭ್ರಮಿಸಿದರು ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಎಂಜಿನಿಯರಿಂಗ್ ಕೋರ್ಸ್‌ಗಳ ಶುಲ್ಕ ಶೇ 7.5ರಷ್ಟು ಹೆಚ್ಚಳವಾಗಿದೆ. ವೈದ್ಯಕೀಯ ಕೋರ್ಸ್‌ಗಳ ಶುಲ್ಕ ಹೆಚ್ಚಳದ ಬಗ್ಗೆ ಇನ್ನೂ ಖಚಿತ ತೀರ್ಮಾನ ತೆಗೆದುಕೊಂಡಿಲ್ಲ

ಡಾ.ಶರಣಪ್ರಕಾಶ ಪಾಟೀಲ, ವೈದ್ಯಕೀಯ ಶಿಕ್ಷಣ ಸಚಿವ

ಮೊದಲ ಮೂರು ಸ್ಥಾನ ಪಡೆದವರು

ಮೊದಲ ಮೂರು ಸ್ಥಾನ ಪಡೆದವರು
ಎಂಜಿನಿಯರಿಂಗ್
ತನಿಷಾ ಕಾರ್ತಿಕ್, ಆರ್.ವಿ. ಕಾಲೇಜು ಜಯನಗರ, ಬೆಂಗಳೂರು
ಸೃಜನ್ ಬಿ.ಎಸ್, ಕೆಎಂಡಬ್ಲ್ಯುಎ ಕಾಲೇಜು, ಎಂ.ಎಲ್.ಪುರ, ಬೆಂಗಳೂರು
ನಿನಾದ್ ವಸಿಷ್ಠ, ಆರ್.ವಿ. ಕಾಲೇಜು, ಜಯನಗರ, ಬೆಂಗಳೂರು
ಪಶು ವೈದ್ಯಕೀಯ
ನಯನಾ ಗೋಪಿ, ಬೇಸ್ ಕಾಲೇಜು, ಶಿವನಗರ, ಬೆಂಗಳೂರು
ಅಮೂಲ್ಯಾ ಎಸ್, ಸರ್.ಎಂ.ವಿ ಕಾಲೇಜು, ದಾವಣಗೆರೆ
ರಿತ್ವಿಕ್ ಕುಮಾರ್, ಆರ್.ವಿ. ಪಿಯು ಕಾಲೇಜು ಜಯನಗರ, ಬೆಂಗಳೂರು
ಕೃಷಿ, ರೇಷ್ಮೆ, ಆಹಾರ ವಿಜ್ಞಾನ
ನಿನಾದ್ ವಸಿಷ್ಠ, ಆರ್.ವಿ. ಕಾಲೇಜು ಜಯನಗರ, ಬೆಂಗಳೂರು
ಅನ್ಮೋಲ್ ಪ್ರಭು - ಅರ್ಜುನ ಕಾಲೇಜು, ಧಾರವಾಡ
ಸಮಯ್ ಎ.ಎಸ್, ಎಕ್ಸ್‌ಪರ್ಟ್ ಕಾಲೇಜು, ಮಂಗಳೂರು
ಬಿ.ಎಸ್‌ಸಿ ನರ್ಸಿಂಗ್
ನಯನಾ ಗೋಪಿ, ಬೇಸ್ ಕಾಲೇಜು, ಶಿವನಗರ, ಬೆಂಗಳೂರು
ಅಮೂಲ್ಯಾ ಎಸ್, ಸರ್.ಎಂ.ವಿ. ಕಾಲೇಜು, ಸರಸ್ವತಿನಗರ, ದಾವಣಗೆರೆ
ರಿತ್ವಿಕ್ ಕುಮಾರ್, ಆರ್.ವಿ. ಕಾಲೇಜು, ಜಯನಗರ, ಬೆಂಗಳೂರು
ಯೋಗ-ನ್ಯಾಚುರೋಪಥಿ, ಬಿ-ಫಾರ್ಮಾ, ಫಾರ್ಮಾ-ಡಿ
ನಯನಾ ಗೋಪಿ, ಬೇಸ್ ಕಾಲೇಜು, ಶಿವನಗರ, ಬೆಂಗಳೂರು
ಅಮೂಲ್ಯಾ ಎಸ್, ಸರ್.ಎಂ.ವಿ. ಕಾಲೇಜು, ದಾವಣಗೆರೆ
ಸುಚಿತಾ ಎಂ, ಶ್ರೀ ಚೈತನ್ಯ ಕಾಲೇಜು, ದಾವಣಗೆರೆ

ಇದೇ 10ರಿಂದ ಸೀಟು ಹಂಚಿಕೆ ಪ್ರಕ್ರಿಯೆ

ಎಂಜಿನಿಯರಿಂಗ್ ಸೇರಿದಂತೆ ವಿವಿಧ ಕೋರ್ಸ್‌ಗಳಿಗೆ ಜೂನ್ 10ರಿಂದ ಸೀಟು ಹಂಚಿಕೆ ಕೌನ್ಸೆಲಿಂಗ್ ಪ್ರಕ್ರಿಯೆಗಳು ಆರಂಭಿಸಲಾಗುವುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದರು.


ಈ ಬಾರಿ ನೀಟ್ ಫಲಿತಾಂಶಕ್ಕೆ ಕಾಯದೆ ಸಿಇಟಿಗೆ ಪ್ರತ್ಯೇಕ ಕೌನ್ಸೆಲಿಂಗ್ ನಡೆಸಲಾಗುತ್ತಿದೆ. ಇದೇ ಮೊದಲ ಬಾರಿ ಪೂರ್ವ ಸುತ್ತಿನ ಕೌನ್ಸಿಲಿಂಗ್ ನಡೆಸಲಾಗುತ್ತಿದ್ದು, ಹಂಚಿಕೆಯಾದ ಸೀಟುಗಳು ಇಷ್ಟವಾಗುವ ಅಭ್ಯರ್ಥಿಗಳು ಕಾಲೇಜಿಗೆ ಪ್ರವೇಶ ಪಡೆಯಬಹುದು ಅಥವಾ ಮೊದಲ ಸುತ್ತಿನಲ್ಲಿ ಭಾಗವಹಿಸಬಹುದು ಎಂದರು.

ಹಿಂದೆ ಇದ್ದಂತೆ ಅಣಕು ಸೀಟು ಹಂಚಿಕೆಯೂ ಇರುತ್ತದೆ. ಪ್ರಕ್ರಿಯೆಯ ಎಲ್ಲ ಹಂತಗಳ ವೇಳಾಪಟ್ಟಿ ಶೀಘ್ರ ಬಿಡುಗಡೆ ಮಾಡಲಾಗುವುದು. ನೀಟ್ ಫಲಿತಾಂಶದ ನಂತರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಕೌನ್ಸೆಲಿಂಗ್ ನಡೆಸಲಾಗುವುದು. ತೆರವಾದ ಎಂಜಿನಿಯರಿಂಗ್ ಸೀಟುಗಳನ್ನು ಮರು ಹಂಚಿಕೆ ಮಾಡಿ, ಉಳಿಕೆ ಸೀಟುಗಳನ್ನು ಅರ್ಹ ಅಭ್ಯರ್ಥಿಗಳಿಗೆ ನೀಡಲಾಗುವುದು ಎಂದು ಹೇಳಿದರು.



ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಮತ್ತು ಕಾರ್ಯದರ್ಶಿ ಖುಷ್ಬೂ ಗೋಯಲ್ ಚೌಧರಿ ಸಿಇಟಿ ಫಲಿತಾಂಶ ಬಿಡುಗಡೆ ಮಾಡಿದರು —ಪ್ರಜಾವಾಣಿ ಚಿತ್ರ

ರ್‍ಯಾಂಕ್ ಪಡೆದವರು ಏನಂತಾರೆ?



ಖಚಿತ ಗುರಿಯಿಟ್ಟುಕೊಂಡು ಅಭ್ಯಾಸ ಮಾಡಿದ್ದೆ. ಯಾವ ಪಠ್ಯ, ಪರಿಕಲ್ಪನೆಗಳು ಕಷ್ಟವಿದೆ, ಗಮನ ಕೊಡಬೇಕು ಎಂಬುದಕ್ಕೆ ಆದ್ಯತೆ ನೀಡಿದ್ದೆ. ಎಲೆಕ್ಟ್ರಿಕಲ್ ಅಥವಾ ಮೆಕ್ಯಾನಿಕಲ್ ಎಂಜಿನಿಯರಿಂಗ್ ಓದಬೇಕು. ಬಳಿಕ ಎಂ.ಟೆಕ್ ಮಾಡಬೇಕು ಎಂಬ ಗುರಿ ಇದೆ. ಸಂಶೋಧಕ ಅಥವಾ ಸರ್ಕಾರದ ಇಲಾಖೆಯಲ್ಲಿ ಎಂಜಿನಿಯರ್ ಆಗುವ ಕನಸಿದೆ

ಸೃಜನ್ ಬಿ.ಎಸ್. (ಎಂಜಿನಿಯರಿಂಗ್ ಎರಡನೇ ಸ್ಥಾನ)



ಕಾಲೇಜಿನ ಪಾಠ ಹೊರತುಪಡಿಸಿ ದಿನಕ್ಕೆ ನಾಲ್ಕೂವರೆ ಗಂಟೆ ಓದುತ್ತಿದ್ದೆ. ರಸಾಯನವಿನಜ್ಞಾದಲ್ಲಿ ಉನ್ನತ ಶಿಕ್ಷಣ ಪಡೆಯುವ ಆಸೆ ಇದೆ. ಸಂಶೋಧನೆ ಮಾಡುವುದು ನನ್ನ ಗುರಿ. ಪೋಷಕರು, ಶಿಕ್ಷಕರ ಪ್ರೋತ್ಸಾಹದಿಂದ ಸಾಧನೆ ಸಾಧ್ಯವಾಯಿತು.

ನಿನಾದ್ ವಸಿಷ್ಠ, (ಎಂಜಿನಿಯರಿಂಗ್ ಮೂರನೇ ಸ್ಥಾನ)



ವೈದ್ಯಕೀಯ ವಿಜ್ಞಾನ (ಎಂಬಿಬಿಎಸ್) ಅಧ್ಯಯನ ಮಾಡುವ ಗುರಿ ಇದೆ. ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಗೆ (ನೀಟ್) ತಯಾರಿಯಲ್ಲಿ ತೊಡಗಿದ್ದೇನೆ. ಕೃಷಿ, ಫಾರ್ಮಸಿ ಇತರ ಯಾವುದೇ ಕೋರ್ಸ್‌ಗೆ ದಾಖಲಾಗಲು ಆಸಕ್ತಿ ಇಲ್ಲ.

ಅನ್ಮೋಲ್ ಪ್ರಭು, ಧಾರವಾಡ, ಬಿಎಸ್ಸಿ (ಕೃಷಿ, ರೇಷ್ಮೆ) ಕೋರ್ಸ್‌ನಲ್ಲಿ 2ನೇ ರ್‍ಯಾಂಕ್



ಎರಡು ವರ್ಷ ಯಾವುದೇ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸದೇ ಪರಿಶ್ರಮದಿಂದ ಓದಿದ್ದೆ. ಸದ್ಯಕ್ಕೆ ನೀಟ್‌ಗೆ ಸಿದ್ಧತೆ ನಡೆಸುತ್ತಿದ್ದೇನೆ. ಫಲಿತಾಂಶದ ನಂತರ ಮುಂದಿನ ತೀರ್ಮಾನ ಕೈಗೊಳ್ಳುತ್ತೇನೆ. ನೀಟ್‌ನಲ್ಲೂ ಉತ್ತಮ ಫಲಿತಾಂಶ ಪಡೆಯುವ ನಂಬಿಕೆ ಇದೆ. ತಂದೆ-ತಾಯಿ ತುಂಬಾ ಪ್ರೋತ್ಸಾಹ ನೀಡುತ್ತಿದ್ದರು.

ನಯನಾ ಗೋಪಿ (ಪಶು ವೈದ್ಯಕೀಯ, ನರ್ಸಿಂಗ್, ಯೋಗ ಮತ್ತು ನ್ಯಾಚುರೋಪಥಿ, ಬಿ- ಫಾರ್ಮಾ, ಫಾರ್ಮಾ-ಡಿ ಮೊದಲ ಸ್ಥಾನ)



'ಸಿಇಟಿ ಫಲಿತಾಂಶದಿಂದ ಖುಷಿಯಾಗಿದೆ. ಅಗ್ರ 10ರೊಳಗೆ ಫಲಿತಾಂಶ ಬರಬಹುದು ಎಂಬ ನಿರೀಕ್ಷೆ ಇತ್ತು. ಐದು ಕೋರ್ಸ್‌ಗಳಲ್ಲಿ 2ನೇ ರ್‍ಯಾಂಕ್ ಸಿಕ್ಕಿದ್ದರಿಂದ ತುಂಬಾ ಸಂತಸವಾಗಿದೆ. 'ನೀಟ್' ಪಾಸ್ ಮಾಡಿ ವೈದ್ಯಕೀಯ ಕೋರ್ಸ್‌ಗೆ ಸೇರುವ ಉದ್ದೇಶವಿದೆ.

ಅಮೂಲ್ಯ ಎಸ್., ದಾವಣಗೆರೆ, (ವೆಟರ್ನರಿ, ನರ್ಸಿಂಗ್, ಯೋಗ-ನ್ಯಾಚುರೋಪಥಿ, ಬಿ.ಫಾರ್ಮಾ, ಡಿ.ಫಾರ್ಮಾ ಕೋರ್ಸ್‌ಗಳಲ್ಲಿ 2ನೇ ರ್‍ಯಾಂಕ್. ಫಾರ್ಮ್ ಸೈನ್ಸ್‌ನಲ್ಲಿ 10ನೇ ರ್‍ಯಾಂಕ್)



ಸಿಇಟಿಯಲ್ಲಿ ಎಂಜಿನಿಯರಿಂಗ್ ಕೋರ್ಸ್ ಆಯ್ಕೆ ಮಾಡಿಕೊಂಡಿರಲಿಲ್ಲ. 5ನೇ ರ್‍ಯಾಂಕ್ ಒಳಗೆ ಫಲಿತಾಂಶ ಬರುವ ನಿರೀಕ್ಷೆ ಇತ್ತು. ಖುಷಿಯಾಗಿದೆ. 'ನೀಟ್' ಪಾಸ್ ಮಾಡಿ ವೈದ್ಯಕೀಯ ಕೋರ್ಸ್‌ಗೆ ಸೇರುವ ಗುರಿ ಇದೆ.

ಸುಚಿತಾ ಎಂ., ದಾವಣಗೆರೆ, (ಯೋಗ-ನ್ಯಾಚುರೋಪಥಿ, ಬಿ.ಫಾರ್ಮಾ, ಡಿ.ಫಾರ್ಮಾ ಕೋರ್ಸ್‌ಗಳಲ್ಲಿ 3ನೇ ರ್‍ಯಾಂಕ್, ವೆಟರ್ನರಿ ಮತ್ತು ನರ್ಸಿಂಗ್‌ನಲ್ಲಿ 5ನೇ ರ್‍ಯಾಂಕ್)



ಅಂದಿನ ಕೆಲಸವನ್ನು ಅಂದೇ ಮಾಡಿ ಮುಗಿಸುತ್ತಿದ್ದೆ. ಗ್ರೂಪ್ ಸ್ಟಡಿಗೆ ಒತ್ತು ಕೊಡುತ್ತಿದ್ದೆ. ಪರೀಕ್ಷೆ ವೇಳೆ ಗಾಬರಿಯಾಗಲಿಲ್ಲ. ನೀಟ್ ಫಲಿತಾಂಶಕ್ಕೆ ಕಾಯುತ್ತಿದ್ದು, ಎಂಬಿಬಿಎಸ್ ಮಾಡಿ ವೈದ್ಯಕೀಯ ವಿಜ್ಞಾನದಲ್ಲಿ ಸಂಶೋಧನೆ ಮಾಡುವ ಹಂಬಲ ಇದೆ.

ಸಮಯ್ ಎ.ಎಸ್, ದಾವಣಗೆರೆ, (ಫಾರ್ಮ್ ಸೈನ್ಸ್, 3ನೇ ರ್‍ಯಾಂಕ್)



ಕಾಲೇಜಿನಲ್ಲಿ ನಿತ್ಯವೂ ತರಗತಿಗಳಿಗೆ ಹಾಜರಾಗುವ ಜತೆಗೆ ಮನೆಯಲ್ಲೂ ಅಭ್ಯಾಸ ಮಾಡುತ್ತಿದ್ದೆ. ಅಂದಿನ ಅಧ್ಯಾಯಗಳನ್ನು ಅಂದೇ ಓದಿದ ಕಾರಣ ಮತ್ತೆ ಮತ್ತೆ ಮನನ ಮಾಡಿಕೊಳ್ಳಲು ಸಾಧ್ಯವಾಯಿತು. ಸಿಇಟಿ ತರಬೇತಿಯೂ ಉಪಯೋಗಕ್ಕೆ ಬಂತು

ಋತ್ವಿಕ್ ಕುಮಾರ್ (ಪಶು ವೈದ್ಯಕೀಯ, ನರ್ಸಿಂಗ್ ಮೂರನೇ ಸ್ಥಾನ)

ಸಿಇಟಿ: ಅಂಕ ದಾಖಲಿಸಲು ಕೊನೆಯ ಅವಕಾಶ

ಬೆಂಗಳೂರು: ಕೆಲ ವಿದ್ಯಾರ್ಥಿಗಳು ಅರ್ಹತಾ ಪರೀಕ್ಷೆಯ ಅಂಕಗಳನ್ನು ಅಪ್‌ಲೋಡ್ ಮಾಡದ ಕಾರಣ ಸಿಇಟಿ ರ್‍ಯಾಂಕಿಂಗ್ ಪ್ರಕಟವಾಗಿಲ್ಲ. ಅಂತಹವರು ಕೂಡಲೇ ಕೆಇಎ ವೆಬ್‌ಸೈಟ್‌ನ ಲಿಂಕ್ ಮೂಲಕ ಅಂಕಗಳನ್ನು ಅಪ್‌ಲೋಡ್ ಮಾಡಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಅವರು ತಿಳಿಸಿದ್ದಾರೆ.

ಅಂಕಗಳನ್ನು ದಾಖಲಿಸಿ, ಅಂಕಪಟ್ಟಿ ಅಪ್‌ಲೋಡ್ ಮಾಡಿದ ನಂತರ ಐದು ದಿನಗಳಲ್ಲಿ 'ಸ್ಪಾಟ್ ರ್‍ಯಾಂಕ್' ನೀಡಲಾಗುವುದು. ಸಿಬಿಎಸ್‌ಇ, ಐಸಿಎಸ್‌ಇ ಹಾಗೂ ಇತರ ರಾಜ್ಯಗಳ ಕೆಲ ಅಭ್ಯರ್ಥಿಗಳ ಅಂಕಗಳು ಆನ್‌ಲೈನ್‌ನಲ್ಲಿ ಕೆಇಎಗೆ ಲಭ್ಯವಾಗದ ಕಾರಣ ಲಿಂಕ್ ಮೂಲಕ ದಾಖಲಿಸಲು ಹಲವು ಬಾರಿ ಸೂಚಿಸಲಾಗಿತ್ತು. ಆದರೂ ಕೆಲವರು ಅಂಕ ಹಾಗೂ ಅಂಕ ಪಟ್ಟಿಯನ್ನು ಅಪ್‌ಲೋಡ್ ಮಾಡಿಲ್ಲ ಎಂದೂ ಹೇಳಿದ್ದಾರೆ.

ಕೋರ್ಸ್	ಅರ್ಹತೆ ಪಡೆದವರು
ಎಂಜಿನಿಯರಿಂಗ್	2,82,603
ಬಿ.ಎಸ್‌ಸಿ ಕೃಷಿ, ರೇಷ್ಮೆ, ಆಹಾರ	2,09,220
ಪಶು ವೈದ್ಯಕೀಯ	2,12,909
ಬಿ-ಫಾರ್ಮಾ	2,86,609
ಫಾರ್ಮಾ-ಡಿ	2,86,965
ಬಿ.ಎಸ್‌ಸಿ ನರ್ಸಿಂಗ್	2,18,785
ಯೋಗ-ನ್ಯಾಚುರೋಪಥಿ	2,12,730

ನಿಖರ ಮಾಹಿತಿಗೆ 'ಬೋಟ್ ಕಿಯಾಸ್ಕ್'

ಸಿಇಟಿ ಕೌನ್ಸೆಲಿಂಗ್, ನೇಮಕಾತಿ ವಿಷಯಗಳ ಬಗ್ಗೆ ನಿಖರ ಮಾಹಿತಿ ಪಡೆಯಲು ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಕಚೇರಿಗೆ ಬರುವ ಅಭ್ಯರ್ಥಿಗಳು, ಸಾರ್ವಜನಿಕರ ಅನುಕೂಲಕ್ಕಾಗಿ ನಾಲ್ಕು ಕೆಇಎ ಬೋಟ್ ಕಿಯಾಸ್ಕ್‌ಗಳನ್ನು ಸ್ಥಾಪಿಸಲಾಗಿದೆ.

ಕಿಯಾಸ್ಕ್‌ಗಳಿಗೆ ಚಾಲನೆ ನೀಡಿ ಮಾತನಾಡಿದ ಶರಣ ಪ್ರಕಾಶ ಪಾಟೀಲ, 'ಅನಕ್ಷರಸ್ಥರೂ ಕಿಯಾಸ್ಕ್ ಜತೆ ಸಂವಾದ ನಡೆಸಬಹುದು. ಮಾಹಿತಿ ಪಡೆಯಬಹುದು. ಕನ್ನಡ, ಇಂಗ್ಲಿಷ್, ಹಿಂದಿ, ತಮಿಳು, ತೆಲುಗು ಮತ್ತು ಮಲೆಯಾಳಂ ಭಾಷೆಗಳಲ್ಲಿ ಪ್ರಶ್ನೆಗಳನ್ನು ಕೇಳಿದರೂ ಅದು ಅದೇ ಭಾಷೆಯಲ್ಲಿ ಉತ್ತರ ನೀಡಲಿದೆ. ಟೈಪಿಸಿ ಪ್ರಶ್ನೆ ಕೇಳಿದರೂ ಉತ್ತರಿಸಲಿದೆ' ಎಂದರು.

'ಬಂಜಾರ ಭಾಷೆಗೆ ಮನ್ನಣೆ ನೀಡಿ'

ವಿಶ್ವ ಬಂಜಾರ ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಬಂಜಾರ ಭಾಷೆಯನ್ನು ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವಂತೆ ರಾಜ್ಯ ಸರ್ಕಾರದ ಮೇಲೆ ಎಲ್ಲರೂ ಒತ್ತಡ ಹಾಕಬೇಕು' ಎಂದು ಮಾಜಿ ಸಂಸದ ಡಾ.ಉಮೇಶ ಜಾಧವ್ ಹೇಳಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ಸಂತ ಸೇವಾಲಾಲ್ ಸಂಶೋಧನಾ ಹಾಗೂ ಅಧ್ಯಯನ ಪೀಠ, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ಹಾಗೂ ಬಂಜಾರ ಲೋಕ ಕಲಾ ಸಂಘದ ಆಶ್ರಯದಲ್ಲಿ ಶನಿವಾರ ನಡೆದ ವಿಶ್ವ ಬಂಜಾರ ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ತೆಲಂಗಾಣ ರಾಜ್ಯ ಈಗಾಗಲೇ ಅಧಿವೇಶನದಲ್ಲಿ ನಿರ್ಣಯ ಅಂಗೀಕರಿಸಿ ಕೇಂದ್ರಕ್ಕೆ ಶಿಫಾರಸು ಮಾಡಿದೆ. ಕರ್ನಾಟಕ ಹಾಗೂ ಮಹಾರಾಷ್ಟ್ರ ಸರ್ಕಾರಗಳೂ ಈ ಕುರಿತು ಕ್ರಮ ಕೈಗೊಳ್ಳಬೇಕು. ಬಂಜಾರ ಭಾಷೆಗೆ ಸಾಂವಿಧಾನಿಕ ಭದ್ರತೆ ನೀಡಲು ನಾವೆಲ್ಲರೂ ಹಕ್ಕೊತ್ತಾಯ ಮಾಡಬೇಕಿದೆ' ಎಂದರು.



ಯುವತಿಯರು ಬಂಜಾರ ಉಡುಪು ಧರಿಸಿ ಸಂಭ್ರಮಿಸಿದರು ಚಿತ್ರ: ತಾಜುದ್ದೀನ್ ಆಜಾದ್

ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್.ಜಯದೇವ ನಾಯ್ಕ ಮಾತನಾಡಿ, 'ದೇಶದಲ್ಲಿ 10 ಕೋಟಿಗೂ ಅಧಿಕ ಬಂಜಾರ ಜನಸಂಖ್ಯೆ ಇದೆ. ಆದರೆ, ಒಂದೇ ಮೀಸಲಾತಿ ಅಡಿಯಲ್ಲಿ ಇಲ್ಲ. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ, ಆಂಧ್ರದಲ್ಲಿ ಪರಿಶಿಷ್ಟ ಪಂಗಡ, ಮಹಾರಾಷ್ಟ್ರದಲ್ಲಿ ಬೇರೆ ಇದೆ. ದೇಶದೆಲ್ಲೆಡೆ ಬಂಜಾರ ಸಮಾಜವನ್ನು ಎಸ್‌ಸಿ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ಹೋರಾಡಬೇಕು' ಎಂದು ಸಲಹೆ ನೀಡಿದರು.

'ಒಂದು ಜಾತಿ, ಒಂದು ಮೀಸಲಾತಿಗಾಗಿ ನಾವೆಲ್ಲರೂ ರಾಷ್ಟ್ರ ಮಟ್ಟದಲ್ಲಿ ಸಮಿತಿ ರಚಿಸಿ, ಎಲ್ಲ ರಾಜ್ಯದ ಮುಖಂಡರನ್ನು ಸಮಿತಿಯಲ್ಲಿ ಸೇರಿಸಿ ಹೋರಾಟಕ್ಕೆ ಮುಂದಾಗಬೇಕಿದೆ' ಎಂದರು.

ಮಹಾರಾಷ್ಟ್ರದ ಪೌರಾದೇವಿ ಶಕ್ತಿಪೀಠದ ಬಾಬುಸಿಂಗ್ ಮಹಾರಾಜ್, ಗುಲಬರ್ಗಾ ವಿವಿಯ ಕುಲಪತಿ ಶಶಿಕಾಂತ ಉಡಿಕೇರಿ, ಶಾಸಕ ಬಸವರಾಜ್ ಮತ್ತಿಮಡು, ಮಾಜಿ ಸಚಿವರಾದ ರೇವುನಾಯಕ ಬೆಳಮಗಿ, ಬಾಬುರಾವ್ ಚವ್ಹಾಣ, ಸಮಾಜದ ಮುಖಂಡ ಸುಭಾಸ ರಾಠೋಡ ಹಾಜರಿದ್ದರು.

'ಬಹುಕೋಟಿ ಹಗರಣ: ವರದಿ ಸಲ್ಲಿಕೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಅನಧಿಕೃತವಾಗಿ ಬಡ್ಡಿ ವ್ಯವಹಾರ ಹಾಗೂ ಬಹುಕೋಟಿ ರೂಪಾಯಿ ವಂಚನೆ ಮಾಡಿದ ಆರೋಪ ಎದುರಿಸುತ್ತಿರುವ ಆದಿತ್ಯರಾಜ ಕ್ಯಾಪಿಟಲ್ ಪ್ರೈವೆಟ್ ಲಿಮಿಟೆಡ್ ಹಣಕಾಸು ಸಂಸ್ಥೆಯ ವಿರುದ್ಧ ರಾಜ್ಯ ಕಂದಾಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸಮಗ್ರ ವರದಿ ಸಲ್ಲಿಸಲಾಗಿದೆ' ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.

'ಹೆಚ್ಚಿನ ಬಡ್ಡಿಯ ಆಮಿಷವೊಡ್ಡಿ ಅಕ್ರಮವಾಗಿ ಹಣ ಸಂಗ್ರಹಿಸಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಇದು 'ಸೆಬಿ' ಅಥವಾ ಇತರ ನಿಯಂತ್ರಣ ಸಂಸ್ಥೆಗಳ ಮಾನ್ಯತೆ ಹೊಂದಿರುವ ಪೋರ್ಟ್ ಪೋಲಿಯೊ ವ್ಯವಸ್ಥಾಪಕ ಸಂಸ್ಥೆಯಾಗಿಲ್ಲ. ಸಾರ್ವಜನಿಕರಿಂದ ಹಣ ಸಂಗ್ರಹಿಸಿರುವುದು ಕೆಪಿಐಡಿ ಕಾಯ್ದೆಯ ಉಲ್ಲಂಘನೆಯಾಗಿದೆ' ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

'ಸಂಸ್ಥೆಯ ಮುಖ್ಯಸ್ಥ ಬಾಲರಾಜ್ ಮಾನೆ ವಿರುದ್ಧ ಲುಕೌಟ್ ನೋಟಿಸ್ ಜಾರಿಗೊಳಿಸಲಾಗಿದೆ. ವ್ಯವಹಾರಗಳ ಬಗ್ಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಹಾಯವಾಣಿ ತೆರೆಯಲಾಗಿದೆ' ಎಂದರು.

'6,500ಕ್ಕೂ ಹೆಚ್ಚು ಠೇವಣಿದಾರರಿಂದ ಹಣ ಸಂಗ್ರಹಿಸಿರುವ ಶಂಕೆ ಇದೆ. ಇದು ₹50 ಕೋಟಿ ಮೀರಿದ ಪ್ರಕರಣ ಎಂಬುದು ಮೊದಲ ದಿನವೇ ಖಾತ್ರಿಯಾಗಿದೆ. ದಾಖಲೆಗಳ ಪರಿಶೀಲನೆ ಮುಂದುವರಿದಿದ್ದು ಎಷ್ಟು ಕೋಟಿ ವ್ಯವಹಾರ ಎಂಬುದು ಗೊತ್ತಾಗಬೇಕಿದೆ. ಠೇವಣಿದಾರರು ಆತಂಕ ಪಡುವ ಅಗತ್ಯವಿಲ್ಲ. ಸರ್ಕಾರ ಅವರ ಹಿತಾಸಕ್ತಿಯನ್ನು ಕಾಪಾಡಲು ಬದ್ಧವಾಗಿದೆ.' ಎಂದರು. 'ಸಂಸ್ಥೆಯ ಪ್ರಮುಖ 6 ಜನರ ವಿರುದ್ಧ ಪ್ರಕರಣ ದಾಖಲಾಗಿದೆ. ಸಂಸ್ಥೆಗೆ ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ಸೆಬಿ ನೋಂದಣಿ ಇಲ್ಲ ಎಂಬುದು ತನಿಖೆಯಲ್ಲಿ ದೃಢಪಟ್ಟಿದೆ' ಎಂದು ನಗರ ಪೊಲೀಸ್ ಆಯುಕ್ತ ಭೂಷಣ ಬೋರಸೆ ತಿಳಿಸಿದರು.

ಲಂಚ: ಇಬ್ಬರು ಎಂಜಿನಿಯರ್ ಲೋಕಾಯುಕ್ತ ಬಲೆಗೆ

ವಿಜಯಪುರ: ಕೃಷ್ಣಾ ಮೇಲ್ದಂಡೆ ಯೋಜನೆ ಕಾಲುವೆ (ಕೆಬಿಜೆಎನ್‌ಎಲ್) ಕಾಮಗಾರಿಗೆ ಸಂಬಂಧಿಸಿದ ಬಿಲ್ ಮಂಜೂರು ಮಾಡಲು ಲಂಚ ತೆಗೆದುಕೊಳ್ಳುವಾಗ ಇಬ್ಬರು ಅಧಿಕಾರಿಗಳು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಯೋಜನೆಯ ಸಾಲೋಟಗಿ ಉಪ ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ಸೇವುಲಾಲ ಚವ್ಹಾಣ ಮತ್ತು ಕಿರಿಯ ಎಂಜಿನಿಯರ್ ಸಾತಲಿಂಗಪ್ಪ ರೋಡಗಿ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಈ ಇಬ್ಬರು ಅಧಿಕಾರಿಗಳು ಗುತ್ತಿಗೆದಾರ ನಾನಾ ಸಾಹೇಬ ರೋಡಗಿ ಎಂಬವವರಿಂದ ₹18 ಸಾವಿರ ಲಂಚ ತೆಗೆದುಕೊಳ್ಳುತ್ತಿದ್ದ ವೇಳೆ ದಾಳಿ ನಡೆಸಿ ವಶಕ್ಕೆ ಪಡೆಯಲಾಗಿದೆ.



ಸೇವುಲಾಲ ಚವ್ಹಾಣ



ಸಾತಲಿಂಗಪ್ಪ ರೋಡಗಿ

ಜಿಡಿಪಿ ಇಳಿಕೆ ಸಾಧ್ಯತೆ: ಅರ್ಥಶಾಸ್ತ್ರಜ್ಞರ ಎಚ್ಚರಿಕೆ



ನವದೆಹಲಿ (ಪಿಟಿಐ): 2025–26ರ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರ ನಿರೀಕ್ಷೆಗಿಂತಲೂ ಹೆಚ್ಚಿನ ಮಟ್ಟದಲ್ಲಿ ಇದೆ. ಆದರೆ, ಪಶ್ಚಿಮ ಏಷ್ಯಾದ ಬಿಕ್ಕಟ್ಟಿನ ಪರಿಣಾಮವಾಗಿ ಹೆಚ್ಚಾಗುತ್ತಿರುವ ಇಂಧನ ದರ ಮತ್ತು ಹಣದುಬ್ಬರ ಹೆಚ್ಚಳ ಮಟ್ಟದಲ್ಲಿನ ಅನಿಶ್ಚಿತತೆಯಿಂದಾಗಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಆರ್ಥಿಕತೆಯ ಬೆಳವಣಿಗೆ ದರವು ಇಳಿಕೆಯಾಗುವ ಸಾಧ್ಯತೆ ಇದೆ ಎಂದು ಅರ್ಥಶಾಸ್ತ್ರಜ್ಞರು ಎಚ್ಚರಿಸಿದ್ದಾರೆ.

ಕಳೆದ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ಶೇ 7.8ರಷ್ಟು ಆಗಿದೆ ಮತ್ತು ಪೂರ್ಣ ಆರ್ಥಿಕ ವರ್ಷದಲ್ಲಿ ಶೇ 7.7ರಷ್ಟು ದಾಖಲಾಗಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ದೇಶದಲ್ಲಿ ಸರಕು ಮತ್ತು ಸೇವೆಗಳಿಗೆ ಬೇಡಿಕೆ ಉತ್ತಮವಾಗಿದೆ. ಹೂಡಿಕೆಯು ಸದೃಢವಾಗಿದೆ. ಮಾರ್ಚ್‌ನಲ್ಲಿ ತೀವ್ರಗೊಂಡ ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಆರಂಭಿಕ ಪರಿಣಾಮವನ್ನು ನಿಭಾಯಿಸಲು ಇವು ಸಹಾಯ ಮಾಡಿವೆ ಎಂದು ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.

ಆದರೆ, ಕಚ್ಚಾ ತೈಲ ಮತ್ತು ಸರಕುಗಳ ಬೆಲೆ ಏರಿಕೆ, ಜಾಗತಿಕ ಬೆಳವಣಿಗೆಯು ನಿಧಾನ ಆಗಿರುವುದು, ಪೂರೈಕೆ ವ್ಯವಸ್ಥೆಯಲ್ಲಿ ಆಗಿರುವ ಅಡಚಣೆಗಳು ಮತ್ತು ಮುಂಗಾರು ಈ ಬಾರಿ ವಾಡಿಕೆಗಿಂತ ಕಡಿಮೆ ಇರುವ ಸಾಧ್ಯತೆಯು ಜಿಡಿಪಿ ಬೆಳವಣಿಗೆ ದರವನ್ನು ನಿಧಾನಗೊಳಿಸಬಹುದು ಎಂದು ಅಂದಾಜಿಸಿದ್ದಾರೆ.

2026–27ರಲ್ಲಿ ಜಿಡಿಪಿ ಬೆಳವಣಿಗೆ ಶೇ 6.6ರಷ್ಟಿರಲಿದೆ ಎಂದು ಕ್ರಿಸಿಲ್ ರೇಟಿಂಗ್ ಸಂಸ್ಥೆ ಅಂದಾಜಿಸಿದ್ದರೆ, ಬೆಳವಣಿಗೆ ಶೇ 6.5ರಷ್ಟಾಗಬಹುದು ಎಂದು ಎಚ್‌ಡಿಎಫ್‌ಸಿ ಬ್ಯಾಂಕ್ ಅಂದಾಜು ಮಾಡಿದೆ. ತಯಾರಿಕಾ ವೆಚ್ಚದಲ್ಲಿ ಏರಿಕೆ, ಲಾಭ ಕಡಿಮೆ ಆಗಿರುವುದು, ಹಣದುಬ್ಬರದ ಹೆಚ್ಚಳ ಮತ್ತು ಹೂಡಿಕೆಯ ಪ್ರಮಾಣ ಕಡಿಮೆ ಆಗುವ ಸಾಧ್ಯತೆಯು ಆರ್ಥಿಕ ಬೆಳವಣಿಗೆಯನ್ನು ತಗ್ಗಿಸಲಿದೆ ಎಂದು ಈ ಸಂಸ್ಥೆಗಳು ಎಚ್ಚರಿಸಿವೆ.

ಮುಂಬೈ ಧಾರಣೆ (ಕ್ವಿಂಟಲ್)	06-06-2026
ಜವಾರಾ 70/80(ಹೊಸ)	11200-11300
ಜವಾರಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1620 (1625)
ಒಂದು ವಾರದ ಡೆಲಿವರಿ	1615 (1620)
ಪಾಮ್ ವಾರದ ಡೆಲಿವರಿ	1478 (1483)
ಸೂರ್ಯಕಾಂತಿ ಎಣ್ಣೆ ಕಚ್ಚಾ	1555 (1560)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,51,400 (1,53,000)
ಬೆಳ್ಳಿ ಕೆ.ಜಿಗೆ	2,46,000 (2,52,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಅಡಿಕೆ ಧಾರಣೆ

ಚಿತ್ರದುರ್ಗ	
ಬೆಟ್ಟೆ	37949-38389
ಕೆಂಪುಗೋಟು	32229-32659
ರಾಶಿ	51439-51869
ಪುತ್ತೂರು	
ಕೋಕ	20000-33500
ಹೊಸತು	30000-46000
ಶಿರಸಿ	
ಬೆಟ್ಟೆ	40001-50909
ಬಿಳಿಗೋಟು	26919-36200
ಚಾಲಿ	44200-48599
ಕೆಂಪುಗೋಟು	26899-35118
ರಾಶಿ	51099-52989

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

100 ಕ್ಕೆ	₹625
12 ಕ್ಕೆ	₹86
ಮೈಸೂರು: 100 ಕ್ಕೆ	₹635

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿಗೆ)

ಆರ್‌ಎಸ್‌ಎಸ್-4	₹259.50
ಆರ್‌ಎಸ್‌ಎಸ್-5	₹252.50
ಗುಡ್ ಲಾಟ್	₹218

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹433-688
ದ್ವಿತಳಿ (ಬಿ.ವಿ)	₹325-852

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ಕ್ವಿಂಟಲ್)	₹1610 (1615)
ಸೋಯಾ (ಕ್ವಿಂಟಲ್)	₹1485 (1490)
ಸೂರ್ಯಕಾಂತಿ (ಕ್ವಿಂಟಲ್)	₹1645 (1650)
ಪಾಮೋಲಿನ್	₹1480 (1485)

ಮುದ್ರಮನೆ ಕಾಫಿ

ಎಪಿ	₹22500
ಎಸಿ	₹14000
ಆರ್‌ಪಿ	₹18050
ಆರ್‌ಸಿ	₹9525

ಈರುಳ್ಳಿ ಧಾರಣೆ ಬೆಂಗಳೂರು

ದೊಡ್ಡ	₹1600-2200
ಮಧ್ಯಮ	₹1000-1400
ಸಣ್ಣ	₹400-1000

ಅಡುಗೆ ಎಣ್ಣೆ: ಪೊಟ್ಟಣದ ಗಾತ್ರ ನಿಗದಿ

ಗ್ರಾಹಕರಿಗೆ ಎಣ್ಣೆ ಖರೀದಿಸಲು ಅನುಕೂಲ ಮಾಡಿಕೊಡಲು ಕೇಂದ್ರದಿಂದ ಕ್ರಮ



ನವದೆಹಲಿ (ಪಿಟಿಐ): ಅಡುಗೆ ಎಣ್ಣೆಗಳನ್ನು ಮಾರಾಟ ಮಾಡುವ ಪೊಟ್ಟಣಗಳ ಗಾತ್ರವು 'ಇಂತಿಷ್ಟೇ ಇರಬೇಕು, ಕಂಪನಿಗಳು ತಮ್ಮ ಇಚ್ಛೆಗೆ ಅನುಗುಣವಾದ ಗಾತ್ರ ಹಾಗೂ ಪ್ರಮಾಣದಲ್ಲಿ ಅಡುಗೆ ಎಣ್ಣೆ ಮಾರಾಟ ಮಾಡಲು ಅವಕಾಶವಿಲ್ಲ' ಎಂಬ ನಿಯಮವನ್ನು ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆಯು ಜಾರಿಗೆ ತಂದಿದೆ.

ಇದರಿಂದಾಗಿ ಗ್ರಾಹಕರಿಗೆ ಖಾದ್ಯ ತೈಲದ ವಿವಿಧ ಬ್ರ್ಯಾಂಡ್‌ಗಳು ಮತ್ತು ಅವುಗಳ ಮಾರಾಟ ದರವನ್ನು ಹೋಲಿಸಿ, ಖರೀದಿ ಮಾಡಲು ಅನುಕೂಲ ಆಗಲಿದೆ ಎಂದು ಇಲಾಖೆ ತಿಳಿಸಿದೆ.

ಖಾದ್ಯ ತೈಲದ ಪೊಟ್ಟಣ ಗಾತ್ರ ಮತ್ತು ಅವುಗಳಲ್ಲಿ ಭರ್ತಿ ಮಾಡುವ ತೈಲದ ಪ್ರಮಾಣಕ್ಕೆ ಸಂಬಂಧಿಸಿದ ಪ್ರಮಾಣಿತ ಕಾರ್ಯಾಚರಣೆ ವಿಧಾನಕ್ಕೆ (ಎಸ್‌ಒಪಿ) ಇಲಾಖೆಯು ತಿದ್ದುಪಡಿ ಮಾಡಿದೆ. ತಯಾರಕರು, ಪ್ಯಾಕ್ ಮಾಡುವವರು ಮತ್ತು ಆಮದುದಾರರು ಮೂರು ತಿಂಗಳ ಒಳಗೆ ಈ ಹೊಸ ನಿಯಮಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸೂಚಿಸಿದೆ.

ಪರಿಷ್ಕೃತ ಎಸ್‌ಒಪಿ ಪ್ರಕಾರ ಖಾದ್ಯ ತೈಲಗಳನ್ನು ಒಂಬತ್ತು ಬಗೆಯ ಪ್ರಮಾಣಿತ ಗಾತ್ರದ ಪೊಟ್ಟಣಗಳಲ್ಲಿ ಮಾರಾಟ ಮಾಡಬಹುದಾಗಿದೆ. 200 ಎಂ.ಎಲ್/ಗ್ರಾಂ, 500 ಎಂ.ಎಲ್/ಗ್ರಾಂ, 1 ಲೀಟರ್/ಕೆಜಿ, 2 ಲೀಟರ್/ಕೆಜಿ, 3 ಲೀಟರ್/ಕೆಜಿ, 5 ಲೀಟರ್/ಕೆಜಿ, 15 ಲೀಟರ್/ಕೆಜಿ ಮತ್ತು 20 ಲೀಟರ್/ಕೆಜಿ ತೂಕದ ಪೊಟ್ಟಣಗಳಲ್ಲಿ ಖಾದ್ಯ ತೈಲ ಮಾರಾಟ ಮಾಡಬೇಕಾಗುತ್ತದೆ.

ತಾಳೆ ಎಣ್ಣೆ, ಸೋಯಾಬೀನ್, ಸೂರ್ಯಕಾಂತಿ, ಶೇಂಗಾ, ಸಾಸಿವೆ, ಎಳ್ಳು, ಅಕ್ಕಿ ಹೊಟ್ಟಿನಿಂದ ಮಾಡಿದ ಎಣ್ಣೆ, ಹತ್ತಿ ಬೀಜ ಮತ್ತು ಜೋಳದ ಎಣ್ಣೆ ಸೇರಿದಂತೆ ಪ್ರಮುಖ ಖಾದ್ಯ ತೈಲಗಳು ಹಾಗೂ ಖಾದ್ಯ ತೈಲಗಳ ಮಿಶ್ರಣಕ್ಕೆ ಈ ಎಸ್‌ಒಪಿ ಅನ್ವಯ ಆಗಲಿದೆ ಎಂದು ತಿಳಿಸಿದೆ.

ದೇಶದ ಪ್ರಮುಖ ಖಾದ್ಯ ತೈಲ ಉದ್ಯಮ ಸಂಘಗಳ ಜೊತೆ ನಡೆದ ಮಾತುಕತೆಯ ಬಳಿಕ ಈ ನಿರ್ಧಾರ ಕೈಗೊಳ್ಳಲಾಗಿದೆ.

ಕಾನೂನು ಮಾಪನಶಾಸ್ತ್ರ ನಿಯಮಗಳು–2011ರ (ಪ್ಯಾಕ್ ಮಾಡಿದ ಸರಕುಗಳು) ಪ್ರಕಾರ, ಪೊಟ್ಟಣದ ಮೇಲೆ ಖಾದ್ಯ ತೈಲದ ಪ್ರಮಾಣ (ಮಿ.ಲೀ ಅಥವಾ ಲೀ.) ಮತ್ತು ತೂಕವನ್ನು ಸ್ಪಷ್ಟವಾಗಿ ನಮೂದಿಸಬೇಕಿದೆ. ಈ ನಿಬಂಧನೆಗಳು ದೇಶೀಯವಾಗಿ ತಯಾರಿಸಿದ ಮತ್ತು ಆಮದು ಮಾಡಿಕೊಳ್ಳುವ ಖಾದ್ಯ ತೈಲಗಳೆರಡಕ್ಕೂ ಅನ್ವಯಿಸುತ್ತವೆ.

200 ಎಂ.ಎಲ್/ಗ್ರಾಂ ಮತ್ತು ಅದಕ್ಕಿಂತ ಕಡಿಮೆ ತೂಕ ಇರುವ ಖಾದ್ಯ ತೈಲದ ಪೊಟ್ಟಣಗಳಿಗೆ ಈ ನಿಯಮದಿಂದ ವಿನಾಯಿತಿ ನೀಡಲಾಗಿದೆ.

ನಿಗದಿ ಮಾಡಿರುವ ಗಾತ್ರದ ಪೊಟ್ಟಣಗಳಲ್ಲಿ ಖಾದ್ಯ ತೈಲ ಮಾರಾಟವನ್ನು ಕಂಪನಿಗಳು ತಕ್ಷಣದಲ್ಲಿಯೇ ಆರಂಭಿಸಲು ಅವಕಾಶ ಇದೆ ಎಂದು ಇಲಾಖೆ ಹೇಳಿದೆ.

ಮುಖ್ಯಾಂಶಗಳು

- ಕಂಪನಿಗಳು ತಮ್ಮ ಇಚ್ಛೆ ಬಂದಂತೆ ಎಣ್ಣೆ ಮಾರಾಟ ಮಾಡಲು ಅವಕಾಶವಿಲ್ಲ
- ಮೂರು ತಿಂಗಳೊಳಗೆ ಹೊಸ ನಿಯಮ ಅಳವಡಿಸಿಕೊಳ್ಳಲು ಸೂಚನೆ
- 200 ಎಂ.ಎಲ್/ಗ್ರಾಂ ಗಿಂತ ಕಡಿಮೆ ಇರುವ ಪೊಟ್ಟಣಕ್ಕೆ ವಿನಾಯಿತಿ

ಇಪಿಸಿ ಜೊತೆ ಪ್ರಧಾನಿ ಸಭೆ



ಪ್ರಧಾನಿ ನರೇಂದ್ರ ಮೋದಿ ಅವರು ಆರ್ಥಿಕ ಸಲಹಾ ಮಂಡಳಿಯ (ಇಎಸಿ) ಸದಸ್ಯರ ಜೊತೆ ಶನಿವಾರ ಚರ್ಚೆ ನಡೆಸಿದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಜಾಗತಿಕ ಮಟ್ಟದ ಸಂಘರ್ಷಗಳ ನಡುವೆಯೂ ದೇಶದ ಆರ್ಥಿಕತೆಯ ಬೆಳವಣಿಗೆ ದರವನ್ನು ಹೆಚ್ಚಿಸುವ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಆರ್ಥಿಕ ಸಲಹಾ ಮಂಡಳಿಯ (ಇಎಸಿ) ಸದಸ್ಯರ ಜೊತೆ ಶನಿವಾರ ಚರ್ಚೆ ನಡೆಸಿದರು.

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ಭಾರತದ ಮೇಲೆ ಹಾಗೂ ವಿಶ್ವದ ಇತರ ರಾಷ್ಟ್ರಗಳ ಮೇಲೆ ಯಾವ ಬಗೆಯ ಪರಿಣಾಮ ಆಗಿದೆ ಎಂಬುದರ ಬಗ್ಗೆ ಮಂಡಳಿಯ ಸದಸ್ಯರು ತಮ್ಮ ಅನಿಸಿಕೆಯನ್ನು ಪ್ರಧಾನಿಯವರ ಜೊತೆ ಹಂಚಿಕೊಂಡರು.

'ಆರ್ಥಿಕ ಸಲಹಾ ಮಂಡಳಿಯ ಸಭೆಯ ನೇತೃತ್ವ ವಹಿಸಿದ್ದೆ. ಭಾರತದ ಆರ್ಥಿಕ ಪರಿವರ್ತನೆ ಹಾಗೂ ದೀರ್ಘಾವಧಿಯ ಅಭಿವೃದ್ಧಿ ಆದ್ಯತೆಗಳಿಗೆ ಸಂಬಂಧಿಸಿದ ಹಲವು ವಿಷಯಗಳ ಕುರಿತು ಚರ್ಚಿಸಿದೆವು' ಎಂದು ಪ್ರಧಾನಿ ಮೋದಿ ಅವರು ಎಕ್ಸ್ ಮೂಲಕ ತಿಳಿಸಿದ್ದಾರೆ.

'ಸುಧಾರಣೆಗಳನ್ನು ಜಾರಿಗೆ ತರುವ ಪಯಣಕ್ಕೆ ಹೆಚ್ಚಿನ ವೇಗ ನೀಡುವುದರ ಬಗ್ಗೆ, ಜೀವನದ ಮಟ್ಟ ಸುಧಾರಿಸುವ ಬಗ್ಗೆ ಹಾಗೂ ವಾಣಿಜ್ಯ ವಹಿವಾಟುಗಳನ್ನು ಸುಲಲಿತ ಆಗಿಸುವ ಬಗ್ಗೆ ಅನಿಸಿಕೆಗಳನ್ನು ಹಂಚಿಕೊಳ್ಳಲಾಯಿತು' ಎಂದು ಪ್ರಧಾನಿಯವರು ಹೇಳಿದ್ದಾರೆ.

ದೇಶದ ಆರ್ಥಿಕ ಬೆಳವಣಿಗೆಗೆ ಇನ್ನಷ್ಟು ಉತ್ತೇಜನ ನೀಡುವ ಬಗ್ಗೆ ಪ್ರಧಾನಿಯವರು ಹಾಗೂ ಮಂಡಳಿಯ ಸದಸ್ಯರು ಚರ್ಚಿಸಿದರು ಎಂದು ಮೂಲಗಳು ತಿಳಿಸಿವೆ.

ಮಂಡಳಿಯ ಸದಸ್ಯರಲ್ಲದೆ, ಪ್ರಧಾನಿಯವರ ಪ್ರಧಾನ ಕಾರ್ಯದರ್ಶಿಗಳಾದ ಪಿ.ಕೆ. ಮಿಶ್ರಾ ಮತ್ತು ಶಕ್ತಿಕಾಂತ ದಾಸ್ ಅವರು ಸಭೆಯಲ್ಲಿ ಭಾಗಿಯಾಗಿದ್ದರು.

ಮಂಡಳಿಯಲ್ಲಿ ಅಧ್ಯಕ್ಷರಲ್ಲದೆ ಮೂವರು ಪೂರ್ಣಾವಧಿ ಸದಸ್ಯರು ಹಾಗೂ 11 ಮಂದಿ ಅರೆಕಾಲಿಕ ಸದಸ್ಯರು ಇದ್ದಾರೆ.

ಬ್ರಿಜ್: ಅಗ್ರಸ್ಥಾನದಲ್ಲಿ ಕೆಯ್ಝಾದ್, ವಿದ್ಯಾ

ಪ್ರಜಾವಾಣಿ ವಾರ್ತೆ

ಮಂಗಳೂರು: ದೇಶದ ಪ್ರಮುಖ ಮಿಶ್ರ ಜೋಡಿಗಳಲ್ಲಿ ಒಂದಾದ ಕೆಯ್ಝಾದ್ ಅಂಕ್ಲೆಸಾರಿಯ ಮತ್ತು ವಿದ್ಯಾ ಪಟೇಲ್ ಇಲ್ಲಿ ನಡೆಯುತ್ತಿರುವ ಮವೆರಿಕ್ಸ್ ರಾಷ್ಟ್ರೀಯ ಬ್ರಿಜ್ ಚಾಂಪಿಯನ್‌ಷಿಪ್‌ನ ಡಾ.ಕೆ.ಕೆ ಭಟ್ನಾಗರ್ ಸ್ಮಾರಕ ಮಿಶ್ರ ಐಎಂಪಿ ವಿಭಾಗದಲ್ಲಿ ಶನಿವಾರ ನಡೆದ ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ ಗಳಿಸಿದ್ದಾರೆ.

ಕರಾವಳಿ ಬ್ರಿಜ್ ಸಂಸ್ಥೆ ಭಾರತ ಬ್ರಿಜ್ ಫೆಡರೇಷನ್ ಮತ್ತು ಕರ್ನಾಟಕ ರಾಜ್ಯ ಬ್ರಿಜ್ ಸಂಸ್ಥೆಯ ಸಹಯೋಗದಲ್ಲಿ ಬೆಂದೂರಿನ ಸೇಂಟ್ ಸೆಬಾಸ್ಟಿಯನ್ ಸಭಾಂಗಣದಲ್ಲಿ ಆಯೋಜಿಸಿರುವ ಚಾಂಪಿಯನ್‌ಷಿಪ್‌ನ ಈ ವಿಭಾಗದಲ್ಲಿ ಒಟ್ಟು 70 ಜೋಡಿಗಳ ಪೈಕಿ ಅಗ್ರ 26 ಜೋಡಿ ಭಾನುವಾರ ನಡೆಯಲಿರುವ ಫೈನಲ್‌ಗೆ ಅರ್ಹತೆ ಪಡೆದುಕೊಂಡಿದ್ದಾರೆ.

ಕೆಯ್ಝಾದ್ ಅಂಕ್ಲೆಸಾರಿಯ ಮತ್ತು ವಿದ್ಯಾ ಪಟೇಲ್ 91 ಸ್ಕೋರು ಗಳಿಸಿದರು. ದೇಶದ ಪ್ರಮುಖ ಜೋಡಿ ಸುಮಿತ್ ಮುಖರ್ಜಿ ಮತ್ತು ಮೋನಿಕಾ ಜಾಜು ಒಂದು ಹಂತದಲ್ಲಿ ಅಗ್ರಸ್ಥಾನದತ್ತ ದಾಪುಗಾಲು ಹಾಕಿದ್ದರು. ಆದರೆ ಕೊನೆಯ ಸುತ್ತುಗಳಲ್ಲಿ ಕೆಯ್ಝಾದ್-ವಿದ್ಯಾ ಅವರು ಮುನ್ನಡೆದರು. ಸುಮಿತ್–ಮೋನಿಕಾ 86 ಸ್ಕೋರುಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ.

ಟಿ.ವಿ ರಮಣಿ ಮತ್ತು ಬಿಂದಿಯಾ ಕೊಹ್ಲಿ 74 ಸ್ಕೋರು ಗಳಿಸಿ ಮೂರನೇ ಸ್ಥಾನದಲ್ಲಿ ಉಳಿದಿದ್ದು ಭಾನುವಾರ ಟ್ರೋಫಿಗಾಗಿ ನಡೆಯುವ ಸ್ಪರ್ಧೆಗೆ ರೋಚಕತೆ ತುಂಬಿದ್ದಾರೆ.

ಸ್ಯಾಫ್ ಮಹಿಳಾ ಫುಟ್‌ಬಾಲ್: ಭಾರತ ತಂಡ ಚಾಂಪಿಯನ್

ಮಡಗಾಂವ್ (ಪಿಟಿಐ): ಭಾರತ ತಂಡವು ಶನಿವಾರ ನಡೆದ ಸ್ಯಾಫ್ ಮಹಿಳಾ ಫುಟ್‌ಬಾಲ್ ಚಾಂಪಿ ಯನ್‌ಷಿಪ್‌ನ ಫೈನಲ್ ಪಂದ್ಯದಲ್ಲಿ 3–1 ಗೋಲುಗಳಿಂದ ಬಾಂಗ್ಲಾದೇಶ ತಂಡವನ್ನು ಸೋಲಿಸಿ ಆರನೇ ಬಾರಿ ಪ್ರಶಸ್ತಿ ಗೆದ್ದುಕೊಂಡಿತು.

ಭಾರತಕ್ಕೆ ಏಳು ವರ್ಷಗಳ ಬಳಿಕ ಈ ಪ್ರಶಸ್ತಿ ಒಲಿದಿದೆ. ಪ್ಯಾರಿ ಕ್ಸಾಕ್ಸಾ (42ನೇ ನಿಮಿಷ), ಸನ್ಫಿದಾ ನಂಗ್ರೋಮ್ (46ನೇ ನಿಮಿಷ), ಲಿಂಡಾ ಕೊಮ್ ಸೆರ್ಟೊ (82ನೇ ನಿಮಿಷ) ಅವರು ಭಾರತ ತಂಡದ ಪರ ಗೋಲುಗಳನ್ನು ಗಳಿಸಿದರು. ರಿತುಪರ್ಣ ಚಕ್ಮಾ (45 + 2) ಅವರು ಬಾಂಗ್ಲಾದೇಶ ತಂಡದ ಏಕೈಕ ಗೋಲು ಗಳಿಸಿದರು. ಭಾರತ ಗುಂಪು ಹಂತದ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ 3–0 ಗೋಲುಗಳಿಂದ ಜಯಗಳಿಸಿತ್ತು. ಭಾರತ ಈ ಟೂರ್ನಿಯಲ್ಲಿ ಅಜೇಯ ಸಾಧನೆ ಪ್ರದರ್ಶಿಸಿತು. ತಂಡವು 18 ಗೋಲುಗಳನ್ನು ಗಳಿಸಿತು. ಒಂದು ಗೋಲನ್ನು ಮಾತ್ರ ಬಿಟ್ಟುಕೊಟ್ಟಿತು.

ಐದು ಪ್ರಶಸ್ತಿಗಳನ್ನು ಸತತವಾಗಿ (ಕೊನೆಯ ಬಾರಿ 2019ರಲ್ಲಿ) ಗೆದ್ದಿದ್ದ ಭಾರತ ತಂಡ ನಂತರದ ಎರಡು ಆವೃತ್ತಿಗಳಲ್ಲಿ ಫೈನಲ್ ಕೂಡ ತಲುಪಲು ಆಗಿರಲಿಲ್ಲ. ಆ ಎರಡೂ ಸಂದರ್ಭಗಳಲ್ಲಿ (2022, 2024) ಬಾಂಗ್ಲಾದೇಶ, ನೇಪಾಳ ತಂಡವನ್ನು ಸೋಲಿಸಿ ಚಾಂಪಿಯನ್ ಆಗಿತ್ತು.

'ಸಿಒಸಿ ಅನುಮೋದನೆ ಬಳಿಕ ಹಿಂಪಡೆಯುವಿಕೆ ಸಾಧ್ಯವಿಲ್ಲ'

ನವದೆಹಲಿ: ಒಮ್ಮೆ ಸಾಲಗಾರರ ಸಮಿತಿ (ಸಿಒಸಿ) ಪರಿಹಾರ ಯೋಜನೆಯನ್ನು ಅನುಮೋದಿಸಿ, ಉದ್ದೇಶ ಪತ್ರವನ್ನು (ಎಲ್‌ಒಐ) ನೀಡಿದ ನಂತರ, ಮಾತುಕತೆ ಅಥವಾ ಹಿಂಪಡೆಯುವಿಕೆ ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯ ಮಂಡಳಿ (ಎನ್‌ಸಿಎಲ್‌ಎಟಿ) ನೀಡಿದ ಆದೇಶದ ವಿರುದ್ಧ ಒರಾಕಲ್ ಹೋಮ್ಸ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಯ ಪ್ರವರ್ತಕ ಸಂಜಯ್ ದವೆ ಸಲ್ಲಿಸಿದ್ದ ಮನವಿಯನ್ನು ವಜಾಗೊಳಿಸಿ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಕೆ.ವಿ ವಿಶ್ವನಾಥನ್ ಮತ್ತು ವಿಪುಲ್ ಎಂ. ಪಾಂಚೋಲಿ ಅವರ ಪೀಠವು ಈ ಆದೇಶ ನೀಡಿದೆ.

ದಿವಾಳಿತನ ಮತ್ತು ದಿವಾಳಿತನ ಸಂಹಿತೆ ಕಾಯ್ದೆಯ 33ನೇ ಸೆಕ್ಷನ್, ಇಂತಹ ಅನುಮೋದನೆಗಳ ಬದ್ಧತೆ ಮತ್ತು ಬದಲಾಯಿಸಲಾಗದ ಸ್ವರೂಪವನ್ನು ಒತ್ತಿ ಹೇಳುತ್ತದೆ ಎಂದು ನ್ಯಾಯಪೀಠ ಹೇಳಿದೆ.

'ಈ ಮನವಿ ಸ್ಪಷ್ಟ ಕುತಂತ್ರವಾಗಿದ್ದು, ಇದು ಅನುಮೋದಿತ ಯೋಜನೆಯನ್ನು ರದ್ದುಗೊಳಿಸುವ ಪರೋಕ್ಷ ಪ್ರಯತ್ನ' ಎಂದು ನ್ಯಾಯಪೀಠ ಅರ್ಜಿದಾರರನ್ನು ತರಾಟೆಗೆ ತೆಗೆದುಕೊಂಡಿದೆ.

ಕಾರ್ಪೊರೇಟ್ ದಿವಾಳಿತನ ಪರಿಹಾರ ಪ್ರಕ್ರಿಯೆಗೆ ಒಳಪಡಲು ಒರಾಕಲ್‌ನ ದವೆ ಅವರು 2018ರಲ್ಲಿ ಎನ್‌ಸಿಎಲ್‌ಟಿ ಅನುಮತಿಯೊಂದಿಗೆ ಪರಿಹಾರ ಯೋಜನೆ ಸಲ್ಲಿಸಿದ್ದರು. 2021ರಲ್ಲಿ ಸಾಲಗಾರರ ಸಮಿತಿ ಇದನ್ನು ಅನುಮೋದಿಸಿತ್ತು. ಆದರೆ, ದವೆ ಈ ಆದೇಶದ ವಿರುದ್ಧ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ಭಾರತಕ್ಕೆ ಏಷ್ಯಾ ಕಪ್ ಹಾಕಿ ಕಿರೀಟ



18 ವರ್ಷದೊಳಗಿನವರ ಏಷ್ಯಾ ಕಪ್ ಹಾಕಿ ಟೂರ್ನಿಯ ಪ್ರಶಸ್ತಿ ಗೆದ್ದ ಭಾರತದ ಬಾಲಕರ ತಂಡ –ಹಾಕಿ ಇಂಡಿಯಾ ಎಕ್ಸ್ ಚಿತ್ರ

ಕಾಕಾಮಿಗಹಾರಾ (ಜಪಾನ್), (ಪಿಟಿಐ): ಅಮೋಘ ಲಯದಲ್ಲಿರುವ ಆಶಿಷ್ ತಾನಿ ಪುರ್ತಿ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಭಾರತ ತಂಡವು, 18 ವರ್ಷದೊಳಗಿನವರ ಏಷ್ಯಾ ಕಪ್ ಹಾಕಿ ಟೂರ್ನಿಯ ಫೈನಲ್ ಪಂದ್ಯದಲ್ಲಿ ಆತಿಥೇಯ ಜಪಾನ್ ತಂಡವನ್ನು 4–1 ಗೋಲುಗಳಿಂದ ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿತು.

ಪಾಕಿಸ್ತಾನ ವಿರುದ್ಧ ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ನಾಲ್ಕು ಗೋಲು ಗಳಿಸಿದ್ದ ಜಾರ್ಖಂಡ್‌ನ ಆಶಿಷ್, ಶನಿವಾರ ಮಧ್ಯಾಹ್ನ ನಡೆದ ಅಂತಿಮ ಪಂದ್ಯದಲ್ಲಿ ಮತ್ತೊಮ್ಮೆ ಮಿಂಚಿ 'ಪಂದ್ಯದ ಆಟಗಾರ' ಗೌರವಕ್ಕೆ ಪಾತ್ರರಾದರು.

ಅವರು ಎರಡನೇ, 28ನೇ ಮತ್ತು 34ನೇ ನಿಮಿಷ ಗೋಲುಗಳನ್ನು ಬಾರಿಸಿದರು. ನಾಯಕ ಖೇತನ್ ಕುಶ್ವಾಹ (30ನೇ ನಿಮಿಷ) ಒಂದು ಗೋಲು ಗಳಿಸಿದರು. ನುಮುದ ಗಾಕು (52ನೇ ನಿಮಿಷ) ಜಪಾನ್ ತಂಡದ ಪರ ಏಕೈಕ ಗೋಲು ಗಳಿಸಿದರು.

ಒಟ್ಟಾರೆ ಭಾರತ ಈ ಪಂದ್ಯದಲ್ಲಿ ಅಧಿಕಾರಯುತ ಆಟದ ಪ್ರದರ್ಶನ ನೀಡಿತು. 90ನೇ ಸೆಕೆಂಡಿನೊಳಗೆ ಮೊದಲ ಪೆನಾಲ್ಟಿ ಕಾರ್ನರ್ ಪಡೆಯಿತು. ಅದರಲ್ಲಿ ಆಶಿಷ್ ಅವರು ಗೋಲೂ ಗಳಿಸಿ ಉತ್ತಮ ಆರಂಭ ಒದಗಿಸಿದರು. ಆಶಿಷ್ ಅವರು ಈ ಟೂರ್ನಿಯಲ್ಲಿ ಗರಿಷ್ಠ 13 ಗೋಲುಗಳನ್ನು ಗಳಿಸಿದರು.

ಪಾಕಿಸ್ತಾನ ತಂಡವು 3–0 ಗೋಲುಗಳಿಂದ ಮಲೇಷ್ಯಾ ತಂಡವನ್ನು ಸೋಲಿಸಿ ಕಂಚಿನ ಪದಕ ಗೆದ್ದುಕೊಂಡಿತು.

ಮಹಿಳಾ ತಂಡಕ್ಕೆ ಕಂಚು: ಮಹಿಳೆಯರ ವಿಭಾಗದಲ್ಲಿ ಕಂಚಿನ ಪದಕಕ್ಕಾಗಿ ಬೆಳಿಗ್ಗೆ ನಡೆದ ಪಂದ್ಯದಲ್ಲಿ ಭಾರತ ತಂಡ 3–0 ಗೋಲುಗಳಿಂದ ದಕ್ಷಿಣ ಕೊರಿಯಾ ತಂಡವನ್ನು ಸೋಲಿಸಿತು.

ಸಂದೀಪಾ ಕುಮಾರಿ (2ನೇ ನಿಮಿಷ), ನಾಯಕಿ ಸ್ವೀಟಿ ಕುಜೂರ್ (16ನೇ ನಿಮಿಷ) ಮತ್ತು ನೌಶೀನ್ ನಾಝ್ (33ನೇ ನಿಮಿಷ) ಅವರು ಗೋಲುಗಳನ್ನು ಗಳಿಸಿದರು. ಚೀನಾ ತಂಡ 2–1 ಗೋಲುಗಳಿಂದ ಆತಿಥೇಯ ಜಪಾನ್ ತಂಡವನ್ನು ಸೋಲಿಸಿ ಚಿನ್ನದ ಪದಕ ತನ್ನದಾಗಿಸಿಕೊಂಡಿತು.

ಬಹುಮಾನ ಘೋಷಣೆ: ಭಾರತ ತಂಡದ ಸಾಧನೆಗೆ ಸಂತಸ ವ್ಯಕ್ತಪಡಿಸಿರುವ ಹಾಕಿ ಇಂಡಿಯಾ, ಚಿನ್ನ ಗೆದ್ದ ಪುರುಷರ ತಂಡದ ಪ್ರತಿಯೊಬ್ಬ ಆಟಗಾರನಿಗೆ ₹3 ಲಕ್ಷ ಬಹುಮಾನ ಘೋಷಿಸಿದೆ. ನೆರವು ಸಿಬ್ಬಂದಿಗೆ ₹1.5 ಲಕ್ಷ ಸಿಗಲಿದೆ.

ಕಂಚಿನ ಪದಕ ಗೆದ್ದ ಮಹಿಳಾ ತಂಡದ ಆಟಗಾರ್ತಿಯರು ತಲಾ ₹1 ಲಕ್ಷ ಪಡೆಯಲಿದ್ದಾರೆ. ನೆರವು ಸಿಬ್ಬಂದಿ ತಲಾ ₹50,000 ಬಹುಮಾನ ಪಡೆಯಲಿದ್ದಾರೆ.

ಭಾರತ ತಂಡಗಳನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅಭಿನಂದಿಸಿದ್ದಾರೆ.

ಲೆಬನಾನ್ ಮೇಲೆ ಇಸ್ರೇಲ್ ದಾಳಿ; 9 ಸಾವು

ಬೈರೂತ್ (ಎಪಿ): ಲೆಬನಾನ್ ಹಾಗೂ ಇಸ್ರೇಲ್ ನಡುವಿನ ಹೊಸ ಕದನ ವಿರಾಮ ಏರ್ಪಟ್ಟ ಎರಡು ದಿನಗಳ ನಂತರ ದಕ್ಷಿಣ ಲೆಬನಾನ್‌ನ ಮೇಲೆ ಇಸ್ರೇಲ್ ವಾಯುಸೇನೆ ಶನಿವಾರ ಬೆಳಿಗ್ಗೆ ದಾಳಿ ನಡೆಸಿದೆ. ಇದರಿಂದ ಲೆಬನಾನ್ ಸೇನೆಯ ಮೂವರು ಸೈನಿಕರು ಸೇರಿದಂತೆ 9 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಬತಿಯೆ ನಗರವನ್ನು ಮರ್ಜಯೊನ್ ಪಟ್ಟಣದೊಂದಿಗೆ ಸಂಪರ್ಕಿಸುವ ರಸ್ತೆಯನ್ನು ಗುರಿಯಾಗಿಸಿ ದಾಳಿ ನಡೆಸಿದೆ.

ಬ್ರಿಗೇಡಿಯರ್ ಜನರಲ್ ಸೇರಿದಂತೆ ಮೂವರು ಸೈನಿಕರು ದಾಳಿಯಲ್ಲಿ ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಟಿವಿ ವಾಹಿನಿಗಳು ವರದಿ ಮಾಡಿವೆ.

ಲೆಬನಾನ್ ಸರ್ಕಾರ ಹಾಗೂ ಇಸ್ರೇಲ್ ನಡುವೆ ಅಮೆರಿಕದ ಮಧ್ಯಸ್ಥಿಕೆ ಯಲ್ಲಿ ಇತ್ತೀಚಿಗೆ ನಡೆದ ಕದನ ವಿರಾಮದ ಬಳಿಕ ಈ ದಾಳಿ ನಡೆದಿದೆ. ಆದರೆ, ಒಪ್ಪಂದ ವನ್ನು ಮಾನ್ಯ ಮಾಡಲು ಬಂಡುಕೋರ ಸಂಘಟನೆ ಹಿಜ್ಬುಲ್ಲಾ ನಿರಾಕರಿಸಿದೆ.

ಮಾರ್ಚ್ 2ರಂದು ಹಿಜ್ಬುಲ್ಲಾ ಬಂಡುಕೋರರು ಉತ್ತರ ಇಸ್ರೇಲ್‌ನ ಮೇಲೆ ರಾಕೆಟ್ ದಾಳಿ ನಡೆಸಿದ ಬಳಿಕ ಉಭಯ ರಾಷ್ಟ್ರಗಳ ನಡುವೆ ಯುದ್ಧ ಆರಂಭಗೊಂಡಿತ್ತು. ಇಸ್ರೇಲ್ ವಾಯು ಹಾಗೂ ಭೂ ದಾಳಿ ಆರಂಭಿಸಿದ ಬಳಿಕ ಲೆಬನಾನ್‌ನಲ್ಲಿ ಸುಮಾರು 10 ಲಕ್ಷಕ್ಕೂ ಅಧಿಕ ಮಂದಿ ನಿರ್ವಸಿತಗರಾಗಿದ್ದಾರೆ.

ವೆಸ್ಟ್ ಬ್ಯಾಂಕ್ ಮೇಲೆ ದಾಳಿ; ಶಿಶು ಬಲಿ

ಕೈರೊ (ಈಜಿಪ್ಟ್): ವೆಸ್ಟ್ ಬ್ಯಾಂಕ್‌ನಲ್ಲಿ ವಾಹನವೊಂದರ ಮೇಲೆ ಇಸ್ರೇಲ್‌ನ ಸೈನಿಕರು ಗುಂಡಿನ ದಾಳಿ ನಡೆಸಿದ್ದರಿಂದ 7 ತಿಂಗಳ ಶಿಶುವೊಂದು ಮೃತಪಟ್ಟಿದೆ ಎಂದು ಪ್ಯಾಲೆಸ್ಟೀನ್‌ನ ಆರೋಗ್ಯ ಸಚಿವಾಲಯ ತಿಳಿಸಿದೆ.

ದಕ್ಷಿಣ ಹೆಬ್ರನ್ ನಗರದ ರುಮ್ಮೈದಾ ಪ್ರದೇಶದಲ್ಲಿ ತೆರಳುತ್ತಿದ್ದ ವಾಹನದ ಮೇಲೆ ಈ ದಾಳಿ ನಡೆದಿದೆ. ಈ ವೇಳೆ ಸ್ಯಾಮ್ ಫಹಾದ್ ಹೈಕಾಲ್ ಹೆಸರಿನ ಮಗು ಮೃತಪಟ್ಟಿದ್ದು, ಪೋಷಕರು ತೀವ್ರವಾಗಿ ಗಾಯಗೊಂಡಿದ್ದಾರೆ.

ಸೈನಿಕರು ಹೊಡೆದ ಗುಂಡು ತಾಯಿಗೆ ತಗುಲಿ ನಂತರ ಮಗುವಿನ ದವಡೆಗೆ ತಾಗಿದೆ. ತೀವ್ರವಾಗಿ ಗಾಯಗೊಂಡಿದ್ದ ಮಗು ಮೃತಪಟ್ಟಿತು ಎಂದು ಪ್ಯಾಲೆಸ್ಟೀನ್‌ನ ಅಧಿಕೃತ ಸುದ್ದಿಸಂಸ್ಥೆ 'ಡಬ್ಲ್ಯುಎಎಫ್‌ಎ' ತಿಳಿಸಿದೆ.

ಮೃತ ಮಗುವಿನ ತಂದೆ ಫಹಾದ್ ಅಬ್ದುಲ್ ಅಜೀಜ್ ಅವರು ಬೆಥ್ಲೆಹೇಮ್ ವಿಶ್ವ-ವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದು, ಅವರ ಕೈಗೂ ಗುಂಡು ತಗುಲಿದೆ. ದಾಳಿಯಲ್ಲಿ ಗಾಯಗೊಂಡವರು ನಾಗರಿಕರಲ್ಲ, ಪರಿಸ್ಥಿತಿ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಇಸ್ರೇಲ್‌ನ ಸೇನೆ ತಿಳಿಸಿದೆ.

ಇರಾನ್ ಯುದ್ಧ; ಹಸಿವಿನಿಂದ ಬಳಲುತ್ತಿರುವ 10 ಲಕ್ಷ ಮಂದಿ

ವಿಶ್ವಸಂಸ್ಥೆ (ಎಪಿ): ಇರಾನ್‌ನಲ್ಲಿ ಯುದ್ಧ ಆರಂಭಗೊಂಡ ಬಳಿಕ 10 ಲಕ್ಷಕ್ಕೂ ಅಧಿಕ ಮಂದಿ ಹಸಿವಿನಿಂದ ಬಳಲುತ್ತಿದ್ದಾರೆ ಎಂದು ವಿಶ್ವಸಂಸ್ಥೆಯ ಆಹಾರ ಸಂಸ್ಥೆ ತಿಳಿಸಿದೆ.

ಸಂಘರ್ಷ ಉಲ್ಬಣಗೊಂಡು ತೈಲ ಬೆಲೆ ಹೆಚ್ಚಾದರೆ, ಪರಿಸ್ಥಿತಿ ಮತ್ತಷ್ಟು ಗಂಭೀರವಾಗಲಿದೆ ಎಂದು ಎಚ್ಚರಿಕೆ ನೀಡಿದೆ. 'ವಿಶ್ವದ ಮೂರು ದುರ್ಬಲ ದೇಶಗಳಾದ ಸೋಮಾಲಿಯಾದ 25 ಲಕ್ಷ, ಅಫ್ಗಾನಿಸ್ತಾನದ 23 ಲಕ್ಷ ಹಾಗೂ ಶ್ರೀಲಂಕಾದ 13 ಲಕ್ಷ ಮಂದಿ ಅಗತ್ಯ ಆಹಾರ ಪಡೆಯಲು ನಿತ್ಯವೂ ಹೆಣಗಾಡುತ್ತಿದ್ದಾರೆ' ಎಂದು ವಿಶ್ವಸಂಸ್ಥೆಯ ಆಹಾರ ಕಾರ್ಯಕ್ರಮದ (ಡಬ್ಲ್ಯುಎಫ್‌ಪಿ) ವಿಶ್ಲೇಷಣಾತ್ಮಕ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಜೂನ್ ಅಂತ್ಯದ ವೇಳೆಗೆ ವಿಶ್ವದಲ್ಲಿ ಹೆಚ್ಚುವರಿಯಾಗಿ 4.5 ಕೋಟಿ ಮಂದಿ ಆಹಾರ ಕೊರತೆ ಎದುರಿಸಲಿದ್ದಾರೆ. ಈಗಾಗಲೇ 31.8 ಕೋಟಿ ಮಂದಿ ಆಹಾರದ ಅಭದ್ರತೆ ಎದುರಿಸುತ್ತಿದ್ದು, ಇತ್ತೀಚಿನ ವರ್ಷಗಳಲ್ಲಿಯೇ ಗರಿಷ್ಠ ಪ್ರಮಾಣದ್ದಾಗಿದೆ ಎಂದು ತಿಳಿಸಿದೆ.

'ಬಡರಾಷ್ಟ್ರಗಳ ಜನರು ತಮ್ಮ ದುಡಿಮೆಯ ಎಲ್ಲ ಹಣವನ್ನು ಆಹಾರಕ್ಕಾಗಿಯೇ ವೆಚ್ಚ ಮಾಡುತ್ತಿದ್ದಾರೆ. ಬೆಲೆ ಏರಿಕೆಯಾಗಿರುವ ಕಾರಣ, ತಿನ್ನುವುದನ್ನು ಕೂಡ ಕಡಿಮೆ ಮಾಡಿದ್ದಾರೆ' ಎಂದು ಡಬ್ಲ್ಯುಎಫ್‌ಪಿ ಹಂಗಾಮಿ ಕಾರ್ಯಕಾರಿ ನಿರ್ದೇಶಕ ಕಾರ್ಲ್ ಸ್ಕಾವ್ ತಿಳಿಸಿದ್ದಾರೆ.

'ಇದು ನಮಗೆ ಸಿಕ್ಕಿರುವ ಮುನ್ಸೂಚನೆಯಾಗಿದೆ. ಕೊಲ್ಲಿ ರಾಷ್ಟ್ರಗಳಲ್ಲಿ ಸಂಘರ್ಷ ತೀವ್ರಗೊಂಡರೆ, ಈ ಪರಿಸ್ಥಿತಿ ಮತ್ತಷ್ಟು ತೀವ್ರಗೊಳ್ಳಲಿದೆ' ಎಂದು ತಿಳಿಸಿದ್ದಾರೆ.

ಉಳಿದಂತೆ ಸುಡಾನ್, ಗಾಜಾ, ದಕ್ಷಿಣ ಲೆಬನಾನ್, ಯೆಮನ್, ಹೈಟಿ ನಗರಗಳಲ್ಲಿಯೂ ಕೂಡ ಆಹಾರದ ತೀವ್ರ ಕೊರತೆ ಎದುರಿಸುತ್ತಿವೆ ಎಂದು ಒತ್ತಿ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನಾಯಕತ್ವದ ಬಗ್ಗೆ ಪುಟಿನ್ ಮೆಚ್ಚುಗೆ

'ಭಾರತಕ್ಕೆ ನಿರ್ಬಂಧ ಹೇರಿದರೆ ತಿರುಗುಬಾಣ'

ಸೇಂಟ್ ಪೀಟರ್ಸ್‌ಬರ್ಗ್ (ಪಿಟಿಐ): 'ಭಾರತವು ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಲ್ಲಿ ರಾಷ್ಟ್ರೀಯ ಹಿತಾಸಕ್ತಿಗೆ ಅನುಗುಣವಾದ ಸ್ವತಂತ್ರ ವಿದೇಶಾಂಗ ನೀತಿಯನ್ನು ಹೊಂದಿದ್ದು, ನಿರ್ಬಂಧಗಳ ಬೆದರಿಕೆ ಮೂಲಕ ಭಾರತದ ಮೇಲೆ ಒತ್ತಡ ಹೇರುವ ಯಾವುದೇ ಪ್ರಯತ್ನವು ತಿರುಗುಬಾಣವಾಗಲಿದೆ' ಎಂದು ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಎಚ್ಚರಿಕೆ ನೀಡಿದ್ದಾರೆ.

ಸೇಂಟ್ ಪೀಟರ್ಸ್‌ಬರ್ಗ್ ಅಂತರರಾಷ್ಟ್ರೀಯ ಆರ್ಥಿಕ ವೇದಿಕೆಯ ವಾರ್ಷಿಕ ಸಭೆಯ ಭಾಗವಾಗಿ ಸುದ್ದಿಸಂಸ್ಥೆಗಳೊಂದಿಗೆ ಮಾತನಾಡಿದ ಪುಟಿನ್, 'ನಿರ್ಬಂಧಗಳ ಮೂಲಕ ಭಾರತದ ಸಾರ್ವಭೌಮತೆಯನ್ನು ದುರ್ಬಲಗೊಳಿಸುವ ಪ್ರಯತ್ನವನ್ನು ಯಾರು ಮಾಡಿದರೂ ಅದು, ತಕ್ಷಣವೇ ಅವರಿಗೆ ತಿರುಗುಬಾಣವಾಗಲಿದೆ' ಎಂದು ಅಮೆರಿಕದ ಹೆಸರನ್ನು ಉಲ್ಲೇಖಿಸದೇ ಟೀಕಿಸಿದರು.

'ಪ್ರಧಾನಿ ಮೋದಿ ಅವರೊಂದಿಗೆ ಸುದೀರ್ಘ ಅವಧಿಯಿಂದ ನಿಕಟ ಸಂಬಂಧ ಹೊಂದಿದ್ದೇನೆ. ಮೋದಿ ಅವರಿಗೆ ಅಮೆರಿಕವು ಹಿಂದೆ ಪ್ರವೇಶ ನಿರ್ಬಂಧಿಸಿದ್ದನ್ನು ಅವರು ಎಂದಿಗೂ ಮರೆಯುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಮೋದಿ ಅವರು ಭಾರತದ ಪ್ರಧಾನಿಯಾದ ಬಳಿಕ ಅಮೆರಿಕವು ಭಾರತದ ಮೇಲಿನ ಎಲ್ಲ ನಿರ್ಬಂಧಗಳನ್ನು ತೆಗೆದುಹಾಕಿದೆ. ನನಗೆ ತಿಳಿದ ಮಟ್ಟಿಗೆ, ಭಾರತ ಮತ್ತು ಅಮೆರಿಕದ ನಡುವಿನ ಸಹಕಾರವು ಯಶಸ್ವಿಯಾಗಿ ಅಭಿವೃದ್ಧಿ ಹೊಂದುತ್ತಿದೆ' ಎಂದು ಪುಟಿನ್ ಹೇಳಿದ್ದಾರೆ.

ಅತ್ಯಾಧುನಿಕ ಯುದ್ಧ ವಿಮಾನ ಸುಕೋಯ್ 'ಎಸ್‌ಯು–57' ಸೇರಿದಂತೆ ರಷ್ಯಾ-ಭಾರತ ನಡುವಿನ ರಕ್ಷಣಾ ಪಾಲುದಾರಿಕೆಗೆ ಅಮೆರಿಕದ ನಿರ್ಬಂಧ ಅಡ್ಡಿ-ಯಾಗುತ್ತದೆಯೇ ಎಂಬ ಪ್ರಶ್ನೆಗೆ, 'ಭಾರತವು ಸಾರ್ವಭೌಮ ರಾಷ್ಟ್ರ. ತಮಗೆ ಅತ್ಯಂತ ಅನ್ವಯವಾಗುವ ಸುಧಾರಿತ, ಅತ್ಯಾಧುನಿಕ, ಸ್ಪರ್ಧಾತ್ಮಕ ದರದ ರಕ್ಷಣಾ ಉಪಕರಣಗಳನ್ನು ಖರೀದಿಸಲು ಅವರಿಗೆ ಪೂರ್ಣ ಸ್ವಾತಂತ್ರ್ಯವಿದೆ. ಯಾರು? ಏನೇ? ಹೇಳಿದರೂ ಭಾರತವು ಯಾವಾಗಲೂ ತನ್ನ ರಾಷ್ಟ್ರೀಯ ಹಿತಾಸಕ್ತಿಯನ್ನು ಎತ್ತಿಹಿಡಿಯುವ ಸಾರ್ವಭೌಮ ರಾಷ್ಟ್ರವಾಗಿಯೇ ವರ್ತಿಸಿದೆ' ಎಂದು ಪುಟಿನ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ರಾಜಕೀಯ ಪರಿಸ್ಥಿತಿ ಅವಲಂಬಿಸಿಲ್ಲ'

'ಉಳಿದ ಪಾಲುದಾರ ದೇಶಗಳಂತೆ ಭಾರತದ ಜತೆಗೂ ರಷ್ಯಾ ಉತ್ತಮ ಸಂಬಂಧ ಹೊಂದಿದ್ದು, ಇದು ಬದಲಾಗುತ್ತಿರುವ ರಾಜಕೀಯ ಪರಿಸ್ಥಿತಿಗಳ ಮೇಲೆ ಅವಲಂಬಿತವಾಗಿಲ್ಲ. ಯಾರೂ ನಮ್ಮನ್ನು ನಿರ್ದೇಶಿಸಲು ಅಥವಾ ನಿರ್ಬಂಧಿಸಲು ಸಾಧ್ಯವಿಲ್ಲ. ನಮಗೆ ಸರಿಯಾಗಿದ್ದನ್ನು ನಾವು ಮಾಡುತ್ತಿದ್ದೇವೆ. ವಿಶೇಷವಾಗಿ ಭಾರತದ ಜೊತೆಗಿನ ಸಂಬಂಧಕ್ಕೆ ನಾವು ಬದ್ಧರಾಗಿದ್ದೇವೆ' ಎಂದು ಪುಟಿನ್ ಹೇಳಿದ್ದಾರೆ.

ಸುಕೋಯ್ ಎಸ್‌ಯು–57 ಮತ್ತು ಮಧ್ಯಮ ಶ್ರೇಣಿಯ ಬ್ರಹ್ಮೋಸ್ ಕ್ಷಿಪಣಿ ವಿನ್ಯಾಸದಲ್ಲಿ ಎರಡೂ ದೇಶಗಳ ತಜ್ಞರ ಸಹಭಾಗಿತ್ವದ ಬಗ್ಗೆಯೂ ಪುಟಿನ್ ಗಮನ ಸೆಳೆದಿದ್ದಾರೆ.



> ಭಾರತದೊಂದಿಗಿನ ರಕ್ಷಣಾ ಪಾಲುದಾರಿಕೆಯು ಖರೀದಿ–ಮಾರಾಟಕ್ಕೆ ಮಾತ್ರ ಸೀಮಿತವಲ್ಲ, ಜಂಟಿ ಸಂಶೋಧನೆ, ಅಭಿವೃದ್ಧಿಗೂ ಗಮನ ಹರಿಸಿದ್ದೇವೆ
>
> **ವ್ಲಾದಿಮಿರ್ ಪುಟಿನ್**, ರಷ್ಯಾ ಅಧ್ಯಕ್ಷ

ರಷ್ಯಾ ಮೇಲೆ ಮತ್ತೆ ಉಕ್ರೇನ್ ದಾಳಿ

ಸೇಂಟ್ ಪೀಟರ್ಸ್‌ಬರ್ಗ್ ಗುರಿಯಾಗಿಸಿ ಶನಿವಾರ ಬೆಳಿಗ್ಗೆ ಉಕ್ರೇನ್ ಡ್ರೋನ್ ದಾಳಿ ನಡೆಸಿದೆ. ಯುದ್ಧ ಕೊನೆಗೊಳಿಸುವ ನಿಟ್ಟಿನಲ್ಲಿ ಉಕ್ರೇನ್‌ನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ನೇರ ಮಾತುಕತೆಯ ಪ್ರಸ್ತಾವವನ್ನು ಪುಟಿನ್ ತಿರಸ್ಕರಿಸಿದ ಬೆನ್ನಲ್ಲೇ ಈ ದಾಳಿ ನಡೆದಿದೆ.

ಮೊಬೈಲ್ ಮತ್ತು ಇಂಟರ್ನೆಟ್ ಸೇವೆಗಳು ಸ್ಥಗಿತಗೊಳ್ಳುವ ಸಾಧ್ಯತೆ ಇದ್ದು, ಸೇಂಟ್ ಪೀಟರ್ಸ್‌ಬರ್ಗ್ ನಿವಾಸಿಗಳಿಗೆ ಮನೆಗಳಲ್ಲೇ ಉಳಿಯುವಂತೆ, ಹೊರಗೆ ಬಾರದಂತೆ ಗವರ್ನರ್ ಅಲೆಕ್ಸಾಂಡರ್ ಬೆಗ್ಲೊವ್ ಸಲಹೆ ನೀಡಿದ್ದಾರೆ. ಉಕ್ರೇನ್‌ನ 376 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಹೇಳಿದೆ. ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿರುವ ತೈಲ ಘಟಕದ ಮೇಲೆ ಉಕ್ರೇನ್ ಬುಧವಾರ ಭಾರಿ ಪ್ರಮಾಣದಲ್ಲಿ ಡ್ರೋನ್ ದಾಳಿ ನಡೆಸಿತ್ತು.

ಸಚ್ಚಾರಿತ್ರ್ಯ: ಅಲ್ಕಾ ಲಾಂಬಾ ಬಿಡುಗಡೆ

ನವದೆಹಲಿ (ಪಿಟಿಐ): ಪೊಲೀಸರ ಮೇಲೆ ಹಲ್ಲೆ ನಡೆಸಿದ ಪ್ರಕರಣದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿದ್ದ ಅಖಿಲ ಭಾರತೀಯ ಮಹಿಳಾ ಕಾಂಗ್ರೆಸ್ ಸಮಿತಿ ಮುಖ್ಯಸ್ಥೆ ಅಲ್ಕಾ ಲಾಂಬಾ ಅವರನ್ನು ದೆಹಲಿ ನ್ಯಾಯಾಲಯವು ಶನಿವಾರ ಬಿಡುಗಡೆ ಮಾಡಿದೆ.


ಅಲ್ಕಾ ಲಾಂಬಾ

ಜಂತರ್ ಮಂತರ್‌ನಲ್ಲಿ 2024ರಲ್ಲಿ ನಡೆದ ಪ್ರತಿಭಟನೆ ವೇಳೆ ಪೊಲೀಸರ ಮೇಲೆ ಹಲ್ಲೆ ನಡೆಸಿದ್ದ ಅಲ್ಕಾ ಅವರಿಗೆ ಕಳೆದ ತಿಂಗಳಷ್ಟೇ ಶಿಕ್ಷೆ ವಿಧಿಸಿ ತೀರ್ಪು ನೀಡಲಾಗಿತ್ತು.

'ಅಪರಾಧಿಯು ಮಹಿಳೆಯಾಗಿದ್ದು, ಮೊದಲ ಬಾರಿ ಇಂಥ ಕೃತ್ಯದಲ್ಲಿ ಭಾಗಿಯಾಗಿದ್ದಾರೆ. ಯಾವುದೇ ಅಪರಾಧ ಪ್ರಕರಣಗಳಲ್ಲಿ ಭಾಗಿಯಾದ ಹಿನ್ನೆಲೆಯನ್ನು ಅವರು ಹೊಂದಿಲ್ಲ. ಒಂದು ವರ್ಷದ ಅವಧಿಗೆ ₹1 ಲಕ್ಷ ಮೊತ್ತದ ಭದ್ರತಾ ಠೇವಣಿ ಇರಿಸಿಕೊಂಡು ಅವರನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಅವಧಿಯಲ್ಲಿ ಯಾವುದೇ ಉಲ್ಲಂಘನೆ ಕಂಡುಬಂದರೆ ಶಿಕ್ಷೆ ಅನುಭವಿಸಬೇಕಾಗುತ್ತದೆ' ಎಂದು ನ್ಯಾಯಾಲಯವು ಹೇಳಿದೆ.

ಭಾರತದಲ್ಲಿ ಜೋ ಸಾಕೋ ಕಾದಂಬರಿ ಮಾರಲ್ಲ: ಪೆಂಗ್ವಿನ್

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಮುಝಾಫ್ಫರ್ ನಗರದಲ್ಲಿ 2013ರಲ್ಲಿ ಸಂಭವಿಸಿದ್ದ ಗಲಭೆ ಕುರಿತು ಪತ್ರಕರ್ತ ಮತ್ತು ಲೇಖಕ ಜೋ ಸಾಕೋ ಅವರು ರಚಿಸಿರುವ 'ದಿ ಒನ್ಸ್ ಆ್ಯಂಡ್ ಫ್ಯೂಚರ್ ರಯಟ್' ಹೆಸರಿನ ಗ್ರಾಫಿಕ್ ಕಾದಂಬರಿಯನ್ನು ಭಾರತದಲ್ಲಿ ಮಾರಾಟ ಮಾಡುವುದಿಲ್ಲ ಎಂದು ಪ್ರಕಾಶನ ಸಂಸ್ಥೆ 'ಪೆಂಗ್ವಿನ್ ರ‍್ಯಾಂಡಮ್ ಹೌಸ್ ಇಂಡಿಯಾ' ಶನಿವಾರ ತಿಳಿಸಿದೆ.

ಪೆಂಗ್ವಿನ್ ಯುಕೆ ಪ್ರಕಾಶನ ಸಂಸ್ಥೆಯು ಈ ಕಾದಂಬರಿಯನ್ನು 2025ರಲ್ಲಿ ಪ್ರಕಟಿಸಿದೆ. ಈ ವರ್ಷದ ಆಗಸ್ಟ್–ಸೆಪ್ಟೆಂಬರ್ ವೇಳೆಗೆ ಭಾರತದ ಮಾರುಕಟ್ಟೆಯಲ್ಲಿ ಈ ಕಾದಂಬರಿಯನ್ನು ಬಿಡುಗಡೆ ಮಾಡಬಹುದೆಂಬ ನಿರೀಕ್ಷೆ ಇತ್ತು.

'ಸ್ಥಳೀಯ ಕಾನೂನು, ವಾಣಿಜ್ಯ ಮಾರುಕಟ್ಟೆಗಳನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಪೆಂಗ್ವಿನ್ ರ‍್ಯಾಂಡಮ್ ಹೌಸ್ ಇಂಡಿಯಾದ ವಕ್ತಾರರು ತಿಳಿಸಿದ್ದಾರೆ.

2013ರಲ್ಲಿ ನಡೆದ ಗಲಭೆಯಲ್ಲಿ 60 ಜನರು ಮೃತಪಟ್ಟು, 40,000ಕ್ಕೂ ಹೆಚ್ಚು ಮಂದಿ ಸ್ಥಳಾಂತರಗೊಂಡಿದ್ದರು.

ಟಿಎಂಸಿ ಮಾಜಿ ಶಾಸಕ ಬಂಧನ

ವಿಧಾನಸಭೆ ಚುನಾವಣೆ ವೇಳೆ ಬಾಂಘರ್ ಪ್ರದೇಶದಲ್ಲಿ ಬಾಂಬ್ ಸ್ಫೋಟ ಪ್ರಕರಣ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ವಿಧಾನಸಭೆ ಚುನಾವಣೆ ವೇಳೆ ಬಾಂಘರ್ ಪ್ರದೇಶದಲ್ಲಿ ಬಾಂಬ್ ಸ್ಫೋಟಗೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಿರುವ ಟಿಎಂಸಿ ಪಕ್ಷದ ಮಾಜಿ ಶಾಸಕ ಶೌಕತ್ ಮೊಲ್ಲಾ ಅವರೇ ಘಟನೆಯ ಸೂತ್ರಧಾರ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಹೇಳಿದೆ.

'ತಲೆಮರೆಸಿಕೊಂಡಿದ್ದ ಶೌಕತ್ ಅವರನ್ನು ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ಎನ್‌ಐಎ ಬಂಧಿಸಿದೆ' ಎಂದು ಅಧಿಕಾರಿಗಳು ಶನಿವಾರ ಮಾಹಿತಿ ನೀಡಿದರು. ಮಾರ್ಚ್ 19ರಂದು ಕಚ್ಚಾ ಬಾಂಬ್ ತಯಾರಿಕೆ ವೇಳೆ ಬಾಂಬ್ ಸ್ಫೋಟಗೊಂಡಿತ್ತು. ಬಾಂಬ್ ತಯಾರಿಸುತ್ತಿದ್ದ ವ್ಯಕ್ತಿ ಮೃತಪಟ್ಟು, ಹಲವರಿಗೆ ಗಾಯಗಳಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿ ಈವರೆಗೆ ನಾಲ್ವರನ್ನು ಬಂಧಿಸಲಾಗಿದೆ. ಶೌಕತ್ ಅವರು ನಾಲ್ಕನೆಯವರು. ಬಾಂಬ್ ತಯಾರಿಸುವಂತೆ ಉಳಿದವರಿಗೆ ಇವರೇ ಸೂಚನೆ ನೀಡಿದ್ದರು. ಸ್ಫೋಟದ ಬಳಿಕ ಘಟನಾ ಸ್ಥಳದಲ್ಲಿ ಸಾಕ್ಷ್ಯಗಳನ್ನು ನಾಶಪಡಿಸುವಂತೆಯೂ ಸೂಚಿಸಿದ್ದರು ಎಂಬುದು ತನಿಖೆ ವೇಳೆ ತಿಳಿದುಬಂದಿದೆ ಎಂದು ಎನ್‌ಐಎ ಹೇಳಿದೆ.

14 ದಿನ ಕಸ್ಟಡಿಗೆ

ಶೌಕತ್ ಅವರನ್ನು ಎನ್‌ಐಎ ಅಧಿಕಾರಿಗಳು ಶನಿವಾರ ನ್ಯಾಯಾಲಯಕ್ಕೆ ಹಾಜರು ಪಡಿಸಿದರು. ತನಿಖೆಗಾಗಿ 14ದಿನಗಳವರೆಗೆ ತಮ್ಮ ವಶಕ್ಕೆ ನೀಡುವಂತೆ ತನಿಖಾಧಿಕಾರಿ ಮಾಡಿದ ಮನವಿಯನ್ನು ಪುರಸ್ಕರಿಸಿದ ನ್ಯಾಯಾಧೀಶರು, ಶೌಕತ್ ಅವರನ್ನು ಜೂನ್ 19ರ ವರೆಗೆ ಎನ್‌ಐಎ ವಶಕ್ಕೆ ನೀಡಿ ಆದೇಶಿಸಿದರು.


ಬಾಂಘರ್ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ ಟಿಎಂಸಿ ಮಾಜಿ ಶಾಸಕ ಶೌಕತ್ ಮೊಲ್ಲಾ ಅವರನ್ನು ಕೋಲ್ಕತ್ತದ ನ್ಯಾಯಾಲಯಕ್ಕೆ ಎನ್‌ಐಎ ಅಧಿಕಾರಿಗಳು ಕರೆತಂದರು

ಶಸ್ತ್ರಾಸ್ತ್ರ ವಶ: ದಕ್ಷಿಣ 24 ಪರಗಣ ಮತ್ತು ಉತ್ತರ 24 ಪಗರಣ ಜಿಲ್ಲೆಗಳ ವಿವಿಧ ಪ್ರದೇಶಗಳ ಮೇಲೆ ಪೊಲೀಸರು ಶನಿವಾರ ದಾಳಿ ನಡೆಸಿದ್ದು, ಅಕ್ರಮವಾಗಿ ಸಂಗ್ರಹಿಸಲಾಗಿದ್ದ ಬೃಹತ್ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ. ಪಶ್ಚಿಮ ಬಂಗಾಳದ ವಿಶೇಷ ಕಾರ್ಯಪಡೆಯು ಈ ದಾಳಿ ನಡೆಸಿದೆ.

'ಶಾಂತಿ ಕದಡಲು ಮುಚ್ಚಿಡಲಾಗಿದ್ದ ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆಯಲಾಗಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಇಂಥ ಸಂಗ್ರಹಾಗಾರಗಳು ರೂಪುಗೊಂಡಿದ್ದವು. 'ಹಿಂಸೆಯ ಸಂಸ್ಕೃತಿ'ಯನ್ನು ಟಿಎಂಸಿ ಸರ್ಕಾರ ಆರಂಭಿಸಿತ್ತು. ವಿರೋಧ ಪಕ್ಷಗಳ ಅದರಲ್ಲಿಯೂ ಬಿಜೆಪಿ ಕಾರ್ಯಕರ್ತರು ಇದರಲ್ಲಿ ಪ್ರಾಣತೆತ್ತಿದ್ದಾರೆ. ರಾಜಕೀಯ ಭಯೋತ್ಪಾದನೆಯನ್ನು ಕೊನೆಗೊಳಿಸಲಾಗುವುದು' ಎಂದು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಪೋಸ್ಟ್ ಹಂಚಿಕೊಂಡಿದ್ದಾರೆ.

ಬಿಹಾರ: ರಾಬ್ಡಿ ದೇವಿ ನಿವಾಸಕ್ಕೆ ಕಾರ್ಯಕರ್ತರಿಂದಲೇ ಭದ್ರತೆ

ಪಟ್ನಾ (ಪಿಟಿಐ): ಬಿಹಾರದ ಮಾಜಿ ಮುಖ್ಯಮಂತ್ರಿ ರಾಬ್ಡಿ ದೇವಿ ಹಾಗೂ ಅವರ ನಿವಾಸಕ್ಕೆ ಆರ್‌ಜೆಡಿ ನಾಯಕರೇ ಭದ್ರತೆ ನೀಡಿ, ಎನ್‌ಡಿಎ ಸರ್ಕಾರವು ಪಕ್ಷಪಾತಿ ಧೋರಣೆ ತೋರುತ್ತಿದೆ ಎಂದು ಪ್ರತಿಭಟಿಸಿದರು.

ರಾಬ್ಡಿ ದೇವಿ ಮತ್ತು ಅವರ ಕುಟುಂಬದವರು ಪಡೆಯುತ್ತಿದ್ದ ಭದ್ರತೆಯ ಶ್ರೇಣಿಯನ್ನು ಸರ್ಕಾರ ಇತ್ತೀಚೆಗೆ ತಗ್ಗಿಸಿದೆ. ಈ ಬೆನ್ನಲ್ಲೇ ಸರ್ಕ್ಯುಲರ್ ರಸ್ತೆಯ ಸರ್ಕಾರಿ ಬಂಗಲೆಯಲ್ಲಿ ಶನಿವಾರ ಈ ನಾಟಕೀಯ ಬೆಳವಣಿಗೆ ನಡೆಯಿತು.

'ನಮ್ಮ ನಾಯಕರಾದ ಲಾಲೂ ಪ್ರಸಾದ್, ರಾಬ್ಡಿ ದೇವಿ ಮತ್ತು ತೇಜಸ್ವಿ ಯಾದವ್ ಅವರಿಗೆ ಕಿರುಕುಳ ನೀಡಲು ಬಿಜೆಪಿ ನೇತೃತ್ವದ ಸರ್ಕಾರವು ಹೆಣೆಯುತ್ತಿರುವ ತಂತ್ರ ಇದಾಗಿದೆ. ಸರ್ಕಾರ ಭದ್ರತೆಯನ್ನು ಹಿಂಪಡೆದಿದೆ. ನಮ್ಮ ನಾಯಕರನ್ನು ಹತ್ಯೆ ಮಾಡಲಿ ಎಂಬ ಉದ್ದೇಶದಿಂದಲೇ ಆಡಳಿತಾರೂಢ ಸರ್ಕಾರ ಈ ರೀತಿ ಮಾಡುತ್ತಿದೆ' ಎಂದು ಆರ್‌ಜೆಡಿ ವಕ್ತಾರ ಮತ್ತು ಮಾಜಿ ಶಾಸಕ ಶಕ್ತಿ ಸಿಂಗ್ ಯಾದವ್ ಆರೋಪಿಸಿದರು.

'ನಾನು ಸೇರಿದಂತೆ ಆರ್‌ಜೆಡಿ ಕಾರ್ಯಕರ್ತರೇ ನಮ್ಮ ನಾಯಕರಿಗೆ ಭದ್ರತೆ ಒದಗಿಸುತ್ತೇವೆ' ಎಂದು ಹೇಳಿದರು.


ರಾಬ್ಡಿ ದೇವಿ ಅವರ ನಿವಾಸದ ಪ್ರವೇಶದ್ವಾರದಲ್ಲಿ ಆರ್‌ಜೆಡಿ ಕಾರ್ಯಕರ್ತರು ಭದ್ರತಾ ಸಿಬ್ಬಂದಿಯಂತೆ ನಿಂತಿದ್ದರು —ಪಿಟಿಐ ಚಿತ್ರ

'ಪಾಲಿಕೆ ಏಕೆ ವಿಸರ್ಜಿಸಬಾರದು?'

ಕೋಲ್ಕತ್ತ ಮಹಾನಗರ ಪಾಲಿಕೆ ಮೇಯರ್ ರಾಜೀನಾಮೆ

ಕೋಲ್ಕತ್ತ (ಪಿಟಿಐ): ಕೋಲ್ಕತ್ತ ಮಹಾನಗರ ಪಾಲಿಕೆಯ ಮೇಯರ್ ಸ್ಥಾನಕ್ಕೆ ಟಿಎಂಸಿ ಪಕ್ಷದ ಫಿರ್ಹಾದ್ ಹಕೀಮ್ ಅವರು ರಾಜೀನಾಮೆ ನೀಡಿರುವುದು ರಾಜ್ಯದಲ್ಲಿ ಹೊಸದೊಂದು ಕಾನೂನು ಸಂಘರ್ಷ ರೂಪುಗೊಳ್ಳುವ ಸ್ಥಿತಿಯನ್ನು ನಿರ್ಮಿಸಿದೆ. 'ಪಾಲಿಕೆ ಪರಿಷತ್ತನ್ನು ಯಾಕೆ ವಿಸರ್ಜಿಸಬಾರದು' ಎಂದು ರಾಜ್ಯ ಸರ್ಕಾರವು ಪಾಲಿಕೆಗೆ ಶೋಕಾಸ್ ನೋಟಿಸ್ ನೀಡಿದೆ.


ಫಿರ್ಹಾದ್ ಹಕೀಮ್

ಹಕೀಮ್ ಅವರು ಶುಕ್ರವಾರವಷ್ಟೇ ರಾಜೀನಾಮೆ ನೀಡಿದ್ದರು. ನೋಟಿಸ್‌ಗೆ ಮೂರು ದಿನಗಳಲ್ಲಿ ಉತ್ತರ ನೀಡುವಂತೆ ಸರ್ಕಾರ ಸೂಚಿಸಿದೆ. 1980ರ ಕೋಲ್ಕತ್ತ ಮಹಾನಗರ ಪಾಲಿಕೆ ಕಾಯ್ದೆ ಅನ್ವಯ ರಾಜ್ಯ ಸರ್ಕಾರ ನೋಟಿಸ್ ನೀಡಿದೆ.

'ನಗರದ ಪ್ರಜೆಗಳ ಆಶೋತ್ತರಗಳಿಗೆ ಅನುಗುಣವಾಗಿ ಕೆಲಸ ನಿರ್ವಹಿಸಲು ಪಾಲಿಕೆ ಸೋತಿದೆ. ಮೇಯರ್ ರಾಜೀನಾಮೆಯಿಂದ ಪಾಲಿಕೆಯ ನಿತ್ಯದ ಕೆಲಸ ಕಾರ್ಯಗಳ ಮೇಲೆಯೂ ಪರಿಣಾಮ ಬೀರಲಿದೆ' ಎಂದು ನೋಟಿಸ್‌ನಲ್ಲಿ ರಾಜ್ಯ ಸರ್ಕಾರ ಹೇಳಿದೆ.

'ರಾಜ್ಯ ಸರ್ಕಾರವು ಪಾಲಿಕೆಯಿಂದ ವಿವರಣೆ ಪಡೆಯಬಹುದು. ಮೇಯರ್ ರಾಜೀನಾಮೆ ನೀಡಿದ್ದಾರೆ ಎನ್ನುವ ಒಂದೇ ಕಾರಣಕ್ಕೆ ಜನರಿಂದ ಆಯ್ಕೆಯಾದ ಪಾಲಿಕೆಯನ್ನೇ ವಿಸರ್ಜಿಸುವ ಪರಮಾಧಿಕಾರ ಸರ್ಕಾರಕ್ಕಿಲ್ಲ' ಎಂದು ಹಿರಿಯ ವಕೀಲ ವಿಕಾಸ್ ರಂಜನ್ ಭಟ್ಟಾಚಾರ್ಯ ಅಭಿಪ್ರಾಯಪಟ್ಟಿದ್ದಾರೆ.

2010ರಿಂದ ಕೋಲ್ಕತ್ತ ಮಹಾನಗರ ಪಾಲಿಕೆಯು ಟಿಎಂಸಿ ಆಡಳಿತದಲ್ಲಿ ಇತ್ತು. ವಿಧಾನಸಭೆ ಚುನಾವಣೆಯಲ್ಲಿ ಸೋಲಿನ ಬಳಿಕ ಟಿಎಂಸಿಯಲ್ಲಿ ಬಿರುಕು ಮೂಡಿದೆ. ಪಕ್ಷದ ಮೂಲಗಳ ಪ್ರಕಾರ, ಇಲ್ಲಿಯವರೆಗೆ ರಾಜ್ಯದಾದ್ಯಂತ 100 ಟಿಎಂಸಿ ಕೌನ್ಸಿಲರ್‌ಗಳು ಒಂದೋ ರಾಜೀನಾಮೆ ನೀಡಿದ್ದಾರೆ ಅಥವಾ ನಿಷ್ಕ್ರಿಯರಾಗಿದ್ದಾರೆ.

ಸಿಪಿಎಂ ಮುಖಂಡರ ವಿರುದ್ಧ ಆರೋಪ ಪಟ್ಟಿ

ಬ್ಯಾಂಕ್ ವಂಚನೆ

ಕೊಚ್ಚಿ (ಪಿಟಿಐ): ಕೇರಳಂನ ತ್ರಿಶ್ಶೂರ್ ಜಿಲ್ಲೆಯ ಕರುವನ್ನೂರ್ ಸೇವಾ ಸಹಕಾರಿ ಬ್ಯಾಂಕ್‌ನ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಪಿಎಂ ಮತ್ತು ಪಕ್ಷದ 29 ಮುಖಂಡರ ವಿರುದ್ಧ, ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿದ ಪೂರಕ ಆರೋಪ ಪಟ್ಟಿಯನ್ನು ಇಲ್ಲಿನ ನ್ಯಾಯಾಲಯ ಶನಿವಾರ ಸ್ವೀಕರಿಸಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಗೆ (ಪಿಎಂಎಲ್‌ಎ) ಸಂಬಂಧಿಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಶಬರಿನಾಥನ್ ಪಿ. ಅವರು ಆರೋಪ ಪಟ್ಟಿಯನ್ನು ಸ್ವೀಕರಿಸಿದರು.

ಕರುವನ್ನೂರ್ ಸೇವಾ ಸಹಕಾರಿ ಬ್ಯಾಂಕ್‌ನಿಂದ ವಿವಿಧ ಖಾತೆಗಳಿಗೆ ಸಾಲದ ರೂಪದಲ್ಲಿ ₹180 ಕೋಟಿಯಷ್ಟು ಹಣ ಅಕ್ರಮವಾಗಿ ವರ್ಗಾವಣೆ ಆಗಿದೆ ಎಂದು ಇ.ಡಿ ಆರೋಪಿಸಿದೆ. ಈಗಾಗಲೇ ಈ ಪ್ರಕರಣಕ್ಕೆ ಸಂಬಂಧಿಸಿ ಇ.ಡಿ 55 ಆರೋಪಿಗಳ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿತ್ತು.

ಸಿಪಿಎಂ ಲೋಕಸಭಾ ಸದಸ್ಯ ಕೆ. ರಾಧಾಕೃಷ್ಣನ್, ಶಾಸಕ ಎ.ಸಿ.ಮೊಯ್ದೀನ್, ಸಿಪಿಎಂನ ತ್ರಿಶ್ಶೂರ್ ಜಿಲ್ಲಾ ಘಟಕದ ಮಾಜಿ ಕಾರ್ಯದರ್ಶಿ ಎಂ.ಎಂ ವರ್ಗೀಸ್, ವಿವಿಧ ವಲಯ ಸಮಿತಿಗಳ ಅಧ್ಯಕ್ಷರು ಸೇರಿ 29 ಮಂದಿ ವಿರುದ್ಧ ಇ.ಡಿ.ಇತ್ತೀಚೆಗೆ ಪೂರಕ ಆರೋಪ ಪಟ್ಟಿ ಸಲ್ಲಿಸಿತ್ತು. ಇದೇ ಪ್ರಕರಣದಲ್ಲಿ ಇದುವರೆಗೆ ₹128 ಕೋಟಿ ಮೊತ್ತದ ಆಸ್ತಿಯನ್ನು ಇ.ಡಿ ಜಪ್ತಿಮಾಡಿದೆ.

ಪೂರಕ ಆರೋಪಪಟ್ಟಿಯಲ್ಲಿ ಹೆಸರಿಸಲಾದವರಿಗೆ ನೋಟಿಸ್ ಜಾರಿಗೊಳಿಸಿರುವ ನ್ಯಾಯಾಲಯ, ಜುಲೈ 4ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದೆ.

ನಾಗ್ಪುರದ ನೀಟ್ ಆಕಾಂಕ್ಷಿ ವಿದ್ಯಾರ್ಥಿನಿಯೊಬ್ಬರ ಆತ್ಮಹತ್ಯೆ ಪ್ರಕರಣ

ಆತ್ಮಹತ್ಯೆ: ತನಿಖಾಧಿಕಾರಿಗೆ ನೋಟಿಸ್

ನಾಗ್ಪುರ (ಪಿಟಿಐ): ಮಹಾರಾಷ್ಟ್ರದ ನಾಗ್ಪುರದಲ್ಲಿ ನೀಟ್ ಆಕಾಂಕ್ಷಿ ವಿದ್ಯಾರ್ಥಿನಿಯೊಬ್ಬರ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದ ಕಡತಗಳಲ್ಲಿ ಮರಣಪತ್ರವನ್ನು ಲಗತ್ತಿಸದ ಆರೋಪದ ಮೇರೆಗೆ ಪೊಲೀಸ್ ತನಿಖಾಧಿಕಾರಿಗೆ ಶೋಕಾಸ್ ನೋಟಿಸ್ ಜಾರಿಗೊಳಿಸಲಾಗಿದೆ ಎಂದು ಹಿರಿಯ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

'ಆಕಾಂಕ್ಷಿಯ ಮರಣಪತ್ರವನ್ನು ಠಾಣಾ ಡೈರಿಯಲ್ಲಿ ಉಲ್ಲೇಖಸಲಾಗಿದೆ. ಆದರೆ, ಪ್ರಕರಣಕ್ಕೆ ಸಂಬಂಧಿಸಿದ ಕಡತಗಳಲ್ಲಿ ಅದನ್ನು ಲಗತ್ತಿಸಿಯೇ ಇಲ್ಲ' ಎಂದು ಡಿಸಿಪಿ (ವಲಯ 2) ನಿತ್ಯಾನಂದ ಝಾ ಹೇಳಿದರು.

'ಈ ಕಾರ್ಯದಲ್ಲಿ ಲೋಪ ಎಸಗಿದ ಅಂಬಾಜಾರಿ ಠಾಣೆಯ ತನಿಖಾಧಿಕಾರಿ ನಿಖಿಲ್ ತಭಾನೆ ಅವರಿಗೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಲಾಗಿದೆ' ಎಂದು ಅವರು ವಿವರಿಸಿದರು.

ನೀಟ್ ಪರೀಕ್ಷೆಗೆ ಮಧ್ಯ ಪ್ರದೇಶ ಮೂಲದ ಆಕಾಂಕ್ಷಿ ಚತುರ್ವೇದಿ (18) ಅವರು ಮೇ 20ರಂದು ನಾಗ್ಪುರದ ತನ್ನ ಕೋಣೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಮೇ 3ರಂದು ನಡೆದಿದ್ದ ನೀಟ್ ಪರೀಕ್ಷೆಯನ್ನು ಅವರು ಬರೆದಿದ್ದರು. ಆದರೆ ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪಗಳ ಕಾರಣಕ್ಕೆ ಎನ್‌ಟಿಎ ಆ ಪರೀಕ್ಷೆಯನ್ನು ರದ್ದುಗೊಳಿಸಿ, ಜೂನ್ 21ಕ್ಕೆ ಮರು ಪರೀಕ್ಷೆ ನಿಗದಿಪಡಿಸಿದೆ.

'ಮರು ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳು ಬರುತ್ತವೆ ಎಂಬ ಖಾತರಿ ಇಲ್ಲ. ನನ್ನ ಈ ನಿರ್ಧಾರಕ್ಕಾಗಿ ಕ್ಷಮಿಸಿ' ಎಂದು ಮರಣ ಪತ್ರದಲ್ಲಿ ವಿದ್ಯಾರ್ಥಿನಿ ಉಲ್ಲೇಖಿಸಿದ್ದರು. ಈ ಪ್ರಕರಣ ದೇಶದಾದ್ಯಂತ ಭಾರಿ ಸದ್ದು ಮಾಡಿತ್ತು.

'ಮರು ಪರೀಕ್ಷೆ ಪಾರದರ್ಶಕವಾಗಿರಲಿ'

ಮುಂಬೈ (ಪಿಟಿಐ): ಇದೇ 21ರಂದು ನಡೆಯಲಿರುವ 'ನೀಟ್–ಯುಜಿ' ಮರು ಪರೀಕ್ಷೆಯನ್ನು ರಾಜ್ಯದಲ್ಲಿ ಗೊಂದಲಗಳಿಲ್ಲದಂತೆ, ಪಾರದರ್ಶಕ, ಸುಗಮ ಮತ್ತು ಒತ್ತಡ ಮುಕ್ತವಾಗಿ ನಡೆಸುವಂತೆ ಸಂಬಂಧಿಸಿದ ಎಲ್ಲ ಸಂಸ್ಥೆಗಳಿಗೆ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ನಿರ್ದೇಶಿಸಿದರು.

ಈ ಸಂಬಂಧ ಹಿರಿಯ ಅಧಿಕಾರಿಗಳ ಜತೆಗೆ ಪರಿಶೀಲನಾ ಸಭೆ ನಡೆಸಿದ ಅವರು, ಸಂಬಂಧಿಸಿದ ಎಲ್ಲ ಇಲಾಖೆಗಳು ಜಾಗರೂಕವಾಗಿ ಪರೀಕ್ಷಾ ಕಾರ್ಯ ನಿರ್ವಹಿಸಬೇಕು. ಅದಕ್ಕಾಗಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದರ ಜತೆಗೆ ಪರೀಕ್ಷೆಯ ಘನತೆಗೆ ಧಕ್ಕೆ ಆಗದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

'ಎಲ್ಲ ಪರೀಕ್ಷಾ ಕೇಂದ್ರಗಳು ಸಿಸಿಟಿವಿ ನಿಗಾದಲ್ಲಿ ಕಾರ್ಯನಿರ್ವಹಿಸಬೇಕು' ಎಂದ ಅವರು, ಯಾವುದೇ ಅಕ್ರಮಗಳು ನಡೆಯದಂತೆ ನೋಡಿಕೊಳ್ಳಲು ಸೈಬರ್ ಭದ್ರತೆಯನ್ನು ಮತ್ತಷ್ಟು ಬಲಪಡಿಸುವಂತೆ ನಿರ್ದೇಶಿಸಿದರು.

ಎ.ಐ ಬಳಸಿ: ಶರದ್ ಪವಾರ್

ಪುಣೆ (ಪಿಟಿಐ): ವೈದ್ಯಕೀಯ ಕೋರ್ಸ್‌ಗಳ ಪ್ರವೇಶ ಪರೀಕ್ಷೆಯಲ್ಲಿ ಕೃತಕ ಬುದ್ಧಿಮತ್ತೆ (ಎಐ) ಮತ್ತು ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಂಡಿದ್ದರೆ ವಿವಾದ ಉಂಟಾಗುತ್ತಿರಲಿಲ್ಲ ಎಂದು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಶನಿವಾರ ಹೇಳಿದರು.

'ನೀಟ್–ಯುಜಿ' ಪ್ರಶ್ನೆಪತ್ರಿಕೆ ಸೋರಿಕೆಯಿಂದ ಉಂಟಾಗಿರುವ ಸಮಸ್ಯೆಯನ್ನು ಉಲ್ಲೇಖಿಸಿ ಅವರು ಮಾತನಾಡಿದರು.

'ಟೆಕ್ನಾಲಜಿ ಆನ್ ವೀಲ್ಸ್' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ನೀಟ್‌ನ ಆರಂಭಿಕ ಹಂತದಲ್ಲಿಯೇ ಎ.ಐ ಅನ್ನು ಬಳಸಿಕೊಂಡಿದ್ದರೆ ಹಗರಣವೇ ಆಗುತ್ತಿರಲಿಲ್ಲ. ಕೃಷಿ ಮತ್ತು ಆರೋಗ್ಯ ಕ್ಷೇತ್ರದಲ್ಲಿಯೂ ಎ.ಐ ಮಹತ್ವದ ಪಾತ್ರ ನಿರ್ವಹಿಸುತ್ತಿದೆ' ಎಂದರು.

ಬಿಜೆಪಿ ಜೊತೆ ಒಪ್ಪಂದ: ಸ್ಪಷ್ಟನೆಗೆ ಸಿಪಿಎಂ ಒತ್ತಾಯ

ನವದೆಹಲಿ: 'ಕೇರಳಂನಲ್ಲಿ ಬಿಜೆಪಿಯೊಂದಿಗೆ ಸಿಪಿಎಂ ಒಪ್ಪಂದ ಮಾಡಿಕೊಂಡಿದೆ' ಎಂಬ ಕಾಂಗ್ರೆಸ್ ಆರೋಪದ ಬಗ್ಗೆ ಸ್ಪಷ್ಟನೆ ನೀಡುವಂತೆ' ಸಿಪಿಎಂ ಪ್ರಧಾನ ಕಾರ್ಯದರ್ಶಿ ಎಂ.ಎ ಬೇಬಿ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದು ಮನವಿ ಮಾಡಿಕೊಂಡಿದ್ದಾರೆ.

'ಬಿಜೆಪಿ ವಿರುದ್ಧದ ಹೋರಾಟಕ್ಕೆ 'ಇಂಡಿಯಾ' ಕೂಟದ ಮೂಲಕ ರೂಪಿಸಲಾದ ಒಗ್ಗಟ್ಟಿನ ಅಡಿಪಾಯಕ್ಕೆ ಇಂತಹ ಸುಳ್ಳುಕತೆಗಳು ಭಾರಿ ಹೊಡೆತ ನೀಡುತ್ತವೆ' ಎಂದು ಬೇಬಿ ಎಚ್ಚರಿಕೆ ನೀಡಿದ್ದಾರೆ.



ಕಾಳಿ ನದಿಯಲ್ಲಿ ಮುಳುಗು ಹಾಕುತ್ತಾ ಚಿಪ್ಪಿಕಲ್ಲಿಗಾಗಿ ಹುಡುಕಾಟ...

ನದಿಯಾಳದಲ್ಲಿ ಅನ್ನ ಹುಡುಕುವ ಕೈಗಳು

ಬಕಪಕ್ಷಿಗಳಂತೆ ನೀರಿನಲ್ಲಿ ಮುಳುಗಿ ಏಳುವುದು ಇವರ ನಿತ್ಯದ ಬದುಕು. ಸಮುದ್ರದ ಅಳಿವೆಗಳಲ್ಲಿ ಸಿಗುವ ಚಿಪ್ಪಿಕಲ್ಲುಗಳೇ ನೂರಾರು ಕುಟುಂಬಗಳ ಹೊಟ್ಟೆಪಾಡು. ಒಂದು ತುತ್ತು ಅನ್ನಕ್ಕಾಗಿ ನದಿಯಾಳದಲ್ಲಿ ನಡೆಯುವ ಈ ದುಡಿಮೆ, ಕರಾವಳಿಯ ಅಪರೂಪದ ಬದುಕಿನ ಕಥನ.

• ಗಣಪತಿ ಹೆಗಡೆ

ಕಾರವಾರದ ಕಾಳಿ ಸೇತುವೆಯ ಮೇಲಿಂದ ಹಾದು ಬರುವಾಗ ಒಂದಷ್ಟು ಮಂದಿ ನದಿಯಲ್ಲಿ ಮುಳುಗು ಹಾಕುತ್ತಿರುವುದು ಕಾಣಿಸಿತು. ಕೈಯಲ್ಲಿ ಬುಟ್ಟಿಗಳನ್ನು ಹಿಡಿದಿದ್ದ ಅವರು ಹೀಗೇಕೆ ಮುಳುಗುತ್ತಿದ್ದಾರೆ ಎಂಬುದು ಅರ್ಥವಾಗಲಿಲ್ಲ. ಹತ್ತಾರು ಮಂದಿ ಏಕಕಾಲಕ್ಕೆ ಉಪ್ಪು ಮಿಶ್ರಿತ ನೀರಿನಲ್ಲಿ ಇಳಿದು ಏನನ್ನೋ ಹುಡುಕುತ್ತಿರುವುದು ಕುತೂಹಲ ಕೆರಳಿಸಿತು. ಹೆದ್ದಾರಿಯಿಂದ ಒಳ ರಸ್ತೆಗೆ ತಿರುಗಿ ಕೋಡಿಬಾಗದ ಗಲ್ಲಿಯೊಳಗೆ ಗಾಡಿ ತಿರುಗಿಸಿ, ನಂದನಗದ್ದಾದ ಸಂತೋಷಿಮಾತಾ ದೇವಸ್ಥಾನದ ಬಳಿ ನಿಂತಾಗಲೇ ಅವರ ಮುಳುಗಿನ ಹಿಂದಿನ ಕಾರಣ ತಿಳಿಯಿತು.

ಉತ್ತರ ಸಿಕ್ಕಿದ್ದಕ್ಕೆ ಕುತೂಹಲ ತಣಿಯಲಿಲ್ಲ; ಮತ್ತಷ್ಟು ಹೆಚ್ಚಾಯಿತು. ಮೈಯೆಲ್ಲ ಒದ್ದೆಯಾಗಿ ಮೊಣಕಾಲುಮಟ್ಟದ ನೀರಿನಲ್ಲಿ ನಡೆದು ಬರುತ್ತಿದ್ದ ಸುಂಕೇರಿಯ ನಾಗವೇಣಿ ಸಾರಂಗ, ದೀಪಾ ಮೇಥಾ, ಅಳ್ವೆವಾಡಾದ ನಾಗೇಂದ್ರ ಗಿರಫ್, ಪಂಡರಿನಾಥ ಸಾರಂಗ ಮತ್ತು ಅವರ ತಂಡದವರು ಮಾತಿಗೆ ಸಿಕ್ಕರು.

‘ಸಮುದ್ರ ಇಳಿತ ನೋಡಿ ನದಿಗೆ ಇಳಿದೆವು. ನದಿಯ ಆಳದಲ್ಲಿದ್ದ ಚಿಪ್ಪಿಕಲ್ಲುಗಳನ್ನು ಆರಿಸಿ ತಂದಿದ್ದೇವೆ. ಅವನ್ನು ಈಗ ವ್ಯಾಪಾರಿಗಳಿಗೆ ಕೊಡಬೇಕು. ಉಳಿದಿದ್ದಷ್ಟನ್ನು ಮನೆಗೆ ಅಡುಗೆಗೆ ಒಯ್ಯಬೇಕು’ ಎಂದು ನಾಗವೇಣಿ ಆಗಷ್ಟೇ ದಡ ತಲುಪಿದ್ದ ದೋಣಿಯತ್ತ ಕೈ ತೋರಿಸಿದರು. ಪಾತಿದೋಣಿಯಲ್ಲಿ ಐದಾರು ಬುಟ್ಟಿಗಳ ತುಂಬ ಚಿಪ್ಪಿಕಲ್ಲುಗಳಿದ್ದವು. ಅಂತಹ ಮೂರು ದೋಣಿಗಳು ಸಾಲಾಗಿ ನಿಂತಿದ್ದವು.

‘ದಿನವಿಡೀ ನೀರಿನಲ್ಲಿ ಹೀಗೆ ಮುಳುಗು ಹಾಕುತ್ತಿದ್ದರೆ ಅನಾರೋಗ್ಯಕ್ಕೆ ಒಳಗಾಗುತ್ತೀರಲ್ಲವೇ?’ ಎಂದು ಕೇಳಿದರೆ ಅಲ್ಲಿದ್ದವರೆಲ್ಲ ಕಿಸಕ್ಕನೆ ನಕ್ಕರು.

‘ದಿನವಿಡೀ ನೀರಿನಲ್ಲಿರಲು ನಾವು ಮೀನು ಹಿಡಿಯಲು ಹೋದವರಲ್ಲ. ಚಿಪ್ಪಿಕಲ್ಲು ಆರಿಸಲು ಹೋಗುವವರು. ಸಮುದ್ರದ ಇಳಿತ ಗಮನಿಸಿಕೊಂಡು, ನದಿಯಲ್ಲಿನ ನೀರಿನ ಹರಿವು ಕಡಿಮೆಯಾಗಲು ಕಾಯುತ್ತೇವೆ. ದಿನಕ್ಕೆ ಕೆಲವೇ ಬಾರಿ ಅಂತಹ ಅವಕಾಶ ಸಿಗುತ್ತದೆ. ಆ ಸಮಯದಲ್ಲೇ ಎರಡು-ಮೂರು ತಾಸು ನೀರಿನಲ್ಲಿ ಮುಳುಗು ಹಾಕಿದರೆ ನಮಗೆ ಅಡುಗೆಗೆ ರುಚಿಕಟ್ಟಾದ ಚಿಪ್ಪಿಕಲ್ಲು, ತುತ್ತು ಅನ್ನಕ್ಕೆ ಕಾಸು ಸಿಗುತ್ತದೆ’ ಎಂದು ದೀಪಾ ಮೇಥಾ ವಿವರಿಸಿದರು.

ಆದರೆ, ಇದು ಕೇವಲ ಹೊಟ್ಟೆಪಾಡಿನ ಕಥೆಯಲ್ಲ. ಒಮ್ಮೆ ಹೇರಳವಾಗಿ ಸಿಗುತ್ತಿದ್ದ ಚಿಪ್ಪಿಕಲ್ಲುಗಳು ಇತ್ತೀಚಿನ ವರ್ಷಗಳಲ್ಲಿ ವಿರಳವಾಗುತ್ತಿವೆ ಎಂಬ ಆತಂಕ ಕರಾವಳಿಯ ಜನರಲ್ಲಿ ಮನೆ ಮಾಡಿದೆ. ನದಿಯ ಹರಿವಿನ ಬದಲಾವಣೆ, ಮರಳು ಮತ್ತು ಚಿಪ್ಪಿ ಗಣಿಗಾರಿಕೆ, ಅತಿಯಾದ ಸಂಗ್ರಹಣೆ ಇವೆಲ್ಲವೂ ಸೇರಿ ಈ ಜೀವಿಗಳ ಸಂತತಿಗೆ ಹೊಡೆತ ನೀಡುತ್ತಿವೆ. ಆದರೂ ಬದುಕಿನ ಅನಿವಾರ್ಯತೆಯಿಂದ ಈ ಕೈಗಳು ಚಿಪ್ಪಿಕಲ್ಲುಗಳನ್ನು ಹುಡುಕುತ್ತಲೇ ಇವೆ.

ನದಿಯಲ್ಲಿ ಮುಳುಗು ಹಾಕುವುದು ಸುಲಭದ ಕೆಲಸವಲ್ಲ. ಸಮುದ್ರದ ಇಳಿತದ ಹೊತ್ತಿನಲ್ಲಿ ನೀರಿನ ಹರಿವು ಕಡಿಮೆಯಾದಾಗ ಮರಳು ಮತ್ತು ಕೆಸರಿನೊಳಗೆ ಹುದುಗಿರುವ ಚಿಪ್ಪಿಕಲ್ಲುಗಳನ್ನು ಕೈಯಿಂದಲೇ ಹುಡುಕಬೇಕು. ಕೆಲವೊಮ್ಮೆ ಉಸಿರು ಕಟ್ಟಿಕೊಂಡು ಮುಳುಗಿದರೂ ಖಾಲಿ ಕೈಯಲ್ಲಿ ಮೇಲೆ ಬರಬೇಕಾಗುತ್ತದೆ. ಅನುಭವಿಗಳು ಮಾತ್ರ ನೀರಿನ ಬಣ್ಣ, ಹರಿವಿನ ದಿಕ್ಕು ಮತ್ತು ತಳದ ಸ್ವರೂಪ ನೋಡಿ ಚಿಪ್ಪಿಕಲ್ಲು ಸಿಗುವ ಜಾಗವನ್ನು ಗುರುತಿಸುತ್ತಾರೆ.

ಸಮುದ್ರಕ್ಕೆ ಕೆಲವೇ ಮೀಟರ್ ದೂರವಿರುವ, ನದಿ ರಭಸದೊಂದಿಗೆ ಹರಿದು ಸಾಗರ ಸೇರುವ ಜಾಗದಲ್ಲಿ ಹೀಗೆ ಮುಳುಗು ಹಾಕುತ್ತ, ನದಿ ಹರಿಯುವ ಸ್ಥಳದ ಉದ್ದಕ್ಕೂ ಓಡಾಡುತ್ತ ಚಿಪ್ಪಿಕಲ್ಲು ಆರಿಸುವ ಪ್ರಕ್ರಿಯೆಯ ಬಗ್ಗೆ ತಿಳಿಯಲು ಮುಂದಾದಾಗ ಕರಾವಳಿಯ ನೂರಾರು ಕುಟುಂಬಗಳ ಬದುಕಿನ ಕಥನ ತೆರೆದುಕೊಳ್ಳತೊಡಗಿತು.

ಅಪಾಯ ಲೆಕ್ಕಿಸದೆ ನದಿಯಲ್ಲಿ ಮುಳುಗು ಹಾಕಿ ಚಿಪ್ಪಿಕಲ್ಲು, ನೀಲಿಕಲ್ಲು, ತಿಸ್ರೆ, ಕುಬ್ಬೆ ಹೀಗೆ ಹತ್ತಾರು ಹೆಸರಿನಿಂದ ಕರೆಯುವ ಮೃದ್ವಂಗಿಗಳನ್ನು ಆರಿಸಿ ತರುವುದು ರಾಜ್ಯದ ಕರಾವಳಿ ಜಿಲ್ಲೆಗಳ ಅಳಿವೆ ಪ್ರದೇಶಗಳಲ್ಲಿ ಸಾಮಾನ್ಯ. ಅದರಲ್ಲೂ ದೂರದವರೆಗೆ ಹರಿದು ಅರಬ್ಬಿ ಸಮುದ್ರ ಸೇರುವ ಕಾಳಿ, ಅಘನಾಶಿನಿ, ಶರಾವತಿ, ಗಂಗಾವಳಿ ಹಾಗೂ ವೆಂಕಟಾಪುರ ನದಿಗಳ ಅಳಿವೆಗಳಲ್ಲಿ ಈ ಚಟುವಟಿಕೆ ಹೆಚ್ಚು ಕಂಡುಬರುತ್ತದೆ.

ಕೊಂಕಣಿ ಭಾಷಿಕರು ಹೆಚ್ಚಿರುವ ಕಾರವಾರದಲ್ಲಿ ಕಾಳಿ ನದಿಯಲ್ಲಿ ಸಿಗುವ ಚಿಪ್ಪಿಕಲ್ಲುಗಳಿಗೆ ಸ್ಥಳೀಯರು ‘ತಿಸ್ರೆ’ ಎನ್ನುತ್ತಾರೆ. ಕುಮಟಾ ಭಾಗದಲ್ಲಿ ‘ಬೆಳಚು’ ಎಂಬ ಹೆಸರು ಪ್ರಚಲಿತದಲ್ಲಿದೆ. ಚಿಪ್ಪು ಸುಲಭವಾಗಿ ಬಿಡುವ ಮೃದ್ವಂಗಿಗೆ ‘ತಿಸ್ರೆ’, ಗಟ್ಟಿಯಾದ ಚಿಪ್ಪು ಹೊಂದಿರುವ ದೊಡ್ಡ ಗಾತ್ರದ ಮೃದ್ವಂಗಿಗೆ ‘ಕಲ್ವಾ’ ಅಥವಾ ‘ಕಲಗಾ’ ಎಂದು ಕರೆಯುತ್ತಾರೆ.

ಕಾರವಾರ ನಗರ ವ್ಯಾಪ್ತಿಯ ಸುಂಕೇರಿ, ನಂದನಗದ್ದಾ, ಕೋಡಿಬಾಗ, ಅಳ್ವೆವಾಡಾದ ನೂರಾರು ಮೀನುಗಾರರ ಕುಟುಂಬಗಳಿಗೆ ಚಿಪ್ಪಿಕಲ್ಲು ಆರಿಸುವುದು ಜೀವನೋಪಾಯ. ಕುಮಟಾದ ಅಘನಾಶಿನಿ ನದಿ ದಂಡೆಯ ದೀವಗಿ, ಮಣಕೋಣ, ಮಿರ್ಜಾನ, ಮುಸುಗುಪ್ಪಾ, ಹೊಂಡದಕ್ಕಲ ಹಾಗೂ ಅಘನಾಶಿನಿ ಗ್ರಾಮಗಳ ಬಡ ಕುಟುಂಬಗಳಿಗೆ ಇದು ಮೀನುಗಾರಿಕೆ ಮತ್ತು ಕೂಲಿಯೊಂದಿಗೆ ಹೆಚ್ಚುವರಿ ಆದಾಯದ ಮೂಲ. ಶರಾವತಿ ಮತ್ತು ವೆಂಕಟಾಪುರ ನದಿದಂಡೆಯ ಹಲವಾರು ಗ್ರಾಮಗಳಲ್ಲಿಯೂ ಇದೇ ಚಿತ್ರಣ ಕಾಣುತ್ತದೆ.

‘ಪಾತಿದೋಣಿಯಲ್ಲಿ ಇಬ್ಬರು ನದಿಗೆ ತೆರಳಿ ಮೂರು ತಾಸು ಶ್ರಮಪಟ್ಟರೆ ಕನಿಷ್ಠ 60ರಿಂದ 70 ಕೆ.ಜಿ. ಚಿಪ್ಪಿಕಲ್ಲು ತರುತ್ತೇವೆ. ಮೀನಿನ ಉತ್ಪಾದನೆ ಕಡಿಮೆ ಆಗಿರುವ ಸಂದರ್ಭದಲ್ಲಿ ಚಿಪ್ಪಿಕಲ್ಲಿಗೆ ಹೆಚ್ಚಿನ ಬೇಡಿಕೆ ಇರುತ್ತದೆ. ಮಾರುಕಟ್ಟೆಯಲ್ಲಿ 100 ಚಿಪ್ಪಿಕಲ್ಲುಗಳ ಒಂದು ರಾಶಿ ಕನಿಷ್ಠ ₹150ಕ್ಕೆ ಮಾರಾಟವಾಗುತ್ತದೆ’ ಎಂದು ಅಘನಾಶಿನಿ ನದಿಯಿಂದ ಆಗಷ್ಟೇ ಚಿಪ್ಪಿಕಲ್ಲು ಸಂಗ್ರಹಿಸಿ ತಂದಿದ್ದ ದೀವಗಿಯ ಸಂತೋಷ ಗೌಡ ಹೇಳಿದರು.

ಚಿಪ್ಪಿಕಲ್ಲುಗಳನ್ನು ನೀರಿನಿಂದ ಆರಿಸಿ ತರುವುದಕ್ಕಿಂತ ಅವುಗಳನ್ನು ಮಾರಾಟ ಮಾಡುವುದು ಕೆಲವೊಮ್ಮೆ ದೊಡ್ಡ ಸವಾಲಾಗುತ್ತದೆ.

‘ನದಿಯಂಚಿನಲ್ಲೇ ನಿಲ್ಲುವ ಸಗಟು ವ್ಯಾಪಾರಿಗಳು ಕಡಿಮೆ ದರಕ್ಕೆ ಖರೀದಿಸಿ, ಪೇಟೆಯಲ್ಲಿ ಹೆಚ್ಚಿನ ದರಕ್ಕೆ ಮಾರುತ್ತಾರೆ. ಜೀವ ಪಣಕ್ಕಿಟ್ಟು, ಉಸಿರು ಕಟ್ಟಿಕೊಂಡು ಚಿಪ್ಪಿಕಲ್ಲು ಆರಿಸಿ ತರುವುದು ನಾವು. ಆದರೆ, ಹಣದ ತುರ್ತು ಇದ್ದಾಗ ಅವರು ಹೇಳಿದ ದರಕ್ಕೇ ಮಾರಬೇಕಾಗುತ್ತದೆ’ ಎಂದು ಅಘನಾಶಿನಿ ದಂಡೆಯ ಮಾದೇವಿ ಹರಿಕಂತ್ರ ಬೇಸರ ವ್ಯಕ್ತಪಡಿಸಿದರು.

ಚಿಪ್ಪಿಕಲ್ಲು ಆರಿಸುವ ಕೆಲಸದಲ್ಲಿ ಮಹಿಳೆಯರೂ ಪ್ರಮುಖ ಪಾತ್ರ ವಹಿಸುತ್ತಾರೆ. ನೀರಿನಲ್ಲಿ ಇಳಿಯುವುದರಿಂದ ಹಿಡಿದು ಚಿಪ್ಪಿಕಲ್ಲುಗಳನ್ನು ತೊಳೆದು, ವಿಂಗಡಿಸಿ ಮಾರಾಟಕ್ಕೆ ಸಿದ್ಧಗೊಳಿಸುವವರೆಗಿನ ಜವಾಬ್ದಾರಿಯನ್ನು ಅವರು ಹೊರುತ್ತಾರೆ.

‘ಹಲವು ವರ್ಷಗಳ ಹಿಂದೆ ಶಿರಗುಂಜಿ ಭಾಗದಲ್ಲಿಯೂ ವ್ಯಾಪಕ ಪ್ರಮಾಣದಲ್ಲಿ ಕರಿ ಚಿಪ್ಪಿಕಲ್ಲು ಸಿಗುತ್ತಿತ್ತು. ಈಗ ಅವುಗಳ ಸಂತತಿ ಕಡಿಮೆಯಾಗಿದೆ. ಹೀಗಾಗಿ ದೂರದ ಊರುಗಳಿಗೆ ಹೋಗಿ ಸಂಗ್ರಹಿಸಬೇಕಾದ ಪರಿಸ್ಥಿತಿ ಬಂದಿದೆ’ ಎಂದು ಲಕ್ಷ್ಮಿ ಗೌಡ ಹೇಳಿದರು.

ಚಿಪ್ಪಿಕಲ್ಲುಗಳನ್ನು ತೊಳೆದು, ವಿಂಗಡಿಸಿ ಮಾರಾಟಕ್ಕೆ ಸಿದ್ಧಗೊಳಿಸಲಾಗುತ್ತದೆ. ಉಳಿದವು ಮನೆ ಅಡುಗೆಗೆ ಬಳಕೆಯಾಗುತ್ತವೆ. ಕರಾವಳಿಯ ಅಡುಗೆ ಸಂಸ್ಕೃತಿಯಲ್ಲಿ ಚಿಪ್ಪಿಕಲ್ಲಿಗೆ ವಿಶೇಷ ಸ್ಥಾನವಿದ್ದು, ಮಳೆಗಾಲದಲ್ಲಿ ಸಾರು, ಸುಕ್ಕಾ ಬಾಜಿ ಹಾಗೂ ಬಸಳೆ ಸೊಪ್ಪಿನ ಪಲ್ಯ ರೂಪದಲ್ಲಿ ಅನೇಕ ಮನೆಗಳ ಊಟದ ತಟ್ಟೆ ಸೇರುತ್ತದೆ.

ಕಾಳಿ ನದಿಯಲ್ಲಿ ಸಿಗುವ ಚಿಪ್ಪಿಕಲ್ಲುಗಳಿಗೆ ಕಾರವಾರ ಮಾತ್ರವಲ್ಲ, ನೆರೆಯ ಗೋವಾದಲ್ಲಿಯೂ ಬೇಡಿಕೆ ಇದೆ. ಸುಕ್ಕಾ ಬಾಜಿ, ಚಿಪ್ಪಿಕಲ್ಲಿನ ಸಾರು ಹಾಗೂ ಬಸಳೆ ಸೊಪ್ಪಿನ ಪಲ್ಯ ಕರಾವಳಿಯ ಜನಪ್ರಿಯ ಖಾದ್ಯಗಳಾಗಿವೆ.

ಸಾಮಾನ್ಯವಾಗಿ ಕಡಿಮೆ ಆಳದ ನದಿಭಾಗಗಳಲ್ಲಿ ನವೆಂಬರ್‌ನಲ್ಲಿ ಹುಟ್ಟುವ ಚಿಪ್ಪಿಕಲ್ಲುಗಳು ಮೇ ವೇಳೆಗೆ ಸಂಪೂರ್ಣ ಬೆಳವಣಿಗೆ ಹೊಂದುತ್ತವೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಅವುಗಳ ಸಂತತಿ ಕ್ಷೀಣಿಸುತ್ತಿದೆ ಎಂಬ ಆತಂಕ ಹೆಚ್ಚಾಗಿದೆ. ಚಿಪ್ಪಿ ಮತ್ತು ಮರಳು ಗಣಿಗಾರಿಕೆ, ನದಿಯ ಸ್ವಾಭಾವಿಕ ಹರಿವಿನ ಬದಲಾವಣೆ ಹಾಗೂ ಅತಿಯಾದ ಸಂಗ್ರಹಣೆ ಇದಕ್ಕೆ ಕಾರಣ ಎನ್ನಲಾಗುತ್ತಿದೆ.

ಉತ್ತರ ಕನ್ನಡ ಜಿಲ್ಲೆಯ ಹಲವು ಭಾಗಗಳಲ್ಲಿ ಚಿಪ್ಪಿಕಲ್ಲುಗಳ ಸಂತತಿ ಕ್ಷೀಣಿಸುತ್ತಿರುವುದು ಗೋಚರಿಸುತ್ತಿದೆ. ಇದರಿಂದ ಈ ವೃತ್ತಿಯನ್ನೇ ನಂಬಿರುವ ಕುಟುಂಬಗಳ ಬದುಕಿನ ಮೇಲೂ ಪರಿಣಾಮ ಬೀಳುತ್ತಿದೆ.

‘ಸಣ್ಣ ಗಾತ್ರದ ಚಿಪ್ಪಿಕಲ್ಲುಗಳನ್ನು ಮತ್ತೆ ನೀರಿಗೆ ಬಿಡುವ ಬಗ್ಗೆ ಎಲ್ಲರೂ ಒಪ್ಪಂದ ಮಾಡಿಕೊಳ್ಳಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಅವುಗಳ ಸಂತತಿ ಮತ್ತಷ್ಟು ಕ್ಷೀಣಿಸಬಹುದು’ ಎಂದು ಕಡಲ ಜೀವಶಾಸ್ತ್ರಜ್ಞ ಶಿವಕುಮಾರ ಹರಗಿ ಎಚ್ಚರಿಸುತ್ತಾರೆ.

ಮುಂದಿನ ಬಾರಿ ಕಾಳಿ ಸೇತುವೆಯ ಮೇಲಿಂದ ನದಿಯತ್ತ ದೃಷ್ಟಿ ಹಾಯಿಸಿದಾಗ ಕಾಣುವ ಆ ಮುಳುಗುಗಳು ಕೇವಲ ನೀರಿನಲ್ಲಿ ಇಳಿಯುವ ದೇಹಗಳಂತೆ ಕಾಣುವುದಿಲ್ಲ. ಅವು ಸಮುದ್ರದ ಇಳಿತದೊಂದಿಗೆ ಬದುಕಿನ ಅವಕಾಶ ಹುಡುಕುವ ಜನರ ಹೆಜ್ಜೆಗಳಂತೆ ಕಾಣುತ್ತವೆ. ನದಿಯ ತಳದಲ್ಲಿ ಚಿಪ್ಪಿಕಲ್ಲುಗಳನ್ನು ಹೆಕ್ಕುವ ಆ ಕೈಗಳು ಕರಾವಳಿಯ ಆಹಾರ ಸಂಸ್ಕೃತಿಯನ್ನೂ, ನೂರಾರು ಕುಟುಂಬಗಳ ಬದುಕನ್ನೂ ಹಿಡಿದಿಟ್ಟಿವೆ. ಅಳಿವೆಗಳಲ್ಲಿ ಇಂದಿಗೂ ಮುಂದುವರಿದಿರುವ ಈ ಮುಳುಗುಗಳ ಹಿಂದೆ ಒಂದು ತುತ್ತು ಅನ್ನದ ಕಥೆಯಷ್ಟೇ ಅಲ್ಲ, ನದಿ, ಸಮುದ್ರ ಮತ್ತು ಮನುಷ್ಯರ ನಡುವಿನ ಸೂಕ್ಷ್ಮ ಸಹಜೀವನವೂ ಅಡಗಿದೆ. ❖

ಚಿಪ್ಪಿಕಲ್ಲಿಗೆ ಅಣೆಕಟ್ಟೆಗಳೇ ಮಾರಕ

ಶುದ್ಧ ಸಿಹಿ ನೀರು ಮತ್ತು ಉಪ್ಪು ನೀರು ಬೆರೆಯುವ ಅಳಿವೆ ಪ್ರದೇಶಗಳು ಚಿಪ್ಪಿಕಲ್ಲುಗಳ ಬೆಳವಣಿಗೆಗೆ ಅತ್ಯಂತ ಸೂಕ್ತ. ಕಡಿಮೆ ಆಳದ ನೀರು, ಮರಳಿನ ನೆಲಗಟ್ಟು ಮತ್ತು ಬಂಡೆಗಳಿರುವ ಪ್ರದೇಶಗಳಲ್ಲಿ ಅವು ಚೆನ್ನಾಗಿ ಬೆಳೆಯುತ್ತವೆ. ಆದರೆ, ನದಿಗಳಿಗೆ ಅಣೆಕಟ್ಟುಗಳನ್ನು ನಿರ್ಮಿಸಿ ಹರಿವು ಕಡಿಮೆ ಮಾಡಿದ ಪರಿಣಾಮ ಉತ್ತರ ಕನ್ನಡ ಜಿಲ್ಲೆಯ ಕಾಳಿ ಹಾಗೂ ಶರಾವತಿ ಅಳಿವೆಗಳಲ್ಲಿ ಚಿಪ್ಪಿಕಲ್ಲುಗಳ ಸಂತತಿ ಕ್ಷೀಣಿಸಿದೆ ಎಂದು ಚಿಪ್ಪಿಕಲ್ಲಿನ ಕುರಿತು ಸಂಶೋಧನೆ ನಡೆಸಿರುವ ಎನ್.ಎಂ. ಗುರುಪ್ರಸಾದ್ ಹೇಳುತ್ತಾರೆ. ನದಿಯ ಸ್ವಾಭಾವಿಕ ಹರಿವು ಕಾಪಾಡಿದರೆ ಅವುಗಳ ಸಂತತಿಯನ್ನು ಮತ್ತೆ ಹೆಚ್ಚಿಸಬಹುದು ಎಂಬುದು ಅವರ ಅಭಿಪ್ರಾಯ.

ಚಿಪ್ಪಿಕಲ್ಲುಗಳಲ್ಲಿ ಸೆಲೇನಿಯಂ, ಕ್ಯಾಲ್ಸಿಯಂ, ಮ್ಯಾಗ್ನಿಶಿಯಂ ಸೇರಿದಂತೆ ಹಲವು ಪೋಷಕಾಂಶಗಳು ಹೇರಳವಾಗಿದ್ದು, ಅವುಗಳಿಂದ ತಯಾರಿಸುವ ಖಾದ್ಯ ಆರೋಗ್ಯಕರವೂ ಹೌದು. ಜೊತೆಗೆ ನೀರಿನಲ್ಲಿನ ಕಲ್ಮಶವನ್ನು ಹೀರಿಕೊಂಡು ನೀರನ್ನು ಶುದ್ಧೀಕರಿಸುವ ಕೆಲಸವನ್ನೂ ಅವು ಮಾಡುತ್ತವೆ. ಆದರೆ, ಕಲುಷಿತ ಅಥವಾ ಪಾಚಿಗಟ್ಟಿದ ನೀರಿನಲ್ಲಿ ಬೆಳೆದ ಚಿಪ್ಪಿಕಲ್ಲುಗಳ ಸೇವನೆ ಆರೋಗ್ಯಕ್ಕೆ ಅಪಾಯಕಾರಿ ಆಗಬಹುದು ಎಂದು ಕಡಲ ಜೀವಶಾಸ್ತ್ರಜ್ಞ ಶಿವಕುಮಾರ ಹರಗಿ ಎಚ್ಚರಿಸುತ್ತಾರೆ.



ಅಘನಾಶಿನಿ ಅಳಿವೆಯಲ್ಲಿ ಸಿಕ್ಕ ಅಡ್ಡ ಬೆಳಚು...



ದಿವಾ ಉತ್ಕರ್ಷ

ಒಂದು ಪ್ರಶ್ನೆಯಿಂದ ಫೋರ್ಬ್ಸ್ ಪಟ್ಟಿಯವರೆಗೆ

• ಅಬ್ದುಲ್ ರಹಿಮಾನ್

ವರ್ಷಗಟ್ಟಲೆ ಶ್ರಮಿಸಿದರೂ ಅನೇಕರಿಗೆ ತಲುಪಲಾಗದ ಅಪರೂಪದ ಮೈಲಿಗಲ್ಲೊಂದನ್ನು ಬೆಂಗಳೂರಿನ ಹದಿನೇಳು ವರ್ಷದ ದಿವಾ ಉತ್ಕರ್ಷ ಸಾಧಿಸಿದ್ದಾರೆ. ‘ಫೋರ್ಬ್ಸ್ 30 ಅಂಡರ್ 30 ಏಷ್ಯಾ’ ಪಟ್ಟಿಯ ಸಾಮಾಜಿಕ ಪ್ರಭಾವ ವಿಭಾಗದಲ್ಲಿ ಸ್ಥಾನ ಪಡೆದಿರುವ ಅವರು, ಈ ವರ್ಷ ಆ ವಿಭಾಗದಲ್ಲಿ ಗುರುತಿಸಲ್ಪಟ್ಟ ಅತ್ಯಂತ ಕಿರಿಯ ಸಾಧಕಿ. ಹದಿಮೂರು ವರ್ಷದವರಾಗಿದ್ದಾಗ ಆರಂಭಿಸಿದ ‘ಪ್ರಾಜೆಕ್ಟ್ ಸೂರ್ಯ’ ಎಂಬ ಲಾಭರಹಿತ ಉಪಕ್ರಮವೇ ಅವರಿಗೆ ಈ ಜಾಗತಿಕ ಮನ್ನಣೆ ತಂದುಕೊಟ್ಟಿದೆ.

ಆದರೆ ಈ ಕಥೆಯ ಕೇಂದ್ರದಲ್ಲಿ ಒಂದು ಪ್ರಶ್ನೆಯಿದೆ.

‘ವೈದ್ಯಕೀಯ ಜ್ಞಾನ, ಸೌಲಭ್ಯ ಮತ್ತು ಬೆಂಬಲವಿರುವ ನಮ್ಮ ಕುಟುಂಬಕ್ಕೇ ಇದು ಇಷ್ಟು ಕಷ್ಟವಾದರೆ, ಅಂತಹ ಯಾವ ಬೆಂಬಲವೂ ಇಲ್ಲದ ಬಡ ಕುಟುಂಬಗಳ ಮಕ್ಕಳ ಬದುಕು ಹೇಗಿರಬಹುದು?’

ಐದು ವರ್ಷಗಳ ಹಿಂದೆ ಮೂಡಿದ ಈ ಪ್ರಶ್ನೆಯೇ ದಿವಾ ಬದುಕಿನ ದಿಕ್ಕನ್ನು ಬದಲಿಸಿತು.

ದಿವಾ ಹನ್ನೆರಡು ವರ್ಷದವರಿದ್ದಾಗ, ತಮ್ಮ ಸೂರ್ಯನಿಗೆ ಟೈಪ್ 1 ಮಧುಮೇಹ ಇರುವುದು ಪತ್ತೆಯಾಯಿತು. ಆಗ ಸೂರ್ಯನ ವಯಸ್ಸು ಒಂಬತ್ತು.

‘ಮಧುಮೇಹ ಎಂದರೆ ವಯಸ್ಸಾದವರ ಕಾಯಿಲೆ ಅಂದುಕೊಂಡಿದ್ದೆ. ಮಕ್ಕಳಿಗೂ ಇಂತಹ ಕಾಯಿಲೆ ಬರಬಹುದು ಎಂಬುದೇ ಗೊತ್ತಿರಲಿಲ್ಲ. ವಿಷಯ ತಿಳಿದಾಗ ಇಡೀ ಕುಟುಂಬಕ್ಕೆ ದೊಡ್ಡ ಆಘಾತವಾಗಿತ್ತು’ ಎಂದು ದಿವಾ ನೆನಪಿಸಿಕೊಳ್ಳುತ್ತಾರೆ.

ಮುಂದಿನ ದಿನಗಳಲ್ಲಿ ಪ್ರತಿದಿನದ ಇನ್ಸುಲಿನ್ ಚುಚ್ಚುಮದ್ದು, ರಕ್ತದಲ್ಲಿನ ಸಕ್ಕರೆಯ ಮಟ್ಟದ ತಪಾಸಣೆ ಮತ್ತು ಕಟ್ಟುನಿಟ್ಟಾದ ಜೀವನಶೈಲಿಗೆ ಸೂರ್ಯ ಹೊಂದಿಕೊಳ್ಳುವುದನ್ನು ಅವರು ನೋಡಿಕೊಂಡರು. ಪೋಷಕರು ವೈದ್ಯರಾಗಿದ್ದ ಕಾರಣ ಚಿಕಿತ್ಸೆಗೆ ತೊಂದರೆ ಇರಲಿಲ್ಲ. ಆದರೂ ವಾಸ್ತವವನ್ನು ಒಪ್ಪಿಕೊಂಡು ಬದುಕಿಗೆ ಹೊಂದಿಕೊಳ್ಳಲು ಕುಟುಂಬಕ್ಕೆ ಸಮಯ ಬೇಕಾಯಿತು.

ಪೋಷಕರೊಂದಿಗೆ ಸೇರಿ ಟೈಪ್ 1 ಮಧುಮೇಹದ ಬಗ್ಗೆ ತಿಳಿದುಕೊಳ್ಳಲು ಆರಂಭಿಸಿದ ದಿವಾ, ಆಸ್ಪತ್ರೆಗಳಲ್ಲಿ ಅನೇಕ ಮಕ್ಕಳ ಹಾಗೂ ಕುಟುಂಬಗಳ ಸಂಕಷ್ಟವನ್ನು ಹತ್ತಿರದಿಂದ ಕಂಡರು.

‘ಈ ಕಾಯಿಲೆ ಆರೋಗ್ಯದ ಮೇಲಷ್ಟೇ ಅಲ್ಲ, ಕುಟುಂಬದ ಆರ್ಥಿಕ, ಸಾಮಾಜಿಕ ಮತ್ತು ಮಾನಸಿಕ ಸ್ಥಿತಿಯ ಮೇಲೂ ಪರಿಣಾಮ ಬೀರುತ್ತದೆ ಎಂಬುದು ನನಗೆ ಅರ್ಥವಾಯಿತು. ಆಗ ಇದು ನಮ್ಮ ಸಮಾಜದ ದೊಡ್ಡ ಸಮಸ್ಯೆ ಎನ್ನುವುದು ಮನವರಿಕೆಯಾಯಿತು’ ಎನ್ನುತ್ತಾರೆ ಅವರು.

ಹದಿಮೂರನೇ ವಯಸ್ಸಿನಲ್ಲೇ ತಮ್ಮನ ಹೆಸರಿನಲ್ಲಿ ‘ಪ್ರಾಜೆಕ್ಟ್ ಸೂರ್ಯ’ ಆರಂಭಿಸಿದರು.

ಶಾಲಾ ವಿದ್ಯಾರ್ಥಿನಿಯೊಬ್ಬಳ ಸಣ್ಣ ಪ್ರಯತ್ನವಾಗಿ ಆರಂಭವಾದ ‘ಪ್ರಾಜೆಕ್ಟ್ ಸೂರ್ಯ’, ಸ್ನೇಹಿತರು ಮತ್ತು ಕುಟುಂಬದ ಬೆಂಬಲದೊಂದಿಗೆ ನಿಧಾನವಾಗಿ ಚಳವಳಿಯಾಗಿ ಬೆಳೆಯಿತು.

ಇಂದು ಅದು ನಾಲ್ಕು ಲಕ್ಷಕ್ಕೂ ಹೆಚ್ಚು ಜನರನ್ನು ತಲುಪಿದೆ. ಟೈಪ್ 1 ಮಧುಮೇಹವಿರುವ ಮೂರು ಸಾವಿರಕ್ಕೂ ಅಧಿಕ ಮಕ್ಕಳಿಗೆ ನೆರವಾಗಿದೆ. ₹20 ಲಕ್ಷಕ್ಕೂ ಹೆಚ್ಚು ನಿಧಿ ಸಂಗ್ರಹಿಸಿದೆ. ಇನ್ಸುಲಿನ್, ಗ್ಲೂಕೋಸ್ ಮಾನಿಟರಿಂಗ್ ಸಾಧನಗಳು ಹಾಗೂ ಇತರ ವೈದ್ಯಕೀಯ ನೆರವನ್ನು ಅಗತ್ಯವಿರುವ ಕುಟುಂಬಗಳಿಗೆ ತಲುಪಿಸಿದೆ.

120ಕ್ಕೂ ಹೆಚ್ಚು ಸ್ವಯಂಸೇವಕರು ಇದರೊಂದಿಗೆ ಕೆಲಸ ಮಾಡುತ್ತಿದ್ದಾರೆ. ಬೆಂಗಳೂರು, ನವದೆಹಲಿ, ವಾರಾಣಸಿ, ಮುಂಬೈ ಮತ್ತು ಗಾಜಿಯಾಬಾದ್‌ಗಳಲ್ಲಿ ಶಾಖೆಗಳಿವೆ. ಅಮೆರಿಕ, ಕೆನಡಾ, ಮೊರಾಕೊ, ಯುಎಇ ಮತ್ತು ನೈಜೀರಿಯಾದಲ್ಲಿಯೂ ಚಟುವಟಿಕೆಗಳು ನಡೆಯುತ್ತಿವೆ.

ಆದರೆ ದಿವಾ ಅವರಿಗೆ ಈ ಪಯಣವನ್ನು ನೆನಪಿಸುವುದು ಅಂಕಿಅಂಶಗಳಲ್ಲ, ಜನರ ಮುಖಗಳು.

ಉತ್ತರ ಕರ್ನಾಟಕದ ಬಡ ಚಾಲಕನೊಬ್ಬನ ಕುಟುಂಬದ ಮೂವರು ಹೆಣ್ಣುಮಕ್ಕಳಲ್ಲಿ ಅವಳಿಗಳಿಗೆ ಟೈಪ್ 1 ಮಧುಮೇಹ ಇತ್ತು.

ಚಿಕಿತ್ಸೆಯ ವೆಚ್ಚ ಭರಿಸಲು ಸಾಧ್ಯವಾಗದೆ ಆ ಕುಟುಂಬ ಪರದಾಡುತ್ತಿತ್ತು. ಹಣ ಉಳಿಸಲು ಹೆಣ್ಣುಮಕ್ಕಳು ಇನ್ಸುಲಿನ್ ಡೋಸ್‌ಗಳನ್ನು ಕಡಿಮೆ ಮಾಡುತ್ತಿದ್ದರು. ಒಂದು ಹಂತದಲ್ಲಿ ಇಬ್ಬರೂ ಒಂದೇ ಸೂಜಿಯನ್ನು ಬಳಸುತ್ತಿದ್ದರು.

‘ಆ ಘಟನೆ ನನ್ನನ್ನು ತುಂಬಾ ಕಾಡಿತ್ತು. ಒಂದು ಕಾಯಿಲೆ ಮನುಷ್ಯರನ್ನು ಎಷ್ಟು ಅಸಹಾಯಕರನ್ನಾಗಿ ಮಾಡಬಲ್ಲದು ಎನ್ನುವುದು ಆಗ ಅರ್ಥವಾಯಿತು’ ಎನ್ನುತ್ತಾರೆ ದಿವಾ. 11ನೇ ಪುಟಕ್ಕೆ...



ಮಧುಮೇಹದ ಬಗ್ಗೆ ಮಾಹಿತಿ ಶಿಬಿರದಲ್ಲಿ ವಿದ್ಯಾರ್ಥಿಗಳೊಂದಿಗೆ ದಿವಾ

ಇಲ್ಲಿ ಬೈಯಲೂ ಉಂಟು ಒಂದು ಹಬ್ಬ!

ಕೊಡಗಿನ ಕುಂಡೆ ಹಬ್ಬ ಈಗ ಕಾಡಂಚಿನ ಹಳ್ಳಿಗಳ ಗಡಿಯನ್ನು ದಾಟಿ ಸಾಮಾಜಿಕ ಜಾಲತಾಣಗಳ ಮೂಲಕ ಲಕ್ಷಾಂತರ ಜನರನ್ನು ತಲುಪಿದೆ. ವೇಷ, ಬೈಗುಳ, ಕುಣಿತ ಮತ್ತು ಸಂಭ್ರಮದ ಈ ಅಪರೂಪದ ಜನಪದ ಆಚರಣೆ ರೀಲ್ಸ್‌ಗಳ ಮೂಲಕ ಹೊಸ ತಲೆಮಾರಿನ ಕುತೂಹಲವನ್ನೂ ಕೆರಳಿಸಿದೆ.



• ಕೆ.ಎಸ್.ಗಿರೀಶ

ರಸ್ತೆಯ ಬದಿಯಲ್ಲಿ ನಿಂತಿದ್ದ ಪ್ರವಾಸಿಗರ ಗುಂಪೊಂದು ಮೊಬೈಲ್ ಫೋನ್‌ಗಳನ್ನು ಎತ್ತಿಕೊಂಡಿದೆ. ಎದುರಿನಿಂದ ವಿಚಿತ್ರ ವೇಷಧಾರಿಗಳ ತಂಡವೊಂದು ಬರುತ್ತಿದೆ. ಒಬ್ಬನ ಮೈ ತುಂಬ ಹಸಿರು ಬಣ್ಣ. ಮತ್ತೊಬ್ಬನ ಮುಖಕ್ಕೆ ಕಪ್ಪು ಬಳಿದಿದೆ. ಇನ್ನೊಬ್ಬನು ಸೀರೆ ಉಟ್ಟು, ತಲೆಗೆ ಕಾಡು ಗಿಡಗಂಟಿಗಳನ್ನು ಸುತ್ತಿಕೊಂಡಿದ್ದಾನೆ. ಅವರ ಕೈಯಲ್ಲಿ ಪ್ಲಾಸ್ಟಿಕ್ ಡ್ರಂ, ಹಳೆಯ ತಗಡು, ಮುರಿದ ಪೈಪ್‌ಗಳು. ಕಿವಿಗಡಚಿಕ್ಕುವ ಶಬ್ದದ ನಡುವೆ ಕುಣಿಯುತ್ತಾ, ಹಾಡುತ್ತಾ, ಎದುರಿಗೆ ಸಿಕ್ಕವರನ್ನು ಬಾಯಿಗೆ ಬಂದಂತೆ ಬೈಯುತ್ತಾ ಅವರು ಮುಂದೆ ಸಾಗುತ್ತಾರೆ. ಬೈಗುಳ ಕೇಳಿ ಜನರು ಸಿಟ್ಟಾಗುವುದಿಲ್ಲ; ಬದಲಿಗೆ ನಗುತ್ತಾರೆ. ಕೆಲವರು ಹಣ ಕೊಡುತ್ತಾರೆ. ಕೆಲವರು ಸೆಲ್ಫಿ ತೆಗೆದುಕೊಳ್ಳುತ್ತಾರೆ. ಇನ್ನೂ ಕೆಲವರು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಿಗೆ ಅಪ್‌ಲೋಡ್ ಮಾಡುತ್ತಾರೆ.

ಇದು ಕೊಡಗಿನ ಪ್ರಸಿದ್ಧ ‘ಕುಂಡೆ ಹಬ್ಬ’.

ಪ್ರತಿ ವರ್ಷ ಬೇಸಿಗೆಯ ಕೊನೆಯ ದಿನಗಳಲ್ಲಿ ಕೊಡಗಿನ ಕಾಡಂಚಿನ ಹಳ್ಳಿಗಳಿಂದ ಆರಂಭವಾಗುವ ಈ ಸಂಭ್ರಮ, ರಸ್ತೆಗಳು, ಪಟ್ಟಣಗಳು ಮತ್ತು ಮಾರುಕಟ್ಟೆಗಳನ್ನು ತನ್ನ ಬಣ್ಣದ ಲೋಕವಾಗಿ ಪರಿವರ್ತಿಸುತ್ತದೆ. ಪೊನ್ನಂಪೇಟೆ ಸುತ್ತಮುತ್ತಲಿನ ಪ್ರದೇಶಗಳು, ಗೋಣಿಕೊಪ್ಪಲು ಭಾಗ, ದೇವರಪುರ, ಹಾಗೆಯೇ ಮೈಸೂರು ಜಿಲ್ಲೆಯ ಹುಣಸೂರು ಮತ್ತು ಪಿರಿಯಾಪಟ್ಟಣದ ಹಲವು ಊರುಗಳಲ್ಲಿ ಈ ಹಬ್ಬದ ಕಳೆ ಕಂಡುಬರುತ್ತದೆ.

ಕುಂಡೆ ಹಬ್ಬವನ್ನು ಮೊದಲ ಬಾರಿಗೆ ನೋಡುವವರಿಗೆ ಇದು ಒಂದು ಸಂಚಾರಿ ಜನಪದ ರಂಗಭೂಮಿಯಂತೆ ಕಾಣುತ್ತದೆ. ಎಲ್ಲೆಲ್ಲೂ ವೇಷಧಾರಿಗಳು. ಒಂದೊಂದು ತಂಡವೂ ಒಂದೊಂದು ಕಲ್ಪನೆಯ ಲೋಕ. ಕೆಲವರು ಹೆಣ್ಣಿನ ವೇಷ ತೊಟ್ಟಿರುತ್ತಾರೆ. ಕೆಲವರು ಪ್ರಾಣಿಗಳ ಮುಖವಾಡ ಧರಿಸಿರುತ್ತಾರೆ. ಇನ್ನೂ ಕೆಲವರು ಗೋಣಿ ಚೀಲ, ಪ್ಲಾಸ್ಟಿಕ್ ತುಂಡು, ಹಳೆಯ ಬಟ್ಟೆ, ಕಾಡಿನ ಎಲೆ ಮತ್ತು ಕೊಂಬೆಗಳನ್ನು ಬಳಸಿ ತಮ್ಮದೇ ಆದ ವಿಶಿಷ್ಟ ರೂಪ ಸೃಷ್ಟಿಸಿಕೊಂಡಿರುತ್ತಾರೆ.

ಈ ಹಬ್ಬದ ಸೌಂದರ್ಯವೇ ಅದರ ಸಹಜತೆಯಲ್ಲಿ ಇದೆ. ಇಲ್ಲಿ ದುಬಾರಿ ಉಡುಪುಗಳಿಲ್ಲ. ವೃತ್ತಿಪರ ಮೇಕಪ್ ಕಲಾವಿದರಿಲ್ಲ. ವೇದಿಕೆಗಳಿಲ್ಲ. ಕೈಗೆ ಸಿಕ್ಕ ವಸ್ತ್ರಗಳೇ ವೇಷವಾಗುತ್ತವೆ. ಕಾಡಿನ ಹಸಿರು, ಮಣ್ಣಿನ ಬಣ್ಣ, ಹಳೆಯ ಬಟ್ಟೆಗಳ ಚಿತ್ತಾರ, ಮುಖದ ಮೇಲೆ ಬಳಿದ ಬಣ್ಣಗಳು ಸೇರಿ ಜೀವಂತ ಕಲಾಕೃತಿಗಳಂತೆ ಕಾಣುತ್ತವೆ.

ಒಂದು ತಂಡ ಹಾದುಹೋಗುತ್ತಿದ್ದರೆ ಅದರ ಹಿಂದೆ ಮಕ್ಕಳು ಓಡುತ್ತಿರುತ್ತಾರೆ. ಯುವಕರು ಮೊಬೈಲ್‌ನಲ್ಲಿ ಚಿತ್ರೀಕರಿಸುತ್ತಿರುತ್ತಾರೆ. ರಸ್ತೆ ಬದಿಯ ಅಂಗಡಿಗಳ ಮುಂದೆ ಜನರು ಗುಂಪುಗೂಡಿರುತ್ತಾರೆ. ಕೆಲವರು ಬೈಗುಳ ಕೇಳಿ ಹೊಟ್ಟೆ ಹಿಡಿದು ನಗುತ್ತಿದ್ದರೆ, ಕೆಲವರು ವೇಷಧಾರಿಗಳೊಂದಿಗೆ ಫೋಟೊ ತೆಗೆಸಿಕೊಳ್ಳುವ ಉತ್ಸಾಹದಲ್ಲಿರುತ್ತಾರೆ.

ಕುಂಡೆ ಹಬ್ಬದ ಪ್ರಮುಖ ಆಕರ್ಷಣೆ ಎಂದರೆ ಅದರ ಬೈಗುಳ ಸಂಸ್ಕೃತಿ. ಸಾಮಾನ್ಯ ದಿನಗಳಲ್ಲಿ ಕೇಳಿದರೆ ಜಗಳಕ್ಕೆ ಕಾರಣವಾಗಬಹುದಾದ ಪದಗಳೇ ಇಲ್ಲಿ ಹಬ್ಬದ ಭಾಷೆಯಾಗುತ್ತವೆ. ವೇಷಧಾರಿಗಳು ಎದುರಿಗೆ ಸಿಕ್ಕವರನ್ನು ತಡೆದು ಬೈಯುತ್ತಾರೆ. ವಾಹನ ನಿಲ್ಲಿಸಿ ಬೈಯುತ್ತಾರೆ. ಹಣ ಕೇಳುವಾಗಲೂ ಬೈಯುತ್ತಾರೆ. ಹಣ ಕೊಟ್ಟಾಗಲೂ ಬೈಯುತ್ತಾರೆ. ಆದರೆ ಈ ಬೈಗುಳಗಳನ್ನು ಯಾರೂ ವೈಯಕ್ತಿಕವಾಗಿ ತೆಗೆದುಕೊಳ್ಳುವುದಿಲ್ಲ. ಅದು ಹಬ್ಬದ ಭಾಗ ಎಂಬ ಅರಿವು ಎಲ್ಲರಲ್ಲೂ ಇರುತ್ತದೆ.

ಬೈಗುಳದ ಜೊತೆಗೆ ಕುಣಿತವೂ ಸಾಗುತ್ತದೆ. ಒಡೆದ ಪ್ಲಾಸ್ಟಿಕ್ ಡ್ರಂಗಳು, ಹಳೆಯ ತಗಡುಗಳು, ಮುರಿದ ಪೈಪ್‌ಗಳು ಮತ್ತು ಸಿಕ್ಕಸಿಕ್ಕ ವಸ್ತುಗಳಿಂದ ಹೊರಹೊಮ್ಮುವ ಲಯಕ್ಕೆ ತಕ್ಕಂತೆ ಯುವಕರು ಹೆಜ್ಜೆ ಹಾಕುತ್ತಾರೆ. ಈ ಸಂಗೀತಕ್ಕೆ ಯಾವುದೇ ನಿಯಮಗಳಿಲ್ಲ. 12ನೇ ಪುಟಕ್ಕೆ...



ಓಯ್...ಹೇಗಿದೆ ನಮ್ ವೇಷ...

> ನಮ್ಮ ಜನಪದ ಪರಂಪರೆಯಲ್ಲಿ ಬಯ್ಯುವುದೂ ಒಂದು ಸಾಂಸ್ಕೃತಿಕ ಅಭಿವ್ಯಕ್ತಿ. ಶಿಷ್ಟ ಸಾಹಿತ್ಯದಲ್ಲಿ ‘ನಿಂದಾಸ್ತುತಿ’ ಇದೆ. ಕೆಲವೆಡೆ ಮಾರಮ್ಮನನ್ನು ಬಯ್ಯುವುದಕ್ಕೇ ಪ್ರತ್ಯೇಕ ಜನರಿದ್ದಾರೆ. ಅದೇ ಬಗೆಯ ಆಚರಣೆಯೇ ಕುಂಡೆ ಹಬ್ಬ. ಇದು ಗಿರಿಜನರ ವಿಶಿಷ್ಟ ಸಾಂಸ್ಕೃತಿಕ ಸಂಭ್ರಮ.
> **ಕೃಷ್ಣಮೂರ್ತಿ ಹನೂರು,** ಜನಪದ ಸಂಶೋಧಕ

ಸ್ಮಶಾನದೊಳ್ ಸಸ್ಯಕಾಶಿ ಸೃಷ್ಟಿಸಿದ ಶಿವಣ್ಣ



• ಚಿತ್ರ–ಬರಹ: ಗಣಂಗೂರು ನಂಜೇಗೌಡ


ಶಿವಣ್ಣ

ಸಮಾಧಿಗಳ ನಡುವೆ ತಂಗಾಳಿ ಬೀಸುತ್ತಿದೆ. ಆಲದ ಮರದ ನೆರಳಿನಲ್ಲಿ ಸಿಮೆಂಟ್ ಬೆಂಚುಗಳು ಮೌನವಾಗಿ ಕಾದಿವೆ. ರೆಂಬೆ ಕೊಂಬೆಗಳ ನಡುವೆ ಕೂತ ಕೋಗಿಲೆ ಇಂಪಾಗಿ ಹಾಡುತ್ತಿದೆ. ಸ್ವಲ್ಪ ದೂರದಲ್ಲಿ ಪತಂಗಗಳು ಹೂವಿನ ಮಕರಂದ ಹೀರುತ್ತ ಪಟಪಟಿಸುತ್ತಿವೆ. ಸೀಬೆ, ದಾಳಿಂಬೆ, ಲಕ್ಷ್ಮಣ ಫಲದ ಗಿಡಗಳು ಹಸಿರಾಗಿ ತೂಗುತ್ತಿವೆ. ಮರದ ನೆರಳಲ್ಲಿ ಕಾಡು ಮೊಲವೊಂದು ಚಿಗುರು ತಿಂದು ಓಡಿಹೋಗುತ್ತದೆ. ಪಕ್ಷಿಗಳ ಕಲರವದ ನಡುವೆ ಕೆಲ ಹೊತ್ತು ಕುಳಿತರೆ ಇದು ಸ್ಮಶಾನ ಎಂಬುದನ್ನೇ ಮರೆತು ಬಿಡುವಂತಾಗುತ್ತದೆ.

ಆದರೆ ಇದು ಉದ್ಯಾನವಲ್ಲ. ಕೆಆರ್‌ಎಸ್ ಅಣೆಕಟ್ಟೆಗೆ ನಾಲ್ಕು ಮೈಲಿ ದೂರದ ಬೆಳಗೊಳ ಗ್ರಾಮದಲ್ಲಿರುವ ದಲಿತ ಸಮುದಾಯದ ಸ್ಮಶಾನ.

ಒಂದು ಕಾಲದಲ್ಲಿ ಈ ಜಾಗದ ಚಿತ್ರಣವೇ ಬೇರೆ ಇತ್ತು. ಗಿಡಗಂಟಿಗಳು ಬೆಳೆದಿದ್ದವು. ಕಸದ ರಾಶಿ ತುಂಬಿಕೊಂಡಿತ್ತು. ಶವ ಸಂಸ್ಕಾರಕ್ಕೆ ಬರುವವರು ಕೂಡ ಆತಂಕದಿಂದ ಒಳಗೆ ಹೋಗಿ ಬೇಗನೆ ಹೊರಬರುತ್ತಿದ್ದರು. ನೆರಳಿಲ್ಲ, ಕುಳಿತುಕೊಳ್ಳಲು ಜಾಗವಿಲ್ಲ, ನೀರಿನ ವ್ಯವಸ್ಥೆಯೂ ಇಲ್ಲ. 'ಸುಡುಗಾಡು' ಎಂಬ ಹೆಸರಿಗೇ ತಕ್ಕಂತೆ ನೀರವ ಮೌನ, ನಿರ್ಲಕ್ಷ್ಯ ಮತ್ತು ಭಯದ ವಾತಾವರಣ ಅಲ್ಲಿತ್ತು.

ಇಂದು ಅದೇ ಜಾಗ ಹಸಿರು ತಾಣವಾಗಿ ರೂಪುಗೊಂಡಿದೆ. ಆ ಬದಲಾವಣೆಯ ಹಿಂದೆ ಮೌನವಾಗಿ ದುಡಿದಿರುವ ವ್ಯಕ್ತಿ ಶಿವಣ್ಣ.

ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುವ ಶಿವಣ್ಣ ಅವರಿಗೆ ಸ್ಮಶಾನವೆಂದರೆ ಭಯದ ಜಾಗವಲ್ಲ; ಅದು ಬದುಕಿನ ಇನ್ನೊಂದು ಮುಖ. ಬಿಡುವು ಸಿಕ್ಕರೆ ಮನೆಗಿಂತ ಹೆಚ್ಚು ಸಮಯವನ್ನು ಅವರು ಇಲ್ಲಿ ಕಳೆಯುತ್ತಾರೆ. ಕೈಯಲ್ಲಿ ಗುದ್ದಲಿ, ಪಿಕಾಸಿ ಅಥವಾ ಕುಡುಗೋಲು ಹಿಡಿದು ಸ್ಮಶಾನದ ಮೂಲೆ ಮೂಲೆ ಸುತ್ತುತ್ತಾರೆ. ಸತ್ತು ಮಲಗಿದವರ ಸಮಾಧಿಗಳ ಮೇಲೆ ಹೂ ಮತ್ತು ಹಣ್ಣು ಕೊಡುವ ಗಿಡಗಳನ್ನು ನೆಡುತ್ತಾರೆ.


ಬಾನಾಡಿಗಳ ದಾಹ ನೀಗಿಸುವ ತೊಟ್ಟಿ

ಗೊಬ್ಬರ ಹಾಕುತ್ತಾರೆ. ನೀರು ಉಣಿಸುತ್ತಾರೆ. ಕಳೆ ತೆಗೆಯುತ್ತಾರೆ. ಒಣಗಿದ ಗಿಡಗಳನ್ನು ಬದಲಿಗೆ ಮತ್ತೆ ಹೊಸದಾಗಿ ನೆಡುತ್ತಾರೆ.

'ಇಲ್ಲಿನ ಗಿಡಗಳನ್ನೆಲ್ಲ ನನ್ನ ಮಕ್ಕಳಂತೆ ನೋಡಿಕೊಳ್ಳುತ್ತೇನೆ' ಎಂದು ಅವರು ನಗುತ್ತ ಹೇಳುತ್ತಾರೆ. ಅವರ ಶ್ರಮದಿಂದ ಇಂದು ಸ್ಮಶಾನವೇ ಒಂದು ಸಣ್ಣ ಸಸ್ಯಕಾಶಿಯಾಗಿ ರೂಪುಗೊಂಡಿದೆ.

ಒಂದೂವರೆ ಎಕರೆಯಷ್ಟು ವಿಸ್ತಾರದಲ್ಲಿರುವ ಈ ಜಾಗದಲ್ಲಿ ಮಾವು, ಸೀಬೆ, ನೇರಳೆ, ಸಪೋಟ, ಹಲಸು, ಬಾಳೆ, ದಾಳಿಂಬೆ, ಮೂಸಂಬಿ, ಕಿತ್ತಳೆ, ಲಕ್ಷ್ಮಣ ಫಲದ ಗಿಡಗಳು ಹಸಿರಾಗಿ ಬೆಳೆದಿವೆ. ಆಲ, ಬೇವು, ಹೊಂಗೆ, ಕರಿಬೇವು, ಬಿದಿರು, ತೆಂಗು, ಅಡಿಕೆ ಮರಗಳ ನಡುವೆ ಗುಲಾಬಿ, ಮಲ್ಲಿಗೆ, ದಾಸವಾಳ, ಕಣಗಿಲೆ ಹೂಗಳು ಅರಳಿ ನಿಂತಿವೆ. ಒಂದೆರಡು ಸೇಬು ಮತ್ತು ಮರಸೇಬಿನ ಗಿಡಗಳನ್ನೂ ಅವರು ಪ್ರಾಯೋಗಿಕವಾಗಿ ನೆಟ್ಟಿದ್ದಾರೆ. ಬೆಳಿಗ್ಗೆ ಮತ್ತು ಸಂಜೆಯ ಹೊತ್ತಿಗೆ ಇಲ್ಲಿ ಹಕ್ಕಿಗಳ ಕಲರವ ಹೆಚ್ಚಾಗಿರುತ್ತದೆ. ದುಂಬಿಗಳ ಝೇಂಕಾರ, ಎಲೆಗಳ ಸದ್ದು, ಗಾಳಿಯ ಗುನುಗು ಇವೆಲ್ಲ ಸೇರಿ ಸ್ಮಶಾನದ ವಾತಾವರಣವನ್ನೇ ಬದಲಿಸಿಬಿಟ್ಟಿವೆ.

ಸ್ಮಶಾನಕ್ಕೆ ಬರುವವರಿಗೆ ನೆರಳು ಸಿಗಲಿ ಎಂದು ಆಲದಮರಗಳನ್ನು ಬೆಳೆಸಿದ್ದಾರೆ. ಶವ ಸಂಸ್ಕಾರಕ್ಕೆ ಬರುವವರು ಕುಳಿತುಕೊಳ್ಳಲೆಂದು ದಾನಿಗಳ ನೆರವಿನಿಂದ ಸಿಮೆಂಟ್ ಬೆಂಚುಗಳನ್ನು ಹಾಕಿಸಿದ್ದಾರೆ. ಪಕ್ಷಿಗಳಿಗೆ ನೀರು ಸಿಗಲೆಂದು ಶವದ ಜತೆಗೆ ತರುವ ಕೂಳಿನ ಮಡಕೆಗಳಲ್ಲೇ ನೀರು ತುಂಬಿಡುತ್ತಾರೆ. ಎಲ್ಲೋ ಬಿದ್ದಿದ್ದ ಕಲ್ಲಿನ ತೊಟ್ಟಿಯನ್ನು ತಂದು ಇಟ್ಟು ವಾರಕ್ಕೊಮ್ಮೆ ನೀರು ತುಂಬಿಸುತ್ತಾರೆ. ಬೇಸಿಗೆಯ ದಿನಗಳಲ್ಲಿ ಬಾನಾಡಿಗಳ ದಾಹ ನೀಗಲೆಂದು ವಿಶೇಷ ಕಾಳಜಿ ವಹಿಸುತ್ತಾರೆ.

ಇಲ್ಲಿ ಈಗ ಗಿಳಿ, ಬುಲ್‌ಬುಲ್, ಕೋಗಿಲೆ, ಮರಕುಟಿಕ, ಗೊರವಂಕ, ಸನ್‌ಬರ್ಡ್, ಕಾಡು ಪಾರಿವಾಳಗಳ ಓಡಾಟ ಸಾಮಾನ್ಯ. ಕೆಲವೊಮ್ಮೆ ನವಿಲುಗಳೂ ಬಂದು ಹೋಗುತ್ತವೆ. ಕಾಡು ಮೊಲಗಳು ಚಿಗುರು ತಿಂದು ಓಡಾಡುತ್ತವೆ. ಸ್ಮಶಾನದೊಳಗೆ ಜೀವ ಜಗತ್ತೇ ನೆಲೆಸಿದಂತಾಗಿದೆ.

ಶಿವಣ್ಣ ದೇವಸ್ಥಾನಗಳಿಗೆ ಹೋಗುವವರಲ್ಲ. 'ಕಳೆದ ಐದಾರು ವರ್ಷಗಳಿಂದ ಸ್ಮಶಾನವೇ ನನ್ನ ದೇವಾಲಯ' ಎಂದು ಅವರು ಸರಳವಾಗಿ ಹೇಳುತ್ತಾರೆ. ಆ ಮಾತಿಗೆ ತಕ್ಕಂತೆ ಸ್ಮಶಾನವನ್ನು ಶಿವಾಲಯದಷ್ಟು ಶುಚಿಯಾಗಿ ಇಟ್ಟಿದ್ದಾರೆ. ಅವರಿಗೆ ಇಲ್ಲಿ ಭಯವಿಲ್ಲ. ಮರಗಳ ಕೆಳಗೆ ಮಲಗುತ್ತಾರೆ. ಬಿಡುವಿನ ಬಹುಪಾಲು ಸಮಯವನ್ನು ಇಲ್ಲೇ ಕಳೆಯುವುದರಿಂದ ಊರಿನವರು ಅವರನ್ನು ತಮಾಷೆಯಿಂದ 'ವೀರಬಾಹು' ಎಂದು ಕರೆಯುತ್ತಾರೆ.

'ಒಂದು ಕಾಲದಲ್ಲಿ ಈ ಸ್ಮಶಾನದ ಒಳಗೆ ಕಾಲಿಡಲೂ ಆಗುತ್ತಿರಲಿಲ್ಲ. ಶವ ಸಂಸ್ಕಾರಕ್ಕೆ ಬರುವವರು ನೆರಳಿಲ್ಲದೆ, ಕುಳಿತುಕೊಳ್ಳಲು ಜಾಗವಿಲ್ಲದೆ ತೊಂದರೆ ಅನುಭವಿಸುತ್ತಿದ್ದರು. ಸ್ಮಶಾನ ಶಿವನ ವಾಸಸ್ಥಾನ ಎಂದು ಪುರಾಣದಲ್ಲಿ ಹೇಳಿದೆ. ಹಾಗಾಗಿ ಶಿವಾಲಯದಂತೆ ಸ್ವಚ್ಛವಾಗಿ, ಸುಂದರವಾಗಿ ಇರಬೇಕು ಎಂದು ಅನಿಸಿತು' ಎಂದು ಶಿವಣ್ಣ ಹೇಳುತ್ತಾರೆ.

ತಾವು ಬೆಳೆಸಿದ ಗಿಡಗಳಿಗೆ ನೀರುಣಿಸಲು ಬಡಾವಣೆಯಿಂದ ನೀರಿನ ಸಂಪರ್ಕ ಪಡೆದುಕೊಂಡಿದ್ದಾರೆ. ಸ್ಮಶಾನದೊಳಗೆ ಕೊಳವೆಬಾವಿಯೂ ಇದೆ. ಗ್ರಾಮಸ್ಥರ ಸಹಕಾರದಿಂದ ಸ್ಮಶಾನದ ಸುತ್ತ ತಂತಿ ಬೇಲಿ ನಿರ್ಮಿಸಲಾಗಿದೆ. 'ಸಮಾಧಿ ಕಟ್ಟುತ್ತ ಹೋದರೆ ಮುಂದೊಂದು ದಿನ ಜಾಗದ ಕೊರತೆ ಉಂಟಾಗಬಹುದು' ಎಂಬ ಮುಂದಾಲೋಚನೆಯಿಂದ ಇಲ್ಲಿ ದೊಡ್ಡ ಸಮಾಧಿಗಳನ್ನು ನಿರ್ಮಿಸುವುದಕ್ಕೆ ಅವಕಾಶವಿಲ್ಲ. ಎರಡು ಅಡಿ ಎತ್ತರದ ಕಲ್ಲು ನೆಡುವುದಕ್ಕೆ ಮಾತ್ರ ಅವಕಾಶವಿದೆ.

ಮುಂದಿನ ದಿನಗಳಲ್ಲಿ ಸ್ಮಶಾನದ ಸುತ್ತ ವಾಕಿಂಗ್ ಪಾತ್ ನಿರ್ಮಿಸಿ, ಇನ್ನಷ್ಟು ಮರಗಳನ್ನು ಬೆಳೆಸಿ, ಹಸಿರು ವಿಹಾರ ತಾಣವನ್ನಾಗಿ ರೂಪಿಸಬೇಕೆಂಬ ಕನಸನ್ನೂ ಶಿವಣ್ಣ ಹೊಂದಿದ್ದಾರೆ. ಬದುಕು ಮುಗಿಯುವ ಜಾಗದಲ್ಲೂ ಜೀವ ಅರಳಬಹುದು ಎಂಬುದನ್ನು ಸಾಬೀತು ಮಾಡಿದ್ದಾರೆ. ಜನರು ಭಯಪಡುವ ಸ್ಮಶಾನವನ್ನು ಅವರು ಹಸಿರು ಆಲಯವನ್ನಾಗಿ ಮಾಡಿದ್ದಾರೆ ❖

ನಾಲ್ಕು ಮಕ್ಕಳಿಂದ ರಾಷ್ಟ್ರಪ್ರಶಸ್ತಿಯವರೆಗೆ

ಬೆಂಗಳೂರಿನ ಗದ್ದಲದ ನಡುವೆ ಒಂದು ಹಳ್ಳಿ ದೇಶದ ಗಮನ ಸೆಳೆಯುತ್ತಿದೆ. ಇದು ಕೇವಲ ಗ್ರಾಮವಲ್ಲ, ಬದಲಾವಣೆಯ ಮನ್ವಂತರ ಮಾದರಿ. ಖಾಸಗಿ ಶಾಲೆಗಳನ್ನೂ ಮೀರಿಸುವಂತೆ ಸರ್ಕಾರಿ ಶಾಲೆ ಮತ್ತು ಅಂಗನವಾಡಿಗಳನ್ನು ಕಟ್ಟಿ ಬೆಳೆಸಿದ ಹಾಲನಾಯಕನಹಳ್ಳಿಯ ಯಶೋಗಾಥೆ ಇದು. ಮಕ್ಕಳ ಸ್ನೇಹಿ ವ್ಯವಸ್ಥೆಗಳನ್ನು ರೂಪಿಸಿ ಕರ್ನಾಟಕದ ಅತ್ಯುತ್ತಮ ಗ್ರಾಮ ಪಂಚಾಯಿತಿಯಾಗಿ ಹಾಲನಾಯಕನಹಳ್ಳಿ ಹೊರಹೊಮ್ಮಿದೆ.


ಅಂಗನವಾಡಿ ಮಕ್ಕಳು

• ಉಮೇಶ ಭಟ್ಟ ಪಿ.ಎಚ್

ಒಮ್ಮೆ ಈ ಊರಿನ ದಾರಿಗಳಲ್ಲಿ ಎತ್ತಿನಗಾಡಿಗಳು ಓಡಾಡುತ್ತಿದ್ದವು. ಬ್ರಿಟಿಷರ ಕಾಲದಲ್ಲಿ ವೈಟ್‌ಫೀಲ್ಡ್‌ನ ಕುದುರೆಗಳಿಗೆ ಇಲ್ಲಿಂದ ಹುಲ್ಲು ಸಾಗಿಸಲಾಗುತ್ತಿತ್ತು. ಹಾಲಿನ ಉತ್ಪಾದನೆಯಿಂದ ಹೆಸರು ಮಾಡಿದ್ದ ಈ ಹಳ್ಳಿ ಈಗ ಮತ್ತೊಂದು ಕಾರಣಕ್ಕೆ ದೇಶದ ಗಮನ ಸೆಳೆದಿದೆ.

ಬೆಂಗಳೂರು ಹೊರವಲಯದ ಹಾಲನಾಯಕನಹಳ್ಳಿಯಲ್ಲಿ ಬೆಳಿಗ್ಗೆ ಅಂಗನವಾಡಿ ಆರಂಭವಾಗುವ ಹೊತ್ತಿಗೆ ಒಂದು ವಿಶಿಷ್ಟ ದೃಶ್ಯ ಕಾಣುತ್ತದೆ. ಕೆಂಪು ಸಮವಸ್ತ್ರ ಧರಿಸಿದ ಪುಟ್ಟ ಮಕ್ಕಳು ಓಡುತ್ತಾ ಬರುತ್ತಾರೆ. ಕೆಲವರು ಬ್ಯಾಗ್ ಬೆನ್ನಿಗೆ ಹಾಕಿಕೊಂಡು ಹಾಡುತ್ತಾ ಬರುತ್ತಾರೆ. ಇನ್ನೂ ಕೆಲ ಪುಟಾಣಿಗಳು ತಮ್ಮ 'ಮಿಸ್'ಗಾಗಿ ಗೇಟ್ ಬಳಿ ಕಾದು ನೋಡುತ್ತಿರುತ್ತಾರೆ.

ಅಂಗನವಾಡಿಗೆ ಮಕ್ಕಳು ಬರದೇ ಇರುವ ಕಾಲದಲ್ಲಿ, ಇಲ್ಲಿ ಮಕ್ಕಳು ರಜೆ ಕೇಳದೆ ಬರುವ ಮಟ್ಟಿಗೆ ಏನು ಬದಲಾಗಿದೆ?

ಬಹುಶಃ ಇದೇ ಪ್ರಶ್ನೆಗೆ ಉತ್ತರವಾಗಿ ದೀನ್ ದಯಾಳ್ ಅಭಿವೃದ್ಧಿ ರಾಷ್ಟ್ರೀಯ ಪ್ರಶಸ್ತಿ–2025ರ ಮಕ್ಕಳ ಸ್ನೇಹಿ ವಿಭಾಗದಲ್ಲಿ ಹಾಲನಾಯಕನಹಳ್ಳಿ ಗ್ರಾಮಪಂಚಾಯಿತಿ ದೇಶದಲ್ಲೇ ದ್ವಿತೀಯ ಸ್ಥಾನ ಪಡೆದುಕೊಂಡಿದೆ. ₹75 ಲಕ್ಷ ಪ್ರೋತ್ಸಾಹಧನವೂ ಬಂದಿದೆ. ಆದರೆ ಈ ಪ್ರಶಸ್ತಿಯ ನಿಜವಾದ ಬೆಲೆ ಹಣದಲ್ಲಿಲ್ಲ; ಸರ್ಕಾರಿ ಶಿಕ್ಷಣದ ಮೇಲೆ ಮತ್ತೆ ಹುಟ್ಟಿದ ನಂಬಿಕೆಯಲ್ಲಿ ಇದೆ.

'ಕಾನ್ವೆಂಟ್‌ಗೆ ಹಾಕೋದು ತಪ್ಪೈತಿ ನೋಡ್ರಿ…'

ಅಂಗನವಾಡಿ ಹೊರಗೆ ಮಗನ ಕೈ ಹಿಡಿದು ನಿಂತಿದ್ದ ಬೀದರ್ ಜಿಲ್ಲೆಯ ರೇಖಾ ಹರಳೇಶ್ ಮುಖದಲ್ಲಿ ನಗು ತುಂಬಿತ್ತು.

'ನಮ್ ಮಕ್ಕಳು ಇಲ್ಲಿ ಮಸ್ತ್ ಕಲಿಯಾಕತ್ತಾರ್ರಿ… ಕಾನ್ವೆಂಟ್‌ಗೆ ಸಾವಿರಾರು ರೂಪಾಯಿ ಕೊಡೋದು ತಪ್ಪೈತಿ ನೋಡ್ರಿ…' ಎಂದು ಅವರು ಖುಷಿಯಿಂದಲೇ ಹೇಳುತ್ತಾರೆ.

ಅವರ ಐದು ವರ್ಷದ ಮಗ ಶರತ್ ಈಗ ಕನ್ನಡ, ಇಂಗ್ಲಿಷ್ ಪದಗಳನ್ನು ಬೆರೆಸಿ ಮಾತನಾಡುತ್ತಾನೆ. ಮನೆಗೆ ಹೋದ ಕೂಡಲೇ ರೈಮ್ಸ್ ಹೇಳುತ್ತಾನೆ. ಅಂಗನವಾಡಿಗೆ ಹೋಗುವುದನ್ನು 'ಆಟಕ್ಕೆ ಹೋಗೋದು' ಅಂತಾನೆ ಭಾವಿಸುತ್ತಾನೆ.

ಇದೇ ಸಂತಸ ವಿಜಯಪುರ ಜಿಲ್ಲೆಯ ರೇಣುಕಾ ಶಂಕರಗೌಡ ಅವರ ಮಾತಿನಲ್ಲೂ ಇತ್ತು. 'ನನ್ನ ಮಗ ಮೊದಲು ಮಾತಾಡೋದಕ್ಕೂ ನಾಚಿಕೊಳ್ತಿದ್ದ. ಈಗ ಮನೆಲಿ ಟೀಚರ್ ಆಗಿಬಿಟ್ಟಾನೆ' ಎನ್ನುತ್ತಾರೆ ಅವರು.

ಈ ಅಂಗನವಾಡಿಗಳಲ್ಲಿ ಕಲಿಯುತ್ತಿರುವ ಮಕ್ಕಳು ಸ್ಥಳೀಯರಷ್ಟೇ ಅಲ್ಲ. ಉತ್ತರ ಕರ್ನಾಟಕ, ಉತ್ತರ ಭಾರತ, ನೇಪಾಳ ಭಾಗಗಳಿಂದ ಉದ್ಯೋಗಕ್ಕಾಗಿ ಬೆಂಗಳೂರಿಗೆ ಬಂದ ಕುಟುಂಬಗಳ ಮಕ್ಕಳೂ ಇಲ್ಲೇ ಕಲಿಯುತ್ತಿದ್ದಾರೆ. ಹೀಗಾಗಿ ಇಲ್ಲಿ ಹಲವು ಭಾಷೆಗಳು ಕೇಳಿಸುತ್ತವೆ. ಒಂದೇ ತರಗತಿಯಲ್ಲಿ ಕನ್ನಡ, ಹಿಂದಿ, ತುಸು ನೇಪಾಳಿ ಉಚ್ಚಾರವೂ ಬೆರೆತು ಹೋಗುತ್ತದೆ.

ಅದಕ್ಕಾಗಿಯೇ ಕೆಲವರು ಇದನ್ನು 'ಮಿನಿ ಭಾರತ ಅಂಗನವಾಡಿ' ಎಂದು ಕರೆಯುತ್ತಾರೆ.

2011ರಲ್ಲಿ ಪಂಚಾಯಿತಿ ಕಟ್ಟಡದ ಒಂದು ಮೂಲೆಯಲ್ಲಿ ಆರಂಭವಾದ ಅಂಗನವಾಡಿಗೆ ಆಗ ಬಂದಿದ್ದ ಮಕ್ಕಳು ಕೇವಲ ನಾಲ್ಕು. ಆಗ ಅಂಗನವಾಡಿ ಎಂದರೆ ಗೋಡೆಯ ಮೇಲೆ ಮಸುಕಾದ ಚಿತ್ರಗಳು, ಕೆಲ ಪ್ಲಾಸ್ಟಿಕ್ ಆಟಿಕೆಗಳು, ಮಧ್ಯಾಹ್ನದ ಊಟ–ಅಷ್ಟೇ ಎನ್ನುವ ಕಲ್ಪನೆ ಜನರಲ್ಲಿ ಗಟ್ಟಿಯಾಗಿತ್ತು. ಆದರೆ ಕೋವಿಡ್ ನಂತರ ಹಾಲನಾಯಕನಹಳ್ಳಿಯಲ್ಲಿ ಬೇರೆ ಯೋಚನೆ ಹುಟ್ಟಿತು. 'ಸರ್ಕಾರಿ ವ್ಯವಸ್ಥೆ ಅಂದ್ರೆ ಬಡವರ ಆಯ್ಕೆ ಅನ್ನೋ ಭಾವನೆ ಬದಲಾಗಬೇಕು. ಮಕ್ಕಳಿಗೆ ಖುಷಿ ಕೊಡುವ ಜಾಗ ಆಗಬೇಕು' ಎಂಬ ಚರ್ಚೆ ಪಂಚಾಯಿತಿಯಲ್ಲಿ ಆರಂಭವಾಯಿತು.


ಗ್ರಾಮ ಪಂಚಾಯಿತಿ ಗ್ರಂಥಾಲಯ

ಪಂಚಾಯಿತಿ ಅಧ್ಯಕ್ಷರಾಗಿದ್ದ ಸವಿತಾ ಬಾಬು ರೆಡ್ಡಿ, ಸದಸ್ಯರು, ಅಧಿಕಾರಿಗಳು ಸೇರಿ ಮಕ್ಕಳ ಸ್ನೇಹಿ ಮಾದರಿಯನ್ನು ರೂಪಿಸಿದರು. ಗೋಡೆಗಳಿಗೆ ಬಣ್ಣ ಬಳಿಯುವುದರಿಂದ ಹಿಡಿದು ಸ್ಮಾರ್ಟ್‌ಕ್ಲಾಸ್‌ವರೆಗೆ, ಆಹಾರದಿಂದ ಹಿಡಿದು ಪೋಷಕರ ಸಭೆಯವರೆಗೆ ಎಲ್ಲವನ್ನೂ ಹೊಸದಾಗಿ ಯೋಚಿಸಲಾಯಿತು. ಇಂದು ಹಾಲನಾಯಕನಹಳ್ಳಿ ಮಾತ್ರವಲ್ಲದೆ ಪಂಚಾಯಿತಿ ವ್ಯಾಪ್ತಿಯ ಐದು ಅಂಗನವಾಡಿಗಳಲ್ಲಿ 332 ಮಕ್ಕಳು ಕಲಿಯುತ್ತಿದ್ದಾರೆ.

ಹಾಲನಾಯಕನಹಳ್ಳಿ ಅಂಗನವಾಡಿ ಒಳಗೆ ಕಾಲಿಟ್ಟರೆ ಅದು ಸಾಮಾನ್ಯ ಸರ್ಕಾರಿ ಕೇಂದ್ರದಂತೆ ಕಾಣುವುದಿಲ್ಲ. ಗೋಡೆಗಳ ಮೇಲೆ ಬಣ್ಣಬಣ್ಣದ ಚಿತ್ರಗಳು. ಕಲಿಕೆಯ ಚಾರ್ಟ್‌ಗಳು. ಪುಟ್ಟ ಕುರ್ಚಿಗಳು. ಆಟಿಕೆಗಳು. ಮಕ್ಕಳ ಎತ್ತರಕ್ಕೆ ಸರಿಹೊಂದುವ ವಾಶ್ ಬೇಸಿನ್. ಟಿವಿ ಪರದೆಯ ಮೇಲೆ ಓಡುತ್ತಿರುವ ಸ್ಮಾರ್ಟ್‌ಕ್ಲಾಸ್. ಆದರೆ ಮಕ್ಕಳನ್ನು ಹೆಚ್ಚು ಸೆಳೆಯುವುದು ಇದಲ್ಲ.

'ಇಲ್ಲಿ ಮಕ್ಕಳ ಜೊತೆ ಮಾತಾಡ್ತೀವಿ. ಆಟ ಆಡ್ತೀವಿ. ಪ್ರತಿಯೊಬ್ಬ ಮಗುವಿನ ಪ್ರಗತಿ ಗಮನಿಸ್ತೀವಿ' ಎಂದು 15 ವರ್ಷಗಳಿಂದ ಕೆಲಸ ಮಾಡುತ್ತಿರುವ ಶಿಕ್ಷಕಿ ಕಾವೇರಿ ಹೇಳುತ್ತಾರೆ. ಅವರ ಮಾತಿನಲ್ಲಿ ಕರ್ತವ್ಯಕ್ಕಿಂತ ತಾಯಿತನ ಹೆಚ್ಚು ಕೇಳಿಸುತ್ತದೆ. 'ಈಗ ಮಕ್ಕಳು ಅಂಗನವಾಡಿಗೆ ಬರೋದಕ್ಕೆ ಖುಷಿಪಡ್ತಾರೆ. ರಜೆ ದಿನವೂ ಬರ್ತೀವಿ ಅಂತ ಕೇಳ್ತಾರೆ' ಎಂದು ನಕ್ಕರು.

ಪ್ರತಿ ಮಗುವಿಗೂ ಪಂಚಾಯಿತಿಯಿಂದ ಎರಡು ಜೋಡಿ ಕೆಂಪು ಸಮವಸ್ತ್ರ ನೀಡಲಾಗುತ್ತದೆ. ವಾರದಲ್ಲಿ ಎರಡು ದಿನ ಮೊಟ್ಟೆ. ಹೆಚ್ಚು ತರಕಾರಿ ಇರುವ ಬಿಸಿಯೂಟ. ಕೆಲವೊಮ್ಮೆ ಪೋಷಕರೇ ತರಕಾರಿ ತಂದು ಕೊಡುತ್ತಾರೆ.

ಇದು ಸರ್ಕಾರದ ಯೋಜನೆ ಮಾತ್ರವಲ್ಲ; ಸಮುದಾಯವೇ ಮಕ್ಕಳ ಬೆಳವಣಿಗೆಯಲ್ಲಿ ಪಾಲ್ಗೊಂಡಿರುವುದರ ಸಂಕೇತ.

ಹಾಲನಾಯಕನಹಳ್ಳಿ ಪಂಚಾಯಿತಿ ವ್ಯಾಪ್ತಿಯ ಶಾಲೆಗಳಲ್ಲಿ ಈಗ 520 ಮಕ್ಕಳು ಕಲಿಯುತ್ತಿದ್ದಾರೆ. ಎ.ಕೃಷ್ಣಪ್ಪನಗರ ಸರ್ಕಾರಿ ಶಾಲೆಯಲ್ಲೇ 318 ಮಕ್ಕಳು. ಶಾಲೆಯೊಳಗೆ ಕಾಲಿಟ್ಟರೆ ಅದು ಅನೇಕ ಖಾಸಗಿ ಶಾಲೆಗಳಿಗಿಂತ ಭಿನ್ನವಾಗಿ ಕಾಣುತ್ತದೆ. ಡಿಜಿಟಲ್ ತರಗತಿ. ರಂಗಮಂದಿರ. ವಿಜ್ಞಾನ ಚಟುವಟಿಕೆ. ಆಟದ ಮೈದಾನ. ಉಪಹಾರ ಕೊಠಡಿ. ವಿಶಾಲ ಅಡುಗೆ ಮನೆ. ಆದರೆ ಶಾಲೆಯ ನಿಜವಾದ ಬದಲಾವಣೆ ಕಟ್ಟಡದಲ್ಲಿ ಅಲ್ಲ; ವಾತಾವರಣದಲ್ಲಿ.

ಇಲ್ಲಿ ಮಕ್ಕಳನ್ನು ಹೆದರಿಸಿ ಸುಮ್ಮನಿರಿಸುವುದಿಲ್ಲ. ಪ್ರಶ್ನೆ ಕೇಳಲು ಪ್ರೋತ್ಸಾಹಿಸುತ್ತಾರೆ. ಮಕ್ಕಳ ಅಧಿವೇಶನ ಮಾಡುತ್ತಾರೆ. ಪರಿಸರದ ಬಗ್ಗೆ ಮಾತನಾಡಿಸುತ್ತಾರೆ. ಶಾಲೆ ಬಿಟ್ಟ ಮಕ್ಕಳನ್ನು ಮನೆಗೆ ಹೋಗಿ ಕರೆತರುತ್ತಾರೆ.

ಒಮ್ಮೆ 'ಸರ್ಕಾರಿ ಶಾಲೆ ಬೇಡ' ಎಂದಿದ್ದ ಕೆಲ ಪೋಷಕರು ಈಗ ಮಕ್ಕಳಿಗೆ ಇಲ್ಲಿ ಸೀಟ್ ಸಿಗುತ್ತದೆಯೇ ಎಂದು ವಿಚಾರಿಸುತ್ತಿದ್ದಾರೆ.

ಗ್ರಾಮ ಪಂಚಾಯಿತಿ ಕಟ್ಟಡದೊಳಗಿನ ಗ್ರಂಥಾಲಯವೂ ಈ ಬದಲಾವಣೆಯ ಭಾಗ. ಕೆಳ ಮಹಡಿಯಲ್ಲಿ ಪುಸ್ತಕಗಳ ವಾಸನೆ. ಮೇಲ್ಮಹಡಿಯಲ್ಲಿ ಡಿಜಿಟಲ್ ಕಲಿಕೆಯ ಅವಕಾಶ. ಮಕ್ಕಳು ಇಲ್ಲಿ ಬಂದು ಓದುತ್ತಾರೆ. ಕಂಪ್ಯೂಟರ್ ಬಳಸುತ್ತಾರೆ. ಕೆಲವರು ಮೊದಲ ಬಾರಿಗೆ ಇಲ್ಲಿ ಡಿಜಿಟಲ್ ಪರದೆ ಮುಟ್ಟಿದ್ದಾರೆ.

ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರವೂ ಮಕ್ಕಳ ಸ್ನೇಹಿಯಾಗಿ ರೂಪುಗೊಂಡಿದೆ. ಆರೋಗ್ಯ ಕೇಂದ್ರಕ್ಕೆ ಹೋಗುವ ಭಯ ಕಡಿಮೆಯಾಗಲೆಂದು ಗೋಡೆಗಳನ್ನೇ ಮಕ್ಕಳ ಭಾಷೆಯಲ್ಲಿ ಮಾತನಾಡುವಂತೆ ಮಾಡಲಾಗಿದೆ.

ರಾಷ್ಟ್ರ ಪ್ರಶಸ್ತಿ ಗೆದ್ದದ್ದು ಯಾರು? ಈ ಪ್ರಶ್ನೆಗೆ ಹಾಲನಾಯಕನಹಳ್ಳಿ ಒಂದು ಸರಳವಾಗಿ ಉತ್ತರಿಸುತ್ತದೆ. ಗೆದ್ದದ್ದು ಪಂಚಾಯಿತಿ ಮಾತ್ರವಲ್ಲ. ಗೆದ್ದದ್ದು ಶಿಕ್ಷಕರ ಸಹನೆ. ಪೋಷಕರ ನಂಬಿಕೆ. ಅಧಿಕಾರಿಗಳ ದೃಷ್ಟಿ. ಸಮುದಾಯದ ಪಾಲುದಾರಿಕೆ. ಮತ್ತು ಮುಖ್ಯವಾಗಿ–ಸರ್ಕಾರಿ ಶಾಲೆಯ ಬಾಗಿಲು ದಾಟಿ ಒಳಗೆ ಬಂದ ಪುಟ್ಟ ಮಕ್ಕಳ ನಗು. ❖

ಒಂದು ಪ್ರಶ್ನೆಯಿಂದ...

10ನೇ ಪುಟದಿಂದ...

ಪ್ರಾಜೆಕ್ಟ್ ಸೂರ್ಯ ತಕ್ಷಣವೇ ಆ ಕುಟುಂಬಕ್ಕೆ ಇನ್ಸುಲಿನ್, ಸಿರಿಂಜ್‌ಗಳು ಮತ್ತು ಅಗತ್ಯ ವೈದ್ಯಕೀಯ ಸಾಮಗ್ರಿಗಳನ್ನು ಒದಗಿಸಿತು. ಇಂದು ಆ ಹೆಣ್ಣುಮಕ್ಕಳು ಆರೋಗ್ಯವಾಗಿದ್ದಾರೆ. 'ಅವರಲ್ಲಿ ಒಬ್ಬಳು ವೈದ್ಯೆಯಾಗುವ ಕನಸು ಕಾಣುತ್ತಿದ್ದಾಳೆ' ಎಂದು ಹೇಳುವಾಗ ದಿವಾ ಅವರ ಧ್ವನಿಯಲ್ಲಿ ಹೆಮ್ಮೆ ಸ್ಪಷ್ಟವಾಗುತ್ತದೆ.

ಅದು ಒಂದೇ ಘಟನೆ ಅಲ್ಲ. ಅರಿವಿನ ಕೊರತೆ ಎಷ್ಟು ಅಪಾಯಕಾರಿಯಾಗಬಹುದು ಎಂಬುದನ್ನು ತೋರಿಸಿದ ಇನ್ನೊಂದು ಪ್ರಸಂಗವೂ ದಿವಾ ಅವರ ನೆನಪಿನಲ್ಲಿದೆ. ಒಬ್ಬ ಅಜ್ಜಿ ತನ್ನ ಮೊಮ್ಮಗನಿಗೆ ಟೈಪ್ 1 ಮಧುಮೇಹ ಇರುವುದು ತಿಳಿಯದೆ, ಅವನಿಗೆ ಕೆಟ್ಟ ಶಕ್ತಿ ತಟ್ಟಿದೆ ಎಂದು ನಂಬಿದ್ದರು. ವೈದ್ಯರ ಬಳಿಗೆ ಕರೆದೊಯ್ಯುವ ಬದಲು ಮಂತ್ರವಾದಿಗಳ ಬಳಿ ಕರೆದೊಯ್ಯುತ್ತಿದ್ದರು.

ತಪ್ಪು ಮಾಹಿತಿ, ಮೂಢನಂಬಿಕೆ ಮತ್ತು ಆರೋಗ್ಯ ಶಿಕ್ಷಣದ ಕೊರತೆಯಿಂದ ಅನೇಕ ಮಕ್ಕಳು ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಪಡೆಯದೆ ಸಂಕಷ್ಟ ಅನುಭವಿಸುತ್ತಿದ್ದಾರೆ. ಅಲ್ಲಿಂದಲೇ ಪ್ರಾಜೆಕ್ಟ್ ಸೂರ್ಯದ ಕೆಲಸ ಚಿಕಿತ್ಸೆಯ ನೆರವಿಗೆ ಮಾತ್ರ ಸೀಮಿತವಾಗದೆ, ಜಾಗೃತಿ ಮೂಡಿಸುವತ್ತ ವಿಸ್ತರಿಸಿತು.

ಇದುವರೆಗೆ 200ಕ್ಕೂ ಹೆಚ್ಚು ಆಶಾ ಕಾರ್ಯಕರ್ತೆಯರಿಗೆ ತರಬೇತಿ ನೀಡಲಾಗಿದೆ. ಉಚಿತ ಆರೋಗ್ಯ ಶಿಬಿರಗಳು ಮತ್ತು ಸಮುದಾಯ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಮಾಹಿತಿ ಹರಡಲಾಗುತ್ತಿದೆ.

ಆಶಾ ಕಾರ್ಯಕರ್ತೆಯರ ತರಬೇತಿಯಲ್ಲಿ ಮಧುಮೇಹ ಶಿಕ್ಷಣವನ್ನು ಕಡ್ಡಾಯಗೊಳಿಸುವುದು ಹಾಗೂ ತಳಮಟ್ಟದಲ್ಲಿ ಇನ್ಸುಲಿನ್ ಮತ್ತು ಅಗತ್ಯ ವೈದ್ಯಕೀಯ ಸಾಮಗ್ರಿಗಳ ಲಭ್ಯತೆಯನ್ನು ಖಚಿತಪಡಿಸುವುದು ಮುಂದಿನ ಗುರಿ. ಇದಕ್ಕಾಗಿ ಸರ್ಕಾರದೊಂದಿಗೆ ಯೋಜನೆಗಳೂ ಪ್ರಗತಿಯಲ್ಲಿವೆ.

ಒಂದು ಸಾಮಾಜಿಕ ಚಳವಳಿಯನ್ನು ಮುನ್ನಡೆಸುವುದು ಸುಲಭವಲ್ಲ. ಅದರಲ್ಲೂ ಅದನ್ನು ಮುನ್ನಡೆಸುತ್ತಿರುವವರು ಹದಿಹರೆಯದ ವಿದ್ಯಾರ್ಥಿನಿಯಾಗಿದ್ದರೆ ಇನ್ನೂ ಕಷ್ಟ.

'ನಮ್ಮ ವಯಸ್ಸು ನೋಡಿ ಕೆಲವರು ನಮ್ಮನ್ನು ಗಂಭೀರವಾಗಿ ತೆಗೆದುಕೊಳ್ಳುವುದೇ ಇಲ್ಲ. ಕೆಲವೊಮ್ಮೆ ಅದು ನಿರಾಶೆ ಉಂಟುಮಾಡುತ್ತದೆ. ನಮ್ಮನ್ನು ಹೊಗಳುವವರು ಬಹಳ ಮಂದಿ. ಆದರೆ ನಿಜವಾಗಿ ಕೈಜೋಡಿಸಲು ಮುಂದೆ ಬರುವವರು ಕಡಿಮೆ' ಎನ್ನುತ್ತಾರೆ ದಿವಾ.

ಹಣ ಸಂಗ್ರಹಿಸಲು ಬೀದಿಬದಿಯಲ್ಲಿ ಕೇಕ್ ಮತ್ತು ಬೇಕರಿ ತಿನಿಸುಗಳನ್ನು ಮಾರಿದ ದಿನಗಳೂ ಇವೆ. ಆದರೆ ಪ್ರತಿ ಬಾರಿ ನೆರವು ಪಡೆದ ಮಕ್ಕಳ ಮುಖಗಳು, ಕುಟುಂಬಗಳ ಕೃತಜ್ಞತೆ ಮತ್ತು ಬದಲಾದ ಬದುಕುಗಳು ಅವರನ್ನು ಮತ್ತೆ ಮುಂದಕ್ಕೆ ತಳ್ಳುತ್ತವೆ.

ದಿವಾ ಅವರ ಕೆಲಸಕ್ಕೆ ಜಾಗತಿಕ ಮಟ್ಟದಲ್ಲಿಯೂ ಮಾನ್ಯತೆ ದೊರೆತಿದೆ. ನ್ಯೂಯಾರ್ಕ್‌ನ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ, ವಿಶ್ವ ಆರೋಗ್ಯ ಸಂಸ್ಥೆ ಮತ್ತು ಅಂತರರಾಷ್ಟ್ರೀಯ ಮಧುಮೇಹ ಒಕ್ಕೂಟ ಆಯೋಜಿಸಿದ್ದ ವೇದಿಕೆಯಲ್ಲಿ 'ಪ್ರಾಜೆಕ್ಟ್ ಸೂರ್ಯ'ದ ಕಾರ್ಯವೈಖರಿಯನ್ನು ಪ್ರಸ್ತುತಪಡಿಸಿದ್ದಾರೆ.

2023ರಲ್ಲಿ ಅವರಿಗೆ 'ಡಯಾನಾ ಪ್ರಶಸ್ತಿ' ದೊರೆಯಿತು. 140 ದೇಶಗಳಿಂದ ಆಯ್ಕೆಯಾದ 'ಚೆಗ್ ಗ್ಲೋಬಲ್ ಸ್ಟೂಡೆಂಟ್ ಪ್ರೈಸ್'ನ ಜಾಗತಿಕ ಟಾಪ್ 10 ಫೈನಲಿಸ್ಟ್‌ಗಳಲ್ಲಿ ಸ್ಥಾನ ಪಡೆದರು. ಆಮ್‌ಸ್ಟರ್‌ಡ್ಯಾಮ್‌ನಲ್ಲಿ ನಡೆದ ವಿಶ್ವ ಸುಸ್ಥಿರತೆ ಪ್ರಶಸ್ತಿಯ ಗೌರವವೂ ಅವರಿಗೆ ಸಂದಿದೆ. ಇದೀಗ 'ಫೋರ್ಬ್ಸ್ 30 ಅಂಡರ್ 30 ಏಷ್ಯಾ' ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

'ಆರೋಗ್ಯ ರಕ್ಷಣೆ ಎನ್ನುವುದು ಪ್ರತಿಯೊಬ್ಬರ ಮೂಲಭೂತ ಹಕ್ಕು. ಏಕೆಂದರೆ ಪ್ರತಿಯೊಬ್ಬರೂ ಮನುಷ್ಯರೇ' ಎಂದು ಅವರು ಹೇಳುತ್ತಾರೆ.

ಇದೀಗ ದಿವಾ ಉನ್ನತ ಶಿಕ್ಷಣಕ್ಕಾಗಿ ಅಮೆರಿಕಕ್ಕೆ ತೆರಳಲು ಸಿದ್ಧವಾಗಿದ್ದಾರೆ. ರಾಷ್ಟ್ರ ಮಟ್ಟದ ಬ್ಯಾಸ್ಕೆಟ್‌ಬಾಲ್ ಆಟಗಾರ್ತಿ ಆಗಿದ್ದರೂ ಶಿಕ್ಷಣ ಮತ್ತು ಪ್ರಾಜೆಕ್ಟ್ ಸೂರ್ಯಕ್ಕಾಗಿ ದೂರ ಸರಿಯಬೇಕಾಯಿತು.

ಆದರೆ ಒಂದು ವಿಷಯ ಮಾತ್ರ ಬದಲಾಗಿಲ್ಲ.

ಹನ್ನೆರಡು ವರ್ಷದ ಹುಡುಗಿಯೊಬ್ಬಳ ಮನಸ್ಸಿನಲ್ಲಿ ಮೂಡಿದ್ದ ಆ ಪ್ರಶ್ನೆ.

'ಸೌಲಭ್ಯವಿಲ್ಲದ ಮಕ್ಕಳ ಬದುಕು ಹೇಗಿರಬಹುದು?'

ಬಹುಶಃ 'ಫೋರ್ಬ್ಸ್ 30 ಅಂಡರ್ 30 ಏಷ್ಯಾ' ಪಟ್ಟಿಯೂ ಆ ಪ್ರಶ್ನೆಯಲ್ಲಿರುವ ಸಾಮಾಜಿಕ ಕಾಳಜಿಯನ್ನೇ ಗುರುತಿಸಿದೆ.

ಏಕೆಂದರೆ ದಿವಾ ಉತ್ಕರ್ಷ ಅವರ ಕಥೆ ಒಬ್ಬ ಯುವತಿಯ ಯಶೋಗಾಥೆಯಲ್ಲ. ತನ್ನ ಮನೆಯ ನೋವನ್ನು ಸಾವಿರಾರು ಮಕ್ಕಳ ಆಶಾಕಿರಣವನ್ನಾಗಿ ರೂಪಿಸಿದ ಕಥೆ.

ಸಂಪರ್ಕ: project.surya.info@gmail.com

ಮುನ್ನೋಟ 07-06-2026 ರಿಂದ 13-06-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಯಾವುದೇ ಕೆಲಸ ಮಾಡಲು ಬಹಳ ಉತ್ಸಾಹ ತೋರುವಿರಿ. ಆದಾಯವು ಉತ್ತಮವಾಗಿರುತ್ತದೆ. ಆಸ್ತಿಯನ್ನು ಕೊಳ್ಳಬಹುದು. ಧರ್ಮ ವಿದ್ಯೆಯನ್ನು ಕಲಿಯುತ್ತಿರುವವರಿಗೆ ಬಹಳ ಅಭಿವೃದ್ಧಿ ಇರುತ್ತದೆ. ಆನುವಂಶೀಯ ಕಾಯಿಲೆಗಳು ಕೆಲವರನ್ನು ಕಾಡಬಹುದು. ನಿಮ್ಮ ಉತ್ಸಾಹಕ್ಕೆ ಸಂಗಾತಿ ತಣ್ಣೀರು ಎರಚಬಹುದು. ಕೃಷಿಕರಿಗೆ ಅನಿರೀಕ್ಷಿತವಾಗಿ ಲಾಭವಿದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ವ್ಯಕ್ತಿ ಗೌರವಕ್ಕೆ ಹೆಚ್ಚು ಪ್ರಾಮುಖ್ಯ ಕೊಡುವಿರಿ. ಆದಾಯವು ಉತ್ತಮವಾಗಿರುತ್ತದೆ. ಗುರು ಹಿರಿಯರ ಬೆಂಬಲ ನಿಮಗೆ ದೊರೆಯುತ್ತದೆ. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಹೆಚ್ಚಿನ ಅಭಿವೃದ್ಧಿ ಇದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಗಣಿತ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಗತಿ ಇರುತ್ತದೆ. ಸಂಗಾತಿಯ ಆದಾಯ ಹೆಚ್ಚಾಗುವ ಸಂದರ್ಭವಿದೆ. ವ್ಯಾಪಾರದಲ್ಲಿ ಅನಿರೀಕ್ಷಿತ ಲಾಭ ಕಾಣಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಬಹಳ ವ್ಯವಹಾರಿಕವಾಗಿ ಆಲೋಚನೆ ಮಾಡುವಿರಿ. ಆದಾಯವು ನಿರೀಕ್ಷೆಗೆ ಮೀರಿ ಇರುತ್ತದೆ. ನಿಮ್ಮ ಒಳಿತಿನ ಕೆಲಸಗಳಿಗೆ ಎಲ್ಲರ ಬೆಂಬಲ ದೊರೆಯುತ್ತದೆ. ಆಸ್ತಿ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭವನ್ನು ಪಡೆಯಬಹುದು. ಈಗ ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶ ಇರುತ್ತದೆ. ಆಯುಧಗಳನ್ನು ಉಪಯೋಗಿಸುವಾಗ ಎಚ್ಚರವಿರಲಿ. ಸಂಗಾತಿಯ ಸಹಕಾರದಿಂದ ನಿಮ್ಮ ಆದಾಯವನ್ನು ಹೆಚ್ಚು ಮಾಡಿಕೊಳ್ಳಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ದೊಡ್ಡ ಮಟ್ಟದ ಗೌರವ ದೊರೆಯುವ ಸಾಧ್ಯತೆಗಳಿವೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಬಂಧುಗಳಿಗಾಗಿ ಯಾವುದೇ ಹಣ ಖರ್ಚು ಮಾಡುವುದು ಬೇಡ. ವಾಯು ಪ್ರಕೋಪ ಕೆಲವರನ್ನು ಕಾಡಬಹುದು. ಅವಿವಾಹಿತರಿಗೆ ವಿವಾಹವಾಗುವ ಸಾಧ್ಯತೆಗಳಿವೆ. ವಿದೇಶಿ ವ್ಯವಹಾರಗಳಲ್ಲಿ ಮನಸ್ತಾಪ ಮೂಡುವ ಸಾಧ್ಯತೆಗಳಿವೆ. ಸರ್ಕಾರಿ ಅಧಿಕಾರಿಗಳಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಎಲ್ಲವೂ ಕಳೆದು ಹೋದಂತೆ ಮನಸ್ಸಿಗೆ ಭಾಸವಾಗುತ್ತದೆ. ಆದಾಯವು ಈಗ ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಯಿಂದ ಬಂಧುಗಳ ವಿರೋಧವನ್ನು ಕಟ್ಟಿಕೊಳ್ಳುವಿರಿ. ಹಿರಿಯರ ಆಸ್ತಿ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಯ ಹತ್ತಿರದ ಫಲಿತಾಂಶ ಬರುತ್ತದೆ. ಉದರ ಸಂಬಂಧಿ ತೊಂದರೆಗಳು ಕೆಲವರನ್ನು ಕಾಡಬಹುದು. ಕೃಷಿಯಿಂದ ಲಾಭವಿರುತ್ತದೆ. ಉದ್ಯೋಗದಲ್ಲಿ ಬಡ್ತಿ ದೊರೆಯುವ ಸಾಧ್ಯತೆ ಇದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಎಷ್ಟೇ ದುಡಿದರೂ ಪ್ರಯೋಜನ ಇಲ್ಲವೆಂಬಂತೆ ಅನಿಸುತ್ತದೆ. ಈಗ ಆದಾಯವು ಕಡಿಮೆ ಇರುತ್ತದೆ. ನಿಮ್ಮ ಗುಣದಿಂದ ಜನರನ್ನು ಎದುರು ಹಾಕಿಕೊಳ್ಳುವಿರಿ. ಆಸ್ತಿ ಕೊಳ್ಳುವ ಅವಕಾಶ ಬರುತ್ತದೆ. ಮೂಳೆ ಸಂಬಂಧಿತ ದೋಷಗಳು ಕಾಡಬಹುದು. ಸಂಗಾತಿಯಿಂದ ಸಹಕಾರ ಸಿಗುವುದು ಕಡಿಮೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಯಾವುದೇ ಕೆಲಸಗಳಲ್ಲೂ ಯಶಸ್ಸು ಸಿಗದೇ ನೀವು ಮುಜುಗರಕ್ಕೆ ಒಳಗಾಗುವಿರಿ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ನಿಮ್ಮ ವ್ಯವಹಾರದಿಂದ ಬೇಸತ್ತು ಬಂಧುಗಳು ದೂರವಾಗುವರು. ಆಸ್ತಿ ಕೊಳ್ಳುವ ವಿಚಾರದಲ್ಲಿ ಅತಿಯಾದ ಆತುರಬೇಡ. ಪಾದಗಳಲ್ಲಿ ನೋವು ಕಾಣಿಸಬಹುದು. ಸರ್ಕಾರಿ ಕೆಲಸಗಳಲ್ಲಿ ನಿರೀಕ್ಷಿತ ಪ್ರಗತಿ ಇರುವುದಿಲ್ಲ. ವೃತ್ತಿಯಲ್ಲಿ ಉತ್ತಮ ಹೆಸರು ಬರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಆರಂಭದಲ್ಲಿ ಆಲಸಿತನವಿದ್ದರೂ, ಎಚ್ಚೆತ್ತುಕೊಂಡು ಮುನ್ನಡೆಯುವಿರಿ. ಆದಾಯ ಮಧ್ಯಮಗತಿಯಲ್ಲಿರುತ್ತದೆ. ವಾಹನ ಮಾರಾಟ ಮಾಡುವವರಿಗೆ ಉತ್ತಮ ಆದಾಯವಿರುತ್ತದೆ. ಕೃಷಿ ಸಂಬಂಧಿತ ಸಂಶೋಧಕರಿಗೆ ಬೇಡಿಕೆಯ ಜತೆಗೆ ಆದಾಯವೂ ಹೆಚ್ಚುತ್ತದೆ. ನಿಮ್ಮ ಮಕ್ಕಳಿಂದ ಗೌರವ ಕಡಿಮೆಯಾಗಬಹುದು. ದೇಹದ ಮೇಲೆ ಗಾಯಗಳಾಗುವ ಸಾಧ್ಯತೆ ಇದೆ. ಪ್ರೀತಿ ಪ್ರೇಮಗಳ ವಿಷಯದಲ್ಲಿ ಗೆಲುವನ್ನು ಕಾಣಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಬಹಳ ಬುದ್ಧಿವಂತಿಕೆಯಿಂದ ಮಾತನಾಡುವುದನ್ನು ಕಲಿತುಕೊಳ್ಳುವಿರಿ. ಆದಾಯವು ಈಗ ಮಧ್ಯಮಗತಿಯಲ್ಲಿರುತ್ತದೆ. ಬಂಧುಗಳು ನಿಮ್ಮ ಬಗ್ಗೆ ಹೊಟ್ಟೆಕಿಚ್ಚುಪಡುವರು. ಕ್ರೀಡಾಪಟುಗಳಿಗೆ ಉತ್ತಮ ಸಾಧನೆ ಮಾಡುವ ಯೋಗವಿದೆ. ಕಣ್ಣಿನ ಬಗ್ಗೆ ಹೆಚ್ಚು ಎಚ್ಚರವಿರಲಿ. ಪಾಲುದಾರಿಕೆ ವ್ಯವಹಾರಗಳಲ್ಲಿ ಲಾಭ ಹೆಚ್ಚುತ್ತದೆ. ವೃತ್ತಿಯಲ್ಲಿ ಸ್ವಲ್ಪ ಒತ್ತಡಗಳು ಹೆಚ್ಚಾಗುತ್ತವೆ. ಪಾಲುದಾರಿಕೆ ವ್ಯವಹಾರಗಳಲ್ಲಿ ನಿಮ್ಮ ಪಾಲನ್ನು ಸರಿಯಾಗಿ ಗಮನಿಸಿಕೊಳ್ಳಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಉತ್ತಮ ಕಾರ್ಯಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳುವಿರಿ. ಕಟುವಾದ ಮಾತು ಯಾರೊಂದಿಗೂ ಬೇಡ. ವಿದೇಶಿ ಕಂಪನಿಗಳಲ್ಲಿ ಹೂಡಿಕೆ ಮಾಡಿದ್ದವರಿಗೆ ಆದಾಯ ಹೆಚ್ಚು ಬರುತ್ತದೆ. ಶತ್ರುಗಳನ್ನು ಹುಡುಕಿ ಮಟ್ಟ ಹಾಕುವಿರಿ. ಕೃಷಿಯಿಂದ ನಿರೀಕ್ಷಿತ ಆದಾಯ ಇರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಫಲಿತಾಂಶ ಪಡೆಯುವ ಯೋಗವಿದೆ. ಮಕ್ಕಳ ಬಗ್ಗೆ ಶುಭ ವಾರ್ತೆಗಳನ್ನು ಕೇಳುವಿರಿ. ಅವಿವಾಹಿತರಿಗೆ ಈಗ ವಿವಾಹ ಸಂಬಂಧಗಳು ಒದಗಿಬರುತ್ತವೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಅನಿರೀಕ್ಷಿತ ವಿದೇಶಿ ಪ್ರಯಾಣ ಯೋಗವಿದೆ. ಆದಾಯವು ಕಡಿಮೆ ಇರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಸಿಗುತ್ತದೆ. ತೆರಿಗೆ ತಜ್ಞರಿಗೆ ಉತ್ತಮ ಅವಕಾಶಗಳಿರುತ್ತವೆ. ಕೆಲವರಿಗೆ ಮೂತ್ರ ಸಂಬಂಧಿ ತೊಂದರೆಗಳು ಕಾಣಿಸಬಹುದು. ನಿಮ್ಮ ಸಂಗಾತಿಯಿಂದ ಪೂರಕ ಸಹಕಾರ ಸಿಗುತ್ತದೆ. ವ್ಯಾಪಾರ–ವ್ಯವಹಾರಗಳಲ್ಲಿ ಅನಿರೀಕ್ಷಿತ ಲಾಭ ಸಿಗುವ ಸಾಧ್ಯತೆ ಇದೆ. ವೃತ್ತಿಯಲ್ಲಿ ಸ್ವಲ್ಪ ಆಲಸ್ಯ ಇರುತ್ತದೆ. ಪುಸ್ತಕ ವ್ಯಾಪಾರಿಗಳಿಗೆ ಲಾಭವಿರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಯಾವುದೇ ಕೆಲಸ ಮಾಡಲು ಮನಸ್ಸಿರುವುದಿಲ್ಲ. ಆದಾಯವು ಕಡಿಮೆ ಇರುತ್ತದೆ. ಕೃಷಿಯಿಂದ ಸ್ವಲ್ಪ ಆದಾಯ ನಿರೀಕ್ಷೆ ಮಾಡಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಉದರ ಸಂಬಂಧಿ ತೊಂದರೆಗಳು ಕೆಲವರನ್ನು ಕಾಡಬಹುದು. ಸಂಗಾತಿಯ ವ್ಯವಹಾರಗಳಲ್ಲಿ ನಷ್ಟವಿಲ್ಲ.

ಪದಬಂಧ 2947

ಮೇಲಿಂದ ಕೆಳಕ್ಕೆ
2. ಕಾವ್ಯವಾಚನದ ಸ್ವರ ವಿನ್ಯಾಸದ ತಂತ್ರ 3
3. ನಮ್ಮನ್ನೆಲ್ಲಾ ಪಾಲಿಸುವ ತಂದೆ 3
5. ಹೊಸದಾದ ತಿಳಿವಳಿಕೆ ಅರಿವು 4
7. ರಾಷ್ಟ್ರಾಡಳಿತದಲ್ಲಿ ಕಾನೂನು ಬದ್ಧ ಅವಯವ 3
9. ಮುತ್ತು ರತ್ನಗಳ ಜಾತಿಗೆ ಸೇರುವ ಕೆಂಪು ಬಣ್ಣದ ಸಾಗೋರತ್ನನ್ನ ತಲೆಗಳಕಾಗಿದೆ 3
11. ಸೀದಾ ನಡೆಯುವ ರಸ್ತೆಯಲ್ಲಿ ದಿಕ್ಕು ಬದಲಿಸುವ ಮಡಿಕೆ 3
12. ಬಾಗಿ ನಮಸ್ಕಾರ ಮಾಡಿಸು 3
13. ಬಂಗಾರದಂತಹ ಒಳ್ಳೆಯ ಬಣ್ಣ 3
14. ಆಡಳಿತ ಕಲಾಪಗಳು ನಡೆಯುವ ಮನೆ 3
18. ವರ ಅಳಿಯುವಂತಹ ರಾಗ ತಲೆಕೆಳಗು 3
20. ಪರಿ ಪರಿಯಾಗಿ ಸಮಾಲೋಚಿಸಿ ನಿರ್ಧಾರ ತೆಗೆದುಕೊಳ್ಳುವ ಸಂಘ 4
22. ನಿಜವಾಗಿ ರಜದಿಂದ ಆರಂಭವಾಗುವ ರಾತ್ರಿ 3
24. ಕಲ್ಪನಾ ಜೀವಿಗಳು ಸೃಷ್ಟಿಸುವ ಕಾಡು 3
25. ಕೋಣನಂತೆ ಬೆಳೆದ ರಾಜ 3

ಎಡದಿಂದ ಬಲಕ್ಕೆ
1. ಕಂಡು ಕಾಣೆಯಾಗುವ ಈ ಜಿಂಕೆಯನ್ನು ಹಿಡಿಯಲಾದೀತೆ? 4
3. ಬೇರುಗಳಿಂದ ಪಾನಮಾಡುವ ವೃಕ್ಷದಂತಿರಬೇಕು ಎಂಬುದು ಕವಿಯ ಆಶಯ 3
4. ರತಿ ಪ್ರಿಯನಂತೆ ಸುಂದರ ಈ ಗೋವುಗಳನ್ನು ರಕ್ಷಿಸುವ ದ್ವಾಪರದ ಪೋರ 6
6. ಹೆಣ್ಣನ್ನು ಕೊಡುವಾಗ ಗಂಡಿನವರು ಹಾಕಬಹುದಾದ ಖರ್ಚಿನ ಕರ 4
8. ಸರ್ವತ್ರ ಸಾಧನೆಗೆ ಕಾರಣಳಾಗುವ ಸುಸಂಸಕೃತ ಹೆಂಡತಿ 3
10. ಜಗತ್ತಿನ ಗತಿಯನ್ನು ನಿಯಂತ್ರಿಸುವವಳು 3
12. ಒತ್ತು ಕಳೆದುಕೊಂಡು ಹಾರಾಡುವ ಮನ 3
14. ತಾಳ್ಮೆಯಿಂದ ಸಹಿಸಿಕೊಳ್ಳುವ ಶಕ್ತಿ 3
15. ರುದ್ರನ ರಾಣಿ ವಿಶ್ವ ಕಲ್ಯಾಣಿ 3
16. ವಧುವಿಗೆ ಗಂಡನನ್ನು ಕೊಡುವ ದೇವ 3
17. ಇಲ್ಲಿನ ಪದಗಳನ್ನು ಹುಡುಕಲು ನಿಮಗೆ ಬೇಕಾಗುವ ಸೂಚನೆ 3
19. ಸಂಸ್ಕೃತದ ಸುಂದರ ಎಲೆ 3
21. ರೋಗದಿಂದ ಒದ್ದಾಡು 3
23. ಪಾಕದಲ್ಲಿ ಬರುವ ಅಗ್ನಿ 3
25. ಮತ್ತೇರಿದ ಬೇಲೂರಿನ ಶಿಲಾಬಾಲಿಕೆ 4
26. ತನ್ನ ಪರ ವಾದಿಸಲು ವಕೀಲನನ್ನು ಒಪ್ಪಿ ಪತ್ರಕ್ಕೆ ಹಾಕುವ ರುಜು 6
27. ಸಂಗೀತ ಹಾಗು ನೃತ್ಯ ಎರಡಕ್ಕೂ ಹೊಂದುವ ಪ್ರಕಾರ 3
28. ಪರ ಅಪರ ಎರಡರಲ್ಲೂ ಶ್ರೇಷ್ಠನಾದವ 4



ಪದಬಂಧ ಉತ್ತರ -2946

ಮೇಲಿಂದ ಕೆಳಕ್ಕೆ
1.ಆಯಾಸ 2.ಹುಲ್ಲುಮಾನವ 3.ಉದಯರವಿ 4.ಖನನ 6.ಹಗುರ 8.ದವನಂ 11.ತಲ್ಲೀನ 13.ಕಾವಲಿ 15.ದಮನಿ 16.ನಡುಗನ್ನಡ 17.ಅಂಕಿತನಾಮ 18. ಬಸವ 20.ಸಿಡುಕು 22.ರಿಪೇರಿ

ಎಡದಿಂದ ಬಲಕ್ಕೆ
1. ಆಜಾನುಬಾಹು 3.ಉದಯೋನ್ಮುಖ 5.ಸಹಸ್ರನಾಮಾ 7.ಯಮಸದನ 9.ನಗರ 10.ಬೆರೆತಜೀವ 12.ವಿವೇಕಾನಂದ 14.ಚಂದನವನ 17.ಅಂಜಲಿಬದ್ಧ 19. ಡುಮುಕಿ 20. ಸಿನಿಮಾರಂಗ 21.ತರಹಾವರಿ 23.ಕುಲಪಂಗಡ 24.ಮನೆಗೆಮಾರಿ

ನೀರಿನ ನಡುವೆ ನಿಂತ ವೈಭವದ ಜಹಾಜ್ ಮಹಲ್



ಹಿಂಡೋಲಾ ಮಹಲ್

ಸರೋವರಗಳ ನಡುವೆ ಹಡಗಿನಂತೆ ತೇಲುವ ಜಹಾಜ್ ಮಹಲ್, ಇಳಿಜಾರಿನ ಗೋಡೆಗಳ ಹಿಂಡೋಲಾ ಮಹಲ್, ಅದ್ಭುತ ಜಲತಂತ್ರಜ್ಞಾನದ ಚಂಪಾ ಬಾವಡಿ– ಮಾಂಡುವಿನ ಸ್ಮಾರಕಗಳು ಮಧ್ಯಯುಗದ ಭಾರತದ ವಾಸ್ತುಕೌಶಲ್ಯದ ವೈಭವವನ್ನು ಅನಾವರಣಗೊಳಿಸುತ್ತವೆ.

• ಪದ್ಮಿನಿ ನಾಗರಾಜು

ಇಂದೋರಿನಿಂದ ಬೆಳಗಿನ ಜಾವ ಕಾರು ಹೊರಟಾಗ ಮುಂಜಾನೆಯ ಮಂಕು ಇನ್ನೂ ಕಳೆದುಹೋಗಿರಲಿಲ್ಲ. ಮಾರ್ಚ್ ಮೊದಲ ವಾರವಾದರೂ ಗೋಧಿ ಮತ್ತು ಸಾಸಿವೆ ಬೆಳೆಗಳು ಗಾಳಿಗೆ ತೂಗಾಡುತ್ತಾ ದಾರಿಯನ್ನೇ ಹಬ್ಬದಂತೆ ಮಾಡುತ್ತಿದ್ದವು. ನಮ್ಮ ಪ್ರವಾಸ ಪಟ್ಟಿಯಲ್ಲಿ ಮಾಂಡು ಇರಲಿಲ್ಲ. ಆದರೆ ಪತಿ ನಾಗರಾಜು 'ಮಾಂಡು ನೋಡದೆ ಮಧ್ಯಪ್ರದೇಶ ಪ್ರವಾಸ ಪೂರ್ಣವಾಗದು' ಎಂದು ಒತ್ತಾಯಿಸಿದರು. ಆ ಒತ್ತಾಯವೇ ನಮ್ಮನ್ನು ಭಾರತದ ವಿಶಿಷ್ಟ ವಾಸ್ತುಶಿಲ್ಪದ ಅದ್ಭುತಗಳೊಂದಾದ ಜಹಾಜ್ ಮಹಲ್ ಎದುರು ನಿಲ್ಲಿಸಿತು.

ಧಾರ್ ಜಿಲ್ಲೆಯಲ್ಲಿರುವ ಮಾಂಡು ಅಥವಾ ಮಾಂಡವಗಢ, ವಿಂಧ್ಯ ಪರ್ವತಶ್ರೇಣಿಯ ಎತ್ತರದ ಮೇಲಿರುವ ಪ್ರಾಚೀನ ನಗರ. ಇಂದೋರಿನಿಂದ ಸುಮಾರು ನೂರು ಕಿಲೋಮೀಟರ್ ದೂರದ ಈ ಸ್ಥಳ ಇತಿಹಾಸ, ವಾಸ್ತುಶಿಲ್ಪ ಮತ್ತು ಜಲತಂತ್ರಜ್ಞಾನದ ಅದ್ಭುತ ಸಂಯೋಜನೆ. ಬೆಟ್ಟದ ಮೇಲಿರುವುದರಿಂದ ಯುದ್ಧತಂತ್ರದ ದೃಷ್ಟಿಯಿಂದಲೂ ಇದು ರಾಜರಿಗೆ ಅತ್ಯಂತ ಸುರಕ್ಷಿತ ನೆಲೆ ಆಗಿತ್ತು.

ಮಾಂಡುವನ್ನು ಪ್ರವೇಶಿಸುವ ಅನುಭವವೇ ಭಿನ್ನ. ಅಲಂ ದರವಾಜ ದಾಟಿದ ಕ್ಷಣದಿಂದಲೇ ಕೋಟೆಗೋಡೆಗಳು, ಹಸಿರು ಹೊದ್ದಿರುವ ಕೊತ್ತಲಗಳು ಮತ್ತು ಕಮಾನುಗಳ ಸರಪಳಿ ನಮ್ಮನ್ನು ಮಧ್ಯಯುಗದೊಳಗೆ ಕರೆದುಕೊಂಡು ಹೋಗುತ್ತವೆ. ಕಮಾನಿ ದರವಾಜ, ಗಾಡಿ ದರವಾಜ ದಾಟುತ್ತಾ ಒಳನುಗ್ಗಿದಾಗ ಗುಂಬಜ್‌ಗಳು, ಸರೋವರಗಳು, ಸ್ಮಾರಕಗಳು ಒಂದೊಂದಾಗಿ ಕಣ್ಣೆದುರು ತೆರೆಯುತ್ತವೆ.

ಬೆಳಗ್ಗೆ ಹನ್ನೊಂದು ಗಂಟೆಗೆ ನಾವು ಜಹಾಜ್ ಮಹಲ್ ಸಮೂಹ ತಲುಪಿದ್ದೆವು. ಟಿಕೆಟ್ ಪಡೆದು ಒಳಹೋದ ಕೂಡಲೇ ಕಪೂರ್ ಸರೋವರದ ನೀಲಿ ಹೊಳಪು ಕಣ್ಣಿಗೆ ಬೀಳುತ್ತದೆ. ಹತ್ತಿರದ ತವೇಲಿ ಮಹಲ್‌ಗೆ ಮೊದಲು ಭೇಟಿ ಕೊಟ್ಟೆವು. ಒಮ್ಮೆ ಕಾವಲುಗಾರರ ವಸತಿ ಮತ್ತು ಕುದುರೆಗಳ ಲಾಯವಾಗಿದ್ದ ಈ ಕಟ್ಟಡ ಇಂದು ಪ್ರಾಚ್ಯವಸ್ತು ಸಂಗ್ರಹಾಲಯವಾಗಿದೆ. ಸುತ್ತಮುತ್ತ ಸಿಕ್ಕಿರುವ ಹಿಂದೂ ಶಿಲ್ಪಗಳು, ವಿಗ್ರಹಗಳು, ಶಿಲಾಶಾಸನಗಳನ್ನು ಇಲ್ಲಿ ಅತ್ಯಂತ ಜಾಗರೂಕತೆಯಿಂದ ಸಂರಕ್ಷಿಸಲಾಗಿದೆ.


ಅಲ್ಲಿಂದ ನಾವು ಜಹಾಜ್ ಮಹಲ್ ಕಡೆ ಹೆಜ್ಜೆ ಹಾಕಿದೆವು. ಮುಂಜಾ ಮತ್ತು ಕಪೂರ್ ಸರೋವರಗಳ ಮಧ್ಯೆ ನಿರ್ಮಿಸಿರುವ ಈ ಮಹಲ್ ದೂರದಿಂದಲೇ ನೀರಿನ ಮೇಲೆ ತೇಲುತ್ತಿರುವ ಹಡಗಿನಂತೆ ಕಾಣುತ್ತದೆ. ಅದಕ್ಕಾಗಿಯೇ ಇದಕ್ಕೆ 'ಜಹಾಜ್ ಮಹಲ್' ಎಂಬ ಹೆಸರು. ಎರಡು ಅಂತಸ್ತಿನ ಈ ಕಟ್ಟಡದ ಉದ್ದ, ಸಮತಟ್ಟಾದ ವಿನ್ಯಾಸ ಮತ್ತು ಎರಡೂ ಬದಿಗಳಲ್ಲಿರುವ ನೀರಿನ ಹಿನ್ನೆಲೆ ಅದನ್ನು ನಿಜಕ್ಕೂ ಹಡಗಿನ ಭ್ರಮೆ ಮೂಡಿಸುವಂತೆ ಮಾಡುತ್ತದೆ.

ಮುಂಭಾಗದ ಹಸಿರು ಹುಲ್ಲುಗಾವಲನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಕಡಿದಾದ ಮೆಟ್ಟಿಲುಗಳನ್ನು ಹತ್ತಿ ಮೇಲಂತಸ್ತಿಗೆ ಹೋದಾಗ ಬಣ್ಣದ ಅಂಚುಗಳನ್ನು ಹೊಂದಿರುವ ಕೊಠಡಿಗಳು, ತೆರೆದ ಮಂಟಪಗಳು ಮತ್ತು ಸರೋವರಗಳ ಅದ್ಭುತ ನೋಟ ಮನಸ್ಸನ್ನು ಕಟ್ಟಿಹಾಕುತ್ತವೆ. ಬಿಸಿಲಿಗೆ ನೀರಿನ ಮೇಲ್ಮೈ ಬೆಳ್ಳಿಯಂತೆ ಮಿನುಗುತ್ತಿತ್ತು. ಸಂಜೆ ಇಲ್ಲಿ ಪಕ್ಷಿ ವೀಕ್ಷಣೆಗೆ ಹೆಚ್ಚಿನವರು ಬರುತ್ತಾರೆ ಎಂದು ಸ್ಥಳೀಯ ಮಾರ್ಗದರ್ಶಿ ತಿಳಿಸಿದರು.

ಈ ಮಹಲಿನ ನಿಜವಾದ ಅದ್ಭುತ ಅದರ ಜಲತಂತ್ರಜ್ಞಾನ. ಎರಡೂ ಮಹಡಿಗಳಲ್ಲೂ ಕಮಲದಾಕಾರದ ಕೊಳಗಳನ್ನು ನಿರ್ಮಿಸಿದ್ದು, ಅವುಗಳಿಗೆ ನೀರು ಹರಿಸಲು ವಿಶೇಷ ವ್ಯವಸ್ಥೆ ಮಾಡಲಾಗಿದೆ. ಪ್ರತಿಯೊಂದು ಕೊಳವೂ ಸುಮಾರು ಮೂವತ್ತು ಸಾವಿರ ಲೀಟರ್ ನೀರು ಹಿಡಿದಿಡುವ ಸಾಮರ್ಥ್ಯ ಹೊಂದಿದೆಯಂತೆ. ಕೆಳಭಾಗದಲ್ಲಿರುವ ಆಮೆ ಆಕಾರದ ನೀರಿನ ತೊಟ್ಟಿಗಳು ಆ ಕಾಲದ ಕಲಾತ್ಮಕತೆಯನ್ನೂ ತಾಂತ್ರಿಕ ಚಾತುರ್ಯವನ್ನೂ ಒಂದೇ ವೇಳೆ ತೋರಿಸುತ್ತವೆ.

ರಾಣಿಯರಿಗಾಗಿ ಪ್ರತ್ಯೇಕ ಸ್ನಾನಗೃಹಗಳನ್ನು ನಿರ್ಮಿಸಿದ್ದು, ಬಿಸಿ ಮತ್ತು ತಣ್ಣೀರು ಹರಿಯಲು ಗೋಡೆಗಳೊಳಗೆ ವಿಶೇಷ ಚಾನಲ್‌ಗಳನ್ನು ಮಾಡಲಾಗಿದೆ. ಹತ್ತಿರದಲ್ಲಿರುವ ಚಂಪಾ ಬಾವಡಿ ಮಳೆನೀರನ್ನು ಸಂಗ್ರಹಿಸಿ ಇಡೀ ಅರಮನೆ ತಂಪಾಗಿಡುವ ವ್ಯವಸ್ಥೆಯ ಭಾಗವಾಗಿತ್ತಂತೆ. ಇಂದಿನ ಆಧುನಿಕ ಜಲವಿನ್ಯಾಸಕ್ಕೂ ಸವಾಲೊಡ್ಡುವ ಮಟ್ಟದ ಚಿಂತನೆ ಆ ಕಾಲದಲ್ಲೇ ಇದ್ದಿತೆಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಜಹಾಜ್ ಮಹಲ್‌ನ ಒಳಭಾಗದಲ್ಲಿ ಭಾರೀ ಕಮಾನುಗಳು, ಉದ್ದವಾದ ಕಾರಿಡಾರ್‌ಗಳು ಮತ್ತು ಗುಂಬಜ್‌ಗಳ ಅಲಂಕಾರ ಗಮನಸೆಳೆಯುತ್ತವೆ. ಹೂವಿನ ಆಕೃತಿಗಳಿಂದ ಅಲಂಕರಿಸಿರುವ ಗುಂಬಜ್‌ಗಳು ಇನ್ನೂ ತಮ್ಮ ಸೌಂದರ್ಯ ಕಳೆದುಕೊಂಡಿಲ್ಲ.



ಜಹಾಜ್ ಮಹಲಿನ ಮೊದಲ ಅಂತಸ್ತು



ಜಹಾಜ್ ಮಹಲಿನ ಒಳಾಂಗಣ

ಅಲ್ಲಿಂದ ನಾವು ಹಿಂಡೋಲಾ ಮಹಲ್‌ಗೆ ಹೋದೆವು. 'ತೂಗಾಡುವ ಅರಮನೆ' ಎಂಬ ಅರ್ಥದ ಈ ಕಟ್ಟಡ ತನ್ನ ಇಳಿಜಾರು ಗೋಡೆಗಳಿಂದಲೇ ಪ್ರಸಿದ್ಧ. ಹೊರಗಿನಿಂದ ನೋಡಿದರೆ ಕಟ್ಟಡವೇ ಒಂದು ಬದಿಗೆ ತೂಗುತ್ತಿರುವಂತೆ ಕಾಣುತ್ತದೆ. ರಾಜನ ಖಾಸಗಿ ದರ್ಬಾರ್ ಆಗಿದ್ದ ಈ ಮಹಲ್‌ನ ಒಳಗಿನ ಕಮಾನುಗಳು ಧ್ವನಿಯ ಪ್ರತಿಧ್ವನಿಯನ್ನು ನಿಯಂತ್ರಿಸುವಂತೆ ವಿನ್ಯಾಸಗೊಳಿಸಿದ್ದಾರೋ ಎಂಬ ಅನುಮಾನ ಮೂಡುತ್ತದೆ. ರೋಮನಿಕ್ ಶೈಲಿಯ ಸ್ಪರ್ಶವಿರುವ ಈ ಕಟ್ಟಡಕ್ಕೆ ಮೇಲ್ಛಾವಣಿಯೇ ಇಲ್ಲ. ಭೂಕಂಪಕ್ಕೂ ತಡೆಯಾಗಿ ನಿಲ್ಲುವಂತೆ ಅದರ ಗೋಡೆಗಳನ್ನು ನಿರ್ಮಿಸಿದ್ದಾರಂತೆ.

ಮಾಂಡುವಿನ ಮತ್ತೊಂದು ವಿಶೇಷ ಚಂಪಾ ಬಾವಡಿ. ಬಹುಮಹಡಿ ಕಟ್ಟಡ ಸಮೂಹದ ಅವಶೇಷಗಳಂತೆ ಕಾಣುವ ಈ ಪ್ರದೇಶದಲ್ಲಿ ಕೊಠಡಿಗಳು, ಈಜುಕೊಳಗಳು, ಸ್ನಾನಗೃಹಗಳು ಮತ್ತು ಮೆಟ್ಟಿಲುಗಳಿರುವ ಬಾವಿ ಇವೆ. ಕೆಳಮಟ್ಟದ ಕಮಾನು ದಾರಿಗಳಲ್ಲಿ ನಡೆದುಹೋಗುವಾಗ ತಂಪಾದ ಗಾಳಿ ಇನ್ನೂ ತಟ್ಟುತ್ತದೆ. ಇಡೀ ಅರಮನೆಗೆ ತಂಪು ನೀಡುವ ಕೇಂದ್ರವಾಗಿತ್ತು ಎನ್ನುವುದನ್ನು ಅರ್ಥಮಾಡಿಕೊಳ್ಳಬಹುದು.

ಹಮಾಮ್ ಅಥವಾ ರಾಜಸ್ನಾನಗೃಹವೂ ವಿಶಿಷ್ಟ ಅನುಭವ. ಟರ್ಕಿಶ್ ಶೈಲಿಯ ಈ ಸ್ನಾನಗೃಹದ ಗುಂಬಜ್‌ಗಳಲ್ಲಿ ಸಣ್ಣ ಬೆಳಕಿಂಡಿಗಳನ್ನು ಮಾಡಿದ್ದು, ಅಲ್ಲಿಂದ ಒಳಗೆ ಬೆಳಕು ಮತ್ತು ಗಾಳಿ ಪ್ರವೇಶಿಸುತ್ತವೆ. ಬಿರು ಬೇಸಿಗೆಯಲ್ಲೂ ಒಳಭಾಗ ತಂಪಾಗಿರಲು ಮಾಡಿದ್ದ ವಿನ್ಯಾಸ ನಿಜಕ್ಕೂ ಅಚ್ಚರಿಯಾಗಿದೆ.

ಮಾಂಡುವಿನ ಇತಿಹಾಸವೂ ಬಹಳ ವೈವಿಧ್ಯಮಯ. ಪರಮಾರ ರಾಜರು, ನಂತರ ಖಿಲ್ಜಿಗಳು ಮತ್ತು ಸುಲ್ತಾನರ ಆಳ್ವಿಕೆಯಲ್ಲಿ ಈ ನಗರ ಬೆಳೆದಿದೆ. 15ನೇ ಶತಮಾನದಲ್ಲಿ ಘಿಯಾಸ್ ಉದ್‌ದೀನ್ ಖಿಲ್ಜಿ ಸಾವಿರಾರು ಮಹಿಳೆಯರ ವಾಸಕ್ಕಾಗಿ ಜಹಾಜ್ ಮಹಲ್ ನಿರ್ಮಿಸಿದನೆಂದು ಇತಿಹಾಸ ಹೇಳುತ್ತದೆ. ಸುಮಾರು 110 ಮೀಟರ್ ಉದ್ದದ ಈ ಮಹಲ್ ನೀರಿನ ಮಧ್ಯೆ ತೇಲುವ ಹಡಗಿನಂತೆ ಕಾಣುವಂತೆ ವಿನ್ಯಾಸಗೊಳಿಸಲಾಗಿದೆ.

ಮಾಂಡುವಿನ ಇನ್ನಿತರ ಸ್ಮಾರಕಗಳಾದ ರೂಪಮತಿಯ ಪೆವಿಲಿಯನ್, ಬಾಜ್ ಬಹಾದೂರ್ ಅರಮನೆ, ರೇವಾ ಕುಂಡ್, ಹೋಶಂಗ್ ಶಾಹ್ ಸಮಾಧಿ, ಜೈನ ದೇವಾಲಯಗಳು–ಎಲ್ಲಾ ಒಂದೊಂದು ಕಾಲಘಟ್ಟದ ಕಥೆ ಹೇಳುತ್ತವೆ. ಸಮಯ ತೆಗೆದುಕೊಂಡು ಸ್ಥಳೀಯ ಮಾರ್ಗದರ್ಶಕರೊಂದಿಗೆ ನೋಡಿದರೆ ಮಾಂಡು ಇನ್ನಷ್ಟು ಜೀವಂತವಾಗುತ್ತದೆ.

ಜಹಾಜ್ ಮಹಲ್ ಅನೇಕ ಚಲನಚಿತ್ರಗಳಲ್ಲೂ ಕಾಣಿಸಿಕೊಂಡಿದೆ. ಸಂಜೆ ನಡೆಯುವ ಧ್ವನಿ ಮತ್ತು ಬೆಳಕಿನ ಕಾರ್ಯಕ್ರಮ ಈ ಸ್ಮಾರಕದ ಗತವೈಭವವನ್ನು ಜೀವಂತಗೊಳಿಸುತ್ತದೆಯಂತೆ. ಆದರೆ ಅದರ ನಿಗದಿತ ಸಮಯ ತಪ್ಪಿದ ಕಾರಣ ನಾವು ನೋಡಲು ಸಾಧ್ಯವಾಗಲಿಲ್ಲ. ಪ್ರತಿ ವರ್ಷ ನಡೆಯುವ 'ಮಾಂಡು ಉತ್ಸವ್' ಮೂಲಕ ಮಧ್ಯಪ್ರದೇಶ ಸರ್ಕಾರ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಸಂಜೆ ಹೊತ್ತಿಗೆ ನಾವು ಜಹಾಜ್ ಮಹಲ್‌ನಿಂದ ಹೊರಬರುವಾಗ ಮತ್ತೊಮ್ಮೆ ತಿರುಗಿ ನೋಡಿದೆ. ಮುಂಜಾ ಮತ್ತು ಕಪೂರ್ ಸರೋವರಗಳ ಮಧ್ಯೆ ನಿಂತಿದ್ದ ಆ ಮಹಲ್ ನಿಜಕ್ಕೂ ಆಳವಾದ ಸಮುದ್ರದಲ್ಲಿ ಲಂಗರು ಹಾಕಿದ ಭವ್ಯ ಹಡಗಿನಂತೆ ಕಾಣುತ್ತಿತ್ತು. ಕಲ್ಲು, ನೀರು ಮತ್ತು ಗಾಳಿಯಿಂದ ರಚಿಸಿದ ಕಾವ್ಯದಂತೆ.

ಮಳೆಗಾಲದಲ್ಲಿ ಈ ಪ್ರದೇಶ ಇನ್ನೂ ಮೋಹಕವಾಗಿರುತ್ತದೆಯಂತೆ. ಆ ಮಾತು ಕೇಳಿದ ಕ್ಷಣವೇ ಮತ್ತೊಮ್ಮೆ ಮಳೆಗಾಲದಲ್ಲಿ ಇಲ್ಲಿಗೆ ಬರಬೇಕೆಂಬ ನಿರ್ಧಾರ ನಮ್ಮೊಳಗೆ ಮೂಡಿತ್ತು.

ಹೇಮಾ ಕಟ್ಟಿಕೊಟ್ಟ ಹಳ್ಳಿಯ ಬದುಕು

ಮನೆಯಂಗಳದಲ್ಲಿ ರಂಗೋಲಿ ಬಿಡಿಸುತ್ತಿದ್ದ ಹೇಮಾ ಪಾಟೀಲ ಅವರಿಗೆ ಒಂದು ಬಹುಮಾನ ಹೊಸ ದಿಕ್ಕು ತೋರಿಸಿತು. ಹವ್ಯಾಸವಾಗಿ ಆರಂಭವಾದ ಚಿತ್ರಕಲೆ, ಇಂದು ಹಳ್ಳಿ ಬದುಕಿನ ಸೊಗಡನ್ನು ಕ್ಯಾನ್ವಾಸ್‌ನಲ್ಲಿ ಅರಳಿಸುವ ಕಲಾವಿದೆಯಾಗಿ ಅವರನ್ನು ರೂಪಿಸಿದೆ.

• ರೂಪಾ ಕೆ.ಎಂ.



ಹೇಮಾ ಪಾಟೀಲ

ರಾಶಿ ರಾಶಿ ಸೌದೆಗಳನ್ನು ಹೊತ್ತು ದಣಿದರೂ ಮುಡಿಯಲ್ಲಿ ಸಂಪಿಗೆಯ ನಗುವನ್ನು ಉಳಿಸಿಕೊಂಡಿರುವ ಮಹಿಳೆ. ಏರು ಹೊತ್ತಿನ ಬಿಸಿಲಿಗೆ ಕೆಂಪಾದ ಆಗಸ. ದೂರದವರೆಗೂ ಗಂಧ ಸೂಸುವ ಕಾಡುಹೂವುಗಳು. ಮನೆ ಒಡತಿಯ ಕೈಯಲ್ಲಿ ಅರಳಿದ ಪುಟ್ಟ ತೋಟ. ಅದರೊಳಗೆ ಸೋಗೆ ಹಾಸಿನ ಮನೆ. ಚಿಗುರೆಲೆಗಳನ್ನು ಹರಡಿಕೊಂಡ ಜಾಜಿ ಚಪ್ಪರ. ಒಂದು ಪುಟ್ಟ ಊರು ತನ್ನೊಳಗೆ ಇಟ್ಟುಕೊಂಡಿರಬಹುದಾದ ಅಷ್ಟೂ ಚೆಲುವನ್ನು ಕಲಾವಿದೆ ಹೇಮಾ ಪಾಟೀಲ ಬಣ್ಣಗಳ ಭಾಷೆಯಲ್ಲಿ ಕಟ್ಟಿಕೊಟ್ಟಿದ್ದಾರೆ.


ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ನಡೆದ ಅವರ ಕಲಾಕೃತಿಗಳ ಪ್ರದರ್ಶನ ಹಳ್ಳಿಗೂ ನಗರಕ್ಕೂ ನಡುವೆ ಸೇತುವೆಯಂತೆ ಕಾಣಿಸಿತು. ಮಾತಿನಲ್ಲೇ ಮಂಟಪ ಕಟ್ಟುತ್ತಾ ಭತ್ತ ಕುಟ್ಟುವ ಮಹಿಳೆಯರ ಹರಟೆಯ ಲಾಸ್ಯ, ಕಾಡು ಹಾದಿಯ ನಡುವಿನ ಹೊಳೆಯಲ್ಲಿ ಸಾಗುವ ಹಾಯಿದೋಣಿ, ಬೆಳದಿಂಗಳ ಬಾನು ಹೊಳೆಗೆ ತರುವ ಕಳೆ– ಇವೆಲ್ಲವನ್ನೂ ಅವರು ಕುಂಚದಲ್ಲಿ ಸೆರೆಹಿಡಿದಿರುವ ರೀತಿ ಮನಸೆಳೆಯುತ್ತದೆ.

ಕಾಡುಮೇಡಿನ ನಡುವೆ ಕೊಡ ಹೊತ್ತು ನೀರು ತರುವ ಮಹಿಳೆಯೇ ಇಲ್ಲಿ ಅನೇಕ ಕಲಾಕೃತಿಗಳ ಕೇಂದ್ರ ಪಾತ್ರ. ಒಂದು ಕಡೆ ಸುಡುವ ಸೂರ್ಯನಿದ್ದರೆ, ಮತ್ತೊಂದು ಕಡೆ ಕರಗುವ ಸೂರ್ಯ. ಪ್ರಕೃತಿಯ ವರ್ಣನೆಗೆ ಹೆಚ್ಚು ಒಲವು ಹೊಂದಿರುವ ಹೇಮಾ ಅವರಿಗೆ ನಗರದ ಬದುಕೂ ಅಷ್ಟೇ ಆಪ್ತ ಎಂಬುದನ್ನು ಮಳೆಯಲ್ಲಿ ತೋಯ್ದು ನಿಂತ ಗಗನಚುಂಬಿ ಕಟ್ಟಡಗಳು, ಏಕಾಂತವನ್ನು ಅರಸುವ ಪ್ರೇಮಿಗಳಿಗೆ ಅನಾಮಿಕತೆಯನ್ನು ನೀಡುವ ನಗರ ದೃಶ್ಯಗಳು ತಿಳಿಸುತ್ತವೆ. ವಠಾರಗಳ ಅಂಗಳದಲ್ಲಿ ನಿಂತು ಪಿಸುಮಾತು ಹಂಚಿಕೊಳ್ಳುವ ಮಹಿಳೆಯರ ಬದುಕಿಗೂ ಅವರ ಕಲಾಕೃತಿಗಳಲ್ಲಿ ದನಿ ದೊರೆತಿದೆ.

ಚಿತ್ರಕಲೆಯನ್ನು ಔಪಚಾರಿಕವಾಗಿ ಕಲಿತವರಲ್ಲ ಹೇಮಾ ಪಾಟೀಲ. ಆದರೆ ಆಸಕ್ತಿ, ಅಭ್ಯಾಸ ಮತ್ತು ನಿರಂತರ ಪ್ರಯತ್ನಗಳು ಅವರನ್ನು ಕಲಾವಿದೆಯನ್ನಾಗಿ ರೂಪಿಸಿವೆ. ದಶಕಗಳ ಹಿಂದೆ 'ಪ್ರಜಾವಾಣಿ' ಚಿತ್ರಸಂತೆಯಲ್ಲಿ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದದ್ದು ಅವರ ಕಲಾಯಾನದ ಮಹತ್ವದ ತಿರುವಾಯಿತು. ಅಲ್ಲಿಂದ ಚಿತ್ರಕಲೆಯ ಮೇಲಿನ ಆಸಕ್ತಿಯನ್ನು ಅವರು ಇನ್ನಷ್ಟು ಗಂಭೀರವಾಗಿ ಪರಿಗಣಿಸಲು ಆರಂಭಿಸಿದರು. ಅಕ್ರಿಲಿಕ್ ಪೇಂಟಿಂಗ್ ಅನ್ನು ಮುಖ್ಯ ಮಾಧ್ಯಮವನ್ನಾಗಿಸಿಕೊಂಡ ಅವರು ಇಂದು ತಮ್ಮದೇ ಕಲಾಭಾಷೆಯನ್ನು ರೂಪಿಸಿಕೊಂಡಿದ್ದಾರೆ. ಜತೆಗೆ 'ಕಲಾ ದರ್ಪಣ' ಸಂಸ್ಥೆಯನ್ನು ಹುಟ್ಟುಹಾಕಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ನಡೆಸುತ್ತಿದ್ದಾರೆ.



ಕ್ಯಾನ್ವಾಸ್‌ನಲ್ಲಿ ಅರಳಿದ ಪ್ರಕೃತಿಯ ಬೆರಗು



ಹೇಮಾ ಅವರ ಕಲಾಕುಂಚದಲ್ಲಿ ಮಹಿಳೆಯ ಬದುಕು ಬವಣೆ

ಈ ಕುರಿತು ಮಾತನಾಡಿದ ಹೇಮಾ ಪಾಟೀಲ, 'ನನಗೆ ಮೊದಲಿನಿಂದಲೂ ಚಿತ್ರಕಲೆಯಲ್ಲಿ ಆಸಕ್ತಿ ಇತ್ತು. ಮದುವೆಯಾದ ಬಳಿಕ ಬೆಂಗಳೂರಿಗೆ ಬಂದೆ. ಹಬ್ಬ-ಹರಿದಿನಗಳಲ್ಲಿ ದೊಡ್ಡ ದೊಡ್ಡ ರಂಗೋಲಿಗಳನ್ನು ಹಾಕುತ್ತಿದ್ದೆ. ಸುತ್ತಮುತ್ತಲಿನವರ ಪ್ರೋತ್ಸಾಹದಿಂದ ಚಿತ್ರಕಲೆಯನ್ನು ವ್ಯವಸ್ಥಿತವಾಗಿ ಕಲಿಯಬೇಕು ಎಂಬ ಆಸೆ ಮೂಡಿತು. ಆಗ ಸಿಕ್ಕ ಗುರುಗಳೊಬ್ಬರು 'ನಿಮಗೆ ಚಿತ್ರಕಲೆ ಒಲಿದಿದೆ. ಈ ಆಸಕ್ತಿಯನ್ನು ಪೋಷಿಸಿದರೆ ಪ್ರದರ್ಶನದ ಮಟ್ಟಕ್ಕೂ ಹೋಗಬಹುದು' ಎಂದು ಹೇಳಿದ್ದರು. ಅದೇ ಸಮಯದಲ್ಲಿ 'ಪ್ರಜಾವಾಣಿ' ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ದೊಡ್ಡ ಕಲಾವಿದರ ನಡುವೆ ನನಗೆ ಪ್ರಶಸ್ತಿ ಬಂದದ್ದು ಮತ್ತಷ್ಟು ಆತ್ಮವಿಶ್ವಾಸ ತುಂಬಿತು' ಎಂದು ನೆನಪಿಸಿಕೊಳ್ಳುತ್ತಾರೆ.



ನಗರದ ಬೆರಗು

ಅದರ ಬಳಿಕ ಅವರು ಚಿತ್ರಕಲಾ ಪರಿಷತ್ತಿನಲ್ಲಿ ಬೇಸಿಕ್ ಹಾಗೂ ಅಡ್ವಾನ್ಸ್ಡ್ ಕೋರ್ಸ್‌ಗಳನ್ನು ಪೂರ್ಣಗೊಳಿಸಿದರು. ಎರಡು ವರ್ಷಗಳಲ್ಲೇ ಸಮೂಹ ಕಲಾ ಪ್ರದರ್ಶನದಲ್ಲಿ ಪಾಲ್ಗೊಂಡರು. 2018ರಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನೂ ನಡೆಸಿದರು. ಹಿರಿಯ ಕಲಾವಿದ ಬಿ.ಕೆ.ಎಸ್. ವರ್ಮಾ ಅವರನ್ನು ತಮ್ಮ ಮಾನಸಗುರು ಎಂದು ಪರಿಗಣಿಸುವ ಅವರು, ಅವರಿಂದ ಪ್ರೇರಿತರಾಗಿ 'ಥ್ರೆಡ್ ಪೇಂಟಿಂಗ್' ಕಲೆಯನ್ನು ಅಭ್ಯಾಸ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಆ ಮಾಧ್ಯಮದಲ್ಲಿ ಇನ್ನಷ್ಟು ಪ್ರಯೋಗಗಳನ್ನು ಮಾಡುವ ಉದ್ದೇಶವಿದೆ ಎಂಬುದನ್ನು ಹಂಚಿಕೊಂಡಿದೆ.

ಈ ಪ್ರದರ್ಶನದಲ್ಲಿ ಹೇಮಾ ಅವರ ನಲವತ್ತಕ್ಕೂ ಹೆಚ್ಚು ಕಲಾಕೃತಿಗಳು ಪ್ರದರ್ಶನಗೊಂಡಿದ್ದವು. ವಿಶೇಷವೆಂದರೆ, ಅವರ ಬಳಿ ಚಿತ್ರಕಲೆ ಕಲಿತ ವಿದ್ಯಾರ್ಥಿಗಳ ಕಲಾಕೃತಿಗಳಿಗೂ ಅಲ್ಲಿ ಸ್ಥಾನ ದೊರೆತಿತ್ತು. ಹೇಮಾ ಅವರ ರೇಖೆಗಳು ಬಾಹ್ಯ ಮತ್ತು ಆಂತರಿಕ ಬದುಕಿನ ಸೂಕ್ಷ್ಮಗಳನ್ನು ಸೊಗಸಾಗಿ ಹೇಳುತ್ತವೆ. ಗ್ರಾಮೀಣ ಬದುಕಿನ ಸೊಬಗು, ಮಹಿಳೆಯರ ದೈನಂದಿನ ಅನುಭವಗಳು ಮತ್ತು ಪ್ರಕೃತಿಯ ನವಿರಾದ ಸ್ಪರ್ಶಗಳನ್ನು ಅವರು ಆತ್ಮೀಯವಾಗಿ ಹಿಡಿದಿಟ್ಟಿದ್ದಾರೆ. ಅವರ ಕುಂಚ ಈಗಾಗಲೇ ಸಾಕಷ್ಟು ಪಳಗಿದೆ; ಆದರೆ ಅದು ಹೇಳಬಹುದಾದ ಕಥೆಗಳ ವ್ಯಾಪ್ತಿ ಇನ್ನೂ ದೊಡ್ಡದಾಗುವ ಸಾಧ್ಯತೆಯೂ ಈ ಪ್ರದರ್ಶನದಲ್ಲಿ ಗೋಚರಿಸುತ್ತದೆ.

ಕಥೆ

ಇಂಗ್ಲಿಷ್ ಮೂಲ: ಶೆವ್ಲಿನ್ ಸೆಬಾಸ್ಟಿಯನ್
ಕನ್ನಡಕ್ಕೆ: ಬಿ.ಆರ್. ಸತ್ಯನಾರಾಯಣ
ಅವರ **ಈಗ, ಅಲ್ಲೇನಿಲ್ಲ!**
prajavani.net/short-story

ಕವನ

ಸಂತೆಬೆನ್ನೂರು ಫೈಜ್ನಟ್ರಾಜ್
ಅವರ **ಸಾವಿಗೆ ಸಂಜೀವಿನಿ**
www.prajavani.net/poetry


ಸಾದರ ಸ್ವೀಕಾರ

ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಮೊದಲ ಓದು

ಕಾನು ಕಾಣಿಸುವ ಕಾಡಿನ ಕಥೆಗಳು



ಕಾಡಿನೊಳಗೊಂದು ಮನೆಯ ಮಾಡಿ
ಲೇ: ಸಂಜಯ್ ಗುಬ್ಬಿ
ಪ್ರ: ಅಂಕಿತ ಪ್ರಕಾಶನ
ಸಂ: 9019190502
ಪುಟ: 112 ₹150



ಕಾಡಿನ ಗೆಳೆಯರ ಕಾಡುವ ಕಥೆಗಳು
ಲೇ: ಸಂಜಯ್ ಗುಬ್ಬಿ
ಪ್ರ: ಅಂಕಿತ ಪ್ರಕಾಶನ
ಸಂ: 9019190502
ಪುಟ: 176 ₹230

ವನ್ಯಜೀವಿಗಳ ಕಥನ ಪ್ರಕಾರದಲ್ಲಿ ನಿರೂಪಕನಾಗಿ ಲೇಖಕರು ತಾವು ಕಂಡ ಕಾಡನ್ನೂ, ಕಾಡಿನ ಗೆಳೆಯರ ಜೀವನಶೈಲಿಯನ್ನೂ ಪರಿಚಯಿಸಿದ್ದಾರೆ. ಎರಡೂ ಪುಸ್ತಕಗಳಲ್ಲಿ ಕಾಡು ಒಂದು ಮಹತ್ವದ ಪಾತ್ರವಾಗಿ ಕಂಗೊಳಿಸುತ್ತದೆ. ಕಾಡೆಂದರೆ ಗಗನಚುಂಬಿ ಮರಗಳೂ, ಕಾಲಿಗೆ ತೊಡರುವ ಬಳ್ಳಿಗಳೂ, ದಟ್ಟ ಹಸಿರು ಎಂದೆಲ್ಲ ಭಾವಿಸುವ ಸಾಮಾನ್ಯರಿಗೆ ಕುರುಚಲು ಕಾಡು, ಬಯಲು ಹುಲ್ಲುಗಾವಲು ಸಹ ನಮ್ಮ ಪರಿಸರದ ಗುರುತರ ಲಕ್ಷಣಗಳಾಗಿವೆ ಎಂಬುದನ್ನು ಪುಸ್ತಕದ ಓದು ಸ್ಪಷ್ಟ ಪಡಿಸುತ್ತ ಹೋಗುತ್ತದೆ.

ಪರಿಸರ ಕಾಳಜಿ ಎಂದರೆ ಹಸಿರೀಕರಣ ಮಾತ್ರ ಎಂದುಕೊಳ್ಳುವವರಿಗೆ ನೈಜ ಮಾಹಿತಿ ನೀಡುತ್ತ, ನಮಗೆ ಕಂಟಕವಾಗಿರುವ ಬಳ್ಳಾರಿ ಜಾಲಿ ಹಾಗೂ ಹಸಿರಾಗಿಸುವ ಪ್ರಕ್ರಿಯೆಯಲ್ಲಿ ಕಳೆದುಕೊಂಡಿರುವ ಹುಲ್ಲುಗಾವಲುಗಳ ಬಗ್ಗೆ ತಿಳಿಹೇಳುತ್ತಾರೆ ಲೇಖಕರು.

ಬಂಡೀಪುರದ ಸೆರಗಿನಲ್ಲಿ ಮನೆ ಮಾಡಿಕೊಂಡಿರುವ ಲೇಖಕರು ಆ ಮನೆಯ ಸುತ್ತ ತಾವು ಕಾಡು ಬೆಳೆಸಲು ಪಟ್ಟ ಪಾಡನ್ನೂ, ಮನೆ ಕಟ್ಟುವಾಗ ಎದುರಿಸ ಸವಾಲುಗಳನ್ನೂ ನಿರ್ಲಿಪ್ತವಾಗಿ ಹೇಳುತ್ತಲೇ ಓದುಗರೊಂದಿಗೆ ಆಪ್ತರಾಗುತ್ತಾರೆ.

ಆನೆ, ಸಿಂಹ ಮತ್ತು ಚಿರತೆಗಳ ಕುರಿತು ದಾಳಿ ಮತ್ತು ಹಲ್ಲೆಗಳ ಸುದ್ದಿಗಳನ್ನೇ ಓದಿದವರಿಗೆ, ಇಲ್ಲಿಯ ಕಥೆಗಳು ಅವುಗಳ ಬದುಕಿನ ಶೈಲಿ, ಅಂತಃಕರಣ, ಪ್ರಣಯ ಮತ್ತು ಆಹಾರ ವೈವಿಧ್ಯದ ಕುರಿತು ಬೆಳಕು ಚೆಲ್ಲುತ್ತವೆ. ಜೊತೆಗೆ ಆ ಪ್ರಾಣಿಗಳ ಬಗೆಗೆ ಅನೂಹ್ಯಶೈಲಿಯಲ್ಲಿ ಪ್ರೀತಿ ಹುಟ್ಟುವಂತೆ ಮಾಡುತ್ತಾರೆ.

ಕನ್ನಡಿಗರ ಹೆಮ್ಮೆಯ ಮೇಕೆದಾಟು ಯೋಜನೆ ಎಂಬಂತೆ ಬಿಂಬಿಸಿರುವ ವ್ಯವಸ್ಥೆ, ವನ್ಯಜೀವಿ ಹಾಗೂ ಕಾವೇರಿ ತಟದ ಕಾಡುಗಳ ನಾಶಕ್ಕೆ ಮೂಲವಾಗಬಹುದು ಎಂಬುದನ್ನು ಆಧಾರ ಸಹಿತ ಇರುವ ಲೇಖನ ಎಚ್ಚರಿಕೆಯ ಗಂಟೆಯಂತಿದೆ.

ಆನೆಗಳ ತಾಯ್ತನ, ನಾಯಿಗಳ ಶೌರ್ಯ, ಮನುಷ್ಯರ ಆಸೆಬುರುಕುತನ, ತನ್ನ ಪಾರಮ್ಯ ಹೆಚ್ಚಿಸುವ ಹುಚ್ಚು ಖಯಾಲಿಯಲ್ಲಿ ನಾವು ಏನೆಲ್ಲ ಕಳೆದುಕೊಂಡಿದ್ದೇವೆ, ಒಂದಿನಿತು ಇಚ್ಛಾಶಕ್ತಿ ಇದ್ದರೆ ವ್ಯವಸ್ಥೆಯ ಸುಧಾರಣೆಯಲ್ಲಿ ಆಗುವ ಅಗಾಧ ಬದಲಾವಣೆ ಇವೆಲ್ಲವೂ ಪುಸ್ತಕಗಳನ್ನು ಓದುತ್ತ ಓದುತ್ತ ಮನವರಿಕೆಯಾಗುತ್ತ ಹೋಗುತ್ತವೆ. ಲೇಖಕರು ಎಲ್ಲಿಯೂ ತಮ್ಮ ಹೆಚ್ಚುಗಾರಿಕೆಯನ್ನು ಹೇಳದೆ, ವ್ಯವಸ್ಥೆಯಲ್ಲಿರುವ ಕೊರತೆಗಳನ್ನು ಹೀಗಳೆಯದೇ ನಿರ್ಲಿಪ್ತರಾಗಿ ಎಲ್ಲವನ್ನೂ ಬರೆಯುತ್ತ ಹೋಗಿದ್ದಾರೆ. ಸಹಾಯಹಸ್ತ ಚಾಚಿದವರ ಹೆಸರುಗಳನ್ನು ಮರೆಯದೆ ಉಲ್ಲೇಖಿಸುವ ಲೇಖಕರು, ಅಡೆತಡೆ ಒಡ್ಡಿದವರ ಹೆಸರುಗಳನ್ನು ಮರೆಮಾಚುತ್ತ ಹೋಗುತ್ತಾರೆ. ಕೊನೆಯ ಪುಟಕ್ಕೆ ಬಂದಾಗ ವನ್ಯಜೀವಿಗಳ ಸಂರಕ್ಷಣೆಗೆ, ಪರಿಸರ ಕಾಳಜಿಗೆ ಸಾಮಾನ್ಯ ಜನರೂ ಒಂದೀಟೆ ಈಟು ಆಸಕ್ತಿ ತೋರಿದಲ್ಲಿ, ಅಗಾಧವಾದ ಬದಲಾವಣೆ ಆಗುತ್ತದೆ ಎಂಬ ಅವರ ನಂಬಿಕೆಗೆ ಚ್ಯುತಿ ಬಾರದು.

ಇಲ್ಲಿ ಬೈಯಲೂ ಉಂಟು...

10ನೇ ಪುಟದಿಂದ...

ಆದರೆ ಅದರ ಲಯಕ್ಕೆ ಜನರು ತಾನಾಗಿಯೇ ಆಕರ್ಷಿತರಾಗುತ್ತಾರೆ. ಕೆಲವರು ರಸ್ತೆಯ ಮಧ್ಯೆಯೇ ಕುಣಿತಕ್ಕೆ ಸೇರಿಕೊಳ್ಳುತ್ತಾರೆ.

ಒಂದು ಕಾಲದಲ್ಲಿ ಕುಂಡೆ ಹಬ್ಬವನ್ನು ಮುಖ್ಯವಾಗಿ ಸ್ಥಳೀಯ ಜನರೇ ಕಣ್ತುಂಬಿಕೊಳ್ಳುತ್ತಿದ್ದರು. ಆದರೆ ಇತ್ತೀಚಿನ ವರ್ಷಗಳಲ್ಲಿ ಸಾಮಾಜಿಕ ಜಾಲತಾಣಗಳು ಈ ಆಚರಣೆಗೆ ಹೊಸ ಗುರುತನ್ನು ತಂದಿವೆ. ಇನ್‌ಸ್ಟಾಗ್ರಾಂ ರೀಲ್ಸ್, ಫೇಸ್‌ಬುಕ್ ವಿಡಿಯೊಗಳು, ಯೂಟ್ಯೂಬ್ ಶಾರ್ಟ್ಸ್‌ಗಳಲ್ಲಿ ಕುಂಡೆ ಹಬ್ಬದ ದೃಶ್ಯಗಳು ಲಕ್ಷಾಂತರ ಜನರನ್ನು ತಲುಪುತ್ತಿವೆ. ವಿಚಿತ್ರ ವೇಷಧಾರಿಗಳು, ಅಚ್ಚರಿಯ ಬೈಗುಳಗಳು, ಬಣ್ಣಬಣ್ಣದ ಮುಖಗಳು ಮತ್ತು ಕುಣಿತದ ದೃಶ್ಯಗಳು ವೈರಲ್ ಆಗುತ್ತಿವೆ.



ಕುಂಡೆ ಹಬ್ಬದ ವೇಷಧಾರಿಗಳು

ಪ್ರತಿ ವರ್ಷ ಹಬ್ಬದ ದಿನಗಳಲ್ಲಿ ಅನೇಕ ಯುವಕ–ಯುವತಿಯರು ವಿಶೇಷವಾಗಿ ವಿಡಿಯೊ ಮಾಡಲು ಬರುತ್ತಾರೆ. ಕೆಲವರು ಡ್ರೋನ್ ಕ್ಯಾಮೆರಾ ಹಾರಿಸುತ್ತಾರೆ. ಕೆಲವರು ವ್ಲಾಗ್ ಮಾಡುತ್ತಾರೆ. ಹಲವರು 'ಕುಂಡೆ ಹಬ್ಬ' ಎಂಬ ಹ್ಯಾಶ್‌ಟ್ಯಾಗ್‌ನೊಂದಿಗೆ ಚಿತ್ರಗಳು ಮತ್ತು ವಿಡಿಯೊಗಳನ್ನು ಹಂಚಿಕೊಳ್ಳುತ್ತಾರೆ. ಪರಿಣಾಮವಾಗಿ ಈ ಹಿಂದೆ ಸ್ಥಳೀಯ ಆಚರಣೆಯಾಗಿ ಪರಿಚಿತವಾಗಿದ್ದ ಹಬ್ಬ ಈಗ ಎಲ್ಲೆಡೆ ಜನರ ಗಮನ ಸೆಳೆಯುತ್ತಿದೆ.

ಆದರೆ ಸಾಮಾಜಿಕ ಜಾಲತಾಣಗಳ ಜನಪ್ರಿಯತೆಯ ನಡುವೆಯೂ ಕುಂಡೆ ಹಬ್ಬ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡಿಲ್ಲ. ಇಂದಿಗೂ ಅದು ಜನರ ನಡುವೆ ನಡೆಯುವ ಹಬ್ಬವೇ ಹೊರತು ವೇದಿಕೆಯ ಮೇಲಿನ ಪ್ರದರ್ಶನವಾಗಿಲ್ಲ. ರಸ್ತೆಗಳಲ್ಲಿ, ಹಳ್ಳಿಗಳಲ್ಲಿ, ಜನರ ನಡುವೆ ಬೆರೆತು ಸಾಗುವ ಸಂಭ್ರಮವಾಗಿಯೇ ಉಳಿದಿದೆ.

ಕುಂಡೆ ಹಬ್ಬದಲ್ಲಿ ಅತ್ಯಂತ ಆಕರ್ಷಕವಾದುದು ಏನೆಂದರೆ, ಇಲ್ಲಿ ನೋಡುಗರು ಮತ್ತು ಭಾಗವಹಿಸುವವರ ನಡುವೆ ಗಡಿ ಬಹಳ ತೆಳುವಾಗಿರುತ್ತದೆ. ವೇಷಧಾರಿಗಳು ಜನರೊಳಗೆ ಇಳಿಯುತ್ತಾರೆ. ಜನರು ಅವರೊಂದಿಗೆ ನಗುತ್ತಾರೆ. ಫೋಟೊ ತೆಗೆದುಕೊಳ್ಳುತ್ತಾರೆ. ಕೆಲವೊಮ್ಮೆ ಕುಣಿತಕ್ಕೂ ಸೇರುತ್ತಾರೆ. ಹೀಗಾಗಿ ಈ ಹಬ್ಬ ಕೇವಲ ನೋಡಬೇಕಾದ ಆಚರಣೆಯಲ್ಲ; ಅನುಭವಿಸಬೇಕಾದ ಸಂಭ್ರಮವಾಗುತ್ತದೆ.

ಬೇಸಿಗೆಯ ಕೊನೆಯ ದಿನಗಳಲ್ಲಿ ಕೊಡಗಿನ ರಸ್ತೆಗಳಲ್ಲಿ ಕೇಳಿಬರುವ ಆ ಗದ್ದಲ, ಬಣ್ಣಗಳಿಂದ ತುಂಬಿದ ಆ ಮುಖಗಳು, ವಿಚಿತ್ರ ವೇಷಗಳು, ಹೊಟ್ಟೆ ಹುಣ್ಣಾಗುವಷ್ಟು ನಗಿಸುವ ಬೈಗುಳಗಳು ಮತ್ತು ಜನರನ್ನು ಒಂದೇ ಕ್ಷಣದಲ್ಲಿ ಸೆಳೆಯುವ ಆ ಉತ್ಸಾಹವೆಲ್ಲ ಸೇರಿ ಕುಂಡೆ ಹಬ್ಬವನ್ನು ಜನಪದ ಸಂಭ್ರಮದ ಅಪರೂಪದ ಹಬ್ಬವನ್ನಾಗಿ ಮಾಡಿವೆ. ಸಾಮಾಜಿಕ ಜಾಲತಾಣಗಳ ಯುಗದಲ್ಲೂ ತನ್ನ ಮಣ್ಣಿನ ವಾಸನೆಯನ್ನು ಉಳಿಸಿಕೊಂಡಿರುವ ಈ ಆಚರಣೆ, ಕೊಡಗಿನ ಸಾಂಸ್ಕೃತಿಕ ವೈವಿಧ್ಯತೆಯ ಜೀವಂತ ಚಿತ್ರವಾಗಿ ಇಂದಿಗೂ ಕಂಗೊಳಿಸುತ್ತಿದೆ.

ಜ್ಯೂರಿ ಮೀಟ್‌ನಲ್ಲಿ ಹಳೆ ಬೇರು, ಹೊಸ ಚಿಗುರು



4ನೇ ಆವೃತ್ತಿ ಜೂನ್ 19ಕ್ಕೆ



'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ 4ನೇ ಆವೃತ್ತಿಯ ಮುಖ್ಯ ತೀರ್ಪುಗಾರರು ಹಾಗೂ ತಾಂತ್ರಿಕ ತೀರ್ಪುಗಾರರು ಒಂದೆಡೆ ಸೇರಿದಾಗ...

'ನಾನು ಇಷ್ಟಪಟ್ಟ 'ಬ್ಲಿಂಕ್' ಹಾಗೂ 'ಶಾಖಾಹಾರಿ'ಯ ನಿರ್ದೇಶಕರು ಇಲ್ಲೇ ಇದ್ದಾರಲ್ಲಾ...ಬ್ರಿಲಿಯೆಂಟ್ ಜಾಬ್ ಗಾಯ್ಸ್! ಎಷ್ಟು ಚೆನ್ನಾಗಿ ಸಿನಿಮಾ ಮಾಡಿದ್ದೀರಿ...'

ಹೀಗೆನ್ನುತ್ತಾ 'ಬೆಲ್‌ಬಾಟಂ', 'ಬನಾರಸ್'ನಂಥ ಸಿನಿಮಾಗಳನ್ನು ನೀಡಿದ ನಿರ್ದೇಶಕ ಜಯತೀರ್ಥ ಅವರು ಒಂದೆಡೆ ಯುವ ನಿರ್ದೇಶಕರಾದ ಶ್ರೀನಿಧಿ ಬೆಂಗಳೂರು, ಸಂದೀಪ್ ಸುಂಕದ್ ಜೊತೆ ಮಾತಿಗಿಳಿದಿದ್ದರು.

ಇನ್ನೊಂದೆಡೆ ನಟಿ ಪ್ರಿಯಾಂಕಾ ಉಪೇಂದ್ರ, ನಿರ್ದೇಶಕಿ ಸಿಂಧು ಶ್ರೀನಿವಾಸಮೂರ್ತಿ ಅವರ ಜೊತೆ ಹೊಸ ಸಿನಿಮಾಗಳ ಕುರಿತು ಚರ್ಚೆ ನಡೆಸುತ್ತಿದ್ದರು. ಹಲವು ದಶಕಗಳಿಂದ ಚಿತ್ರರಂಗದಲ್ಲಿರುವ ನಟ ಶಿವಧ್ವಜ್, ನಿರ್ದೇಶಕ ಪಿ.ಶೇಷಾದ್ರಿ, ಕಲಾ ನಿರ್ದೇಶಕ ಶಶಿಧರ ಅಡಪ ಮತ್ತಿತರರು ಒಂದೆಡೆ ಸೇರಿ ಗತವೈಭವದ ನೆನಪುಗಳನ್ನು ಮೆಲುಕು ಹಾಕುತ್ತಿದ್ದರು. ಹಾಸ್ಯ ಚಟಾಕಿಗಳೂ ಜೊತೆಯಾಗಿದ್ದವು.

'ನಿಮ್ಮನ್ನು ನೋಡಿ ವರ್ಷಗಳೇ ಉರುಳಿದೆ ಕಣ್ರೀ' ಎನ್ನುತ್ತಾ ನಿರ್ಮಾಪಕ ರವಿಚಂದ್ರ ಒಬ್ಬರನ್ನು ಮಾತಿಗೆಳೆದಿದ್ದರು. ಹಾಗೆಯೇ ಒಟಿಟಿಯವರಿಗೆ ಕನ್ನಡ ಸಿನಿಮಾಗಳೇಕೆ ರುಚಿಸುತ್ತಿಲ್ಲ? ಯಾವ ಹೀರೊಗಳನ್ನು ಹಾಕಿಕೊಂಡು ಸಿನಿಮಾ ಮಾಡಬಹುದು? ಯಾವ ಜಾನರ್‌ಗಳನ್ನಿಟ್ಟುಕೊಂಡು ಸಿನಿಮಾ ಮಾಡಿದರೆ ಒಳ್ಳೆಯದು? ಯಾವುದ್ರೀ ನಿಮ್ ಮುಂದಿನ ಸಿನ್ಮಾ?, 'ನಾನೊಂದು ಸಿನ್ಮಾ ಮಾಡುತ್ತಿದ್ದೇನೆ, ಸ್ವಲ್ಪ ಮಾಹಿತಿ ಬೇಕಿತ್ತು. ಯಾರನ್ನ ಕೇಳ್ಬೋದು?...' ಹೀಗೆ ಹತ್ತಾರು ವಿಷಯಗಳು ಆ ಸಭಾಂಗಣದ ಗೋಡೆಗಳಿಗೆ ಬಡಿದು ಪ್ರತಿಧ್ವನಿಸುತ್ತಿತ್ತು.

ಚಿತ್ರರಂಗದ ಪ್ರಮುಖರ, ಹೊಸಬರ ಇಂತಹ ಭೇಟಿಗೆ ವೇದಿಕೆಯಾಗಿದ್ದು ಶುಕ್ರವಾರ (ಜೂನ್ 5) ನಡೆದ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ 4ನೇ ಆವೃತ್ತಿಯ ಮುಖ್ಯ ತೀರ್ಪುಗಾರರು ಹಾಗೂ ತಾಂತ್ರಿಕ ತೀರ್ಪುಗಾರರ ಸಮ್ಮಿಲನ.

ಕನ್ನಡ ಸಿನಿಮಾಗಳನ್ನು ಸಂಭ್ರಮಿಸುವ, ನಮ್ಮ ಶ್ರೀಮಂತವಾದ ಸಿನಿಮಾ ಪರಂಪರೆಯನ್ನು ಆಚರಿಸುವ ಮತ್ತು ಚಿತ್ರರಂಗದಲ್ಲಿರುವವರನ್ನು ಬೆಸೆಯಲು 2023ರಲ್ಲಿ 'ಪ್ರಜಾವಾಣಿ'ಯು ಈ ಪ್ರಶಸ್ತಿ ಸಮಾರಂಭವನ್ನು ಪ್ರಾರಂಭಿಸಿತ್ತು. ಈ ವಿಶ್ವಾಸಾರ್ಹ ಪ್ರಶಸ್ತಿಗೀಗ ನಾಲ್ಕರ ಹರೆಯ. 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ 4ನೇ ಆವೃತ್ತಿಯು ಜೂನ್ 19ರಂದು ನಡೆಯಲಿದೆ.

ಇದಕ್ಕೆ ಪೂರ್ವಭಾವಿಯಾಗಿ ನಡೆದ ಈ ತೀರ್ಪುಗಾರರ ಸಮ್ಮಿಲನ ಸಮಾರಂಭದಲ್ಲಿ ನಟಿ ಪ್ರಿಯಾಂಕಾ ಉಪೇಂದ್ರ ಟ್ರೋಫಿಯನ್ನು ಅನಾವರಣಗೊಳಿಸಿದರು. ಮುಖ್ಯ ತೀರ್ಪುಗಾರರ ಮಂಡಳಿ ಮುಖ್ಯಸ್ಥರಾದ ನಿರ್ದೇಶಕ ಟಿ.ಎಸ್.ನಾಗಾಭರಣ ಕ್ಲ್ಯಾಪ್ ಮಾಡಿದರು. ಈ ಮೂಲಕ 4ನೇ ಆವೃತ್ತಿಗೆ ಅಧಿಕೃತವಾಗಿ ಚಾಲನೆ ದೊರೆಯಿತು.

'ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿಯ ತೀರ್ಪುಗಾರರ ಮಂಡಳಿಯಲ್ಲಿ ಕೆಲವು ಹೊಸ ಮುಖಗಳು ಈ ವರ್ಷ ಸೇರ್ಪಡೆಗೊಂಡಿವೆ. ಆನ್‌ಲೈನ್ ಮುಖಾಂತರವೇ ನಡೆದ ನಾಮನಿರ್ದೇಶಿತರ ಆಯ್ಕೆ ಪ್ರಕ್ರಿಯೆ ಬಳಿಕ ಮೊದಲ ಬಾರಿಗೆ ತೀರ್ಪುಗಾರರು ಒಂದೆಡೆ ಸೇರಿದರು. ಕ್ಷೇತ್ರದ ಗೆಳೆಯರೊಂದಿಗೆ ಹರಟುತ್ತಾ, ಸಿನಿ ಸಮ್ಮಾನದ ಹಿಂದಿನ ಆವೃತ್ತಿಗಳ ಬಗ್ಗೆ ನೆನಪುಗಳನ್ನು ಮೆಲುಕು ಹಾಕುತ್ತಾ ಕ್ಷಣಗಳನ್ನು ಕಳೆದರು.

ತೀರ್ಪುಗಾರರ ಸಮ್ಮಿಲನಕ್ಕೂ ಮುನ್ನ 'ಚಿತ್ರಮಂದಿರದತ್ತ ಪ್ರೇಕ್ಷಕರು ಸುಳಿಯುತ್ತಿಲ್ಲವೇಕೆ?' ಎಂಬ ವಿಷಯದ ಕುರಿತು ಸಂವಾದವೂ ನಡೆಯಿತು. ಸಂವಾದದಲ್ಲಿ ಉಲ್ಲೇಖಗೊಂಡ ಅಂಶಗಳ ಬಗ್ಗೆ ಗಂಭೀರವಾದ ಚರ್ಚೆ ತೀರ್ಪುಗಾರರ ನಡುವೆಯೂ ನಡೆದದ್ದು ವಿಶೇಷವಾಗಿತ್ತು.

ನಾಲ್ಕನೇ ಆವೃತ್ತಿಯ ಮುಖ್ಯ ತೀರ್ಪುಗಾರರ ಮಂಡಳಿ ಮುಖ್ಯಸ್ಥರಾದ ನಿರ್ದೇಶಕ ಟಿ.ಎಸ್.ನಾಗಾಭರಣ, ಮುಖ್ಯ ತೀರ್ಪುಗಾರರಾದ ನಿರ್ದೇಶಕ ಪಿ.ಶೇಷಾದ್ರಿ, ಸಂಕಲನಕಾರ ಸುರೇಶ್ ಅರಸ್, ನಟಿ ಅನು ಪ್ರಭಾಕರ್ ಹಾಗೂ ತಾಂತ್ರಿಕ ತೀರ್ಪುಗಾರರ ಮಂಡಳಿಯಲ್ಲಿರುವ ಕಲಾ ನಿರ್ದೇಶಕ ಶಶಿಧರ ಅಡಪ, ಸಿನಿಮಾ ವಿಮರ್ಶಕರಾದ ಗಂಗಾಧರ್ ಮೊದಲಿಯಾರ್, ಬಾ.ನಾ.ಸುಬ್ರಹ್ಮಣ್ಯ, ಚೇತನ್ ನಾಡಿಗೇರ್ ಹಾಗೂ ಹರೀಶ್ ಮಲ್ಯ, ಸಂಕಲನಕಾರರಾದ ಎಂ.ಎನ್.ಸ್ವಾಮಿ ಹಾಗೂ ಕೆಂಪರಾಜು, ಸಾಹಿತಿ–ಸಿನಿಮಾ ವಿಮರ್ಶಕಿಯರಾದ ಪ್ರತಿಭಾ ನಂದಕುಮಾರ್, ಸಂಧ್ಯಾರಾಣಿ ಹಾಗೂ ಪ್ರೀತಿ ನಾಗರಾಜ್, ಧ್ವನಿಗ್ರಹಣ ಪರಿಣಿತ ಜಾನ್ಸನ್, ನಿರ್ದೇಶಕರಾದ ಜಯತೀರ್ಥ, ಕೆ.ಎಂ.ಚೈತನ್ಯ ಹಾಗೂ ಕಬಡ್ಡಿ ಬಾಬು, ನಟರಾದ ಶಿವಧ್ವಜ್ ಹಾಗೂ ಪಿ.ಡಿ.ಸತೀಶ್‌ಚಂದ್ರ, ಗೀತ ಸಾಹಿತಿ ಹೃದಯಶಿವ, ನಿರ್ದೇಶಕಿ ಚಂಪಾ ಶೆಟ್ಟಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ 'ಡೆಕ್ಕನ್ ಹೆರಾಲ್ಡ್'–'ಪ್ರಜಾವಾಣಿ' ಪತ್ರಿಕಾ ಸಮೂಹ ಸಂಸ್ಥೆಯ ಜಂಟಿ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎನ್.ತಿಲಕ್ ಕುಮಾರ್, ನಿರ್ದೇಶಕರಾದ ಚೈತನ್ಯ ನೆಟ್ಟಕಲ್ಲಪ್ಪ, ಸಿಒಒ ಕಿರಣ್ ಸುಂದರರಾಜನ್ ಹಾಗೂ 'ಪ್ರಜಾವಾಣಿ'ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಇದ್ದರು. ❖

'ಪ್ರಜಾವಾಣಿ'ಯು ಕನ್ನಡ ಚಿತ್ರರಂಗಕ್ಕೆ ರಕ್ಷೆ



'ಕಲಾವಿದರ ಬಗ್ಗೆ ಅಭಿಮಾನವನ್ನು, ಪ್ರೀತಿ ಹುಟ್ಟಿಸುವ ಕೆಲಸವನ್ನು ಮಾಡುತ್ತಿರುವ 'ಪ್ರಜಾವಾಣಿ'ಯು ಚಿತ್ರರಂಗಕ್ಕೆ ನೀಡಿದ ಕೊಡುಗೆಗಳನ್ನು ಮರೆಯಲು ಸಾಧ್ಯವಿಲ್ಲ. ಡಬ್ಬಿಂಗ್ ಸಿನಿಮಾ ಹಾವಳಿ, ಪರಭಾಷಾ ಸಿನಿಮಾಗಳು ಆವರಿಸಿಕೊಂಡಾಗ ಹೋರಾಟಕ್ಕೆ ಜೊತೆಯಾಗಿದ್ದು 'ಪ್ರಜಾವಾಣಿ'. ಈ ಪತ್ರಿಕೆ ಒಂದು ರೀತಿಯಲ್ಲಿ ಕನ್ನಡ ಚಿತ್ರರಂಗಕ್ಕೆ ರಕ್ಷೆ' ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ ಹೇಳಿದರು.

'ಸುಧಾ', 'ಪ್ರಜಾವಾಣಿ'ಯಲ್ಲಿ ಬಂದ ಕಾದಂಬರಿ, ಕಥೆಗಳು ಸಿನಿಮಾಗಳಾಗಿವೆ. 'ಅಂತ' ಇದಕ್ಕೊಂದು ಉದಾಹರಣೆ. 'ಪ್ರಜಾವಾಣಿ' ಪತ್ರಿಕೆ ಟೇಬಲ್ ಮೇಲಿದ್ದರೆ ಅದಕ್ಕೊಂದು ಘನತೆ ಇದೆ. ಪವಿತ್ರವಾದ, ಯಾರಿಗೂ ನೋಯಿಸದ, ಎಲ್ಲರನ್ನೂ ಬೆಳೆಸಿದ ಪತ್ರಿಕೆ ಇದು' ಎಂದರು.

'ನಾಲ್ಕು ವರ್ಷಗಳಿಂದ ಚಿತ್ರರಂಗದ ಏಳಿಗೆಯನ್ನು, ಸಿನಿಮಾಗಳ ಮೇಲೆ ಪ್ರೀತಿ ಹುಟ್ಟಿಸುವ ಕೆಲಸವನ್ನು 'ಪ್ರಜಾವಾಣಿ'ಯು ಈ ಪ್ರಶಸ್ತಿಯ ಮೂಲಕ ಮಾಡುತ್ತಿದೆ. ಬೆಳೆದ ಬೆಳೆಯಂತೆ ಜನರಿಗೆ ಅತ್ಯುತ್ತಮ ತಾರೆಗಳನ್ನು, ತಂತ್ರಜ್ಞರನ್ನು ಹೆಕ್ಕಿ ತೆಗೆದು ಪರಿಚಯಿಸುವ ಕಾರ್ಯಕ್ರಮ ಇದು. ಚಿತ್ರರಂಗಕ್ಕಿದು ದೊಡ್ಡ ಕೊಡುಗೆ' ಎಂದರು ಜಯಮಾಲಾ.

ಸಿನಿಮಾದವರಿಗೆ ಇನ್ನೊಂದು ಮೆಟ್ಟಿಲು

'ಈ ಸಿನಿ ಸಮ್ಮಾನ ಕಾರ್ಯಕ್ರಮದ ಮೂಲಕ 'ಪ್ರಜಾವಾಣಿ'ಯು ಸಿನಿಮಾದವರಿಗೆ ಇನ್ನೊಂದು ಮೆಟ್ಟಿಲು ಹಾಕಿಕೊಟ್ಟಿದೆ. ಇದನ್ನು ಏರಿದವರು ಮತ್ತಷ್ಟು ಅದ್ಭುತ ಸಿನಿಮಾಗಳನ್ನು ಸೃಷ್ಟಿಸಿ, ಮತ್ತೆ ಪ್ರೇಕ್ಷಕರು ನೂರಾರು ಸಂಖ್ಯೆಯಲ್ಲಿ ಚಿತ್ರಮಂದಿರದತ್ತ ಬರುವಂತೆ ಮಾಡಿ ಎನ್ನುವ ಪ್ರೋತ್ಸಾಹವನ್ನು ನೀಡಿದೆ' ಎಂದು ನಿರ್ದೇಶಕ ಹಾಗೂ ಮುಖ್ಯ ತೀರ್ಪುಗಾರರ ಮಂಡಳಿ ಮುಖ್ಯಸ್ಥರಾದ ಟಿ.ಎಸ್. ನಾಗಾಭರಣ ಹೇಳಿದರು.

'ಕನ್ನಡ ಕಟ್ಟುವ ಕೆಲಸದ ಜೊತೆಗೆ ಎಲ್ಲರನ್ನೂ ಒಳಗೊಳ್ಳುವ, ಒಗ್ಗೂಡಿಸುವ ಕೆಲಸವನ್ನೂ ಮಾಡಿ ಎನ್ನುವ ಸಂದೇಶವನ್ನೂ ಈ ಪ್ರಶಸ್ತಿ ನೀಡಿದೆ' ಎಂದು ಅಭಿಪ್ರಾಯಪಟ್ಟರು.

'ಈ ಪ್ರಶಸ್ತಿ ನಾಲ್ಕರ ಅಂಬೆಗಾಲು ಇಡುತ್ತಿದೆ. ಆದರೆ ಈ ಪ್ರಶಸ್ತಿಯ ಸಾಧನೆ, ಅದಕ್ಕಿರುವ ವಿಶ್ವಾಸಾರ್ಹತೆ ಹಾಗೂ ನಂಬಿಕೆ ಹಿರಿದು. 'ಪ್ರಜಾವಾಣಿ' ತನ್ನ 78 ವರ್ಷಗಳಲ್ಲಿ ಕೇವಲ ಸಿನಿಮಾ ಪಯಣ ಮಾಡದೆ ಸಾಂಸ್ಕೃತಿಕ ಪಯಣ ಮಾಡಿದೆ. ಹೀಗಾಗಿಯೇ 'ಪ್ರಜಾವಾಣಿ'ಗೆ ಅದರದೇ ಆದ ಘನತೆ, ಗೌರವ, ಇತಿಹಾಸ, ಪರಂಪರೆ ಇದೆ. ನಮ್ಮ ನೆನಪುಗಳಲ್ಲಿ ಈ ಪತ್ರಿಗೆ ಅಗಾಧವಾಗಿದೆ' ಎಂದರು.

CASAGRAND building aspirations Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

> ಮೊದಲ ಆವೃತ್ತಿಯಲ್ಲಿ ನಾನು ನಟಿಯಾಗಿ ಭಾಗವಹಿಸಿದ್ದೆ. ಕಳೆದ ಎರಡು ವರ್ಷಗಳಲ್ಲಿ ಮುಖ್ಯ ತೀರ್ಪುಗಾರರ ಮಂಡಳಿಯಲ್ಲಿ ಕೆಲಸ ನಿರ್ವಹಿಸಿದ ಹೆಮ್ಮೆ ನನಗಿದೆ. ಈ ಪ್ರಶಸ್ತಿಯ ಪ್ರಕ್ರಿಯೆಗಳೆಲ್ಲವೂ ಪಾರದರ್ಶಕ. ಇದು ಸದ್ಯದ ಪ್ರಶಸ್ತಿಗಳ ಪ್ರಕ್ರಿಯೆಯಲ್ಲಿ ಕಾಣುವ ಕೊರತೆ. ಆ ನಿಟ್ಟಿನಲ್ಲಿ 'ಪ್ರಜಾವಾಣಿ'ಯು ಅಚ್ಚುಕಟ್ಟಾಗಿ, ಅರ್ಹರಿಗೆ ಪ್ರಶಸ್ತಿ ನೀಡಿದೆ, ನೀಡಲಿದೆ ಎನ್ನುವ ಭರವಸೆ ನನಗಿದೆ.
> **ಅನು ಪ್ರಭಾಕರ್,** ನಟಿ–ಮುಖ್ಯ ತೀರ್ಪುಗಾರರು.



> 'ಆಕರ್ಷಕವಾಗಿ, ಅಚ್ಚುಕಟ್ಟಾಗಿ ಸಿನಿ ಸಮ್ಮಾನದ ಹಿಂದಿನ ಆವೃತ್ತಿಗಳು ನಡೆದಿವೆ. ಇಂದು ನಡೆದ ಸಂವಾದ ಚಿತ್ರರಂಗವು ಸದ್ಯ ಎದುರಿಸುತ್ತಿರುವ ಅತಿ ದೊಡ್ಡ ಸವಾಲಿನ ಮೇಲೆ ಬೆಳಕು ಚೆಲ್ಲಿದೆ. ಹೊಸಬರಿಗೆ ಮಾರ್ಗದರ್ಶನದಂತೆ ಇಲ್ಲಿನ ಅಂಶಗಳಿದ್ದವು. ಪ್ರಶಸ್ತಿಗಳು ಪ್ರೋತ್ಸಾಹ ನೀಡುವುದರ ಜೊತೆಗೆ ಪ್ರೀತಿಯನ್ನು ತೋರಿಸುತ್ತದೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನಿರ್ದೇಶಕಿಯರು, ಮಹಿಳಾ ಪ್ರಧಾನ ಸಿನಿಮಾಗಳು ಬರಬೇಕಿದೆ. ಬರಹಗಾರರಿಗೆ ಪ್ರೋತ್ಸಾಹಿಸುವ ಕೆಲಸವೂ ಆಗಬೇಕಿದೆ.
> **ಪ್ರಿಯಾಂಕಾ ಉಪೇಂದ್ರ,** ನಟಿ

ಅರ್ಹರ ಕೈಗೆ ಪ್ರಶಸ್ತಿ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ವು ಒಳ್ಳೆಯ ಸಿನಿಮಾಗಳೆಲ್ಲವು-ದಕ್ಕೂ ಮಾನ್ಯತೆ, ಗೌರವ ನೀಡಿದೆ. ಈ ಪ್ರಶಸ್ತಿ ಪಾರದರ್ಶಕವಾಗಿದೆ. ಹಲವು ಸುತ್ತಿನ ಪ್ರಕ್ರಿಯೆ ಬಳಿಕ ಯಾರು ಅರ್ಹರೋ ಅವರಿಗೆ ಈ ಪ್ರಶಸ್ತಿ ಸೇರುತ್ತಿದೆ' ಎಂದು ನಿರ್ದೇಶಕ, ಮುಖ್ಯ ತೀರ್ಪುಗಾರರಾದ ಪಿ.ಶೇಷಾದ್ರಿ ಹೇಳಿದರು.

'ಇತ್ತೀಚೆಗೆ ಪ್ರಶಸ್ತಿ ನೀಡುವವರ ಸಂಖ್ಯೆಯೂ ಹೆಚ್ಚಾಗಿದೆ. ಆದರೆ ಯಾರು ಪ್ರಶಸ್ತಿ ಕೊಡುತ್ತಾರೆ ಎನ್ನುವುದು ಮುಖ್ಯವಾಗುತ್ತದೆ. ಯಾರು ಕೊಟ್ಟರು ಎನ್ನುವ ಆಧಾರದಲ್ಲಿ ಆ ಪ್ರಶಸ್ತಿಯ ಘನತೆ ಹೆಚ್ಚುತ್ತದೆ. ಆ ನಿಟ್ಟಿನಲ್ಲಿ ಕನ್ನಡ ಪತ್ರಿಕೋದ್ಯಮದಲ್ಲಿ 'ಪ್ರಜಾವಾಣಿ'ಯ ಪ್ರಶಸ್ತಿ ವಿಶ್ವಾಸಾರ್ಹವಾಗಿದೆ' ಎಂದರು.

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಪಂಚರ್ ಫಜೀತಿ!


majakoora@prajavani.co.in

ಒಗಟುಗಳು

1	ಅವ್ವ ಎಂದರೆ ಹತ್ತುವುದಿಲ್ಲ ಅಪ್ಪ ಎಂದರೆ ಹತ್ತುತ್ತದೆ	
2	ಹಗ್ಗಾ ಹಸೇತಿ ಗೂಳಿ ಮಲಗೈತಿ	
3	ಅಕ್ಕನ ಮನೆಗೆ ತಂಗಿ ಹೋಗುತ್ತಾಳೆ, ತಂಗಿ ಮನೆಗೆ ಅಕ್ಕ ಹೋಗುವುದಿಲ್ಲ	
4	ಅಜ್ಜನ ರೊಕ್ಕ ಎಣಿಸಲಾರೆ, ಅಮ್ಮನ ಕೌದಿಗೆ ಮಡಿಚಲಾರೆ	
5	ಗಿಡ್ಡನ ಹುಡುಗ ಅಡ್ಡ ಮಲಗಿದ್ದಾನೆ	
6	ನೂರ ಮಂದಿಗೆ ಒಂದೇ ಉಡದಾರ	



ರಜೆಯ ದಿನ ಗುಂಡ ಸೈಕಲ್ ಸವಾರಿ ಹೊರಟಿದ್ದ. ದಾರಿಯಲ್ಲಿ ಸೈಕಲ್ ಪಂಚರ್ ಆಯಿತು. ಪಂಚರ್ ಅಂಗಡಿಗೆ ಹೋದಾಗ ಪಂಚರ್ ಹಾಕುವಾತ ಬೇರೆ ಕೆಲಸದಲ್ಲಿ ತೊಡಗಿದ್ದ. ಅಲ್ಲೇ ಇದ್ದ ಗಾಳಿ ತುಂಬುವ ಪಂಪ್ ತೆಗೆದುಕೊಂಡ ಗುಂಡ ಸೈಕಲ್ ಚಕ್ರಕ್ಕೆ ಸಿಕ್ಕಿಸಿ ಗಾಳಿ ಹೊಡೆಯ ತೊಡಗಿದ. ಪಂಪ್ ಮಾಡುತ್ತಾ ಒಂದು ನಿಮಿಷವಾದರೂ ಗಾಳಿ ತುಂಬಲೇ ಇಲ್ಲ. ಇದನ್ನು ಗಮನಿಸಿದ ಗುಂಡ ಜೋರಾಗಿ ಪಂಪ್ ಮಾಡತೊಡಗಿದ. ಆ ವೇಗಕ್ಕೆ ಪೈಪ್‌ನಲ್ಲೇ ಗಾಳಿ ತುಂಬಿ ಅದು ಊದಿಕೊಂಡಿತು.



ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ ICE ಎಂಬ ಪದಕ್ಕೆ ಹಿಂದೆ ಕೆಲವು ಅಕ್ಷರಗಳನ್ನು ಸೇರಿಸಿ ಇಂಗ್ಲಿಷ್ ಪದಗಳನ್ನು ಮಾಡಿ.

1		ICE
2		ICE
3		ICE
4		ICE
5		ICE
6		ICE
7		ICE
8		ICE

ವರ್ಡ್‌ಗೇಮ್

ಇಲ್ಲಿ ಕೊಟ್ಟಿರುವ ಎರಡು 'D'ಗಳ ನಡುವೆ ಕೊಟ್ಟ ಮೂರು ಶಬ್ದಗಳನ್ನು ಸರಿಯಾದ ಕ್ರಮದಲ್ಲಿ ತುಂಬಿದರೆ ಒಂದು ಅರ್ಥಬದ್ಧ ಇಂಗ್ಲಿಷ್ ಪದವಾಗುವುದು.

ON	I	AM

D..................................D

ಶಬ್ದಾಟ

'ಶಾಂತಾರಾಮ'–ಈ ಹೆಸರಿನಲ್ಲಿ ಹಲವು ಹೆಸರುಗಳು ಅಡಗಿವೆ.

ಶಾಂತಾ	ತಾರಾ	ರಾಮ	ಶಾಮ

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ರವಿ	+	ಸಾವು	+	ಗೋ	=	
2	ಜಗ	+	ವನ	+	ದ	=	
3	ಮೊಲ	+	ನದಿ	+	ದ	=	
4	ನಾರು	+	ನಗು	+	ಕ	=	
5	ಜಮಾ	+	ಮೀರು	+	ನು	=	

ಕೊಂಚ ತಂತ್ರ

KGS-ಕನ್ನಡ ಗರ್ಲ್ಸ್ ಸ್ಕೂಲ್: ಈ ಸೂತ್ರ ನೆನಪಿಡುವುದರಿಂದ ಸಾಹಿತಿಗಳಲ್ಲಿ ರಾಷ್ಟ್ರ ಕವಿ ಬಿರುದು ಪಡೆದವರನ್ನು ನೆನಪಿಡಬಹುದು.

K	ಕುವೆಂಪು
G	ಗೋವಿಂದಪೈ
S	ಶಿವರುದ್ರಪ್ಪ

ಗಣಿತದಲ್ಲಿ ಗರ್ದಿಗಮ್ಮತ್ತು

ವಿಚಿತ್ರ ಸಂಖ್ಯೆ 2520
ಇದೊಂದು ವಿಚಿತ್ರ ಸಂಖ್ಯೆ. ಈ ಸಂಖ್ಯೆಯನ್ನು 10ರಿಂದ 1ರವರೆಗೆ ಭಾಗಿಸಿದರೂ ಶೇಷವೇ ಉಳಿಯುವುದಿಲ್ಲ.
ಉದಾ:

```
7) 2520 (360
   21
   -------
   42
   42
   ----
   00
```

ಜಾಣಪದ ಆಟ 1

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಒಂದಕ್ಷರ ಸೇರಿಸಿ ಮೂರಕ್ಷರದ ಪದ ಮಾಡಿ.

1	ನ	ರ	
2	ವ	ರ	
3	ಸ	ರ	
4	ಕ	ರ	
5	ಮ	ರ	
6	ಹ	ರ	
7	ಶ	ರ	
8	ಜ	ರ	
9	ಬ	ರ	
10	ಗ	ರ	

ಅಕ್ಷರ ಪಟ್ಟಿ

ಡಿ	ದಿ	ಣ	ವಿ	ಡಿ
ಣ	ಡಿ	ಕ	ಹ	ತಿ

ಜಾಣಪದ ಆಟ 2

ಇಲ್ಲಿ ಕೊಟ್ಟಿರುವ 'ಸಮಾ' ಎಂಬ ಎರಡಕ್ಷರಕ್ಕೆ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಪದ ಮಾಡಿ

1	ಸ	ಮಾ		
2	ಸ	ಮಾ		
3	ಸ	ಮಾ		
4	ಸ	ಮಾ		
5	ಸ	ಮಾ		

ಅಕ್ಷರ ಪಟ್ಟಿ

ರಂ	ಪ	ರೋ	ಭ	ಕ
ಲೋ	ಶ	ವೇ	ಹಿ	ತ



ಸರಿ ಉತ್ತರ ಮುಂದಿನ ವಾರ..


ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...


ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಸಹಜೀವನ 2.ಸ್ವರ್ಣಪದಕ 3.ಮಳೆಲಕ್ಷಣ 4.ನಮ್ಮಜಮೀನು 5.ಶಿವಮಂದಿರ
ಶಬ್ದಾಟ: ಪುನರಾಗಮನ
ವರ್ಡ್ ಗೇಮ್: JUSTICE
ಮೋಜಿನ ಇಂಗ್ಲಿಷ್: 1.SUN 2.GUN 3.CUB 4.HUG 5.HUM 6.BUG 7.GUM 8.RUN 9.SUM 10.RUB
ಜಾಣಪದ ಆಟ 1: 1.ಮೇಗಾಳಿ 2.ಮೇಯಿಸು 3.ಮೇಲಾಟ 4.ಮೇದಿನಿ 5.ಮೇಲ್ಪಂಕ್ತಿ 6.ಮೇಳವ 7.ಮೇಲ್ಮಟ್ಟ 8.ಮೇಲುಗೈ
ಜಾಣಪದ ಆಟ 2: 1.ಪರಿಕಲ್ಪ 2.ಪರಿಚರ 3.ಪರಿಚಯ 4.ಪರಿಣಾಮ 5.ಪರಿಣತಿ


ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ಆಹಿರಿ ವಿನಯ್, ಬೆಂಗಳೂರು


ಅಕ್ಷರ ಎಂ.ಎಸ್., ಮೈಸೂರು


ಎನ್. ಸಿಂಚನ, ಶಿವಮೊಗ್ಗ


ವಿಶ್ವರಾಜ ಜೋಡಟ್ಟಿ, ಜಮಖಂಡಿ



ಸೃಜನಾ ಟಿ.ಆರ್., ಹೊಸಪೇಟೆ


ವೃಂದಾ ರೇವಣ್ಣವರ, ವಿಜಯಪುರ

ರಾಹುಲ್–ಗಿಲ್ ಶತಕ ಭರಾಟೆ

ಏಕೈಕ ಟೆಸ್ಟ್: ಮೊದಲ ದಿನ ಭಾರತ ರನ್ ಹೊಳೆ ಎದ್ದುಕಂಡ ಅಫ್ಗನ್ ಬೌಲರ್‌ಗಳ ಅನುಭವ ಕೊರತೆ

• ಮಧು ಜವಳಿ



ಶುಭಮನ್ ಗಿಲ್ ಶತಕ ಸಂಭ್ರಮ

ಮುಲ್ಲನಪುರ: ಶನಿವಾರ ಬೆಳಗಿನ ಅವಧಿಯಲ್ಲಿ ಕೆ.ಎಲ್. ರಾಹುಲ್ ಹದಿನಾರು ರನ್ ಗಳಿಸಿದ್ದರು. ಅದೇ ಸಂದರ್ಭದಲ್ಲಿ ಅಫ್ಘಾನಿಸ್ತಾನ ಬೌಲರ್ ಜಿಯಾ ಉರ್ ರೆಹಮಾನ್ ಎಸೆತವು ರಾಹುಲ್ ಬ್ಯಾಟ್ ಅಂಚು ಸವರಿ ಹಿಂದೆ ಸಾಗಿತು. ಶಬ್ದ ಸ್ಪಷ್ಟವಾಗಿತ್ತು. ಅಂಪೈರ್ ಔಟ್ ನೀಡಲಿಲ್ಲ. ಆದರೆ ಕ್ಯಾಚ್ ಪಡೆದ ವಿಕೆಟ್ ಕೀಪರ್ ಅದನ್ನು ಗ್ರಹಿಸಲಿಲ್ಲ. ಬೌಲರ್ ಕೂಡ ಪಟ್ಟು ಹಿಡಿಯಲಿಲ್ಲ.

ನಂತರದ ಟಿ.ವಿ. ರಿಪ್ಲೆಯಲ್ಲಿ ತೋರಿಸಿದ ಸ್ನಿಕೊ ಮೀಟರ್ ಪರೀಕ್ಷೆಯಲ್ಲಿ ಬ್ಯಾಟ್ ಅಂಚು ಸವರಿದ್ದ ಚೆಂಡು ಹಿಂದೆ ಸಾಗಿತ್ತು. ಇಂತಹ ಸುವರ್ಣಾವಕಾಶವನ್ನು ಅಫ್ಗನ್ ಕಳೆದು ಕೊಂಡಿತು. ಆದರೆ, ರಾಹುಲ್ (100,165ಎ, 4X11) ಈ ಅವಕಾಶವನ್ನು ಶತಕವನ್ನಾಗಿ ಪರಿವರ್ತಿಸಿದರು. ಅವರೊಂದಿಗೆ ಸಾಯಿ ಸುದರ್ಶನ್ (81; 104ಎ, 4X13) ಕೂಡ ಮಿಂಚಿದರು. ಎರಡನೇ ವಿಕೆಟ್ ಜೊತೆ ಯಾಟದಲ್ಲಿ 139 ರನ್ ಕಲೆಹಾಕಿದರು. ರಾಹುಲ್ ಅವರಿಗೆ ಟೆಸ್ಟ್ ಕ್ರಿಕೆಟ್‌ನಲ್ಲಿ ಇದು 12ನೇ ಶತಕ.

ಇದಲ್ಲದೇ ಸ್ಥಳೀಯ ಹೀರೊ ಮತ್ತು ತಂಡದ ನಾಯಕ ಶುಭಮನ್ ಗಿಲ್ ಅಜೇಯ ಶತಕ (ಔಟಾಗದೇ 103; 143ಎ, 4X11, 6X1) ಕೂಡ ಶತಕ ಗಳಿಸಿ ಕ್ರೀಸ್‌ನಲ್ಲಿದ್ದಾರೆ. ತಂಡವು ಮೊದಲ ದಿನದಾಟದ ಮುಕ್ತಾಯಕ್ಕೆ 85 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 368 ರನ್ ಗಳಿಸಿತು. ಲಯ ಕಂಡುಕೊಂಡಿರುವ ರಿಷಭ್ ಪಂತ್ (ಬ್ಯಾಟಿಂಗ್ 50) ಕೂಡ ಕ್ರೀಸ್‌ನಲ್ಲಿದ್ದಾರೆ.

ಮಹಾರಾಜ ಯಾದವೇಂದ್ರ ಸಿಂಗ್ ಕ್ರೀಡಾಂಗಣ ದಲ್ಲಿ ಟಾಸ್ ಗೆದ್ದ ಆತಿಥೇಯ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಯಶಸ್ವಿ ಜೈಸ್ವಾಲ್ (24 ರನ್) ಅವರೊಂದಿಗೆ ಕನ್ನಡಿಗ ರಾಹುಲ್ ಇನಿಂಗ್ಸ್ ಆರಂಭಿಸಿದರು. ರಾಹುಲ್ ತಾವು ಆಡಿದ ಕಳೆದ 10 ಟೆಸ್ಟ್‌ಗಳಲ್ಲಿ ನಾಲ್ಕನೇ ಶತಕವನ್ನು ದಾಖಲಿಸಿದರು. ಆದರೆ ಬರೋಬ್ಬರಿ 100 ರನ್ ಮಾಡಿ ಔಟಾದಾಗ ಬೇಸರಗೊಂಡು ಪೆವಿಲಿಯನ್‌ಗೆ ಮರಳಿದರು.

ಶುಭಮನ್ ಶತಕ: ಗುವಾಹಟಿಯಲ್ಲಿ ಈಚೆಗೆ ನಡೆದಿದ್ದ ದಕ್ಷಿಣ ಆಫ್ರಿಕಾ ವಿರುದ್ಧದ ಸರಣಿಯ ಕೊನೆ ಪಂದ್ಯವನ್ನು ತಪ್ಪಿಸಿಕೊಂಡಿದ್ದ ಗಿಲ್ ಟೆಸ್ಟ್ ಕ್ರಿಕೆಟ್‌ಗೆ ಮರಳಿದರು. ಅಲ್ಲದೇ ಐಪಿಎಲ್‌ನಲ್ಲಿ ಅಮೋಘ ಬ್ಯಾಟಿಂಗ್ ಮಾಡಿದ್ದ ಅವರು ದೀರ್ಘ ಮಾದರಿಯಲ್ಲಿ 11ನೇ ಶತಕ ದಾಖಲಿಸಿದರು. 143 ಎಸೆತಗಳಲ್ಲಿ 103 ರನ್ ಗಳಿಸಿ ಕ್ರೀಸ್‌ನಲ್ಲಿ ಲಂಗರು ಹಾಕಿದ್ದಾರೆ.

'ಪಂದ್ಯದಲ್ಲಿರುವ ಪರಿಸ್ಥಿತಿಗೆ ತಕ್ಕಂತೆ ಬ್ಯಾಟಿಂಗ್ ಮಾಡಬೇಕು' ಎಂದು ಮುಖ್ಯ ಕೋಚ್ ಗೌತಮ್ ಗಂಭೀರ್ ಅವರಿಂದ ತಾಕೀತು ಮಾಡಿಸಿಕೊಂಡು ಕ್ರೀಸ್‌ಗೆ ಬಂದಿದ್ದ ರಿಷಭ್ ಪಂತ್ ಜಾಗರೂಕರಾಗಿ ಆಡಿದರು. ಆದರೆ ಅವರ ಕೆಲವು ಹೊಡೆತಗಳಲ್ಲಿ ಎಂದಿನ ದಿಟ್ಟ ಆಟವೂ ಇಣುಕಿತ್ತು. ಅವರು ಹೊಡೆದ ಮೂರು ಸಿಕ್ಸರ್‌ಗಳೇ ಅದಕ್ಕೆ ಸಾಕ್ಷಿ. ಗಿಲ್ ಮತ್ತು ಪಂತ್ ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 121 ರನ್ ಗಳಿಸಿದರು.

ಮೊದಲ ದಿನದಾಟದಲ್ಲಿ ಪಿಚ್‌ನಲ್ಲಿ ಚೆಂಡು ತಿರುವು ಪಡೆಯುತ್ತಿತ್ತು. ಅಲ್ಲದೇ ಬೌನ್ಸ್‌ಗಳೂ ಇದ್ದವು. ಅಫ್ಗನ್ ಬೌಲರ್‌ಗಳಲ್ಲಿದ್ದ ಅನುಭವದ ಕೊರತೆಯಿಂದಾಗಿ ಭಾರತದ ಬ್ಯಾಟರ್‌ಗಳು ಮಿಂಚಿದರು. ಎಡಗೈ ಸ್ಪಿನ್ನರ್ ಶರಾಫುದ್ದೀನ್ ಅಶ್ರಫ್ ಸ್ಲಿಪ್‌ನಲ್ಲಿದ್ದ ಚೆಂಡು ತಡೆಯಲು ಡೈವ್ ಮಾಡಿದಾಗ ಗಾಯಗೊಂಡರು. ವಿಶ್ರಾಂತಿಗಾಗಿ ಪೆವಿಲಿಯನ್‌ಗೆ ಮರಳಿದರು.

ಬ್ಯಾಟರ್‌ಗಳನ್ನು ನಿಯಂತ್ರಿಸುವ ಕೆಲವು ನಿಕಟ ಅವಕಾಶಗಳನ್ನು ಪ್ರವಾಸಿ ತಂಡದ ಫೀಲ್ಡರ್‌ಗಳು ಸರಿಯಾಗಿ ಬಳಸಿಕೊಂಡಿದ್ದರೆ ಪರಿಸ್ಥಿತಿ ನಾಟಕೀಯ ತಿರುವು ಕಾಣುತ್ತಿತ್ತು. ಆದರೆ ಅವರ ಔದಾರ್ಯವು ಭಾರತದ ಅನುಭವಿ ಬ್ಯಾಟರ್‌ಗಳಿಗೆ ವರದಾನವಾಯಿತು.

ಹನ್ನೊಂದರ ಬಳಗದಲ್ಲಿ ಅನುಭವಿ ಸ್ಪಿನ್ನರ್ ಕುಲದೀಪ್ ಯಾದವ್ ಮತ್ತು ವಾಷಿಂಗ್ಟನ್ ಸುಂದರ್ ಅವರಿದ್ದಾರೆ. ಅಲ್ಲದೇ ಎಡಗೈ ಸ್ಪಿನ್ನರ್ ಮಾನವ್ ಸುತಾರ್ ಅವರೂ ಪದಾರ್ಪಣೆ ಮಾಡಿದ್ದಾರೆ. ಇದರಿಂದಾಗಿ ಸ್ಪಿನ್ ದಾಳಿಯ ಮೂಲಕ ಅಫ್ಗನ್ ಪಡೆಯನ್ನು ಬೇಗನೆ ಕಟ್ಟಿಹಾಕುವ ತಂತ್ರಗಾರಿಕೆಯನ್ನು ಹೆಣೆದಿರುವುದು ಸ್ಪಷ್ಟವಾಗಿದೆ.

ಭಾರತ ತಂಡದ ನಾಯಕನಾಗಿ ಅತಿ ಹೆಚ್ಚು ಶತಕಗಳು (ಟೆಸ್ಟ್)

ಶತಕ	ಬ್ಯಾಟರ್	ಇನಿಂಗ್ಸ್
20	ವಿರಾಟ್ ಕೊಹ್ಲಿ	113
11	ಸುನಿಲ್ ಗಾವಸ್ಕರ್	74
9	ಮೊಹಮ್ಮದ್ ಅಜರುದ್ದೀನ್	78
7	ಸಚಿನ್ ತೆಂಡೂಲ್ಕರ್	43
6	ಶುಭಮನ್ ಗಿಲ್	15

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ: 3 ವಿಕೆಟ್‌ಗೆ 368 (85 ಓವರ್‌ಗಳಲ್ಲಿ)

ಜೈಸ್ವಾಲ್ ಸಿ ಅಫ್ಸರ್ ಬಿ ಸಲೀಮ್ 24 (32ಎ, 4x5)
ರಾಹುಲ್ ಸಿ ಗುರ್ಬಾಜ್ ಬಿ ರೆಹಮಾನ್ 100 (165ಎ, 4x11)
ಸಾಯಿ ಸಿ ಅಫ್ಸರ್ ಬಿ ಸಲೀಮ್ 81 (104ಎ, 4x13)
ಗಿಲ್ ಔಟಾಗದೇ 103 (143ಎ, 4x11, 6x1)
ಪಂತ್ ಔಟಾಗದೇ 50 (70ಎ, 4x2, 6x3)

ಇತರೆ: 10 (ಲೆಗ್‌ಬೈ 5, ನೋಬಾಲ್ 4, ವೈಡ್ 1)
ವಿಕೆಟ್ ಪತನ: 1-41 (ಯಶಸ್ವಿ ಜೈಸ್ವಾಲ್, 11.6), 2-180 (ಸಾಯಿ ಸುದರ್ಶನ್, 42.4), 3-247 (ಕೆ.ಎಲ್. ರಾಹುಲ್, 60.2)
ಬೌಲಿಂಗ್: ಝಿಯಾವುರ್ ರೆಹಮಾನ್ 15–2–61–1; ಅಜ್ಮತ್‌ವುಲ್ಲಾ ಒಮರ್‌ಝೈ 14–3–42–0; ಮೊಹಮ್ಮದ್ ಸಲೀಮ್ 13–1–67–2; ನಾಂಗೆಯಾಲಿಯಾ ಖರೋಟೆ 20–0–95–0; ಅಬ್ದುಲ್ ಮಲಿಕ್ 6–0–37–0; ಹಷ್ಮತ್‌ಉಲ್ಲಾ ಶಹೀದಿ 17–0–61–0



ಮುಲ್ಲನಪುರದಲ್ಲಿ ಶನಿವಾರ ಆರಂಭವಾದ ಅಫ್ಘಾನಿಸ್ತಾನ ಎದುರಿನ ಏಕೈಕ ಟೆಸ್ಟ್ ಪಂದ್ಯದಲ್ಲಿ ಆಟದ ಮಧ್ಯೆ ಬಿರುಬಿಸಿಲಿನ ಬಳಲಿಕೆಯನ್ನು ದೂರ ಮಾಡಲು ಭಾರತ ತಂಡದ ಬ್ಯಾಟರ್ ಕೆ.ಎಲ್. ರಾಹುಲ್ ಅವರಿಗೆ ನೆರವು ಸಿಬ್ಬಂದಿಯು ಕೆಲನಿಮಿಷಗಳ ಕಾಲ ಬಟ್ಟೆಯಲ್ಲಿ ನೆರಳಿನ ವ್ಯವಸ್ಥೆ ಮಾಡಿದರು ಪಿಟಿಐ ಚಿತ್ರಗಳು


ರಾಜ್ಯ ಸೀನಿಯರ್ ಅಕ್ವಾಟಿಕ್ ವಾಟರ್ ಪೋಲೊ ಕೂಟದಲ್ಲಿ ಪ್ರಶಸ್ತಿ ಗೆದ್ದ ನೆಟ್ಟಕಲ್ಲಪ್ಪ ಈಜು ಕೇಂದ್ರದ ಬಾಲಕರ ತಂಡ

ವಾಟರ್ ಪೋಲೊ: ಎನ್‌ಎಸಿ, ಬಿಎಸಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಟ್ಟಕಲ್ಲಪ್ಪ ಈಜು ಕೇಂದ್ರ (ಎನ್‌ಎಸಿ) ಮತ್ತು ಬಸವನಗುಡಿ ಈಜು ಕೇಂದ್ರ (ಬಿಎಸಿ) ತಂಡಗಳು ಶನಿವಾರ ಮುಕ್ತಾಯಗೊಂಡ ಎನ್‌ಆರ್‌ಜೆ ರಾಜ್ಯ ಸೀನಿಯರ್ ಅಕ್ವಾಟಿಕ್ ವಾಟರ್ ಪೋಲೊ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿಗಳನ್ನು ಗೆದ್ದುಕೊಂಡವು.

ಕರ್ನಾಟಕ ಈಜು ಸಂಸ್ಥೆಯ ಆಶ್ರಯದಲ್ಲಿ ಬೆಂಗಳೂರು ಸಿಟಿ ವಿಶ್ವವಿದ್ಯಾಲಯದ ಬೇಸ್ ಕ್ಯಾಂಪ್‌ನಲ್ಲಿ ನಡೆದ ಕೂಟದ ಪುರುಷರ ಫೈನಲ್‌ನಲ್ಲಿ ನೆಟ್ಟಕಲ್ಲಪ್ಪ ತಂಡವು 18–9ರಿಂದ ಸ್ವಿಮ್‌ಲೈಫ್ ತಂಡವನ್ನು ಮಣಿಸಿತು. ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಬಸವನಗುಡಿ ತಂಡವು 14–9ರಿಂದ ಸ್ಟಾರ್ ಅಕ್ವಾಟಿಕ್ಸ್ ತಂಡವನ್ನು ಮಣಿಸಿತು.


ಪ್ರಶಸ್ತಿ ಗೆದ್ದ ನೆಟ್ಟಕಲ್ಲಪ್ಪ ತಂಡದಲ್ಲಿ ಅಧ್ಯಯನ್ ಪಿ. ಶಿರೋಳೆ, ದರ್ಶನ್ ಸಿ, ಹರ್ಷಿತ್ ಬಿ, ಚಿನ್ಮಯ್ ಪೈ, ಚಾರುವರ್ಧನ್ ಎಸ್. ಆರ್, ಎಸ್.ಎಸ್. ಶೇಷಾದ್ರಿ, ಧ್ಯಾನ್ ಆರ್. ನಾಯ್ಡು, ಐರೇಶ್ ಶೆಣೈ, ಇನೇಶ್ ಶೆಣೈ, ಎ. ಅಕ್ಷಯ್ ಕೃಷ್ಣ, ಎಂ. ಭೂಷಿತ್ ಸಿ. ಗೌಡ, ಸುದೀಕ್ಷ್ ದೀಪಕ್, ಇಶಾನ್ ಶೆಣೈ, ನಿಹಾರ್ ರಾಜೇಶ್, ಕ್ರಿಶಲ್ ಅಕ್ಷಿತ್ ಇದ್ದರು.

ಮಹಿಳೆಯರ ಫೈನಲ್‌ನಲ್ಲಿ ಬಸವನಗುಡಿ 24–12ರಿಂದ ನೆಟ್ಟಕಲ್ಲಪ್ಪ ತಂಡವನ್ನು ಸೋಲಿಸಿತು. ಕಂಚಿನ ಪದಕ ಪಂದ್ಯದಲ್ಲಿ ಸ್ಟಾರ್ ಅಕ್ವಾಟಿಕ್ಸ್ 17–7ರಿಂದ ಅಸೋಸಿಯೇಷನ್ ಆಫ್ ಇಂಟೆಗ್ರೇಟೆಡ್ ಮೈಸೂರು ಸ್ವಿಮ್ಮರ್ಸ್ ತಂಡವನ್ನು ಮಣಿಸಿತು.

ಚಾಂಪಿಯನ್ ಬಸವನಗುಡಿ ತಂಡದಲ್ಲಿ ರೋಷಿಣಿ ಎಸ್, ಲಾವಣ್ಯಾ ಯೋಗೇಶ್, ಮಾನ್ಯಾ ಆರ್, ಇಶಾನಿ ಕಿರಣ್, ಸಿಂಚನಾ ಸಿ.ಪಿ, ಧೃತಿ ಡಿ.ಕೆ, ಉರ್ವಿ ಪೋತಿಸ್, ಪ್ರಚೇತಾ ಆರ್. ರಾವ್, ಜಾಹ್ನವಿ ಎಲ್. ಗೌಡ, ಪರಿಣಿತಾ ಗೌಡ, ಕನಿಷ್ಕಾ ಚೌಧರಿ, ಮೌಲ್ಯ ಎಚ್, ಗೌರಿ ತೇಜಸ್, ಧೃತಿ ಎನ್. ಮುಲ್ಯೆ, ವಿಭಾ ಎಸ್. ಭಟ್ ಇದ್ದರು.

ಬಾಲಕರ ವಿಭಾಗದಲ್ಲಿ ಸ್ವಿಮ್‌ಲೈಫ್‌ನ ವಿಶ್ರುತ್ ಚಕ್ರವರ್ತಿ 'ಉತ್ತಮ ಗೋಲ್‌ಕೀಪರ್', ನೆಟ್ಟಕಲ್ಲಪ್ಪ ತಂಡದ ಹರ್ಷಿತ್ ಬಿ. 'ಉತ್ತಮ ಆಟಗಾರ' ಗೌರವಕ್ಕೆ ಪಾತ್ರರಾದರು. ಬಾಲಕಿಯರ ವಿಭಾಗದಲ್ಲಿ ನೆಟ್ಟಕಲ್ಲಪ್ಪ ತಂಡದ ಪ್ರವ್ದಾ ಮಾಲತೇಶ್ 'ಉತ್ತಮ ಗೋಲ್‌ಕೀಪರ್', ಪ್ರಚೇತಾ ಆರ್. ರಾವ್ 'ಉತ್ತಮ ಆಟಗಾರ್ತಿ' ಗೌರವ ಪಡೆದರು.

ಏಕದಿನ ಸರಣಿ ವಿರಾಟ್ ಬದಲಿಗೆ ಯಶಸ್ವಿ ಜೈಸ್ವಾಲ್




ಮುಂಬೈ (ಪಿಟಿಐ): ತೊಡೆಯ ಸ್ನಾಯುಸೆಳೆತದ ಗಾಯದಿಂದಾಗಿ ಅಫ್ಘಾನಿಸ್ತಾನ ಎದುರಿನ ಮೂರು ಏಕದಿನ ಕ್ರಿಕೆಟ್ ಪಂದ್ಯಗಳ ಸರಣಿಯಿಂದ ವಿಶ್ರಾಂತಿ ಪಡೆದಿರುವ ವಿರಾಟ್ ಕೊಹ್ಲಿ ಅವರ ಬದಲು ಯಶಸ್ವಿ ಜೈಸ್ವಾಲ್ ಸ್ಥಾನ ಪಡೆದಿದ್ದಾರೆ.

ಸರಣಿಯಲ್ಲಿ ಆಡುವ ತಂಡವನ್ನು ಶನಿವಾರ ಪ್ರಕಟಿಸಲಾಗಿದೆ. ಪಂದ್ಯಗಳು ಧರ್ಮಶಾಲಾ, ಲಖನೌ ಮತ್ತು ಚೆನ್ನೈನಲ್ಲಿ ಕ್ರಮವಾಗಿ ಜೂನ್ 13, 17 ಮತ್ತು 20ರಂದು ನಡೆಯಲಿವೆ.

ವಿರಾಟ್ ಈಗಾಗಲೇ ಅಂತರ ರಾಷ್ಟ್ರೀಯ ಟಿ20 ಮತ್ತು ಟೆಸ್ಟ್ ಮಾದರಿಗಳಿಂದ ನಿವೃತ್ತಿಯಾಗಿದ್ದಾರೆ. ಏಕದಿನ ಮಾದರಿ ಪಂದ್ಯಗಳಲ್ಲಿ ಮಾತ್ರ ಆಡುತ್ತಿದ್ದು, 2027ರ ವಿಶ್ವಕಪ್ ಟೂರ್ನಿಯಲ್ಲಿ ಆಡುವತ್ತ ಚಿತ್ತ ನೆಟ್ಟಿದ್ದಾರೆ. ಐಪಿಎಲ್‌ನಲ್ಲಿಯೂ ಆಟ ಮುಂದುವರಿಸಿದ್ದಾರೆ. ಈಚೆಗೆ ಮುಕ್ತಾಯವಾದ 19ನೇ ಆವೃತ್ತಿಯ ಐಪಿಎಲ್ ಟೂರ್ನಿಯ ಫೈನಲ್‌ನಲ್ಲಿ ಅವರು ಅಜೇಯ ಅರ್ಧಶತಕ ಬಾರಿಸಿ ತಂಡದ ಗೆಲುವಿನ ರೂವಾರಿಯಾಗಿದ್ದರು. ಅದೇ ಪಂದ್ಯದಲ್ಲಿ ಅವರು ಸ್ನಾಯುಸೆಳೆತದಿಂದ ಬಳಲಿದ್ದರು.

'ಯಶಸ್ವಿ ಅವರನ್ನು ಈ ಸರಣಿಯಲ್ಲಿ ವಿರಾಟ್ ಬದಲಿಗೆ ಸೇರ್ಪಡೆ ಮಾಡಲಾಗಿದೆ. ಜುಲೈನಲ್ಲಿ ನಡೆಯಲಿರುವ ಇಂಗ್ಲೆಂಡ್ ವಿರುದ್ಧದ ಸರಣಿಯ ವೇಳೆಗೆ ಕೊಹ್ಲಿ ಫಿಟ್ ಆಗಿ ಮರಳುವ ಭರವಸೆ ಇದೆ' ಎಂದು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಹೇಳಿದ್ದಾರೆ.

ಪ್ರಜ್ಞಾನಂದ ಮುಡಿಗೆ ನಾರ್ವೆ ಚೆಸ್ ಕಿರೀಟ



ಓಸ್ಲೊ (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಪ್ರತಿಷ್ಠಿತ ನಾರ್ವೆ ಚೆಸ್ ಟೂರ್ನಿಯನ್ನು ಗೆದ್ದುಕೊಂಡ ಭಾರತದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಶುಕ್ರವಾರ ತಡರಾತ್ರಿ ನಡೆದ ಅಂತಿಮ (10ನೇ) ಸುತ್ತಿನ ಪಂದ್ಯದಲ್ಲಿ ಜರ್ಮನಿಯ ವಿನ್ಸೆಂಟ್ ಕೀಮರ್ ಅವರನ್ನು ಸೋಲಿಸಿದ ಪ್ರಜ್ಞಾನಂದ ಅರ್ಹವಾಗಿ ಕಿರೀಟ ಧರಿಸಿದರು.

ಪ್ರಜ್ಞಾನಂದ ಕೊನೆಯ ನಾಲ್ಕು ಸುತ್ತಿನಲ್ಲಿ ಎದುರಾಳಿಗಳ ವಿರುದ್ಧ 'ಕ್ಲಾಸಿಕಲ್' ಪಂದ್ಯಗಳನ್ನು ಜಯಿಸಿದ್ದು ಗಮನ ಸೆಳೆಯಿತು. ವಿಶೇಷ ಎಂದರೆ ಆರನೇ ಸುತ್ತಿನ ನಂತರ ಅವರು ಕೊನೆಯ ಸ್ಥಾನದಲ್ಲಿದ್ದರು. ಅವರು ಒಟ್ಟು 18 ಪಾಯಿಂಟ್ಸ್ ಕಲೆಹಾಕಿದರು. ಕ್ಲಾಸಿಕಲ್ ಪಂದ್ಯದಲ್ಲಿ ಗೆಲ್ಲುವ ಆಟಗಾರ 3 ಪಾಯಿಂಟ್ ಪಡೆಯುತ್ತಾರೆ.

9ನೇ ಸುತ್ತಿನ ನಂತರ 15.5 ಅಂಕ ಗಳಿಸಿ ಅರ್ಧ ಪಾಯಿಂಟ್ ಅಂತರದಿಂದ ಅಗ್ರಸ್ಥಾನದಲ್ಲಿದ್ದ ಅಮೆರಿಕದ ವೆಸ್ಲಿ ಸೊ ಅವರು ಫ್ರಾನ್ಸ್‌ನ ಅಲಿರೇಝಾ ಫಿರೋಝ್‌ಜಾ ಅವರನ್ನು ಮಣಿಸಿದಲ್ಲಿ ಅವರಿಗೂ ಪ್ರಶಸ್ತಿ ಅವಕಾಶವಿತ್ತು. ಆದರೆ ಸೊ ಕ್ಲಾಸಿಕಲ್ ಪಂದ್ಯ ಡ್ರಾ ಮಾಡಿ 'ಆರ್ಮ್‌ಗೆಡನ್'ನಲ್ಲಿ ಗೆದ್ದ ಕಾರಣ ಒಂದೂವರೆ ಪಾಯಿಂಟ್ ಅಷ್ಟೇ (ಒಟ್ಟು 17) ಪಡೆದು 'ಪ್ರಗ್ಗು' ಅವರ ಪ್ರಶಸ್ತಿ ಹಾದಿ ಸುಗಮವಾಯಿತು. ರೇಸ್‌ನಲ್ಲಿದ್ದ ಇನ್ನೊಬ್ಬ ಆಟಗಾರ ಅಲಿರೇಝಾ (15.5 ಪಾಯಿಂಟ್ಸ್) ಮೂರನೇ ಸ್ಥಾನ ಪಡೆದರು.

20 ವರ್ಷ ವಯಸ್ಸಿನ ಪ್ರಜ್ಞಾನಂದ ಒತ್ತಡದ ಸ್ಥಿತಿಯಲ್ಲಿ ಸತತವಾಗಿ ಯಶಸ್ಸು ಸಾಧಿಸಿದರು. 2013ರಲ್ಲಿ ಈ ಟೂರ್ನಿ ಆರಂಭವಾಗಿದ್ದು, ಪ್ರಜ್ಞಾನಂದ ಎರಡನೇ ಬಾರಿ ಆಡಿದ್ದರು. ಅವರು ₹70.5 ಲಕ್ಷ ಬಹುಮಾನ ಹಣ ಜೇಬಿಗಿಳಿಸಿದರು.

ಮ್ಯಾಗ್ನಸ್ ಕಾರ್ಲ್‌ಸನ್ (13), ವಿನ್ಸೆಂಟ್ ಕೀಮರ್ (11) ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಪಡೆದರೆ, ವಿಶ್ವ ಚಾಂಪಿಯನ್ ಗುಕೇಶ್ (8) ಕೊನೆಯ ಸ್ಥಾನದಲ್ಲಿ ಮುಗಿಸಿದರು. ಗುಕೇಶ್ ಕೊನೆಯ ಸುತ್ತಿನಲ್ಲಿ ಕಾರ್ಲ್‌ಸನ್ ಎದುರು ಸೋಲನುಭವಿಸಿದರು.

'ಭಾರತದ ಯುವ ಆಟಗಾರನ ಪ್ರದರ್ಶನ ಟೂರ್ನಿಯುದ್ದಕ್ಕೂ ಅಮೋಘವಾಗಿತ್ತು' ಎಂದು ಆತಿಥೇಯ ದೇಶದ ಆಟಗಾರ ಹಾಗೂ ಏಳು ಬಾರಿಯ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಮೆಚ್ಚುಗೆ ಸೂಚಿಸಿದರು. ತವರಿನಲ್ಲಿ ಕಾರ್ಲ್‌ಸನ್ ಅವರನ್ನು ಎರಡು ಬಾರಿ ಸೋಲಿಸಿದ ಪ್ರಜ್ಞಾನಂದ ಅವರ ಸಾಧನೆಯೇನೂ ಕಡಿಮೆ ಆಗಿರಲಿಲ್ಲ.

ಮಹಿಳೆಯರ ವಿಭಾಗದಲ್ಲಿ ಕಜಾಕಸ್ತಾನದ ಬಿಬಿಸಾರಾ ಅಸೌಬಯೇವಾ ಒಂದು ಸುತ್ತಿನ ಮೊದಲೇ ಪ್ರಶಸ್ತಿ ಖಚಿತಪಡಿಸಿಕೊಂಡಿದ್ದರು. ಕೊನೆಯ ಸುತ್ತಿನಲ್ಲಿ ಅವರು ವಿಶ್ವ ಚಾಂಪಿಯನ್ ಜು ವೆನ್‌ಜುನ್ ಅವರಿಗೆ ಕ್ಲಾಸಿಕಲ್ ಪಂದ್ಯದಲ್ಲಿ ಸೋತಿದ್ದರಿಂದ ಅವರ ಅಜೇಯ ಓಟ ಕೊನೆಗೊಂಡಿತು. ಕಜಾಕ್ ಆಟಗಾರ್ತಿ 16.5 ಪಾಯಿಂಟ್ಸ್ ಸಂಗ್ರಹಿಸಿದರು.

ಚೀನಾದ ಝು ಜಿನೆರ್ (16), 2025ರ ಚಾಂಪಿಯನ್ ಅನ್ನಾ ಮುಝಿಚುಕ್ (ಉಕ್ರೇನ್, 15), ವೆನ್‌ಜುನ್ (13.5), ಭಾರತದ ದಿವ್ಯಾ ದೇಶಮುಖ್ (10) ಮತ್ತು ಕೋನೇರು ಹಂಪಿ (9) ಕ್ರಮವಾಗಿ ಎರಡರಿಂದ ಆರರವರೆಗಿನ ಸ್ಥಾನಗಳನ್ನು ಪಡೆದರು. ಕೊನೆಯ ಸುತ್ತಿನಲ್ಲಿ ಜಿನೆರ್ ಹಂಪಿ ಅವರನ್ನು, ಅನ್ನಾ ಅವರು ದಿವ್ಯಾ ಅವರನ್ನು ಸೋಲಿಸಿದರು.

ಟಿ20 ತಂಡ: ನಾಯಕತ್ವ, ಸ್ಥಾನ ಕಳೆದುಕೊಂಡ ಸೂರ್ಯ

ಶ್ರೇಯಸ್‌ಗೆ ಸಾರಥ್ಯ: ವೈಭವ್‌ಗೆ ಸ್ಥಾನ


ಮುಂಬೈ (ಪಿಟಿಐ): ಭಾರತ ಟಿ20 ತಂಡದಲ್ಲಿ ಬದಲಾವಣೆಯ ಪರ್ವ ಆರಂಭವಾಗಿದ್ದು, ಐರ್ಲೆಂಡ್-ಇಂಗ್ಲೆಂಡ್ ಪ್ರವಾಸಕ್ಕೆ ಶ್ರೇಯಸ್ ಅಯ್ಯರ್ ಅವರು ನಾಯಕರಾಗಿದ್ದಾರೆ. 'ವಂಡರ್ ಕಿಡ್' ವೈಭವ ಸೂರ್ಯವಂಶಿ ಅವರೂ ಸ್ಥಾನ ಪಡೆದಿದ್ದಾರೆ. ಏಷ್ಯನ್ ಗೇಮ್ಸ್‌ಗೂ ತಂಡವನ್ನು ಪ್ರಕಟಿಸಲಾಗಿದೆ.

ಸೂರ್ಯಕುಮಾರ್ ಯಾದವ್ ಸ್ಥಾನವನ್ನು ಅಯ್ಯರ್ ವಹಿಸಿಕೊಳ್ಳಲಿದ್ದಾರೆ. ಸೂರ್ಯ ಅವರು ತಂಡದಲ್ಲೂ ಸ್ಥಾನ ಪಡೆದಿಲ್ಲ. ಉಪನಾಯಕತ್ವವನ್ನು ಅಕ್ಷರ್ ಪಟೇಲ್ ಬದಲು ತಿಲಕ್ ವರ್ಮಾ ಅವರಿಗೆ ವಹಿಸಲಾಗಿದೆ. 2023ರ ಡಿಸೆಂಬರ್ 3ರಂದು ಬೆಂಗಳೂರಿನಲ್ಲಿ ಆಸ್ಟ್ರೇಲಿಯಾ ವಿರುದ್ಧ ಟಿ20 ಪಂದ್ಯ ಆಡಿದ್ದ ನಂತರ ಶ್ರೇಯಸ್ ಇದೇ ಮೊದಲ ಬಾರಿ ತಂಡಕ್ಕೆ ಮರಳಿದ್ದಾರೆ.

15 ವರ್ಷ 71 ದಿನ ವಯಸ್ಸಿನ ಸೂರ್ಯವಂಶಿ ಅವರು ಭಾರತ ತಂಡಕ್ಕೆ ಆಯ್ಕೆಯಾದ ಅತಿ ಕಿರಿಯ ಆಟಗಾರ ಎನಿಸಿದ್ದಾರೆ. ಸಚಿನ್ ತೆಂಡೂಲ್ಕರ್ ಅವರ ದೀರ್ಘಕಾಲದ ದಾಖಲೆಯನ್ನು ಬಿಹಾರದ ಪ್ರತಿಭಾವಂತ ಬ್ಯಾಟರ್ ಮುರಿದಿದ್ದಾರೆ. ಕರಾಚಿಯಲ್ಲಿ ಪಾಕಿಸ್ತಾನ-ವಿರುದ್ಧ 1989ರ ನವೆಂಬರ್ 15ರಂದು ಟೆಸ್ಟ್‌ಗೆ ಪದಾರ್ಪಣೆ ಮಾಡುವಾಗ ಸಚಿನ್ ವಯಸ್ಸು 16 ವರ್ಷ 205 ದಿನ.

ಭಾರತ ತಂಡವು ಐರ್ಲೆಂಡ್ ವಿರುದ್ಧ ಎರಡು ಟಿ20 ಪಂದ್ಯಗಳನ್ನು (ಜೂನ್ 26, 28) ಆಡಲಿದೆ. ಇಂಗ್ಲೆಂಡ್ ವಿರುದ್ಧ ಜುಲೈ 1 ರಿಂದ 11ರ ಮಧ್ಯೆ ಐದು ಪಂದ್ಯಗಳ ಟಿ20 ಸರಣಿ ಆಡಲಿದೆ.

'ಶ್ರೇಯಸ್ ಅವರಿಗೆ ಸಂಬಂಧಿಸಿದಂತೆ ಮಾತನಾಡುವುದಾದರೆ, ಕೆಲವೇ ವರ್ಷಗಳಲ್ಲಿ ವಿವಿಧ ಫ್ರಾಂಚೈಸಿಗಳನ್ನು ಮುನ್ನಡೆಸಿ ಅವರೇನು ಮಾಡಿದ್ದರೆಂದು ನಾವೆಲ್ಲಾ ನೋಡಿದ್ದೇವೆ. ಬ್ಯಾಟರ್ ಆಗಿಯೂ ಉತ್ತಮ ಪ್ರದರ್ಶನ ನೀಡಿದ್ದಾರೆ' ಎಂದು ತಂಡಗಳನ್ನು ಪ್ರಕಟಿಸಿದ ಬಳಿಕ ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.


ಶ್ರೇಯಸ್ ಅಯ್ಯರ್

2024ರ ಐಪಿಎಲ್‌ನಲ್ಲಿ ಕೆಕೆಆರ್ ತಂಡ ಅವರ ನೇತೃತ್ವದಲ್ಲಿ ಚಾಂಪಿಯನ್ ಆಗಿತ್ತು. 2025ರಲ್ಲಿ ಪಂಜಾಬ್ ಕಿಂಗ್ಸ್ ತಂಡ ರನ್ನರ್ ಅಪ್ ಆಗಿತ್ತು. ಈ ಬಾರಿಯ ಐಪಿಎಲ್‌ನಲ್ಲೂ ಪಂಜಾಬ್ ಮೊದಲ ಏಳು ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿತ್ತು.

'ಟಿ20 ವಿಶ್ವಕಪ್ ಗೆದ್ದ ಕೆಲವೇ ಸಮಯದಲ್ಲಿ ಸೂರ್ಯ ಅವರನ್ನು ಕೈಬಿಡುವ ನಿರ್ಧಾರ ಕಠಿಣವಾದುದು. ಆದರೆ ಭವಿಷ್ಯದ ದೃಷ್ಟಿಯಿಂದ ನಾವು ಪುನರ್‌ಮೌಲ್ಯಮಾಪನ ಮಾಡಬೇಕಾಗುತ್ತದೆ. ಶ್ರೇಯಸ್ ನಾಯಕತ್ವಕ್ಕೆ ಯೋಗ್ಯರಾದವರು' ಎಂದು ಅಗರಕರ್ ಹೇಳಿದರು.

ಸೂರ್ಯವಂಶಿ ಅವರು ಇತ್ತೀಚಿನ ಐಪಿಎಲ್‌ನಲ್ಲಿ ರಾಜಸ್ಥಾನ ರಾಯಲ್ಸ್ ಪರ 237 ಸ್ಟ್ರೈಕ್‌ರೇಟ್‌ನಲ್ಲಿ 776 ರನ್ ಕಲೆಹಾಕಿ ಗಮನ ಸೆಳೆದಿದ್ದರು. ಪಂದ್ಯದ ದಿಕ್ಕನ್ನು ಬದಲಾಯಿಸಬಲ್ಲ ಬಿಹಾರದ ಬಾಲಕನ ಸಾಮರ್ಥ್ಯ ಅಗರಕರ್ ಅವರ ಮೆಚ್ಚುಗೆಗೆ ಪಾತ್ರವಾಗಿದೆ.

ಇಂಗ್ಲೆಂಡ್ ಪ್ರವಾಸಕ್ಕಿಲ್ಲ ಬೂಮ್ರಾ: ಭಾರತದ ಅಗ್ರ ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಇಂಗ್ಲೆಂಡ್-ಐರ್ಲೆಂಡ್ ಸರಣಿಗೆ ಆಯ್ಕೆಯಾಗಿಲ್ಲ. ಆದರೆ ಸೆಪ್ಟೆಂಬರ್- ಅಕ್ಟೋಬರ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ನಲ್ಲಿ ಆಡುವ ತಂಡಕ್ಕೆ ಆಯ್ಕೆಯಾಗಿದ್ದಾರೆ.

'ಬೂಮ್ರಾ ಮಹತ್ವವೇನು ಎಂಬುದನ್ನು ತಿಳಿದಿದ್ದೇವೆ. ಜೊತೆಗೆ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಹಾಲಿ ಆವೃತ್ತಿಯಲ್ಲಿ ಫೈನಲ್‌ಗೆ ಅರ್ಹತೆ ಪಡೆಯಲು ನಮಗೆ ಇನ್ನೂ ಅವಕಾಶವಿದೆ. 9 ಟೆಸ್ಟ್‌ಗಳನ್ನು ಆಡಲು ಇದೆ. ಬೂಮ್ರಾ ಅಗತ್ಯ ಬೀಳಲಿದೆ' ಎಂದು ಅಗರಕರ್ ಹೇಳಿದರು.

ತಂಡಗಳು ಹೀಗಿದೆ

ಐರ್ಲೆಂಡ್– ಇಂಗ್ಲೆಂಡ್ ಟಿ20 ಪ್ರವಾಸ: ಶ್ರೇಯಸ್ ಅಯ್ಯರ್ (ನಾಯಕ), ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್, ಇಶಾನ್ ಕಿಶನ್, ಶಿವಂ ದುಬೆ, ತಿಲಕ್ ವರ್ಮಾ, ನಿತೀಶ್ ಕುಮಾರ್ ರೆಡ್ಡಿ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ವರುಣ್ ಚಕ್ರವರ್ತಿ, ರವಿ ಬಿಷ್ಣೋಯಿ, ಮೊಹಮ್ಮದ್ ಸಿರಾಜ್, ಹರ್ಷಿತ್ ರಾಣಾ, ಅರ್ಷದೀಪ್ ಸಿಂಗ್, ಪ್ರಿನ್ಸ್ ಯಾದವ್ ಮತ್ತು ವೈಭವ್ ಸೂರ್ಯವಂಶಿ.

ಏಷ್ಯನ್ ಗೇಮ್ಸ್ ತಂಡದಲ್ಲಿ ಎರಡು ಬದಲಾವಣೆ ಮಾಡಲಾಗಿದೆ. ಮೊಹಮ್ಮದ್ ಸಿರಾಜ್ ಮತ್ತು ಪ್ರಿನ್ಸ್ ಯಾದವ್ ಅವರನ್ನು ಕೈಬಿಡಲಾಗಿದ್ದು, ಜಸ್‌ಪ್ರೀತ್ ಬೂಮ್ರಾ ಸ್ಥಾನ ಪಡೆದಿದ್ದಾರೆ. ಉಳಿದಂತೆ ಇಂಗ್ಲೆಂಡ್ ಪ್ರವಾಸ ಮಾಡುವ ತಂಡವನ್ನೇ ಉಳಿಸಿಕೊಳ್ಳಲಾಗಿದೆ.

ಶ್ರೀಲಂಕಾ ಪ್ರವಾಸ (ಬಹುದಿನ ಮಾದರಿಯ ಪಂದ್ಯ): ಧ್ರುವ್ ಜುರೇಲ್ (ನಾಯಕ– ವಿಕೆಟ್ ಕೀಪರ್), ಸಾಯಿ ಸುದರ್ಶನ್, ದೇವದತ್ತ ಪಡಿಕ್ಕಲ್ (ಉಪ ನಾಯಕ), ಆಯುಷ್ ಪಾಂಡೆ, ಋತುರಾಜ್ ಗಾಯಕವಾಡ್, ಹರ್ಷ ದುಬೆ, ಸಾರಾಂಶ್ ಜೈನ್, ಗುರ್ನೂರ್ ಬ್ರಾರ್, ಅಕೀಬ್ ನಬಿ, ಯಶ್ ಠಾಕೂರ್, ಎನ್.ಜಗದೀಶನ್ (ವಿಕೆಟ್ ಕೀಪರ್), ಅಮನ್ ಮೋಖಡೆ, ಶೇಖ್ ರಶೀದ್ ಮತ್ತು ಜೀಶಾನ್ ಅನ್ಸಾರಿ.

ಫ್ರೆಂಚ್ ಓಪನ್ ಟೆನಿಸ್: ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ಮಾಯಾ ವಿರುದ್ಧ ಜಯ

ಚೊಚ್ಚಲ ಗ್ರ್ಯಾನ್‌ಸ್ಲಾಮ್ ಗೆದ್ದ ಮೀರಾ



ಪ್ಯಾರಿಸ್ (ಎಎಫ್‌ಪಿ): ರಷ್ಯಾದ ಮೀರಾ ಅಂದ್ರೆಯೇವಾ ಅವರು ಶನಿವಾರ ಫ್ರೆಂಚ್ ಓಪನ್ ಫೈನಲ್ ಪಂದ್ಯದಲ್ಲಿ ಪೋಲೆಂಡ್‌ನ ಕ್ವಾಲಿಫಯರ್ ಆಟಗಾರ್ತಿ ಮಾಯಾ ಕಲ್ವಿನ್‌ಸ್ಕಾಯಾ ಅವರನ್ನು ನೇರ ಸೆಟ್‌ಗಳಿಂದ ಸೋಲಿಸಿ ತಮ್ಮ ಮೊದಲ ಗ್ರ್ಯಾನ್‌ಸ್ಲಾಮ್ ಕಿರೀಟ ಮುಡಿಗೇರಿಸಿಕೊಂಡರು.

19 ವರ್ಷ ವಯಸ್ಸಿನ ಅಂದ್ರೆಯೇವಾ ಸೆಂಟರ್ ಕೋರ್ಟ್‌ನಲ್ಲಿ 6–3, 6–2 ರಿಂದ ಜಯಗಳಿಸಿದರು. ಮೋನಿಕಾ ಸೆಲೆಸ್ ನಂತರ ಇಲ್ಲಿ ಪ್ರಶಸ್ತಿ ಗೆದ್ದ ಅತಿ ಕಿರಿಯ ಆಟಗಾರ್ತಿ ಎಂಬ ಹಿರಿಮೆ ಅವರದಾಯಿತು. ಅಮೆರಿಕದ ಸೆಲೆಸ್ 1992ರಲ್ಲಿ ತಮ್ಮ 18ನೇ ವಯಸ್ಸಿನಲ್ಲಿ ಸತತ ಮೂರನೇ ಪ್ರಶಸ್ತಿ ಗೆದ್ದಿದ್ದರು.

ಈ ಹಿಂದೆ ಎರಡು ಡಬ್ಲ್ಯುಟಿಎ 1000 ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದಿರುವ ಅಂದ್ರೆಯೇವಾ ಅವರ ಟ್ರೋಫಿಗಳ ಕಪಾಟಿನಲ್ಲಿ ಈಗ 'ಸುಝಾನ್ ಲೆಂಗ್ಲೆನ್' ಟ್ರೋಫಿ ಮಿಂಚಲಿದೆ.

'ನಾನು ಸಣ್ಣವಳಿದ್ದಾಗಲೇ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ನಡೆಯುತ್ತಿದ್ದ ಪಂದ್ಯಗಳನ್ನು ಟಿ.ವಿ. ಯಲ್ಲಿ ನೋಡುತ್ತಿದ್ದೆ. ಈ ಟೂರ್ನಿ ಗೆಲ್ಲುವುದು ನನ್ನ ದೊಡ್ಡ ಕನಸಾಗಿತ್ತು. ಈಗ ಸ್ವತಃ ಟ್ರೋಫಿ ಎತ್ತಿ ಹಿಡಿದಿರುವುದನ್ನು ನಂಬಲಾಗುತ್ತಿಲ್ಲ' ಎಂದು ಅವರು ಫೈನಲ್ ಪಂದ್ಯದ ನಂತರ ಪ್ರತಿಕ್ರಿಯಿಸಿದರು.

ಮಾಯಾ ಕಲ್ವಿನ್‌ಸ್ಕಾಯಾ ಅವರ ಅಮೋಘ ಯಶಸ್ಸಿನ ಓಟ ಫೈನಲ್‌ನಲ್ಲಿ ಸೋಲಿನೊಡನೆ ಕೊನೆಗೊಂಡಿತು. ಅವರು ಅರ್ಹತಾ ಸುತ್ತಿನ ಪಂದ್ಯಗಳು ಸೇರಿದಂತೆ ಇಲ್ಲಿ 9 ಪಂದ್ಯಗಳನ್ನು ಜಯಿಸಿದ್ದರು. 'ನಾನು ಈ ಮೂರು ವಾರಗಳನ್ನು ಮರೆಯುವಂತೇ ಇಲ್ಲ' ಎಂದು ಪೋಲೆಂಡ್‌ನ ಆಟಗಾರ್ತಿ ಹೇಳಿದರು. ಓಪನ್ ಯುಗ ಆರಂಭವಾದ ನಂತರ ಪ್ಯಾರಿಸ್‌ನಲ್ಲಿ ಅರ್ಹತಾ ಸುತ್ತಿನಿಂದ ಫೈನಲ್ ಆಡಿದ ಮೊದಲ ಆಟಗಾರ್ತಿ ಎನ್ನುವ ಶ್ರೇಯಕ್ಕೆ 24 ವರ್ಷದ ಮಾಯಾ ಪಾತ್ರರಾದರು.

ಇಬ್ಬರಿಗೂ ಇದು ಮೊದಲ ಗ್ರ್ಯಾನ್‌ಸ್ಲಾಮ್ ಫೈನಲ್ ಆಗಿದ್ದು, ಒತ್ತಡದಲ್ಲಿ ತಪ್ಪುಗಳನ್ನು ಎಸಗಿದರು. ಪರಸ್ಪರ ಬ್ರೇಕ್‌ಗಳ ನಂತರ ಸ್ಕೋರ್ 3–3 ಸಮನಾಯಿತು. ಈ ಹಂತದಲ್ಲಿ ಅಂದ್ರೆಯೇವಾ ಮೇಲುಗೈ ಸಾಧಿಸಿದರು. ನಂತರ ರಷ್ಯಾದ ಆಟಗಾರ್ತಿ ಎರಡು ಬಾರಿ ಎದುರಾಳಿಯ ಸರ್ವ್ ಮುರಿದರು. ಎರಡನೇ ಸೆಟ್‌ನಲ್ಲೂ ಅಂದ್ರೆಯೇವಾ ಹಿಡಿತ ಮುಂದುವರಿಸಿದರು. 114ನೇ ಕ್ರಮಾಂಕದಲ್ಲಿದ್ದ ಮಾಯಾ ಮುಂದಿನ ರ್‍ಯಾಂಕಿಂಗ್ ಪಟ್ಟಿಯಲ್ಲಿ 21ನೇ ಕ್ರಮಾಂಕಕ್ಕೆ ಏರಲಿದ್ದಾರೆ.

ಪ್ರಶಸ್ತಿಗೆ ಜ್ವರೇವ್–ಕೊಬೊಲಿ ಸೆಣಸಾಟ

ಪ್ಯಾರಿಸ್ (ಎಎಫ್‌ಪಿ): ತಮ್ಮ ಚೊಚ್ಚಲ ಗ್ರ್ಯಾನ್‌ಸ್ಲಾಮ್ ಕಿರೀಟದ ನಿರೀಕ್ಷೆಯಲ್ಲಿರುವ ಜರ್ಮನಿಯ ತಾರೆ ಅಲೆಕ್ಸಾಂಡರ್ ಜ್ವರೇವ್ ಅವರು ಭಾನುವಾರ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಇಟಲಿಯ ಫ್ಲಾವಿಯೊ ಕೊಬೊಲಿ ಅವರನ್ನು ಎದುರಿಸಲಿದ್ದಾರೆ.

ಎರಡನೇ ಶ್ರೇಯಾಂಕದ ಜ್ವರೇವ್ ಅವರಿಗೆ ಇದು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ನಾಲ್ಕನೇ ಫೈನಲ್ ಆಗಿದೆ. ರೋಲ್ಯಾಂಡ್ ಗ್ಯಾರೋಸ್‌ನಲ್ಲಿ 2024ರ ಬಳಿಕ ಎರಡನೇ ಬಾರಿ ಪ್ರಶಸ್ತಿ ಸುತ್ತು ತಲುಪಿದ್ದಾರೆ.

10ನೇ ಶ್ರೇಯಾಂಕದ ಕೊಬೊಲಿ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಫೈನಲ್ ತಲುಪಿದ್ದಾರೆ. 24 ವರ್ಷದ ಅವರು ಜ್ವರೇವ್ ಅವರಿಗೆ ಪ್ರಬಲ ಪೈಪೋಟಿ ನೀಡುವ ಉತ್ಸಾಹದಲ್ಲಿದ್ದಾರೆ.